G T NARAYANA RAO
137 FIRST FLOOR
FOURTH CROSS
HANUMANTHANAGAR
BANGALORE 19

13-5-68

ಶ್ರೀ. ದೇ. ಜವರೇಗೌಡರವರಿಗೆ
ವಂದನೆಗಳು,

ದೊಡ್ಡ ಕೆಲಸ ಮಾಡುತ್ತಿರುವ ದೊಡ್ಡ ವ್ಯಕ್ತಿ ನೀವು ನನಗೆ ಬಲು ದೊಡ್ಡ ಗೌರವ ತೋರಿಸಿದ್ದೀರಿ. ನಿಮ್ಮ ಔದಾರ್ಯಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಒಂದು ವಾರ ನಾನು ತುಂಬ ಕಷ್ಟಪಟ್ಟೆ — ನಿಮ್ಮ ವಿಶ್ವಾಸದ ಕರೆ, ಅಲ್ಲಿರುವ ಹೊಸ ಸಮಾಜ, ಹೊಸ ದಾರಿ, ನಿಮ್ಮೊಡನೆ ಕೆಲಸಮಾಡುವ ಯೋಗ, ಇವೆಲ್ಲವೂ ಒಂದು ಕಡೆ; ನಾನಿರುವ ಕಾಲೇಜಿನ, ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳ ಪ್ರೀತಿ ಆದರ ವರ್ತನೆ, ಅಲ್ಲದೆ ನಾನು ಇಲ್ಲಿ ಮಾಡುತ್ತಿರುವ ಉಪನ್ಯಾಸ ನನಗೆ ಪ್ರಿಯವಾದ ಕೆಲಸಗಳು, ವಿದ್ಯಾರ್ಥಿಗಳ ನಿರಂತರ ಸಂಪರ್ಕ, ಎನ್ನುವ ಇವೆಲ್ಲವೂ ಇನ್ನೊಂದು ಕಡೆ. ಯಾವ ದಾರಿ ಆರಿಸಲಿ!

ನನ್ನ ಸ್ವಭಾವದ ಗುಣವನ್ನೂ, ದೌರ್ಬಲ್ಯವನ್ನೂ ಈ ಚಿಂತನೆಯಲ್ಲಿ ಅರಿತುಕೊಂಡೆ — ಯಾವುದೇ ಒಂದು ವಿಷಯದಲ್ಲಿ ಮಾತ್ರ ನಿರಂತರ ಉತ್ಸಾಹದಿಂದ ಬಹುಕಾಲ ದುಡಿಯುವುದು ಅದರಲ್ಲಿ ಇಲ್ಲ. ಹೊಸ ಕೆಲಸ ಹೊಸ ಕಾಲದಲ್ಲಿ ಆದಷ್ಟು ಬೇಗ. ಕಾಲೇಜು ಅಧ್ಯಾಪಕ ವೃತ್ತಿ ಇದನ್ನು ನನಗೆ ಒದಗಿಸಿಕೊಟ್ಟಿದೆ. ಈ ೨೧ ವರ್ಷ ಸರ್ವಿಸಿನ ನಂತರ ಬಂದಿರುವ ದಾರಿಯನ್ನು ಬಿಟ್ಟು ಬೇರೆ ದಾರಿ ಹಿಡಿದರೆ ಆ ದಾರಿಯಲ್ಲಿ ನನ್ನ ವಿಕಾಸವಾಗಲಾರದು, ಆದ್ದರಿಂದ ನಾನು ಹಿಡಿದ ಕಾರ್ಯ ಚೆನ್ನಾಗಿ ಆಗಲಾರದು.

ಸಾಮಾನ್ಯನನ್ನು ನಿಮ್ಮ ಮಟ್ಟದವರ ಹಿರಿಮೆಗೆ ಏರಿಸುವ ಗೌರವ ಒಂದು ಅದ್ಭುತ ದೊರೆತಿದೆ. ಆದರೆ ನೀವು ನನ್ನನ್ನು ಮನ್ನಿಸಬೇಕೆಂದು ವಿನಂತಿಸುತ್ತೇನೆ. ಹೀಗೆ ಬರೆಯುವಾಗ ನನಗೆ ವೇದನೆಯಾಗುತ್ತಿದೆ. ಆದರೆ ಸತ್ಯವು ಸುಲಭವಾಗಿ ಸಮಾಧಾನಕರವಲ್ಲ.

ಸುರತ್ಕಲ್‌ನ Regional College of Engineering ನ Chemistry Lecturer Sri P Deva Rao ಮತ್ತು Vijaya College Mulki ಯ Physics Lecturer Sri A Krishna Bhat ಇವರು 'ವಿಜ್ಞಾನ ಜ್ಯೋತಿ' ಎಂಬ ತ್ರೈಮಾಸಿಕ ನಡೆಸುತ್ತಿದ್ದಾರೆ. ತರುಣರು, ಉತ್ಸಾಹಿಗಳು, Lagan ಇರುವವರು. ಇವರ ಆಶಯ ಒಳ್ಳೆಯದು.

ಕನ್ನಡನಾಡಿನ ವಿದ್ಯಾರ್ಥಿಗಳಲ್ಲಿ ಬಗ್ಗೆ ಅಭಿಮಾನ ಸುಸಂಪನ್ನರು ಎಂಥ ತರುಣರು ಇದ್ದಾರೆ. ದಕ್ಷರು, ನಿಯಮಿತರು ತಮ್ಮ ಸಂಬಂಧ ಸಂಘದ ಕಾರ್ಯವನ್ನು ನಡೆಸಬಲ್ಲವರು ಎಂದು ನಾನು ದೃಢವಾಗಿ ನಂಬಿದ್ದೇನೆ.

ಸೂ:- ನನ್ನ ಸ್ನೇಹ ಪೂರ್ವಕ ಹಾರೈಸುತ್ತೇನೆ
20ರ ವಂದನೆಗಳು

# ಡಾಕ್ಟರ್ ಶ್ರೀಮತಿ ಗಂಗೂಬಾಯಿ ಹಾನಗಲ್ಲ ಅವರಿಗೆ ಶುಭಾಶಂಸನೆ

ತವರಿಗೆ ಬಂದಿರುವ ಹಿರಿಯಕ್ಕನವರಿಗೆ ಮೈಸೂರಿನ ಸಕಲ ಸಹೃದಯ ಬಂಧು ಬಾಂಧವರ ಪರವಾಗಿ ಗೌರವಪೂರ್ವಕ ಸ್ವಾಗತ ಕೋರಲು, ಮತ್ತು ಎಂಬತ್ತು ಸಾರ್ಥಕ ಸಂಗೀತ ಸಂವತ್ಸರಗಳನ್ನು ದಾಟಿ, ಕೀರ್ತಿ "ಮುಟ್ಟದ ದಿಙ್ಮಂಡಲಗಳ ಅಂಚ ಆಚೆಗೆ ಬಾಚಿದ ತನ್ಮಯ ಚುಂಚ" ಸಂದರ್ಭದಲ್ಲಿ ಅಭಿನಂದನೆ ಮತ್ತು ಕೃತಜ್ಞತೆ ಸಲ್ಲಿಸಲು ನಿಮ್ಮೆಲ್ಲರ ಅನುಮತಿ ಬೇಡುತ್ತೇನೆ.

ಕೆಲವು ವರ್ಷಗಳ ಹಿಂದಿನ ಅನುಭವ. ಹಿಂದೂಸ್ಥಾನೀ ಸಂಗೀತ ಕುರಿತಂತೆ ಯಾವ ಅಭಿಪ್ರಾಯವೂ ಇರದಿದ್ದ ಆದರೆ ಕರ್ನಾಟಕ ಸಂಗೀತ ಪ್ರೇಮವೇ ಜೀವನದ ಪರಮಗಂತವ್ಯ ಎಂದು ಭಾವಿಸಿದ್ದ ನಾನು ಮಿತ್ರನೊಬ್ಬನ ಒತ್ತಾಯಕ್ಕೆ ಕಟ್ಟುಬಿದ್ದು ಒಲ್ಲದ ಮನಸ್ಸಿನಿಂದ ಹಿಂದೂಸ್ಥಾನೀ ಸಂಗೀತ ಬೈಠಕ್ಕಿನಲ್ಲಿ ಒಬ್ಬ ಶ್ರೋತೃವಾಗಿ ಕುಳಿತೆ. ಕಛೇರಿ ಆರಂಭವಾಯಿತು. ಗಾಯಕಿ ಕೃತಿಯ ಭದ್ರ ಬುನಾದಿಯ ಮೇಲೆ ವಿಳಂಬಗತಿಯಲ್ಲಿ ಸರಿಯುತ್ತ ಕ್ರಮೇಣ ಮೇಲೇರುತ್ತ ಆ ರಾಗಕ್ಕೆ ಸಂಬಂಧಿಸಿದ ಪ್ರತಿಯೊಂದು ಸ್ವರದ ಪೂರ್ಣ ರಸವನ್ನು ಸ್ವರೂಪವನ್ನು ಹಲವು ಕೋನಗಳಿಂದ ಮತ್ತು ವಿವಿಧ ಭಾವಗಳಿಂದ ಬಿತ್ತರಿಸುತ್ತ, ರಾಗಭಾವ ಶ್ರೋತೃಗಳ ಅಂತರಂಗದೊಳಗೆ ಅನುರಣಿಸುತ್ತಿದ್ದಂತೆ ಸಂಚಾರಗತಿಯನ್ನು ಪಥವನ್ನು ತೀವ್ರಗೊಳಿಸುತ್ತ ಅಲ್ಲಲ್ಲೇ ವಿವಿಧ ನಾದಕುಂತಲಗಳನ್ನು ನೇಯುತ್ತ "ಸಪ್ತಸಾಗರದಾಚೆಯೆಲ್ಲೋ" ಕಾದಿರುವ ಸುಸ್ವರಸಾಗರದಲ್ಲಿ ಸಮಸ್ತ ರಸಿಕರನ್ನು ವಿಲೀನಗೊಳಿಸಿಬಿಟ್ಟರು! ಹೃದಯ ಹಾಡಿದಾಗ ಹಿಂದೂಸ್ಥಾನೀ-ಕರ್ನಾಟಕ ದ್ವೈತತತ್ವ ಭಾರತೀಯ ಸಂಗೀತ ಅದ್ವೈತತತ್ವ ಆಗುತ್ತದೆಂದು ಆಗ ನನಗೆ ಅರಿವಾಯಿತು. ನನ್ನೊಳಗೆ ಮಿಡಿದ ಭಾವ: "ಇಳಿದು ಬಾ ತಾಯೆ ಇಳಿದು ಬಾ! ಹರನ ಜಡೆಯಿಂದ ಇಳಿದು ಬಾ!" ಇಂಥ ದೈವಿಕ ಗಾನಾಮೃತಪಾನಮಾಡಿಯೇ ಬೇಂದ್ರೆಯವರು ಅಂದಿರಬೇಕು "ನಾದ ಬೇಕು, ನಾದಬೇಕು! ನಾದಾನ ನಾದಬೇಕು! ನಾದಕ್ಕೆ ಪ್ರತಿನಾದ ಬೇಕು! ನಾನಾನಸನ ಆದ ಮ್ಯಾಲೆ ಬ್ಯಾರೆ ಯಾಕ ವಾದಬೇಕು?"

ಅಂದಿನಿಂದ ಅವಕಾಶ ದೊರೆತಾಗಲೆಲ್ಲ ನಾನು ಶ್ರೀಮತಿ ಗಂಗೂಬಾಯಿ ಹಾನಗಲ್ಲರ ಗಹನ ಗಂಭೀರ ಸೃಜನಶೀಲ ಸಂಗೀತ ಕಚೇರಿಗಳನ್ನು ಕೇಳಿ ಆಲಿಸಿ ಆಸ್ವಾದಿಸಿ ನನ್ನತನ ಮರೆತು ಕೃತಾರ್ಥನಾಗಿದ್ದೇನೆ — ಗಂಗಾನದಿಯಲ್ಲಿ ಮಿಂದು ಪುನೀತನಾಗುವ ಭಕ್ತನಂತೆ. ಈ ಸಂಗೀತ ಗಂಗಾಮಾತೆಯವರ ನಾದಕೈಂಕರ್ಯ ಇಷ್ಟೊಂದು ಕಾಲ ಜಗದಗಲ ಹಬ್ಬಿ, ಜನಮನ ತಟ್ಟಿ ಸರ್ವರಿಗೂ ಆನಂದ ಊಡಿರುವುದರ ರಹಸ್ಯವೇನು? ರಹಸ್ಯವಿಲ್ಲದಿರುವುದೇ ಇಲ್ಲಿಯ ರಹಸ್ಯ: "ನುಡಿದರೆ ಲಿಂಗಮೆಚ್ಚಿ ಅಹುದೆನಬೇಕು! ನುಡಿಯೊಳಗಾಗಿ ನಡೆಯದಿದ್ದರೆ

ಕೂಡಲಸಂಗಮದೇವನೆಂತೊಲಿವನಯ್ಯಾ?"

ಶ್ರೀಮತಿ ಗಂಗೂಬಾಯಿಯವರಿಗೆ ಸಂಗೀತ ಕೇವಲ ವೃತ್ತಿಯಲ್ಲ, ನಾದೋಪಾಸನೆ; ಜೀವಿತಶಾಸ್ತ್ರದ ಮುಖವಾಣಿಯಲ್ಲ – ಹೃದಯನಿವೇದನ; ಸಂಗೀತವೈಚಿತ್ರ್ಯ, ವಿದ್ವತ್ಪ್ರದರ್ಶನದ ಕೊಳುಗುಳವಲ್ಲ – ವ್ಯಕ್ತಿ ಸಮಷ್ಟಿಯಲ್ಲಿ ಸಾಯುಜ್ಯವಾಗುವ ಮಧುರಾನುಭವ.

ಇವರಿಗಿಂತ ಶುದ್ಧ ಸಾತ್ವಿಕ ಸಂಗೀತವನ್ನು ಹೆಚ್ಚು ಮೆಚ್ಚಿ ಬಿತ್ತರಿಸಿದವರು ವಿರಳ, ಇವರಿಗಿಂತ ರಸಿಕಮನೋತ್ತಾರಣೆ ಹೆಚ್ಚು ಮಾಡಿದವರು ವಿರಳ, ಮತ್ತು ಇವರಿಗಿಂತ ಸಂಗೀತಸಂಸ್ಥೆಗಳಿಗೆ ಹೆಚ್ಚು ಪ್ರೀತಿ ಹರಿಸಿದವರು ವಿರಳ. ಎಂದೇ ಇವರ ಸಂಗೀತ ಸದಾ ನವನವೋನ್ಮೇಷಶಾಲಿಯಾಗಿದೆ.

ಇಂಥ ನಾದಯೋಗಿ ರಸಗಾಯಿಕೆಗೆ ನಾವೇನು ಶುಭಾಶಂಸನೆ ನೀಡಬಲ್ಲೆವು?

ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ
ಆಕಾಶಗಂಗೆಯಲ್ಲಿ ಮಜ್ಜನ
ಹೂವಿಲ್ಲದ ಪರಿಮಳದ ಪೂಜೆ
ಹೃದಯ ಕಮಲದಲ್ಲಿ ಶಿವಶಿವಾ ಎಂಬ ಶಬ್ದ
ಇದು ಅದ್ವೈತ ಕಾಣಾ ಗುಹೇಶ್ವರಾ!

೧೪-೦೮-೧೯೯೨
ವೀಣೆ ಶೇಷಣ್ಣ ಭವನ
ಆದಿಚುಂಚನಗಿರಿ ರಸ್ತೆ
ಕುವೆಂಪುನಗರ
ಮೈಸೂರು ೫೭೦೦೨೩

ಗಾನಭಾರತೀ(ರಿ) ಪರವಾಗಿ
ಜಿ. ಟಿ. ನಾರಾಯಣರಾವ್

# ನಿನಗೆ ನಮೋ ಗೆಳೆಯಾ! ನಿನಗೆ ನಮೋ!

ಬದುಕಿನಲ್ಲಿ ಗೆಲುವು ಬಂದಾಗ ಅದು ನಮ್ಮ ಸಾಹಸಕ್ಕೆ ದೊರೆತ ಸಹಜ ಪುರಸ್ಕಾರವೆಂದು ಬೀಗುವುದೂ ಸೋಲು ಹೊಡೆದಾಗ ಅದು ಇತರರ ಪಿತೂರಿಯ ದುಷ್ಫಲವೆಂದು ರೇಗುವುದೂ ಸಾಮಾನ್ಯ ನಡವಳಿಕೆ. ವ್ಯಕ್ತಿಮೂಲವಾದ ಈ ದೌರ್ಬಲ್ಯಗಳ ಪೈಕಿ ಎರಡನೆಯದು — ನಮ್ಮ ವೈಫಲ್ಯಗಳಿಗೆ ಇತರರನ್ನು ಹೊಣೆಮಾಡುವುದು — ಜನಸಮೂಹಗಳಲ್ಲಿ ದ್ವೇಷದ ಬೀಜವಾಗಿ ಅಥವಾ ಕೋಮುವಾದವಾಗಿ ಬೆಳೆದು ಸಾಮಾಜಿಕ ಸ್ವಾಸ್ಥ್ಯಕ್ಕೆ ಮಾರಕವಾಗುವುದು ವಿರಳವಲ್ಲ.

ಜರ್ಮನಿಯಲ್ಲಿ ಹಿಟ್ಲರ್‌ನಿಂದಾಗಿ ಬಲಿಪಶುಗಳಾದ ಯಹೂದ್ಯರ ಕರ್ಮಕಾಂಡ ಈಗ ಇತಿಹಾಸದ ಕರಾಳ ಪುಟಗಳಲ್ಲಿ ಸೇರಿಹೋಗಿದೆ. ಹಿಟ್ಲರ್ ಅನುಯಾಯಿಗಳಾದ ನಾಜಿಗಳು ತಮ್ಮ ಸಮಸ್ತ ವೈಫಲ್ಯ ಹತಾಶೆಗಳ ಮೂಲಕಾರಣ ಯಹೂದ್ಯರೆಂದು ತಮ್ಮನ್ನು ತಾವೇ ನಂಬಿಸಿಕೊಂಡು ಯಹೂದ್ಯರ ವ್ಯವಸ್ಥಿತ ಹನನಕಾರ್ಯಕ್ಕೆ ಇಳಿದರು. ಆಗ ಜರ್ಮನಿಯಿಂದ ಉಚ್ಚಾಟನೆಗೊಂಡ ಅಸಂಖ್ಯ ಯಹೂದ್ಯರ ಪೈಕಿ ಮಹಾವಿಜ್ಞಾನಿ ಮತ್ತು ಶಾಂತಿಮೂರ್ತಿ ಆಲ್ಬರ್ಟ್ ಐನ್‌ಸ್ಟೈನ್ ಒಬ್ಬರು. ೧೯೩೮ರಲ್ಲಿ, ಎರಡನೆಯ ಪ್ರಪಂಚಯುದ್ಧದ ಕಿಡಿ ಸಿಡಿಯುವ ಅದೇ ಮುನ್ನ, ಇವರೊಂದು ಲೇಖನ ಪ್ರಕಟಿಸಿದರು. ಶೀರ್ಷಿಕೆ "ಅವರೇಕೆ ಯಹೂದ್ಯರನ್ನು ದ್ವೇಷಿಸುತ್ತಾರೆ?" ಐನ್‌ಸ್ಟೈನ್ ಬರೆದಿದ್ದಾರೆ: "ನಿಮಗೊಂದು ಪುರಾತನ ನೀತಿ ಕತೆ ಹೇಳುತ್ತೇನೆ. ಇದರಲ್ಲಿ ಅತ್ಯಲ್ಪ ಮಾರ್ಪಾಡು ಮಾಡಿದ್ದೇನೆ. ರಾಜಕೀಯ ಯಹೂದ್ಯದ್ವೇಷದ ಮುಖ್ಯ ಸೆಲೆಗಳು ಎದ್ದುಕಾಣುವಂತೆ ಮಾಡಲು ಈ ನೀತಿ ಕತೆ ನೆರವಾಗಬಲ್ಲದು.

"ಕುರಿಗಾಹಿಯೊಮ್ಮೆ ಕುದುರೆಗೆ ಅಂದ 'ಈ ವಸುಂಧರೆಯಲ್ಲಿ ಓಡಾಡುತ್ತಿರುವ ಪರಮಶ್ರೇಷ್ಠ ಚತುಷ್ಪಾದಿ ನೀನು. ಖಂಡಿತವಾಗಿಯೂ ನೀನು ನಿರಾತಂಕವಾದ ಆನಂದ ಸ್ಥಿತಿಯಲ್ಲಿ ಜೀವಿಸಲು ಪೂರ್ಣಾರ್ಹತೆ ಪಡೆದಿರುವೆ. ಆ ವಿಶ್ವಾಸಘಾತಕ ಕಡವೆ ಇಲ್ಲದಿದ್ದರೆ ನಿಜಕ್ಕೂ ನಿನ್ನ ಹಿಗ್ಗು ಪರಿಪೂರ್ಣವಾಗಿರುತ್ತಿತ್ತು. ಆದರೆ ಬಾಲ್ಯದಿಂದಲೂ ಅವನು ಪದಗತಿಯ ಚುರುಕುತೆಯಲ್ಲಿ ನಿನಗಿಂತ ಮುಂದಿರಲು ಅಭ್ಯಾಸಮಾಡಿದ್ದಾನೆ. ಈ ಚುರುಕುನಡೆಯ ಪರಿಣಾಮವಾಗಿ ಅವನು ನಿನಗಿಂತ ಮೊದಲೇ ನೀರಗುಂಡಿಗಳನ್ನು ತಲುಪುತ್ತಾನೆ. ಅವನೂ ಅವನ ಪರಿವಾರವೂ ಇಲ್ಲಿ ಅಲ್ಲಿ ಎಲ್ಲೆಲ್ಲೂ ನೀರು ಹೀರಿದ್ದೇ ಹೀರಿದ್ದು. ಇದರಿಂದಾಗಿ ನೀನೂ ನಿನ್ನ ಮರಿಗಳೂ ನೀರಡಿಕೆಯಿಂದ ಬೆಂದು ಬಳಲಿ ಬಸವಳಿಯಬೇಕಾಗಿದೆ. ಗೆಳೆಯಾ! ನನ್ನೊಡನೆ ಉಳಿರು. ನನ್ನ ಬುದ್ಧಿವಂತಿಕೆ ಮತ್ತು ಮಾರ್ಗದರ್ಶನ ನಿನ್ನನ್ನೂ ನಿನ್ನ ಪೀಳಿಗೆಯನ್ನೂ ಈ ಭೀಕರ ಮತ್ತು ಅವಮಾನಕಾರಕ ಸನ್ನಿವೇಶದಿಂದ ಪಾರುಗಾಣಿಸುವುದು ಖಾತ್ರಿ.

"ಕಡವೆಗೆದುರಾಗಿ ದ್ವೇಷಾಸೂಯೆಗಳಿಂದ ತಹತಹಿಸುತ್ತಿದ್ದ ಕುದುರೆ ಕುರಿಗಾಹಿಯ ನಲ್ನುಡಿಯಿಂದ ಹಿರಿಹಿಗ್ಗಿತು. ಆತನ ಜೀನಿಗೆ ತನ್ನನ್ನು ಒಪ್ಪಿಸಿಕೊಂಡಿತು. ಆ ಕ್ಷಣ ಅದರ ಸ್ವಾತಂತ್ರ್ಯ ಹರಣವಾಯಿತು, ಅದು ಕುರಿಗಾಹಿಯ ಗುಲಾಮನಾಗಿಹೋಯಿತು.

"ಈ ನೀತಿ ಕತೆಯಲ್ಲಿಯ ಕುದುರೆ ಜನರನ್ನು ಪ್ರತಿನಿಧಿಸುತ್ತದೆ; ಕುರಿಗಾಹಿಯು ಜನತೆಯ ಮೇಲೆ ಪೂರ್ಣಾಧಿಕಾರ ಸ್ಥಾಪನೆ ಮಾಡಲು ಹೊಂಚುತ್ತಿರುವ ವರ್ಗ ಅಥವಾ ದುಷ್ಟಕೂಟವನ್ನು ಪ್ರತಿನಿಧಿಸುತ್ತಾನೆ. ಇನ್ನು ಕಡವೆ ಇದು ಯಹೂದ್ಯರನ್ನು ಪ್ರತಿನಿಧಿಸುತ್ತದೆ.....

ನೆನಪು ಹರಿದಿದೆ. ಆ ಮೂವರೂ ಮುಂದಕ್ಕೆ ನಡೆಯಲು ಅಣಿಯಾಗಿದ್ದಾರೆ. ಆದರೆ ಬಬ್ಬನ ಹೃದಯ ಅರಿದಿದೆ: "ತಂಗೀ! ಭಯಪಡಬೇಡ. ನಾನಿಲ್ಲವೇ. ತಂಗಿ ನಿನಗೆ ಸಾಂತ್ವನ ಮಾಡುತ್ತೇನೆ. ಅನಾಥ ರಕ್ಷಣೆಯೇ ವೇದಘೋಷಣೆ ಅಲ್ಲವೇ!''

ಬಗೆಬಗೆಯಿಂದ ಶಾಲು ಹಾಕಿದ್ದಾರೆ ಉಳಿದವರು ವೇದಪಾರಂಗತರು. ಮ್ಲೇಚ್ಛನಗರ ಪ್ರವೇಶಿಸಿದ್ದಾರೆ. ವೇದಶಾಸ್ತ್ರ ಮರುಳಾಯಿತು. ಬಬ್ಬನ ರಕ್ತ ಕುದ್ದಿದೆ. ಇನ್ನೊಬ್ಬನಿಗೆ ಹೇಳುತ್ತಾನೆ: ' ನಾನಿಲ್ಲವೇ ನಿಲ್ಲುತ್ತೇನೆ. ಮ್ಲೇಚ್ಛರನ್ನು ತರಿದೊಗೆದು ವೇದಗಳ ಪುನಃಸ್ಥಾಪನೆ ಮಾಡುತ್ತೇವೆ. ವೇದರಕ್ಷಣೆ 'ನನ್ನ ಪವಿತ್ರ ಹೊಣೆ."

ಈಗ ಉಳಿದವನು ಬಬ್ಬನೇ. ಇವನು ಮತಿವಿಚಲಿತನಾಗದೇ ಧೃತಿ ಕಳೆದುಕೊಳ್ಳದೇ ಗುರಿಹಿಡಿದು ನಡೆದು ಕನ್ಯಾಕುಮಾರಿ ವೇದಪಾಠಶಾಲೆಯನ್ನು ತಲುಪುತ್ತಾನೆ.

ಕರ್ತವ್ಯನಿರ್ವಹಣೆಯನ್ನು ಮುಂದೂಡುವ ಅಥವಾ ಗುರಿಸಾಧನೆಯಲ್ಲಿ ಸೋಲಾಗ ಕಾರಣಗಳನ್ನು ಬೇರಾವುದರಲ್ಲೋ ಅರಸಲು ನಮ್ಮ ಮನಸ್ಸು ಎಂಥ ದೈವಿಕ, ರಾಷ್ಟ್ರಿಕ, ಅನಾಥ ರಕ್ಷಕ ಅಥವಾ ಧರ್ಮಸಂಸ್ಥಾಪಕ ಆದರ್ಶಗಳನ್ನು ನೀಡುತ್ತದೆ ಎಂಬುದು ನಿಜಕ್ಕೂ ಆಶ್ಚರ್ಯಕರ. ಆದರೆ ಅಂತಿಮವಾಗಿ ಇವೆಲ್ಲವೂ ಪಲಾಯನವಾದದ ವಿವಿಧ ಛಾಯೆಗಳು ಮಾತ್ರ. ಹನುಮಂತ ನಿಷ್ಠೆ, ಅರ್ಜುನಲಕ್ಷ್ಯ ಹಾಗೂ ಕರ್ಣವದಾನ್ಯತೆ ನಮ್ಮಲ್ಲಿ ಮೇಳೈಸಿದಾಗ ಮಾತ್ರ ನಾವು ಗುರಿ ತಲುಪುತ್ತೇವೆ.

೨೦.೦೪.೧೯೯೭

ದೂರವಾಣಿ ೨೪೭೪೯

ಜಿ. ಟಿ. ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ
ಮೈಸೂರು ೫೭೦ ೦೨೩

ಲಭ್ಯ ಐತಿಹಾಸಿಕ ಮಹಾನೋವಗಳ ಸಂಖ್ಯೆ ಏಳು. ಅವನ್ನು ಚೀನಾ, ಜಪಾನ್, ಕೊರಿಯ ದೇಶಗಳಲ್ಲಿ ದೊರೆತ ದಾಖಲೆಗಳಿಂದ ಪತ್ತೆ ಮಾಡಿ ಈಜಿಪ್ತ, ಗ್ರೀಸ್, ಅರೇಬಿಯ, ಯುರೋಪ್ ಮೊದಲಾದೆಡೆಗಳಲ್ಲಿ ದೊರೆತ ತತ್ಸಂಬಂಧವಾದ ವರದಿಗಳೊಡನೆ ಹೊಂದಿಸಿ ಹೆಕ್ಕಲಾಗಿದೆ. ಹೀಗೆ ನಿರ್ಧರಿತವಾದ ಖಗೋಳ ಸ್ಥಾನಗಳನ್ನು ಆಧುನಿಕ ವಿಜ್ಞಾನದ ಸೂಕ್ಷ್ಮ ವೀಕ್ಷಣೆ ಹಾಗೂ ವಿಶ್ಲೇಷಣೆಗಳಿಗೆ ಒಳಪಡಿಸಿ ಅಲ್ಲಿ ಆ ಮಹಾನೋವಾವಶೇಷಗಳನ್ನು ಪತ್ತೆ ಮಾಡಲಾಗಿದೆ. ಈ ಏಳು ಐತಿಹಾಸಿಕ ಮಹಾನೋವಗಳ ಕೆಲವು ವಿವರಗಳು ಹೀಗಿವೆ. ಕ್ರಿಸ್ತಶಕ 185ರಲ್ಲಿ ಕಾಣಿಸಿಕೊಂಡ ಮಹಾನೋವ ಸೆಂಟಾರಸ್ ಪುಂಜದಲ್ಲಿತ್ತು, ಇಪ್ಪತ್ತು ತಿಂಗಳ ಕಾಲ ಅತ್ಯುಜ್ಜ್ವಲವಾಗಿತ್ತು. ಮುಂದೆ ಕ್ರಿಸ್ತಶಕ 393ರಲ್ಲಿ ಕಾಣಿಸಿಕೊಂಡ ಮಹಾನೋವ ~~ರದು ಚಿತ್ರಕಲೆ~~ ವೃಶ್ಚಿಕರಾಶಿಯಲ್ಲಿ ಎಂಟು ತಿಂಗಳ ಕಾಲವೂ 1006 ~~ರದು~~ ರಲ್ಲಿನದು ಲೂಪಸ್ ಪುಂಜದಲ್ಲಿ ಹಲವಾರು ವರ್ಷಗಳ ಕಾಲವೂ 1054 ~~ರದು~~ ರಲ್ಲಿನದು ವೃಷಭ ರಾಶಿಯಲ್ಲಿ ಇಪ್ಪತ್ತೆರಡು ತಿಂಗಳ ಕಾಲವೂ 1181 ~~ರದು~~ ರಲ್ಲಿನದು ಕೆಸಿಯೋಪಿಯ ಪುಂಜದಲ್ಲಿ ಆರು ತಿಂಗಳ ಕಾಲವೂ 1572 ~~ರದು~~ ರಲ್ಲಿನದು ಕೆಸಿಯೋಪಿಯ ಪುಂಜದಲ್ಲಿ ಹದಿನೆಂಟು ತಿಂಗಳ ಕಾಲವೂ 1604ರಲ್ಲಿ ಕಾಣಿಸಿಕೊಂಡ ಮಹಾನೋವ ~~ರದು~~ ಅಫೀಯೂಕಸ್ ಪುಂಜದಲ್ಲಿ ಹನ್ನೆರಡು ತಿಂಗಳ ಕಾಲವೂ ಉಜ್ಜ್ವಲವಾಗಿ ಪ್ರಕಾಶಿಸುತ್ತಿದ್ದುವು. ಕ್ರಿಸ್ತಶಕ 1054ರಲ್ಲಿ ವೃಷಭ ರಾಶಿಯಲ್ಲಿ ಗೋಚರವಾದ ಮಹಾನೋವ ಕ್ರ್ಯಾಬ್ ನೀಹಾರಿಕೆಯಲ್ಲಿದೆ. ದೂರದರ್ಶಕದಿಂದ ಈ ನೀಹಾರಿಕೆಯನ್ನು ~~ಸ~~ ನೋಡಿದರೆ ಏಡಿ ತನ್ನ ಹರಡುಗಳನ್ನು ಚಾಚಿಕೊಂಡಿರುವಂತೆ ಕಾಣುವುದು. ಎಂದೇ ಇದಕ್ಕೆ ಏಡಿ ನೀಹಾರಿಕೆ ಅಥವಾ ಕ್ರ್ಯಾಬ್ ನೆಬ್ಯುಲ ಎಂಬ ಹೆಸರು ಬಂದಿದೆ. ಮಹಾನೋವ ಪೊಂದರ ಭಗ್ನಾವಶೇಷಕ್ಕೆ ಇದೊಂದು ಉತ್ಕೃಷ್ಟ ನಿದರ್ಶನ. ~~ಕೊನೆಯದಾಗಿ, ಇಂದಿನ~~ (NB) ಆಧುನಿಕ ತಂತ್ರ ವಿದ್ಯೆಯ ನೆರವಿನಿಂದ ಕಳೆದ ತೊಂಬತ್ತು ವರ್ಷಗಳ ಅವಧಿಯಲ್ಲಿ ಸುಮಾರು 400 ಮಹಾನೋವಗಳನ್ನು ಗುರುತಿಸಲಾಗಿದೆ. ವಿಶ್ವದ ಗರಡಿ ಮನೆಯಲ್ಲಿ ಜರುಗುವ ಸೃಷ್ಟಿ ವಿಲಯಗಳು ಇನ್ನೆಷ್ಟು ಕಾಲದಿ ಇರುವವೋ! ಹೊಸ ದೃಷ್ಟಿ ಹೊಸ ಜ್ಞಾನ ಪಡೆವನನ್ನೆಲ್ಲ ಹೊರಗೆಳೆಯುವವೋ!

ಜಿ.ಟಿ. ನಾರಾಯಣರಾವ್
"ಅತ್ರಿ" ಎಂಟನೆಯ ಅಡ್ಡ ರಸ್ತೆ
ಸರಸ್ವತೀಪುರಂ
ಮೈಸೂರು 570009

# ಕನ್ನಡದಲ್ಲಿ ಜನಪ್ರಿಯವಿಜ್ಞಾನವಾಙ್ಮಯ: ಭಾಷೆಯ ಪಾತ್ರ ವಳು ಒಳ್ಳೆಬಗಳು

1ಂ ಅಭಿಪ್ರಾಯಕ್ಕೂ ಭಾಷೆಗೂ ಇರುವ ಸಂಬಂಧವು ಅವಿಭಾಜ್ಯವಾಗಿದೆ. ನಮ್ಮ ಮನಸ್ಸಿನಲ್ಲಿರುವ ಯಾವುದೊಂದು ಅರ್ಥವನ್ನು ನಮಗೆ ಸರಿಯಾಗಿ ಹೇಳುವುದಕ್ಕೆ ಬರುವುದಿಲ್ಲವೆಂದರೆ, ಆ ಅರ್ಥವು ನಮ್ಮ ಮನಸ್ಸಿನಲ್ಲಿ ಸ್ಫುಟರೂಪದಲ್ಲಿ ಬಿಂಬಿಸಿರುವುದಿಲ್ಲವೆಂದು ತಾತ್ತ್ವಿಕವಾಗಿ ಸಿದ್ಧವಾಗುತ್ತದೆ.

ಇದಕ್ಕೆ ಕೆಲವರು ಹೀಗೆ ಆಕ್ಷೇಪವೆತ್ತಬಹುದು: ಬೇರೆ ಭಾಷೆಯಲ್ಲಿ, ಉದಾ– ಇಂಗ್ಲಿಷಿನಲ್ಲಿ, ಅದೇ ವಿಚಾರವನ್ನು ನಾವು ಸಮಂಜಸವಾಗಿ ಹೇಳಬಲ್ಲೆವು; ಆದರೆ ಕನ್ನಡದಲ್ಲಿ ಹೇಳಲಾಗುವುದಿಲ್ಲವಲ್ಲಾ? – ಎಂದರೆ, ನಾವು ಹೇಳಬಲ್ಲ ವಿಚಾರವೆಲ್ಲ 'ನಮ್ಮದೇ' ಆಗಿಲ್ಲವೆಂಬುದನ್ನು ಮರೆಯಬಾರದು. ನಾವೀಗ ನಮ್ಮ ವಿಚಾರ, 'ನಮ್ಮ ಜ್ಞಾನ' ಎಂದು ಹೇಳುವುದರ ಬಹುಭಾಗವೆಲ್ಲ ಇತರರು ಭಾಷಾರೂಪದಲ್ಲಿಯೇ ನಮಗೆ ಮಾಡಿದ ದಾನವಾಗಿದೆ. ಅದನ್ನು ನಮ್ಮದಾಗಿ ಮಾಡಿಕೊಂಡು, ಅದರ ಮೇಲೆ ಕೆಲವು ಮಟ್ಟಿಗೆ ನಾವೂ ಬೆಳೆಯಿಸಿ ನಮ್ಮ 'ಸ್ವತಂತ್ರ' ವಿಚಾರಗಳನ್ನು ನಿರ್ಮಿಸಿಕೊಳ್ಳುತ್ತೇವೆ. ಹೀಗೆ ನಾವು ನಿರ್ಮಿಸಿಕೊಳ್ಳುವುದು, ಯಾವ ಭಾಷೆಯಲ್ಲಿ ನಾವು ಆ 'ನಮ್ಮ ಜ್ಞಾನ'ವನ್ನು ಸಂಪಾದಿಸಿರುವೆವೋ ಅದೇ ಭಾಷೆಯಲ್ಲಿ; ಕೊನೆಯ ಪಕ್ಷ ಅದೇ ಭಾಷೆಯ ಅಡಿಗಟ್ಟಿನಲ್ಲಿ. ಹೀಗೆ ಆ ಭಾಷೆಯಲ್ಲಿ ಬೆಳೆದ 'ನಮ್ಮ' ವಿಚಾರಗಳನ್ನು ಇನ್ನೊಂದು ಭಾಷೆಯಲ್ಲಿ ಪ್ರಕಟಿಸುವಾಗ ನಮಗೆ ತೊಡಕುಂಟಾಗುತ್ತದೆ. ಹೀಗೆ ಪ್ರಕಟಿಸುವ ಪ್ರಯತ್ನವೆಂದರೆ, ಅದೊಂದು ತರದ ಆಂತರಿಕ ಭಾಷಾಂತರವೇ ಸರಿ. ಸಮಂಜಸವಾದ ಭಾಷಾಂತರವೆಂಬುದು ಯಾವಾಗಲೂ ಅತ್ಯಂತ ಶ್ರಮಸಾಧ್ಯ; ಅದು ಸರ್ವತ್ರ ಸಂಪೂರ್ಣ ಸರಿಯಾಗುವುದು ತಾತ್ತ್ವಿಕವಾಗಿ ಅಸಂಭಾವ್ಯವೆಂದರೂ ಸರಿಯೇ. ಈಗ ನಮಗೆ, ನಮ್ಮ ಗದ್ಯಕ್ಕೆ, ಬಂದಿರುವ ಅವಸ್ಥೆಗೆ ಮೊದಲನೆಯ ಕಾರಣವು ಇದೇ ಆಗಿದೆ. ನಮ್ಮ ಆಧುನಿಕ ಜ್ಞಾನದಲ್ಲಿ ಹೆಚ್ಚಿನ ಅಂಶ ನಾವು ಇಂಗ್ಲಿಷಿನಲ್ಲಿ ಓದಿದುದು; ಕೆಲವು ಅಂಶ ಆ ಭಾಷೆಯ ಅಡಿಗಟ್ಟಿನ ಮೇಲೆಯೇ ಬೆಳೆಯಿಸಿದುದು. ಆದುದರಿಂದ ಆ ಅಭಿಪ್ರಾಯಗಳನ್ನು ಕನ್ನಡಕ್ಕೆ 'ಭಾಷಾಂತರ' ಮಾಡಲು ಬಹಳ ಕಷ್ಟವಾಗುತ್ತದೆ; ಯುಕ್ತವಾದ ಶಬ್ದಗಳೇ ಕಾಣುವುದಿಲ್ಲ.....

.......ಇಂಗ್ಲಿಷಿನಲ್ಲಿ ಜ್ಞಾನವನ್ನು ಪಡೆದು ಕನ್ನಡದಲ್ಲಿ ವಿವರಣೆ ಕೊಡಗುವವರೆಲ್ಲ, ಕನ್ನಡ ಭಾಷೆಯಲ್ಲಿ ಸಾಕಷ್ಟು ಅಭ್ಯಾಸವನ್ನು ಮಾಡುತ್ತಾರೆಯೇ? .....

ನಿಜವಾಗಿ 'ನಮ್ಮ ಭಾಷೆ'ಯನ್ನು ಬೆಳೆಯಿಸುವುದೆಂದರೆ, ನಮ್ಮ ಭಾಷೆಯಲ್ಲಿಯೇ ನಮ್ಮ ವಿಚಾರಗಳನ್ನು ಬೆಳೆಯಿಸುವುದು; ಹಾಗೆ ಬೆಳೆದ ವಿಚಾರಗಳನ್ನು ಯಥಾವತ್ತಾಗಿ ಪ್ರಕಾಶಪಡಿಸುವುದು; ನಮ್ಮ ಭಾಷೆಯ ಉತ್ತಮಗ್ರಂಥಗಳನ್ನು ಅಧ್ಯಯನಮಾಡಿ ನಮ್ಮ ವಾಕ್ಸಂಪತ್ತಿಯನ್ನು ಹೆಚ್ಚಿಸಿಕೊಂಡು, ಆಯಾ ಶಬ್ದಗಳ ಅಳವರಿತು ಪ್ರಯೋಗಿಸುವುದು. ನಮ್ಮಲ್ಲಿಯ ಶಬ್ದ ದಾರಿದ್ರ್ಯದ ಕೂಗಿಗೆ, ನಮ್ಮ ಭಾಷಾಭ್ಯಾಸದ ಅಭಾವವೇ ಮುಖ್ಯ ಕಾರಣವಾಗಿದೆ...

ಮೈಸೂರು ವಿಶ್ವವಿದ್ಯಾನಿಲಯ, ಶೈಕ್ಷಣಿಕ ಸಿಬ್ಬಂದಿ ಮಹಾವಿದ್ಯಾಲಯ

# ಕನ್ನಡ ಪಾಠಗಳಲ್ಲಿ ವಿಜ್ಞಾನ ಪಾರಿಭಾಷಿಕ ಪದಗಳು

ಕನ್ನಡ ಪಠ್ಯ ಮತ್ತು ಉಪಪಠ್ಯ ಪುಸ್ತಕಗಳು ಸಾಹಿತ್ಯದ ವಿವಿಧ ಮುಖಗಳನ್ನು ಬಿಂಬಿಸುವುದು ವಾಡಿಕೆ. ಪಠ್ಯ ಪುಸ್ತಕಗಳಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯದಿಂದ ಆಯ್ದ ಕೆಲವು ಪಾಠಗಳನ್ನು ಸೇರಿಸುವುದೂ ಉಪಪಠ್ಯಪುಸ್ತಕಗಳಾಗಿ ಜನಪ್ರಿಯ ವಿಜ್ಞಾನ ಶೈಲಿಯಲ್ಲಿ ರಚಿತವಾದ ಪುಸ್ತಕಗಳನ್ನು ವಿಧಿಸುವುದೂ ಉಂಟು. ವಿಜ್ಞಾನವನ್ನು ಅಭ್ಯಾಸಮಾಡಿರುವ ಕನ್ನಡ ಅಧ್ಯಾಪಕರಿಗೆ ಕೂಡ ಇಂಥ ಪಾಠಗಳು ಇಲ್ಲವೇ ಪುಸ್ತಕಗಳು ಪೂರ್ತಿ ಗ್ರಾಹ್ಯವಾಗದಿರುವ ಸಂಭಾವ್ಯತೆ ಇದೆ. ಮಾಡಿರದವರಾದರೋ ಈ ವಾಙ್ಮಯವನ್ನು ಬಿಗಿಹಾಯ್ದು ಮುಂದಕ್ಕೆ ತೆರಳುವುದು ವಿರಳವಲ್ಲ.

ತುಲನಾರ್ಥ 'ದೂರವಾಣಿ' (telephone) ಎಂಬ ಒಂದೇ ವಿಷಯ ಕುರಿತಂತೆ ಪ್ರಕಟವಾಗಿರುವ ಎರಡು ಲೇಖನಗಳನ್ನು ಗಮನಿಸಿ:

ಸಾಹಿತ್ಯಭಾಷೆ: ನಿಮ್ಮ ಮನೆಗೆ ಟೆಲಿಫೋನ್ ಸಂಬಂಧವಿಟ್ಟುಕೊಳ್ಳುವ ಗೊಡವೆಗೆ ಹೋಗಬೇಡಿ. ಇದು ನನ್ನ ಅನುಭವದಿಂದ ಹೇಳುವ ಮಾತು, ನಿಮ್ಮ ಹಿತಚಿಂತಕನಾಗಿ ಹೇಳುವ ಮಾತು. "ತನಗೆ ಟೆಲಿಫೋನ್ ಇಟ್ಟುಕೊಳ್ಳುವ ಯೋಗ್ಯತೆಯಿಲ್ಲ, ನಾವು ಇಟ್ಟುಕೊಂಡರೆ ಸಹಿಸಲಾರ" ಎಂದುಕೊಂಡು ಬಾಲವಿಲ್ಲದ ನರಿಯ ಕಥೆಯನ್ನು ನೆನಪಿಗೆ ತಂದುಕೊಳ್ಳಬೇಡಿ. ನಾನೂ ಒಂದಾನೊಂದು ಕಾಲದಲ್ಲಿ ಟೆಲಿಫೋನ್ ಹೊಂದಿದ್ದವನೇ. ಆದರೆ ಆ ಯಂತ್ರ ಮನೆಗೆ ಬಂದ ದಿನದ ಸಂತೋಷಕ್ಕಿಂತ ಅದು ಹೋದ ದಿನ ಅನುಭವಿಸಿದ ಶಾಂತಿ ನೂರು ಪಾಲು ಹೆಚ್ಚಿನದು. (ಸಮಗ್ರ ಲಲಿತ ಪ್ರಬಂಧಗಳು — ಎ. ಎನ್. ಮೂರ್ತಿರಾವ್)

ವಿಜ್ಞಾನಭಾಷೆ: ದೂರವಾಣಿ: ಶಬ್ದದ ಅಲೆಗಳನ್ನು ವಿದ್ಯುತ್ತರಂಗಗಳಾಗಿ ಮಾರ್ಪಡಿಸುವ ಪ್ರೇಷಕ (ಟ್ರಾನ್ಸ್‌ಮಿಟರ್), ವಿದ್ಯುತ್ತರಂಗಗಳನ್ನು ಶಬ್ದದ ಅಲೆಗಳಾಗಿ ಮಾರ್ಪಡಿಸುವ ಅಭಿಗ್ರಾಹಕ (ರಿಸೀವರ್), ಮತ್ತು ತತ್ಸಂಬಂಧವಾದ ಜಾಲಬಂಧ — ಈ ವ್ಯವಸ್ಥೆಯ ಒಟ್ಟು ಹೆಸರು (ಟೆಲಿಫೋನ್). (ಕನ್ನಡ ವಿಶ್ವಕೋಶ — ಸಂಪುಟ ಒಂಬತ್ತು)

ಕನ್ನಡ ಪಠ್ಯಪುಸ್ತಕವೊಂದರಲ್ಲಿ ಮೇಲಿನ ಎರಡು ಲೇಖನಗಳನ್ನು ಸೇರಿಸಿದ್ದರೆ, ಅಧ್ಯಾಪಕರಿಗೆ ಅಂತೆಯೇ ವಿದ್ಯಾರ್ಥಿಗಳಿಗೆ ಕೂಡ, ಎರಡನೆಯದು ಕಠಿಣ ಮತ್ತು ಅಪ್ರವೇಶ್ಯವೆನ್ನಿಸುವುದರ ಕಾರಣಗಳು ಮುಖ್ಯವಾಗಿ ನಾಲ್ಕು: ವಿಜ್ಞಾನಪರಿಕಲ್ಪನೆಯ ಪರಕೀಯತೆ, ಭಾಷೆಯ ಅಸಹಜತೆ, ಕೆಲವು ವಿಚಿತ್ರ ಪದಗಳ ಪುನರಾವರ್ತನೆ, ಸಮಗ್ರ ಚಿತ್ರದ ಗೈರುಹಾಜರಿ. ಇವು ಏನೆಂದು ಈಗ ನೋಡೋಣ.

## ಪರಿಕಲ್ಪನೆಯ ಪರಕೀಯತೆ

ಯಾವುದೇ ನೈಸರ್ಗಿಕ ವಿದ್ಯಮಾನದ (natural phenomenon) ಭಾವನಾತ್ಮಕ ಪ್ರತಿಬಿಂಬವೇ ಅದನ್ನು ಕುರಿತ ಪರಿಕಲ್ಪನೆ (concept). ಉದಾಹರಣೆಗೆ ಎರಡು ಅನುಕ್ರಮ ಸೂರ್ಯೋದಯಗಳ ನಡುವೆ ಸಲ್ಲುವ ಅವಧಿ ಒಂದು ನೈಸರ್ಗಿಕ ವಿದ್ಯಮಾನ. ಇದರ ಅನುಭವ ನಮ್ಮಲ್ಲಿ ಪ್ರೇರಿಸುವ ಭಾವನೆಯನ್ನು 'ದಿವಸ' ಎಂಬ ಪರಿಕಲ್ಪನೆಯಿಂದ ಸೂಚಿಸುತ್ತೇವೆ. ವಿಜ್ಞಾನದಲ್ಲಿ 'ದಿವಸ'ವನ್ನು

"ಭೂಮಿ ತನ್ನ ಅಕ್ಷದಲ್ಲಿ ಒಂದು ಆವರ್ತನೆ ಮುಗಿಸಲು ತೆಗೆದುಕೊಳ್ಳುವ ಅವಧಿ" ಎಂದು ಖಚಿತವಾಗಿ ವ್ಯಾಖ್ಯಿಸುತ್ತೇವೆ (define); ಮತ್ತು ಈ ಅರ್ಥದಲ್ಲಿ — ಈ ಅರ್ಥದಲ್ಲಿ ಮಾತ್ರ — ಬಳಸುತ್ತೇವೆ.

ನಿತ್ಯ ಜೀವನದಲ್ಲಿ ಅಷ್ಟೇನೂ ಅನಿವಾರ್ಯವಲ್ಲದ, ಆದರೆ ವಿಜ್ಞಾನ ವಿಷಯಗಳಲ್ಲಿ ಅತ್ಯಂತ ಅಗತ್ಯವಾದ, ಈ ಪರಿಕಲ್ಪನೆ ಹಾಗೂ ಅದರ ವ್ಯಾಖ್ಯೆ ಆಯಾ ವಿಷಯಗಳಲ್ಲಿ ವ್ಯವಹರಿಸದವರಿಗೆ ಪರಕೀಯ ಎನ್ನಿಸುವುದು ವಾಡಿಕೆ. ಏಕೆಂದರೆ ಈ ಪರಿಕಲ್ಪನೆಯ ಅರ್ಥಸ್ವಾರಸ್ಯ ಗ್ರಹಿಸಲು ಉಪಾಧ್ಯಾಯ ತಿಳಿದಿರಬೇಕಾದ ಅವಶ್ಯ ವಿವರಗಳಿವು:

ಭೂಮಿ ಒಂದು ಗೋಳ. ಇದು ತನ್ನ ಸುತ್ತ ಸತತವಾಗಿ ಏಕವೇಗದಿಂದ ತಿರುಗುತ್ತಿದೆ — ಬುಗುರಿಯಂತೆ. ಈ ಚಲನೆಗೆ ಆವರ್ತನೆ (rotation) ಎಂದು ಹೆಸರು. ಸೂರ್ಯನ ಸುತ್ತ ಕೂಡ ಭೂಮಿ ತಿರುಗುತ್ತಿರುವುದು ಸರಿಯಷ್ಟೆ — ದೇವಾಲಯದ ಸುತ್ತ ಭಕ್ತ ಹಾಕುವ ಪ್ರದಕ್ಷಿಣೆಯಂತೆ. ಈ ಚಲನೆ ಆವರ್ತನೆಗಿಂತ ಭಿನ್ನವಾದದ್ದು. ಇದರ ಹೆಸರು ಪರಿಭ್ರಮಣೆ (revolution). ಭೂಮಿಯು ಒಂದು ಆವರ್ತನೆ ವೇಳೆ ಸಲ್ಲುವ ಅವಧಿಯೇ ದಿವಸ. ಅದೇ ರೀತಿ ಒಂದು ಪರಿಭ್ರಮಣೆ ವೇಳೆ ಸಲ್ಲುವ ಅವಧಿ ವರ್ಷ.

ಇನ್ನು 'ಅವಧಿ' ಎಂದರೇನು? ಎರಡು ಘಟನೆಗಳ (events) ನಡುವೆ ಸಂದು ಹೋಗುವ ಕಾಲವಿದು — interval of time. ಎರಡು ನೆಲೆಗಳ (places) ನಡುವೆ ಹರಡಿರುವ 'ದೇಶ'ವನ್ನು (space; ಇಲ್ಲಿ 'ದೂರ' distance) 'ಅಂತರ' ಎನ್ನುತ್ತೇವೆ — interval of space.

ವಿಷಯಪ್ರವೇಶವನ್ನು ಶ್ರದ್ಧೆಯಿಂದ ಮಾಡಿದಹೊರತು ಪರಿಕಲ್ಪನೆಯ ಪರಕೀಯತೆ ಅಳಿಯದು. ಅಧಿಕ ಆಸ್ಥೆಯ ವ್ಯವಹಾರವೊಂದೇ ಇಲ್ಲಿಯ ಪರಿಹಾರ ಮಾರ್ಗ.

## ಭಾಷೆಯ ಅಸಹಜತೆ

ಬದುಕಿನ ನೇರ ಅನುಭವ, ದೈನಂದಿನ ಕಾರ್ಯಕಲಾಪಗಳ ಪ್ರತ್ಯಕ್ಷ ಚಿತ್ರಣ, ಮನಸ್ಸಿನ ರಾಗಭಾವ ಮುಂತಾದ ಲಹರಿಗಳ ನಿರೂಪಣೆ ಮುಂತಾದವು ಸಾಹಿತ್ಯದ ವಸ್ತುಗಳು. ಶಿಶು ಮೊದಲ ತೊದಲುನುಡಿ ಕಲಿಯುವುದೂ ಆಡುವುದೂ ಸಾಹಿತ್ಯ ಭಾಷೆಯಲ್ಲಿಯೇ. ವ್ಯಕ್ತಿ ಮುಂದೆ ತನ್ನ ವೃತ್ತಿ ಜೀವನದಲ್ಲಿ ವಿಜ್ಞಾನರಂಗಕ್ಕೆ ಕಾಲಿಟ್ಟರೆ ಅಲ್ಲಿಯ ಶಾಸ್ತ್ರೀಯ ಭಾಷೆಗೆ ತಾನು ಮೊದಲು ಕಲಿತ ಸಾಹಿತ್ಯ ಭಾಷೆಯ ಮೂಲಕವೇ ಪ್ರವೇಶಗಳಿಸಬೇಕಾಗುತ್ತದೆ. ಈಗ ಆತನೆದುರು ಎರಡು ಬಗೆಯ ಭಾಷೆಗಳು ಅಥವಾ ಧಾಟಿಗಳು ಇರುತ್ತವೆ: ಸಾಹಿತ್ಯ ಧಾಟಿ, ವಿಜ್ಞಾನ ಧಾಟಿ. ಮೊದಲನೆಯದು ಹೃದಯಗಮ್ಯ, ಆದ್ದರಿಂದ ಸುಲಭಗ್ರಾಹ್ಯ; ಎರಡನೆಯದು ಬುದ್ಧಿಗಮ್ಯ, ಆದ್ದರಿಂದ ಕಠಿಣಗ್ರಾಹ್ಯ. ನಮ್ಮ ಅಧ್ಯಾಪಕರು ವಿಜ್ಞಾನಪಾಠಗಳಲ್ಲಿ ಎದುರಿಸುವ ಎರಡನೆಯ ಸಮಸ್ಯೆ ಈ ಕಾರಣದಿಂದ ಉದ್ಭವಿಸುತ್ತದೆ. ಉದಾಹರಣೆಗೆ 'ಬೆಳಗಾಯಿತು' ಎಂಬ ಒಂದೇ ಘಟನೆಯ ಎರಡು ನಿರೂಪಣೆಗಳನ್ನು ಗಮನಿಸಿ:

ಸಾಹಿತ್ಯಧಾಟಿ: ಮೂಡಣ ಬಾನಿನಲ್ಲಿ ಕ್ಷಣಕ್ಷಣಕ್ಕೂ ರಂಗು ಬದಲಾವಣೆ ಆಗುತ್ತಿದೆ. ನಕ್ಷತ್ರಗಳ ಕಾಂತಿ ಕ್ಷೀಣವಾಗುತ್ತಿದೆ. ಚಂದ್ರನ ತೇಜಸ್ಸು ಮಸುಳುತ್ತಿದೆ. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿವೆ. ದೂರದಲ್ಲೆಲ್ಲೋ ಕೋಳಿ

ಉತ್ಸಾಹದಿಂದ ಕಿರಿಯುತ್ತದೆ. ಇತರ ಕೋಳಿಗಳು ಇದರ ಜೊತೆ ದನಿಗೂಡಿಸಿ ಸಮೂಹಗಾನ ಹಾಡುತ್ತವೆ. ಅಗೋ ನೋಡು ಅಲ್ಲಿ – ನೇಸರು ಮೂಡಿತು, ಬೆಳ್ಳನೆ ಬೆಳಗಾಯಿತು.

ವಿಜ್ಞಾನ ಧಾಟಿ: ಪೂರ್ವಾಕಾಶದಲ್ಲಿ ಬೆಳಕಿನ ಜೀವಸ್ಪಂದಿಸುತ್ತದೆ. ದಿಗಂತ ರೇಖೆ ಅಚ್ಚು ಹೊಡೆದಂತೆ ಎದ್ದು ಕಾಣುತ್ತದೆ. ನಕ್ಷತ್ರಗಳ ಕಾಂತಿ ಮತ್ತು ಚಂದ್ರನ ಪ್ರಭೆ ಮಸುಕಾಗುತ್ತವೆ. ಸೂರ್ಯಬಿಂಬದ ಪಶ್ಚಿಮ ಅಂಚು ದಿಗಂತದ ಕೆಳಗಿನಿಂದ ಮೇಲೆ ಮೇಲೆ ಸರಿಯುತ್ತದೆ. ಅಗೋ! ಆ ಬಿಂಬ ಪೂರ್ವ ದಿಗಂತವನ್ನು ಉತ್ತರಿಸಿಯೇ ಬಿಟ್ಟಿತು – ಬೆಳಗಾಯಿತು.

ಮೊದಲನೆಯ ನಿರೂಪಣೆಗೆ ವಿವರಣೆ ಅನಗತ್ಯ. ಅದು ಅನುಭವವೇದ್ಯ ಮತ್ತು ಹೃದಯಗಮ್ಯ. ಎರಡನೆಯದರಲ್ಲಿ ಪರಿಸ್ಥಿತಿ ಇಷ್ಟು ಸುಲಭವಲ್ಲ. 'ದಿಗಂತ' ಮತ್ತು 'ಸೂರ್ಯಬಿಂಬದ ಪಶ್ಚಿಮ ಅಂಚು' ಎಂಬ ಪದಗಳು ಬಿತ್ತರಿಸುವ ಅರ್ಥ ಖಂಡಿತ ಹೃದಯಗಮ್ಯವಲ್ಲ. ಈ ಪದಗಳ ಅರ್ಥ ಏನು?

ಭೂಮಿ ಮತ್ತು ಆಕಾಶ ದೂರದಲ್ಲೆಲ್ಲೋ ಸಂಗಮಿಸುವಂತೆ ಭಾಸವಾಗುವ ಮಹಾವೃತ್ತ ದಿಗಂತ (horizon). ಇದರ ಕೇಂದ್ರದಲ್ಲಿ ವೀಕ್ಷಕನಿದ್ದಾನೆ. ಕಡಲ ಕಿನಾರೆಯಲ್ಲಿ ನಿಂತು ವೀಕ್ಷಿಸುವಾತನಿಗೆ ಈ ತಥ್ಯ ಸುಲಭವಾಗಿ ತಿಳಿಯುತ್ತದೆ. ದಿಗಂತದ ಮೇಲಕ್ಕಿರುವ ಎಲ್ಲವೂ ಆತನಿಗೆ ಗೋಚರ, ಕೆಳಕ್ಕಿರುವ ಎಲ್ಲವೂ ಅಗೋಚರ.

ಇನ್ನು ಸೂರ್ಯಬಿಂಬದ ಪಶ್ಚಿಮ ಅಂಚು. ನಮಗೆ ಕಾಣುವಂತೆ ಸೂರ್ಯ ಬೆಳಕಿನ ಒಂದು ಬಿಲ್ಲೆ – ವೃತ್ತಾಕಾರದ ಮಹಾಪ್ರಭೆ. ಇದರ ಪರಿಧಿಯ ಪಶ್ಚಿಮಾಭಿಮುಖ ಭಾಗವನ್ನು ಪಶ್ಚಿಮ ಅಂಚೆಂದೂ ಪೂರ್ವಾಭಿಮುಖ ಭಾಗವನ್ನು ಪೂರ್ವ ಅಂಚೆಂದೂ ನಿರ್ದೇಶಿಸುತ್ತೇವೆ. ಆದ್ದರಿಂದ ಸೂರ್ಯ ಮೂಡುವಾಗ ಅದರ ಪಶ್ಚಿಮ ಅಂಚು ಪೂರ್ವದಿಗಂತವನ್ನು ಮೊದಲು ಪೂರ್ವ ಅಂಚು ತರುವಾಯವೂ ಕೆಳಗಿನಿಂದ ಮೇಲಕ್ಕೆ ದಾಟುತ್ತವೆ; ಅಂತೆಯೇ ಅದು ಕಂತುವಾಗ ಇದೇ ಕ್ರಮದಲ್ಲಿ ಅವು ಪಶ್ಚಿಮ ದಿಗಂತವನ್ನು ಮೇಲಿನಿಂದ ಕೆಳಕ್ಕೆ ದಾಟುತ್ತವೆ. ಈ ಗಗನ ವಿದ್ಯಮಾನಗಳನ್ನು ಪ್ರತ್ಯಕ್ಷ ವೀಕ್ಷಿಸಿ ಇವೆಲ್ಲ ಸಂಗತಿಗಳನ್ನು ಮನವರಿಕೆ ಮಾಡಿಕೊಂಡಾಗ ಮಾತ್ರ ಈ ವಿವರಣೆಯ ಸ್ವಾರಸ್ಯ ಮನಂಬುಗುತ್ತದೆ.

ನೈಸರ್ಗಿಕ ಘಟನೆಗಳ ಯಥಾರ್ಥ ನಿರೂಪಣೆಯೇ ವಿಜ್ಞಾನದ ಭಾಷೆ. ಅಂದ ಮೇಲೆ ಈ ಭಾಷೆಯ ಮೂಲಕ ಸಂಬಂಧಿತ ಘಟನೆಗಳಿಗೆ ಪ್ರವೇಶ ಪಡೆದು ಇವುಗಳ ವಿವರಗಳನ್ನು ಗ್ರಹಿಸಬೇಕು. ಹೀಗೆ ಮಾಡಿದಾಗ ಮಾತ್ರ ವಿಜ್ಞಾನ ಭಾಷೆಯ ತೋರ್ಕೆ ಅಸಹಜತೆ ಮಾಯವಾಗುತ್ತದೆ. ಈ ಭಾಷೆಯಲ್ಲಿಯೂ, ಸಶಕ್ತ ಸಾಹಿತ್ಯ ಭಾಷೆಯಲ್ಲಿಯಂತೆ, ಕಿರಿದರೊಳ್ ಪಿರಿದರ್ಥ, ಭಾಷಾಸೌಂದರ್ಯ, ಮಾತಿನ ಧ್ವನಿ ಮುಂತಾದವು ಅನುರಣಿಸುತ್ತವೆ ಎಂಬುದರ ಅರಿವು ಮೂಡುತ್ತದೆ. ಪ್ರತ್ಯಕ್ಷ ಪ್ರಾಯೋಗಿಕ ಅನುಭವ ಸಂಪಾದನೆಯೊಂದೇ ಇಲ್ಲಿಯೂ ಮಾರ್ಗ.

## ವಿಚಿತ್ರ ಪದಗಳು

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ 'ಗದ್ಯವಿಹಾರ' ಮಾಲೆಯ ಮೂರನೆಯ ಸಂಪುಟದಲ್ಲಿ

ಪ್ರಕಟವಾಗಿರುವ ಜೆ. ಆರ್. ಲಕ್ಷ್ಮಣರಾಯರ 'ಮನುಷ್ಯ' ಎಂಬ ಪಾಠದಿಂದ ಆಯ್ದಿರುವ ಭಾಗ ಗಮನಿಸಿ:

ಈಗ ಕೋಟ್ಯಂತರ ಅಣುಗಳ ಒಂದು ಸಮುದಾಯವನ್ನು ತೆಗೆದುಕೊಳ್ಳೋಣ. ಉದಾಹರಣೆಗೆ, ಒಂದು ಪಾತ್ರೆಯಲ್ಲಿರುವ ಯಾವುದೋ ಅನಿಲ. ಈ ಅನಿಲಕ್ಕೆ ಒಂದು ಗೊತ್ತಾದ ಗಾತ್ರವಿದೆ, ನಿರ್ದಿಷ್ಟ ಒತ್ತಡ ಮತ್ತು ಉಷ್ಣತೆಗಳಿವೆ. ಅನಿಲದ ಒತ್ತಡ ಎಂಬುದು ಇನ್ನೇನೂ ಅಲ್ಲ, ಅದನ್ನಿಟ್ಟಿರುವ ಪಾತ್ರೆಯ ಒಳಮೈ ಮೇಲೆ ಅದರ ಕೋಟ್ಯಂತರ ಅಣುಗಳು ಎಡೆಬಿಡದೆ ಒಂದೇಸಮನೆ ಬಡಿಯುವುದರ ಪರಿಣಾಮ. ಅಂತೆಯೇ ಈ ಅಣುಗಳ ಸರಾಸರಿ ಚಲನಶಕ್ತಿ ನಮಗೆ ಅನಿಲದ ಉಷ್ಣತೆಯ ರೂಪದಲ್ಲಿ ಗೋಚರವಾಗುತ್ತದೆ. ಆದರೆ ಅಣುಗಳನ್ನು ಬಿಡಿಬಿಡಿಯಾಗಿ ಲೆಕ್ಕಕ್ಕೆ ತೆಗೆದುಕೊಂಡಾಗ ಒತ್ತಡ, ಉಷ್ಣತೆ ಎಂಬ ಕಲ್ಪನೆಗಳಿಗೆ ಸ್ಥಳವೇ ಇರಲ್ಲ. ಈ ಅಣುಗಳಿಗೇನಿದ್ದರೂ ತೂಕ, ವೇಗ, ಚಲನಶಕ್ತಿ ಮುಂತಾದುವು, ಅಷ್ಟೆ. ಅನಿಲದ ಒಟ್ಟು ವರ್ತನೆಯನ್ನು ತೆಗೆದುಕೊಂಡಾಗಲಾದರೋ ಅಣುಗಳ ತೂಕ, ವೇಗ ಮತ್ತು ಚಲನಶಕ್ತಿಗಳು ಕೆಲಸಕ್ಕೆ ಬರಲ್ಲ; ಹೊಸ ಕಲ್ಪನೆಗಳು ಅಗತ್ಯವಾದುವು. ಯಾವ ಮಟ್ಟದಲ್ಲಿ ನಿಂತು ನಾವು ಅನಿಲವನ್ನು ವರ್ಣಿಸುವೆವೋ ಆ ಮಟ್ಟಕ್ಕೆ ತಕ್ಕುದಾದ ಕಲ್ಪನೆಗಳೂ ಅದನ್ನು ವ್ಯಕ್ತಪಡಿಸುವ ಪದಗಳೂ ನಮಗೆ ಬೇಕಾಗುವುವು.

ಇಲ್ಲಿ ಎದ್ದು ಕಾಣುವ ವಿಚಿತ್ರ ಪದಗಳಿವು: 'ಅಣು, ಅನಿಲ, ಉಷ್ಣತೆ, ಒತ್ತಡ, ಗಾತ್ರ, ಚಲನಶಕ್ತಿ, ತೂಕ, ವೇಗ, ಸರಾಸರಿ ಚಲನಶಕ್ತಿ.' ಕೇವಲ ಸಾಹಿತ್ಯದ ಪರಿಚಯದಿಂದ ಇವನ್ನು ವಿವರಿಸುವುದು ಅಸಾಧ್ಯ, ಅಪಾಯಕಾರಿ ಕೂಡ. ವಸ್ತುಸ್ಥಿತಿಯನ್ನು ಪ್ರಾಯೋಗಿಕವಾಗಿ ಪರಿಶೀಲಿಸಿದಾಗ ಮಾತ್ರ ಈ ವಿವಿಧ ವಿಚಿತ್ರ ಪದಗಳ ಅನಿವಾರ್ಯತೆ ಮತ್ತು ಅರ್ಥಪುಷ್ಟಿ ಅರಿವಿಗೆ ಬರುತ್ತವೆ. ಅವು ಏನೆಂದು ಈಗ ನೋಡೋಣ.

ಬಲೂನಿಗೆ ಗಾಳಿ ಊದುತ್ತೇವೆ. ಗಾಳಿ ಹೇಗಿದೆ — ಅದು ನೀರಲ್ಲ, ಕಲ್ಲೂ ಅಲ್ಲ. ಅಂದರೆ ಭೂಮಿಯಲ್ಲಿ ನಮ್ಮ ಕಣ್ಣಿಗೆ ಕಾಣುವ ದ್ರವ ಅಥವಾ ಘನಸ್ಥಿತಿಗಳಿಗಿಂತ ಬೇರೆಯಾದ ಸ್ಥಿತಿ ಅದರದು. ಈ ಮೂರನೆಯ ಸ್ಥಿತಿಯನ್ನು ಅನಿಲ ಎನ್ನುತ್ತೇವೆ. ಬರ್ಫ ಘನ. ಇದನ್ನು ಕಾಸಿದಾಗ ನೀರಾಗುತ್ತದೆ. ನೀರು ದ್ರವ. ಇದನ್ನು ಕುದಿಸಿದಾಗ ಉಗಿ ಆಗುತ್ತದೆ. ಉಗಿ ಅನಿಲ. ಗಾಳಿಯೂ ಅನಿಲವೇ.

ಯಾವುದೇ ಪದಾರ್ಥವನ್ನು — ಉದಾಹರಣೆಗೆ ಇದ್ದಿಲಿನ ತುಣುಕನ್ನು — ಸೂಕ್ಷ್ಮಾತಿಸೂಕ್ಷ್ಮ ಕಣಗಳಾಗಿ ಚೂರ್ಣೀಕರಿಸುತ್ತ ಸಾಗೋಣ. ಈಗ ದೊರೆಯುವ ಪ್ರತಿಯೊಂದು ಕಣವೂ ಇದ್ದಿಲೇ — ಅಂದರೆ ಮೂಲ ಇದ್ದಿಲಿನ ಸಮಸ್ತ ಗುಣಲಕ್ಷಣಗಳನ್ನು ಒಳಗೊಂಡಿರುವ ಸೂಕ್ಷ್ಮಗಾತ್ರ. ಚೂರ್ಣೀಕರಣ ಕ್ರಿಯೆ ಮುಂದೆಮುಂದೆ ಸಾಗಿದಂತೆ, ಮತ್ತೆ ಮುಂದುವರಿಯಲಾಗದಂಥ ಪರಮಾಂತಿಮ ಸ್ಥಿತಿಯೊಂದನ್ನು ತಲಪುತ್ತೇವೆ. ಅಲ್ಲಿಂದ ಮುಂದಕ್ಕೆ ಆ ಕಣವನ್ನು ಒಡೆಯಲಾಗುವುದಿಲ್ಲ; ಅಥವಾ ಒಂದು ಪಕ್ಷ ಒಡೆದದ್ದೇ ಆದರೆ ಅದರ ಇದ್ದಿಲುತನ ನಿರ್ನಾಮವಾಗಿಹೋಗುತ್ತದೆ — ಒಂದು ತೆರನಾದ ಜೀವನ್ಮರಣ ಸನ್ನಿವೇಶ. ಈ ಪರಮಾಂತಿಮಸ್ಥಿತಿಯಲ್ಲಿ ದೊರೆಯುವ ವಸ್ತುವಿನ ಅನಂತಸೂಕ್ಷ್ಮ ಕಣಕ್ಕೆ ಅಣುವೆಂದು ಹೆಸರು. ಇದ್ದಿಲಿಂದ

ವಸ್ತುವಿನ ಸಮಸ್ತ ಗುಣಲಕ್ಷಣಗಳನ್ನು ಒಳಗೊಂಡಿರುವ ಅದರ ಪರಮಸೂಕ್ಷ್ಮ ಅವಿಭಾಜ್ಯ ಕಣವೇ ಆ ವಸ್ತುವಿನ ಅಣು. ವಸ್ತುವಿನ ಅನಂತಸೂಕ್ಷ್ಮ ಘಟಕ ಅಣು. ಅಣುಗಳ ಸಮುಚ್ಚಯವು ವಸ್ತು. ಅಂದಮೇಲೆ, ಬಲೂನಿನ ಒಳಗೆ ತುಂಬಿರುವ ಗಾಳಿ ಎಂಬ ಅನಿಲ ಅದರ ಅಸಂಖ್ಯ ಅಣುಗಳ ಸಮುದಾಯವೆಂಬುದು ಸ್ಪಷ್ಟ.

ಬಲೂನಿನೊಳಗಿನ ಅನಿಲವಾಗಲೀ ಅದರ ಬಿಡಿ ಅಣುಗಳಾಗಲೀ ನಮಗೆ ಕಾಣುವುದಿಲ್ಲ. ಆದರೆ ಅಲ್ಲಿ ಅನಿಲವಿದೆ ಎನ್ನುವುದಕ್ಕೆ ಸ್ಪಷ್ಟ ಪುರಾವೆಗಳು ದೊರೆಯುತ್ತವೆ. ಬಲೂನನ್ನು ಅಮುಕಿದಾಗ ಅದು ಒಳಜಗ್ಗುವುದಿಲ್ಲ. ಆದ್ದರಿಂದ ಅನಿಲಕ್ಕೆ ಒತ್ತಡ ಇದೆ ಎಂದಾಯಿತು. ಬಲೂನನ್ನು ಚುಚ್ಚಿದಾಗ ಅನಿಲ ಹಠಾತ್ತನೆ ಹೊರಧಾವಿಸುವುದು ಈ ಒತ್ತಡದ ಕಾರಣವಾಗಿ.

ಮೊದಲು ಖಾಲಿ ಬಲೂನನ್ನು, ಬಳಿಕ ಅನಿಲ ತುಂಬಿದ ಬಲೂನನ್ನು ತೂಕ ಮಾಡಿ ಎರಡನೆಯ ತೂಕದಿಂದ ಮೊದಲನೆಯ ತೂಕವನ್ನು ಕಳೆಯಬೇಕು. ಲಭ್ಯ ಫಲಾಂಶ ಅನಿಲದ ತೂಕವನ್ನು ಸೂಚಿಸುತ್ತದೆ. ಇಂಥದೇ ಬೇರೊಂದು ಪ್ರಯೋಗಮಾಡಿ ಅನಿಲದ ಗಾತ್ರವನ್ನು ಕೂಡ ಅಳೆಯಬಹುದು. ಗಾತ್ರವನ್ನು ಕುಗ್ಗಿಸಿದಾಗ ಒತ್ತಡ ಏರುತ್ತದೆ, ಹಿಗ್ಗಿಸಿದಾಗ ಇಳಿಯುತ್ತದೆ ಎಂದು ಕೂಡ ತಿಳಿಯಬಹುದು.

ಹೀಗೆ ಹಂತಹಂತವಾಗಿ ಮುಂದುವರಿದದ್ದಾದರೆ ಮೊದಲು ಪರಕೀಯವಾಗಿದ್ದ ಇಡೀ ಸಂಚ್ಯೆದ ಕ್ರಮೇಣ ನಮ್ಮ ಆತ್ಮೀಯ ಬಂಧುವಾಗುತ್ತದೆ. ಇದರಲ್ಲಿ ಬರುವ ಪ್ರತಿಯೊಂದು ವಿಚಿತ್ರ ಪದವೂ ನಮಗೆ ವಿಶಿಷ್ಟ ಮತ್ತು ನಿಶ್ಚಿತ ಅರ್ಥ ಸಂವಹಿಸುವ ಜೀವಂತವ್ಯಕ್ತಿಯಾಗುತ್ತದೆ — ಅಂಕಿತನಾಮದಂತೆ. ಜೀವನದಲ್ಲಿಯೂ ಹೀಗೆಯೇ ಅಲ್ಲವೇ?

ಅಂಕಿತನಾಮ? ಹೌದು. ಇದರ ತಾತ್ಪರ್ಯವೇನೆಂದು ತಿಳಿಯಲು ಒಂದು ಸುಲಭ ಉದಾಹರಣೆ: "ದಶರಥಪುತ್ರನಾಗಿ ಶ್ರೀರಾಮ ಜನಿಸಿ ವಿಶ್ವಾಮಿತ್ರನಿಂದ ಧನುರ್ವಿದ್ಯೆ ಕಲಿತು ಘೋರತಾಟಕಾದಿ ಪಾತಕರನ್ನು ಸಂಹರಿಸಿ ಅಹಲ್ಯೋದ್ಧಾರಣೆಮಾಡಿ ರಾವಣಾದಿ ವೀರಾಧಿವೀರರ ಸಮಕ್ಷಮ ಶಿವಧನುಸ್ಸನ್ನು ಛೇದಿಸಿ ಜನಕಸುತೆ ಸೀತೆಯನ್ನು ವರಿಸಿ......." ಹೀಗೆ ಸಾಗುವ ಸಾಹಿತ್ಯಭಾಷೆಯಲ್ಲಿ ಅಂಕಿತನಾಮಗಳನ್ನು ಬೇಕಾಬಿಟ್ಟಿ ಬದಲಾಯಿಸಿ "ರಾವಣಪುತ್ರನಾಗಿ ವಿಶ್ವಾಮಿತ್ರ ಜನಿಸಿ ~~[illegible]~~ ಜನಕನಿಂದ ಧನುರ್ವಿದ್ಯೆ ಕಲಿತು ಘೋರ ಸೀತಾದಿ ಪಾತಕರನ್ನು ಸಂಹರಿಸಿ ತಾಟಕೋದ್ಧಾರಣೆಮಾಡಿ ಶ್ರೀರಾಮಾದಿ ವೀರಾಧಿವೀರರ ಸಮಕ್ಷಮ ಶಿವಧನುಸ್ಸನ್ನು ಛೇದಿಸಿ ದಶರಥಸುತೆ ಅಹಲ್ಯೆಯನ್ನು ವರಿಸಿ...." ಎಂದು ಬರೆದದ್ದಾದರೆ ಈ ವಿನೂತನ ಕ್ರಾಂತಿಕಾರಕ ಲೇಖಕನ ನೆಲೆ ಖಾತ್ರಿ ಹುಚ್ಚಾಸ್ಪತ್ರೆ ಎಂದು ನೀವು ತೀರ್ಮಾನಿಸುವುದು ಖರೆ.

ಅಂಕಿತನಾಮಗಳ ಮಹತ್ತ್ವವಿರುವುದೇ ಇಲ್ಲಿ: ಹ್ರಸ್ವರೂಪಕ್ಕೆ ಘನೀಭವಿಸಲ್ಪಟ್ಟ ವಿಸ್ತೃತ ಭಾವನೆಗಳವು. ವಾಸ್ತವವಾಗಿ ಇಂದು ಸಾಮಾನ್ಯ ಅಥವಾ ರೂಢ ನಾಮಗಳೆಂದು ಅಂಗೀಕೃತವಾಗಿರುವ ಪ್ರತಿಯೊಂದು ಪದವೂ ಹಿಂದೆ ಒಂದಲ್ಲ ಒಂದು ದಿನ ಅಂಕಿತನಾಮವಾಗಿಯೇ ಮೈದಳೆದಿದ್ದಿರಬೇಕು. ಉದಾಹರಣೆಗೆ ಕನ್ನಡದ ಕಲ್ಲು, ನೀರು, ಗಾಳಿ, ಎಲೆ, ಇರುವೆ ಅಥವಾ ಇಂಗ್ಲಿಷಿನಿಂದ ಆಮದಾದ ಬಸ್ಸು, ರೇಡಿಯೊ, ಕಾಲೇಜ್, ಡೈನಮೊ,

ಜಿರಾಫೆ ಮುಂತಾದವು.

ವಿಜ್ಞಾನ ಭಾಷೆಯಲ್ಲಿಯೂ ಹಾಗೆಯೇ. ಇಲ್ಲಿ ಅಂಥ ಪದಗಳನ್ನು – ಅಂದರೆ ಹ್ರಸ್ವರೂಪಗಳಿಗೆ ಘನೀಭವಿಸಲ್ಪಟ್ಟ ವಿಸ್ತೃತ ಭಾವನೆಗಳನ್ನು – ಪಾರಿಭಾಷಿಕ ಪದಗಳೆನ್ನುತ್ತೇವೆ (technical terms). ಇದೇ ಮೇಲಿನ ಉದಾಹರಣಿಂದ ಪರಿಚ್ಛೇದದಲ್ಲಿ ಬರುವ ಅಣು (molecule), ಅನಿಲ (gas), ಉಷ್ಣತೆ (temperature), ಒತ್ತಡ (pressure), ಗಾತ್ರ (volume), ಚಲನಶಕ್ತಿ (kinetic energy), ತೂಕ (weight), ವೇಗ (velocity) ಮತ್ತು ಸರಾಸರಿ ಚಲನಶಕ್ತಿ (average kinetic energy) ಪಾರಿಭಾಷಿಕ ಪದಗಳು.

ಪಾರಿಭಾಷಿಕ ಪದಗಳೆಂಬ ತೊಡಕಿನ ವಿಚಿತ್ರ ಸೃಷ್ಟಿಗಳನ್ನು ನಾವು ಹೆಚ್ಚು ಹೆಚ್ಚು ಅರ್ಥಮಾಡಿಕೊಂಡಂತೆ ಅವು ಹೆಚ್ಚು ಹೆಚ್ಚು ಅರ್ಥಸ್ಫುಟತೆಗೂ ಭಾಷಾಸೌಂದರ್ಯಕ್ಕೂ ಕಾರಣವಾಗುತ್ತವೆ. ಅಪಾರ ಅರ್ಥವನ್ನು ಗರ್ಭೀಕರಿಸಿಕೊಂಡಿರುವ ಅನರ್ಘ್ಯ ಗಣಿಗಳವು. ಉತ್ಖನನಗೈಯದ ಹೊರತು ತಮ್ಮ ನಿಧಿಯನ್ನು ಬಿಟ್ಟುಕೊಡದ ಅರ್ಥಭಂಡಾರಗಳು. ಅಪರಿಚಿತವಾದದ್ದು ಆರಂಭದಲ್ಲಿ ವಿಚಿತ್ರವೇ. ಎಡೆಬಿಡದ ಬಳಕೆಯಿಂದ ಅದು ನಮ್ಮ ಒಲವಿನ ಬಳಗ ಸೇರದಿರದು.

## ಸಮಗ್ರ ಚಿತ್ರ

ನಮ್ಮ ಸಾಹಿತ್ಯಾಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ವಿಜ್ಞಾನ ಪಾಠದ ಸಮಗ್ರ ಚಿತ್ರ ಅಥವಾ ಕಲ್ಪನೆ ಒಮ್ಮೆಗೇ ಮೂಡದಿರಬಹುದು. ಇಲ್ಲಿಯ ತೊಡಕನ್ನು ಮೇಲೆ ವಿವರಿಸಿದ ಪರಿಕಲ್ಪನೆಯ ಪರಕೀಯತೆ, ಭಾಷೆಯ ಅಸಹಜತೆ ಮತ್ತು ಪಾರಿಭಾಷಿಕ ಪದಗಳ ವಿಚಿತ್ರತೆ ಎಂಬ ಮೂರು ಸಮಸ್ಯೆಗಳಲ್ಲಿ ಗುರುತಿಸಿ ಸತತ ಅಧ್ಯಯನ, ಪರಾಮರ್ಶನ ಹಾಗೂ ಚಿಂತನಗಳಿಂದ ಪರಿಹರಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಒಳದಾರಿ ಇಲ್ಲ. ಇದ್ದರೆ ಅದು ಆ ಪಾಠವನ್ನು ವರ್ಜಿಸುವುದೊಂದೇ!

ಪಂಪ, ರನ್ನ, ನಾಗವರ್ಮ ಮೊದಲಾದ ಅಭಿಜಾತ ಕವಿಗಳ ಕೃತಿ ರಸಾಸ್ವಾದನೆ ಸಾಕಷ್ಟು ಪರಿಶ್ರಮ ವಹಿಸದೇ ಸಿದ್ಧಿಸುವುದೇ? ವಿಜ್ಞಾನ ಪಾಠದ ರಸಾಸ್ವಾದನೆ ಇದಕ್ಕೆ ಸಮವಾದದ್ದು. ಕಬ್ಬು ಅಲ್ಲದೆ, ಹುಲ್ಲು ಇಲ್ಲದೆ – ಜಗಿದು ರಸ ಚಪ್ಪರಿಸಬೇಕಾದವರು ನೀವು, ಹೌದು, ಖುದ್ದು ನೀವೇ!

## ಪಾರಿಭಾಷಿಕ ಪದಗಳು

ಇಷ್ಟು ಪೂರ್ವಭಾವಿ ವಿವರಣೆಯಿಂದ ಸಜ್ಜಾಗಿ ಈಗ 'ಪಾರಿಭಾಷಿಕ ಪದಗಳು ಮತ್ತು ಪ್ರಯೋಗಗಳು' ಎಂಬ ವಿಷಯವನ್ನು ಇನ್ನಷ್ಟು ಆಳವಾಗಿ ಪರಿಶೀಲಿಸೋಣ.

1 ಅಂತಸ್ತು. ಆಯಾ ವಿಜ್ಞಾನಪ್ರಕಾರದೊಳಗೆ ಬಳಕೆಯಾಗುವ ಪಾರಿಭಾಷಿಕ ಪದಗಳೆಲ್ಲವೂ ಅಲ್ಲಿ ಅಂಕಿತನಾಮಗಳೇ. 'ಒಂದು ಪದ = ಒಂದು ಮತ್ತು ಒಂದೇ ಒಂದು ಅರ್ಥ = ಅನ್ಯ ಅರ್ಥವಿಲ್ಲ = ವಿಕೃತರೂಪವಿಲ್ಲ' ಎಂಬ ನಿಯಮಬಂಧಿತ ಅರ್ಥಪ್ರತೀಕಗಳವು. ಕೆಲವು ಉದಾಹರಣೆಗಳನ್ನು ಗಮನಿಸಿ:

ಪ್ರತೀಕ (symbol), ಸಂಕೇತ (code), ಚಿಹ್ನೆ (sign), ಸಂಜ್ಞೆ (signal) – ಇವು ವಿಜ್ಞಾನದಲ್ಲಿ ಪಾರಿಭಾಷಿಕ ಪದಗಳು.

ಅ, ಆ, ಇ, ಈ, ..., 0, 1, 2, 3, .... ಇವು ಪ್ರತೀಕಗಳು. ಇದೇ

ಅಂತೆ ರಸಾಯನವಿಜ್ಞಾನದಲ್ಲಿ ಬಳಸುವ ಸಂಕ್ಷಿಪ್ತರೂಪಗಳು ಕೂಡ ಪ್ರತೀಕಗಳು: H (ಹೈಡ್ರೊಜನ್), O (ಆಕ್ಸಿಜನ್), $H_2O$ (ನೀರು) ಇತ್ಯಾದಿ.

ಶತ್ರುವಿಗೆ ತಿಳಿಯದಂತೆ ಅವರ ಬದ್ಧ ಮಿತ್ರವಲಯಗಳಿಗೆ ಮಾತ್ರ ತಿಳಿಯುವಂತೆ ಮಾಹಿತಿಗಳನ್ನು ಆದೇಶಗಳನ್ನು ಸಂಕೇತಭಾಷೆಯಲ್ಲಿ (coded language) ರವಾನಿಸುವುದುಂಟು.

+, −, ×, ÷, !, ? ಮುಂತಾದವು ಚಿಹ್ನೆಗಳು.

ಎರಡು ಅಥವಾ ಹೆಚ್ಚು ದಾರಿಗಳು ಸಂಧಿಸುವಲ್ಲಿ ಹಸಿರು ಕಂದೀಲು 'ಮುಂದೆ ಹೋಗಬಹುದು' ಎಂಬ ಸಂಜ್ಞೆಯನ್ನು, ಕೆಂಪು ಕಂದೀಲು 'ನಿಲ್ಲತಕ್ಕದ್ದು' ಎಂಬ ಸಂಜ್ಞೆಯನ್ನು ಸೂಚಿಸುತ್ತವೆ.

ಹೀಗೆ ಈ ನಾಲ್ಕು ಪದಗಳಲ್ಲಿ — ಪ್ರತೀಕ, ಸಂಕೇತ, ಚಿಹ್ನೆ, ಸಂಜ್ಞೆ — ಸ್ಪಷ್ಟ ಅರ್ಥಭಿನ್ನತೆ ಇದ್ದರೂ ಸಾಹಿತ್ಯಭಾಷೆಯಲ್ಲಿ ಇವು ಪರ್ಯಾಯ ಪದಗಳಾಗಿ ಬಳಕೆ ಆಗುವುದುಂಟು.

ಬಲ (force), ಶಕ್ತಿ (energy), ಸಾಮರ್ಥ್ಯ (power), ತ್ರಾಣ (strength) — ಇವು ಭೌತವಿಜ್ಞಾನದಲ್ಲಿ ಪಾರಿಭಾಷಿಕ ಪದಗಳು.

ಬಾಹ್ಯ ಬಲ ಪ್ರಯೋಗವಾದ ಹೊರತು ವಸ್ತುವಿನ ಚಲನಸ್ಥಿತಿಯಲ್ಲಿ ಬದಲಾವಣೆ ಆಗದು. (ಇಲ್ಲಿ ಬೇರೆ ಯಾವ ಪದವನ್ನು ಬಳಸಬಾರದು.)

ವಿದ್ಯುತ್ ಶಕ್ತಿ ಅಥವಾ ಬೀಸುಗಾಳಿಯಲ್ಲಿ ನಿಹಿತವಾಗಿರುವ ಚಲನಶಕ್ತಿ ಉಪಯೋಗಿಸಿ ನಮ್ಮ ಹಲವಾರು ಸಲಕರಣೆಗಳನ್ನು ಚಾಲೂಗೊಳಿಸಬಹುದು.

ಕಾರ್ಯವನ್ನು (work) ನಿರ್ವಹಿಸುವ ದರವೇ ಸಾಮರ್ಥ್ಯ. ಅಶ್ವಸಾಮರ್ಥ್ಯ (horsepower) ಎಂಬ ಏಕಮಾನ (unit) ಬಳಸಿ ಯಂತ್ರಗಳ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಅಳೆಯುತ್ತಾರೆ.

ತಂತಿಯನ್ನು ಬಿಗಿಗೊಳಿಸಿದಂತೆ ಅದರ ಕರ್ಷಣ (tension) ಜಾಸ್ತಿ ಆಗುತ್ತದೆ, ಮತ್ತು ಒಂದು ಸಂಧಿಸ್ಥ (critical) ಸನ್ನಿವೇಶದಲ್ಲಿ ಅದು ತುಂಡಾಗಿಹೋಗುತ್ತದೆ. ಹೀಗೆ ತುಂಡಾಗುವ ಪ್ರವೃತ್ತಿಯನ್ನು ತಂತಿಯ ಕರ್ಷಣ ತ್ರಾಣ (tensile strength) ವಿರೋಧಿಸುತ್ತದೆ.

ಹೀಗೆ ಈ ನಾಲ್ಕು ಪದಗಳಲ್ಲಿ — ಬಲ, ಶಕ್ತಿ, ಸಾಮರ್ಥ್ಯ, ತ್ರಾಣ — ಸ್ಪಷ್ಟ ಅರ್ಥಭಿನ್ನತೆ ಇದ್ದರೂ ಜೀವವಿಜ್ಞಾನದ ಮತ್ತು ಸಾಹಿತ್ಯದ ಭಾಷೆಗಳಲ್ಲಿ ಇವು ಪರ್ಯಾಯ ಪದಗಳಾಗಿ ಬಳಕೆ ಆಗುವುದುಂಟು.

ಗಣಿತದಲ್ಲಿ ಬಿಂದುವಿಗೆ (point) ಆಯಾಮ (dimension) ಇಲ್ಲ. ಎರಡು ರೇಖೆಗಳ ಸಂಧಿಸ್ಥಾನವದು. ಆದರೆ ರಸಾಯನವಿಜ್ಞಾನದಲ್ಲಿ ದ್ರವದ ಬಿಂದುವಿಗೆ (drop) ಖಂಡಿತವಾಗಿಯೂ ಆಯಾಮಗಳಿವೆ.

ಮೇಷ ರಾಶಿ (Aries) ಒಂದು ನಿರ್ದಿಷ್ಟ ನಕ್ಷತ್ರ ಚಿತ್ರ. ಕಲ್ಲಿನ ರಾಶಿ (heap) ಇದಲ್ಲ! ಬಲೂನಿನೊಳಗೆ ತುಂಬಿಸಿದ ಅನಿಲದ ರಾಶಿ (mass) ಇವೆರಡೂ ಅಲ್ಲ!!

ಅನ್ವೇಷಣೆ (exploration), ಸಂಶೋಧನೆ (research), ಆವಿಷ್ಕಾರ (discovery), ಉಪಜ್ಞೆ (invention) ನಾಲ್ಕು ವಿಭಿನ್ನ ಕ್ರಿಯೆಗಳು. ಹಾಗಿದ್ದರೂ ಸಾಹಿತ್ಯದಲ್ಲಿ ಮಾತ್ರವಲ್ಲ, ವಿಜ್ಞಾನದಲ್ಲಿಯೂ

ಇವನ್ನು ಪರ್ಯಾಯ ಪದಗಳಾಗಿ ಬಳಸುವುದು ವಿರಳವಲ್ಲ.

ಈ ಉದಾಹರಣೆಗಳಿಂದ ನೀವೇನೂ ಗಾಬರಿಗೊಳ್ಳಬೇಕಾಗಿಲ್ಲ. ಪಾರಿಭಾಷಿಕ ಪದಗಳ ಅರ್ಥಗಳನ್ನು ಮೊದಲು ಕಲಿತು ಬಳಿಕ ವಿಜ್ಞಾನ ವಾಙ್ಮಯಕ್ಕೆ ಪ್ರವೇಶ ಎಂಬ ಅಸ್ವಾಭಾವಿಕ ಕ್ರಮವನ್ನು ಯಾರೂ ಅನುಸರಿಸುವುದಿಲ್ಲ, ಅನುಸರಿಸಬಾರದು. ಮೊದಲು ಸಾಹಿತ್ಯ ವಾಚನ, ಬಳಿಕ ನಿಘಂಟು ಅವಲೋಕನ ಹೇಗೋ ಹಾಗೆ ಮೊದಲು ವಿಜ್ಞಾನ ವಾಙ್ಮಯ ವಾಚನ, ಬಳಿಕ ಪಾರಿಭಾಷಿಕ ಪದ ಅರ್ಥ ನಿರ್ಣಯ. ಏಕೆಂದರೆ ಅಂತಿಮವಾಗಿ ಪ್ರತಿಯೊಂದು ಪದವೂ ವಾಕ್ಯದ ಸಂದರ್ಭದಲ್ಲಿಯೂ ವಾಕ್ಯ ಪರಿಚ್ಛೇದದ ಸಂದರ್ಭದಲ್ಲಿಯೂ ಪರಿಚ್ಛೇದ ಒಟ್ಟು ಪಾಠದ ಸಂದರ್ಭದಲ್ಲಿಯೂ ತನ್ನ ಸಾರ್ಥಕ್ಯ ಕಾಣುವುದರಿಂದ ಪ್ರಾಜ್ಞ ವಾಚಕನಿಗೆ ಆಯಾ ಸಂದರ್ಭಕ್ಕೆ ಒಪ್ಪುವ ಅರ್ಥ ಸ್ಫುರಿಸುತ್ತದೆ: ಗಾಯನದಲ್ಲಿ ಒಂದೇ ಸ್ವರ ವಿವಿಧ ರಾಗಗಳಲ್ಲಿ ವಿವಿಧ ತಾನಗಳನ್ನು ಅನುರಣಿಸಿ ರಸಿಕನಿಗೆ ಆಯಾ ರಾಗದ ಸೊಗಸನ್ನು ಊಡುವಂತೆ.

2 ಪ್ರಯೋಗ. ಪಾರಿಭಾಷಿಕ ಪದಗಳಿಗೆ ಅಂಕಿತನಾಮಗಳ ಅಂತಸ್ತು ಇದೆಯೆಂದು ನೋಡಿದ್ದೇವೆ. ಆದ್ದರಿಂದ ಇವನ್ನು ತದ್ವತ್ತಾಗಿ ಪ್ರಯೋಗಿಸಲೇ ಬೇಕು. ಪುನರಾವರ್ತನೆಯ ನೀರಸತೆ ನೀಗಲು ಇತರ ಪದಗಳನ್ನು ಬಳಸಿದ್ದಾದರೆ ಅರ್ಥಕ್ಕೆ ಊನ ತಟ್ಟುತ್ತದೆ. ಅರ್ಥರಹಿತ ಸೌಂದರ್ಯ ಮರುಭೂಮಿಯಲ್ಲಿಯ ಮರೀಚಿಕೆ.

3 ಪರಿಮಾಣೀಕರಣ. ಅರ್ಥಸಾದೃಶ್ಯವಿರುವ ಕೆಲವು ವಾಕ್ಯಗಳನ್ನು ಪರಿಶೀಲಿಸೋಣ:

ಅ (1) ಗುಲಾಬಿಗಿಂತ ಮಲ್ಲಿಗೆಯೇ ಹೆಚ್ಚು <u>ತೂ</u>ಕದ ಹೂವು.

(2) ಸಮಗಾತ್ರದ ನೀರು ಮತ್ತು ಮರಳು ಹೋಲಿಸಿದಾಗ ಮರಳಿನ <u>ತೂಕ</u> ಹೆಚ್ಚು.

ಆ (1) ನಾನು ಮನೋ<u>ವೇಗ</u>ದಿಂದ ಪಯಣಿಸಿದೆ.

(2) ಬೆಳಕಿನ <u>ವೇಗ</u> ಸೆಕೆಂಡಿಗೆ 300,000 ಕಿಮೀ.

ಇ (1) ಸಿಡಿಲು ಮಿಂಚಿನ ಹಠಾತ್ ಹೊಳಪಿನಿಂದ ಕಂಪಿಸಿದ ನನ್ನ <u>ಗುಂಡಿಗೆಬಡಿತ</u> ತಾರಕ್ಕೇರಿತು.

(2) ಆರೋಗ್ಯವಂತ ತರುಣನ <u>ಗುಂಡಿಗೆಬಡಿತ</u>ದ ದರ ಮಿನಿಟಿಗೆ 72.

ಮೇಲಿನ ಪ್ರತಿಯೊಂದು ಉದಾಹರಣೆಯ (1)ರಲ್ಲಿ ಬಂದಿರುವ 'ತೂಕ, ವೇಗ, ಗುಂಡಿಗೆಬಡಿತ' ಪದಗಳನ್ನು ಪರಿಮಾಣೀಕರಿಸಲು (quantify) ಸಾಧ್ಯವಾಗದು. ಆದರೆ (2)ರಲ್ಲಿ ಬಂದಿರುವ ಇವೇ ಪದಗಳು ಪರಿಮಾಣೀಕರಣಕ್ಕೆ ಒಳಪಡುತ್ತವೆ. ಮೊದಲಿನವು ಭಾವೋದ್ಗಾರಗಳು. ಎರಡನೆಯವಾದರೋ ವಿಜ್ಞಾನ ಪರಿಕಲ್ಪನೆಗಳು.

ಇನ್ನು ಮೂರು ಉದಾಹರಣೆಗಳನ್ನು ಪರಿಶೀಲಿಸೋಣ:

ಈ (1) ಕಳೆದ ವರ್ಷಕ್ಕಿಂತ ಈ ವರ್ಷ ಮಳೆ <u>ಅಧಿಕ</u>.

(2) ಅಲಸಿಗರನ್ನು ಕಂಡರೆ ನನಗೆ ಕೋಪ <u>ಅಧಿಕ</u>.

ಉ (1) ಈ ಸಲದ ಚಳಿಗಾಲ ಈಚಿನ ವರ್ಷಗಳಲ್ಲಿ <u>ಅತಿತೀವ್ರ</u>ವಾದದ್ದು.

(2) ನಡುಹಗಲ ಧಗೆ ನನ್ನಲ್ಲಿ <u>ಅತಿತೀವ್ರ</u> ನೀರಡಿಕೆ ಉಂಟುಮಾಡಿತು.

ಉದಾ (1) ಭಾರತದ ಜನಸಂಖ್ಯೆ ಚೀನಾದ ಜನಸಂಖ್ಯೆಯ ಹತ್ತಿರಹತ್ತಿರ ಇದೆ.

(2) ದೇವಮಂದಿರದ ಹತ್ತಿರಹತ್ತಿರ ಸಾರಿದಂತೆ ನಾನು ಅಧಿಕಾಧಿಕ ಭಕ್ತಿಪರವಶನಾದೆ.

ಮೇಲಿನ ಪ್ರತಿಯೊಂದು ಉದಾಹರಣೆಯ (1)ರಲ್ಲಿ ಬಂದಿರುವ 'ಅಧಿಕ, ಅತಿತೀವ್ರ, ಹತ್ತಿರಹತ್ತಿರ' ವಿಶೇಷಣಗಳನ್ನು ಅಂಕೆಅಂಶಗಳ ನೆರವಿನಿಂದ ಪುಷ್ಟೀಕರಿಸಬಹುದು. ಆದರೆ (2)ರಲ್ಲಿ ಬಂದಿರುವ ಇವೇ ಪದಗಳನ್ನು ಹೀಗೆ ಮಾಡಲಾಗುವುದಿಲ್ಲ. ಮೊದಲನವು ವಿಜ್ಞಾನಚಿಂತನೆಯ ವಿಸ್ತೃತ ರೂಪಗಳು, ಎರಡನೆಯವು ಸಾಹಿತ್ಯಭಾವದ ಉತ್ಕರ್ಷಗಳು.

4 ಭಾಷಾಸ್ವರೂಪ. ಜನಪ್ರಿಯ ವಿಜ್ಞಾನ ವಾಙ್ಮಯದಿಂದಲೇ ಶಾಖೆಗಳನ್ನು ಆಯ್ದಿರಬಹುದು. ಆದರೆ ಅಲ್ಲಿ ಭೌತವಿಜ್ಞಾನ (physics), ರಸಾಯನವಿಜ್ಞಾನ (chemistry), ಭೂವಿಜ್ಞಾನ (geology) ಮುಂತಾದ ಭೌತವಿಜ್ಞಾನ ಪ್ರಕಾರಗಳಿಂದ (physical sciences) ಆಯ್ದ ಶಾಖೆಗಳ ಭಾಷಾಸ್ವರೂಪ ಸಸ್ಯವಿಜ್ಞಾನ (botany), ಪ್ರಾಣಿವಿಜ್ಞಾನ (zoology), ದೇಹವಿಜ್ಞಾನ (physiology) ಮುಂತಾದ ಜೀವವಿಜ್ಞಾನ ಪ್ರಕಾರಗಳಿಂದ (biological sciences) ಆಯ್ದ ಶಾಖೆಗಳ ಭಾಷಾಸ್ವರೂಪಕ್ಕಿಂತ ಭಿನ್ನವಾಗಿರುತ್ತದೆ. ಸ್ಥೂಲವಾಗಿ ಹೇಳುವುದಾದರೆ ಮೊದಲನೆಯದರ ಲಕ್ಷಣ ಸಂಕ್ಷಿಪ್ತತೆ ಮತ್ತು ಪರಿಮಾಣೀಕರಣ, ಎರಡನೆಯದರ ಲಕ್ಷಣ ವಿವರಣಾತ್ಮಕ ಮತ್ತು ಸ್ಥೂಲ.

5 ಆವಶ್ಯಕತೆ. ಪಾರಿಭಾಷಿಕ ಪದಗಳ ಆವಶ್ಯಕತೆ ಏನು? ಒಂದೇ ಪರಿಕಲ್ಪನೆ ಕುರಿತಂತೆ ಎರಡು ಬಗೆಯ ನಿರೂಪಣೆಗಳನ್ನು ಗಮನಿಸಿ:

(ಅ) ಸೂರ್ಯನ ಸುತ್ತ ಎಡೆಬಿಡದೆ ತಿರುಗುತ್ತಿರುವ ಆಕಾಶಕಾಯಗಳ ಚಲನವಲನಗಳನ್ನು ಕುರಿತ ಅಂಕೆಅಂಶಗಳ ದೊಡ್ಡ ಉಗ್ರಾಣವೇ ಕೆಪ್ಲರನಿಗೆ ಲಭ್ಯವಾಗಿತ್ತು. ಈ ಪೈಕಿ ಮಂಗಳವೆಂಬ ಮಾಂಡಲಿಕ ಕಾಯದ ವಿವರಗಳು ಈತನನ್ನು ವಿಶೇಷವಾಗಿ ಆಕರ್ಷಿಸಿದುವು. ಇವನ್ನು ಈತ ವ್ಯವಸ್ಥಿತವಾಗಿ ಒಂದು ಯಾದಿಯಲ್ಲಿ ಅಳವಡಿಸಿದ. ಇದರ ಮೇಲೆ ತನ್ನ ಬುದ್ಧಿಮತ್ತೆಯನ್ನು ಏಕಾಗ್ರತೆಯಿಂದ ಕೇಂದ್ರೀಕರಿಸಿದಾಗ ಮಂಗಳ ಸೂರ್ಯನ ಸುತ್ತ ಸಾಗುವ ಹಾದಿಯ ಬಗ್ಗೆ ಕೆಲವು ಸುಳುಹುಗಳು ಸ್ಫುರಿಸಿದುವು — ಅದು ಕೋಳಿಮೊಟ್ಟೆ ಆಕಾರದಲ್ಲಿರುವ ನೀಳವೃತ್ತವಾಗಿರಬಹುದೇ ಎಂಬ ಪ್ರಶ್ನೆ. ಗಣಿತಶಾಸ್ತ್ರದ ಗಣನೆಗಳನ್ನು ಮಾಡುತ್ತ ಈ ಹಾದಿಯಲ್ಲಿ ಮುಂದುವರಿದಂತೆ ಇದು ಸರಿಯೆಂದು ಆತನಿಗೆ ವೇದ್ಯವಾಯಿತು. ಸೂರ್ಯನ ಸುತ್ತ ಮಂಗಳ ನೀಳವೃತ್ತದ ಹಾದಿಯಲ್ಲಿ ಸಂಚರಿಸುವುದೆಂಬ ಸಂಗತಿ ದೃಢಪಟ್ಟಿತು.

(ಆ) ಸೌರವ್ಯೂಹದ ಕೆಲವು ಗ್ರಹಗಳ ಚಲನೆ ಕುರಿತ ಅಂಕೆಅಂಶಗಳು ಕೆಪ್ಲರನಿಗೆ ಲಭಿಸಿದ್ದುವು. ಈ ಪೈಕಿ ಮಂಗಳದ ವಿವರಗಳು ಈತನನ್ನು ವಿಶೇಷವಾಗಿ ಆಕರ್ಷಿಸಿದುವು. ಇವನ್ನು ವ್ಯವಸ್ಥಿತವಾಗಿ ಯಾದಿಯಲ್ಲಿ ಅಳವಡಿಸಿ ಇದರ ಮೇಲೆ ಲಕ್ಷ್ಯಸಾಂದ್ರೀಕರಿಸಿದಾಗ ಮಂಗಳದ ಕಕ್ಷೆ ದೀರ್ಘವೃತ್ತವಾಗಿರಬಹುದೇ ಎಂಬ ಸಂದೇಹ ಸ್ಫುರಿಸಿತು. ಗಣಿತ ಗಣನೆಗಳು ಇದನ್ನು ಸ್ಥಿರೀಕರಿಸಿದುವು.

ಸೌರವ್ಯೂಹ (solar system), ಗ್ರಹ (planet), ದೀರ್ಘವೃತ್ತ (ellipse), ಕಕ್ಷೆ (orbit) ಎಂಬ ನಾಲ್ಕು ಪಾರಿಭಾಷಿಕ ಪದಗಳ ಪ್ರಯೋಗದಿಂದ ಹೇಗೆ ಮೊದಲನೆಯ ನಿರೂಪಣೆಯಲ್ಲಿಯ ಅರ್ಥ ಹೆಚ್ಚು ಅಡಕವಾಗಿಯೂ ನಿಖರವಾಗಿಯೂ ಎರಡನೆಯ ನಿರೂಪಣೆಯಲ್ಲಿ ಮೈದಳೆದಿದೆ ಎಂಬುದನ್ನು ಗಮನಿಸಬೇಕು. ಪದಾತಿಸಾರ ತಡೆಯುವ ಒಂದು ಮಾರ್ಗ ಪಾರಿಭಾಷಿಕ ಪದಗಳ ಯುಕ್ತ ಪ್ರಯೋಗ. ಅಂದ ಹಾಗೆ, ಮೊದಲನೆಯ ನಿರೂಪಣೆಯಲ್ಲಿರುವ ಪದಗಳ ಸಂಖ್ಯೆ 66, ಎರಡನೆಯದರಲ್ಲಿ ಇದು 33. ಯಾರು ಹಿತವರು ನಿಮಗೆ ಈ ಇಬ್ಬರೊಳಗೆ?

6 ಪದಸೃಷ್ಟಿ: ಪಾರಿಭಾಷಿಕ ಪದಗಳನ್ನು ಸೃಷ್ಟಿಸಲು ಕೆಲವು ವಿಧಿವಿಧಾನಗಳಿವೆ. ಮುಖ್ಯವಾಗಿ ನಾಲ್ಕು: ಅರ್ಥಸಾಮರ್ಥ್ಯ, ಭಾಷಾ ಮರ್ಯಾದೆ, ಗಾತ್ರಸಂಕ್ಷಿಪ್ತತೆ, ವ್ಯುತ್ಪನ್ನಶೀಲತ್ವ. ಇವನ್ನು ಕುರಿತ ಹೆಚ್ಚಿನ ಚರ್ಚೆ ಪ್ರಸಕ್ತ ಪ್ರಬಂಧದ ವ್ಯಾಪ್ತಿಗೆ ಮೀರಿದ್ದು.

ಪಾರಿಭಾಷಿಕ ಪದಗಳನ್ನು ವಿಷಯ ಹಾಗೂ ಭಾಷಾ ಪರಿಣತರು ಅರ್ಥನಿಖರತೆ, ಭಾಷೆಯ ಜಾಯಮಾನ, ಬರವಣಿಗೆಯಲ್ಲಿ ಅಡಕತನ ಹಾಗೂ ವ್ಯುತ್ಪನ್ನ ಪದಗಳನ್ನು ಸೃಷ್ಟಿಸುವುದರ ಸಾಧ್ಯತೆಗಳು ಇವನ್ನು ಗಮನದಲ್ಲಿಟ್ಟುಕೊಂಡು ಟಂಕಿಸುತ್ತಾರೆ. ಈ ಕ್ರಿಯೆಯಲ್ಲಿ ಜ್ಞಾನೈಕನಿಷ್ಠೆ ಹಾಗೂ ಉಪಯೋಗ ಸೌಕರ್ಯ ಎಂಬವು ನಿರ್ಣಾಯಕಗಳಾಗಬೇಕೇ ವಿನಾ ಅಂಧ ಸ್ವಭಾಷಾಮೋಹವಲ್ಲ. ಎರಡು ಉದಾಹರಣೆಗಳನ್ನು ಗಮನಿಸಿ:

(ಅ) ದ್ವಿಚಕ್ರರಥಸವಾರ ಮಾಂಹಯುಬೆಯ ಗಾಡಿ ಹಿಡಿದುಕೊಂಡು ಅತಿವೇಗದಿಂದ ಎಳೆಯಲ್ಪಡುತ್ತಿದ್ದಂತೆ ತಿರುಗಾಸಿನಲ್ಲಿ ಎದುರಿನಿಂದ ಹಠಾತ್ತನೆ ಬಂದ ಸಾಮಗ್ರಿಸಾಗಣೆ ತೈಲಚತುಶ್ಚಕ್ರಶಕಟಕ್ಕೆ ಢಿಕ್ಕಿ ಹೊಡೆದು ಸತ್ತ.

(ಆ) ಸೈಕಲ್ ಸವಾರ ಟ್ರ್ಯಾಕ್ಟರ್ ಗಾಡಿ ಹಿಡಿದುಕೊಂಡು ಅತಿವೇಗದಿಂದ ಎಳೆಯಲ್ಪಡುತ್ತಿದ್ದಂತೆ ತಿರುಗಾಸಿನಲ್ಲಿ ಎದುರಿನಿಂದ ಹಠಾತ್ತನೆ ಬಂದ ಲಾರಿಗೆ ಢಿಕ್ಕಿ ಹೊಡೆದು ಸತ್ತ.

## ಸಮಾರೋಪ

ವಿಜ್ಞಾನದ ಒಂದು ಪಾಠವನ್ನು ವಿದ್ಯಾರ್ಥಿಗಳಿಗೆ ವಿವರಿಸುವ ಮೊದಲು ನೀವು ಅನುಸರಿಸಬೇಕಾದ ವಿಧಿಗಳಿವು:

1 ಅದನ್ನು ಮುಕ್ತ ಮನಸ್ಸಿನಿಂದ ಪ್ರಾತರ್ಯಾಗಿ ಓದಿ. ಅರ್ಥವಾಗದಿದ್ದಲ್ಲಿ ಏಕೆ ಅರ್ಥವಾಗಲಿಲ್ಲ ಎಂದು ನಿಮಗೆ ನೀವೇ ಪ್ರಶ್ನಿಸಿಕೊಳ್ಳಿ.

2 ಈ ಪ್ರಶ್ನೆಗಳಿಗೆ ಪರಿಹಾರ ಪಡೆಯಲು ಪರಿಣತರ ಜೊತೆ ಸಮಾಲೋಚನೆ ನಡೆಸಿ.

3 ಅದೇ ವಿಷಯ ಕುರಿತಂತೆ ಬೇರೆ ಲೇಖನ/ಗ್ರಂಥಗಳನ್ನು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಓದಿ ಮನನಮಾಡಿಕೊಳ್ಳಿ.

4 ಸೃಜನಶೀಲ ಸಾಹಿತಿಗಳಿಂದ ಚಾಲನೆ ಪಡೆದು ಅವರಲ್ಲಿ ಪ್ರಚಲಿತವಾಗಿದ್ದು ಅವರ ವರ್ತನೆಯನ್ನು ಪ್ರಭಾವಿಸುವ ಒಂದು ಭ್ರಮೆ ಇದೆ: ಅಂತಸ್ಸಿನಲ್ಲಿ ಸೃಜನಶೀಲಸಾಹಿತ್ಯಕ್ಕೆ ಅಗ್ರಸ್ಥಾನ,

ಶಾಸ್ತ್ರಸಾಹಿತ್ಯಕ್ಕೆ ಮಧ್ಯಸ್ಥಾನ, ವಿಜ್ಞಾನಸಾಹಿತ್ಯಕ್ಕೆ ಅಧಃಸ್ಥಾನ. ಅವೈಜ್ಞಾನಿಕವೂ ಸತ್ಯದೂರವೂ ಆದ ಈ ಭ್ರಮೆಯಿಂದ ನಾವು ದೂರವಾಗಬೇಕು. ನ್ಯೂಟನ್ ರಚಿಸಿರುವ ವಿಜ್ಞಾನಸಾಹಿತ್ಯ ಶೇಕ್ಸ್‌ಪಿಯರ್ ರಚಿಸಿರುವ ನಾಟಕಸಾಹಿತ್ಯಕ್ಕಿಂತ ಕೀಳೂ ಅಲ್ಲ, ಮೇಲೂ ಅಲ್ಲ. ವಾಸ್ತವವಾಗಿ ಇಂಥ ಹೋಲಿಕೆಗಳಿಗೆ ಅರ್ಥವಿಲ್ಲ. "ಕಾವ್ಯಸತ್ಯಮನನ್ಯ ಸತ್ಯಾತ್ಮವಾಗಾದಿಂ ಪರಿಕಿಸಲ್ ಮಿಥ್ಯೆಯಲ್ಲದೆ ತನಗೆ ತಾಂ ಮಿಥ್ಯೆಯೇಂ?" (ಕುವೆಂಪು) ಎಂಬ ವಸ್ತುನಿಷ್ಠ ಮನೋಧರ್ಮದಿಂದ ವಿಷಯ ಗ್ರಹಿಸಲು ತೊಡಗಬೇಕು.

5 ವಿಜ್ಞಾನಭಾಷೆ ಸಾಹಿತ್ಯಭಾಷೆಯ ಒಂದು ವಿಶಿಷ್ಟ ರೂಪ. ಸಾಹಿತ್ಯ ಭಾಷೆಯ ದೃಢ ಮಂಚಿಕೆ ಆಧರಿಸಿ ವಿಜ್ಞಾನಭಾಷೆ ಊರ್ಧ್ವಗಾಮಿಯಾಗುತ್ತದೆ. ಆ ಎತ್ತರ ಬಿತ್ತರಗಳಲ್ಲಿ ಲಭಿಸುವ ಅಮೂರ್ತ ನೂತನ ಮಾಹಿತಿಗಳನ್ನು ಗ್ರಹಿಸಿ ಸಂಗ್ರಹಿಸಿ ಮತ್ತೆ ಅದು ಸಾಹಿತ್ಯಭಾಷೆಯ ಮಂಚಿಕೆಗೆ ಮರಳುತ್ತದೆ; ಮತ್ತು ಇದಕ್ಕೆ ತನ್ನ ಕಾಣಿಕೆ ಸಲ್ಲಿಸುತ್ತದೆ. ಈ ಕೊಡುಕೊಳ್ಳು ಅಂತರಕ್ರಿಯೆಗಳಿಂದ ವಿಜ್ಞಾನಭಾಷೆ ತೀಕ್ಷ್ಣವಾಗುತ್ತದೆ, ಆಕರ್ಷಕವಾಗುತ್ತದೆ; ಸಾಹಿತ್ಯಭಾಷೆ ಸುಪುಷ್ಟವಾಗುತ್ತದೆ, ಸಶಕ್ತವಾಗುತ್ತದೆ. ಸಾಹಿತ್ಯಭಾಷೆ ಬೇರಿನಂತೆ, ವಿಜ್ಞಾನಭಾಷೆ ಎಲೆಯಂತೆ. ಹಾಗಾದರೆ ಮರ? ಅದು ಸಾಕ್ಷಾತ್ ಜೀವನ.

ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ
ಜಸವು ಜನಜೀವನಕೆ ಮಂಕುತಿಮ್ಮ

ಜ್ಞಾನಸಂವಹನವೆಂಬ ಉಲ್ಲಾಸದಾಯಕ ಸೃಜನಶೀಲ ಕ್ರಿಯೆಯಲ್ಲಿ ಮಗ್ನರಾಗಿರುವ ನಿಮಗೆ ವಿಜ್ಞಾನ ವಾಙ್ಮಯದ ವ್ಯವಸ್ಥಿತ ಅಧ್ಯಯನ ಖಂಡಿತವಾಗಿಯೂ ಅಧಿಕ ಸಾಧ್ಯತೆಗಳನ್ನು ತೋರಿಸಿಕೊಡದಿರದು. ಅವನ್ನು ಅನ್ವೇಷಿಸಿ ಪಡೆಯುವ ಸಂತೋಷ ನಿಮ್ಮದಾಗಲಿ!

ಇತಿ ಶಿವಂ

[signature]

11-11-1989

ದೂರವಾಣಿ 25759

ಜಿ. ಟಿ. ನಾರಾಯಣರಾವ್
8 ಅತ್ರಿ
ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ
ಮೈಸೂರು 570023

ಜಿ. ಟಿ. ನಾರಾಯಣರಾವ್

# ಬಾಹ್ಯಾಕಾಶದ ವಿಸ್ಮಯಗಳು

ಸೌರವ್ಯೂಹದ ಹೊರಗಿನ ಅಥವಾ ಆಚೆಗಿನ ವಿಸ್ತಾರವನ್ನು ಬಾಹ್ಯಾಕಾಶವೆಂದು ಕರೆಯೋಣ. ಸೆಕೆಂಡಿಗೆ ೩೦೦,೦೦೦ ಕಿಮೀ ವೇಗದಿಂದ ಸರಳರೇಖೆಯಲ್ಲಿ ಧಾವಿಸುವ ಬೆಳಕಿನ ಕಿರಣ ಒಂದು ವರ್ಷ ಗಮಿಸುವ ದೂರಕ್ಕೆ ಜ್ಯೋತಿರ್ವರ್ಷವೆಂದು ಹೆಸರು— ಸುಮಾರು ೫.೮ × ೧೦$^{೧೨}$ ಮೈಲುಗಳು ಅಥವಾ ಸುಮಾರು ೧೦$^{೧೩}$ ಕಿಮೀ. ನಮ್ಮ ಸಮೀಪತಮ ನಕ್ಷತ್ರ ಸೂರ್ಯ. ಇದರಿಂದ ಮುಂದಿನ ನಕ್ಷತ್ರದ ದೂರ ಸುಮಾರು ೪.೨ ಜ್ಯೋತಿರ್ವರ್ಷಗಳು — ಅಂದರೆ ಆ ನಕ್ಷತ್ರದಿಂದ (ಸಮೀಪತಮ ಕಿನ್ನರ) ಹೊರಟ ಬೆಳಕು ನಮ್ಮನ್ನು ತಲಪಲು ೪.೨ ವರ್ಷಗಳು ಬೇಕು. ಈ ಮಾನಕದಲ್ಲಿ ಸೂರ್ಯ-ಭೂಮಿ ಅಂತರ (= ೯೨,೦೦೩,೦೦೦ ಮೈಲುಗಳು ಅಥವಾ ೧೪೯,೮೦೦,೦೦೦ ಕಿಮೀ) ಗಮಿಸಲು ಕೇವಲ ೮ ನಿಮಿಷಗಳು ಸಾಕು. ಬಾಹ್ಯಾಕಾಶದಲ್ಲಿ ದೂರಗಳನ್ನು ಅಳೆಯಲು ಜ್ಯೋತಿರ್ವರ್ಷವನ್ನು ಬಳಸುತ್ತೇವೆ.

ಪ್ರಸ್ತುತ ಮೂರು ವಿಸ್ಮಯಗಳನ್ನು ಪರಿಕಲ್ಪಿಸೋಣ. (ವಿಶ್ವದಲ್ಲಿ ಗರ್ಭಿತವಾಗಿರುವ ವಿಸ್ಮಯಗಳ ಸಂಖ್ಯೆಗೆ ಮೇರೆಯೇ ಇಲ್ಲ ಎಂಬುದನ್ನು ಮರೆಯದಿರೋಣ.)

⊗ <u>ಅಂತರಬ್ರಹ್ಮಾಂಡ ಗುರುತ್ವ ಮಸೂರ</u>

ಪ್ರಬಲ ಗುರುತ್ವಕ್ಷೇತ್ರ ಬೆಳಕಿನ ಕಿರಣವನ್ನು ಬಗ್ಗಿಸುತ್ತದೆಂಬ ವಾದವನ್ನು ಆಲ್ಬರ್ಟ್ ಐನ್‌ಸ್ಟೈನ್ (೧೮೭೯-೧೯೫೫) ೧೯೧೬ರಲ್ಲಿ ಮಂಡಿಸಿದರು. ಇದರ ಪ್ರತ್ಯಕ್ಷ ತಪಾಸಣೆ ೧೯೧೯ರಲ್ಲಿ ಸಿದ್ಧಿಸಿತು. ಆಗ ಸಂಭವಿಸಿದ ಸಂಪೂರ್ಣ ಸೂರ್ಯಗ್ರಹಣದ ವೇಳೆ ಸೂರ್ಯನ ಹಿನ್ನೆಲೆ ನಕ್ಷತ್ರಗಳ ಛಾಯಾಚಿತ್ರ ತೆಗೆಯಲಾಯಿತು. ಆ ನಕ್ಷತ್ರ ಕಿರಣಗಳನ್ನು ಸೌರಗುರುತ್ವಕ್ಷೇತ್ರ ಬಗ್ಗಿಸಿದ್ದುದರಿಂದ ಛಾಯಾಚಿತ್ರದಲ್ಲಿ ಪಡಿಮೂಡಿದ್ದು ನಕ್ಷತ್ರಗಳ ವಿಚಲಿತ ಸ್ಥಾನಗಳು. ಅವೇ ನಕ್ಷತ್ರಗಳ ವಾಸ್ತವ ಸ್ಥಾನಗಳು ಅನ್ಯತ್ರ ನಿಷ್ಕೃಷ್ಟವಾಗಿ ತಿಳಿದಿದ್ದುದರಿಂದ ವಿಚಲನೆಯ ಮೊತ್ತ ಅಳೆದು ಐನ್‌ಸ್ಟೈನ್ ನಿರೂಪಿಸಿದ ಗಣನೆಯನ್ನು ಒರೆಗೆ ಹಚ್ಚಲಾಯಿತು. ವೀಕ್ಷಣೆಯಿಂದ ಲಭಿಸಿದ ಬೆಲೆ ಗಣನೆಯಿಂದ ದೊರೆತ ಬೆಲೆಗೆ ತೀರ ಸನ್ನಿಹಿತವಾಗಿತ್ತು. ಅಲ್ಲಿಗೆ ವಿಶ್ವ ಐನ್‌ಸ್ಟೈನರ ಭಾಷ್ಯ ಒಪ್ಪಿಕೊಂಡಿತೆಂದಾಯಿತು.

ಇದೇ ಸಿದ್ಧಾಂತವನ್ನು — ಬೆಳಕಿನ ಕಿರಣವನ್ನು ಗುರುತ್ವಕ್ಷೇತ್ರ ಬಗ್ಗಿಸುವ ವಿದ್ಯಮಾನ — ಐನ್‌ಸ್ಟೈನ್ ವಿಸ್ತರಿಸಿ ೧೯೩೬ರಲ್ಲಿ ಹೊಸತೊಂದು ಊಹೆ ಪ್ರಕಟಿಸಿದರು: ಕಿರಣಪಥಮಧ್ಯದ ಗುರುತ್ವಕ್ಷೇತ್ರಗಳ ಕಾರಣವಾಗಿ ನಕ್ಷತ್ರಗಳು ಸ್ಥಾನಪಲ್ಲಟಗೊಂಡಂತೆ ಕಾಣುವುದರ ಜೊತೆಗೆ ಈ ಪಲ್ಲಟಿತ ಸ್ಥಾನಗಳ ಪ್ರತಿಬಿಂಬಗಳು ಕೂಡ

ಮೈದಳೆಯುವುದು ಸಾಧ್ಯ. ಬೇರೆ. ಎರಡು ವಿವಿಧ ಕೋನಗಳಲ್ಲಿ ಹಲವು ಕನ್ನಡಿಗಳನ್ನಿಟ್ಟರೆ ಬೇರೆ ಪ್ರತಿಬಿಂಬಗಳು ಇವುಗಳ ಪ್ರತಿಬಿಂಬಗಳು ಕಾಣುವುದಿಲ್ಲವೇ – ಹಾಗೆ. ಊಹೆಯೇನೋ ಸೈದ್ಧಾಂತಿಕವಾಗಿ ಸಾಧು, ಆದರೆ ವಿಶ್ವದ ಗಹನಾತಿಗಹನ ಆಳಗಳಲ್ಲಿ ಇಂಥ ಒಂದು ವಿದ್ಯಮಾನ ಪ್ರತ್ಯಕ್ಷ ವೀಕ್ಷಣೆಗೆ ಒಳಪಡುವ ಸಂಭಾವ್ಯತೆ ಅತ್ಯಲ್ಪವೆಂದಿದ್ದರು ಐನ್‌ಸ್ಟೈನ್. ಆದರೆ ಮುಂದಿನ ಕೇವಲ ನಲವತ್ತೆರಡು ವರ್ಷಗಳಲ್ಲೇ, ೧೯೭೯, ವಿಶ್ವ ನೂತನ ವಿಸ್ಮಯವೊಂದನ್ನು ಪ್ರದರ್ಶಿಸಿ ಖಗೋಳಶಾಸ್ತ್ರಜ್ಞರೆದುರು ಹೊಸ ಸವಾಲನ್ನು ಎಸೆದುಬಿಟ್ಟಿತು.

ಕ್ವೇಸಾರ್ – quasi-stellar source (ನಕ್ಷತ್ರಸದೃಶ ಆಕರ) – ಎಂಬ ನಕ್ಷತ್ರವೈಚಿತ್ರ್ಯ ೧೯೬೦ರಲ್ಲಿ ಮೊದಲ ಬಾರಿಗೆ ಪತ್ತೆ ಆಯಿತು. ಹಲವು ಕೋಟಿ ನಕ್ಷತ್ರಗಳಷ್ಟು ವಿಕಿರಣವನ್ನು ಬೀರುವ ಪುಟ್ಟಗಾತ್ರದ ಬಿಂಬ ಕಾಯವೇ ಕ್ವೇಸಾರ್. ೧೯೭೯ರ ವೇಳೆಗೆ ಸುಮಾರು ೧೪೦೦ ಕ್ವೇಸಾರುಗಳನ್ನು ಪತ್ತೆಹಚ್ಚಲಾಗಿತ್ತು. ಇವುಗಳ ವಿತರಣೆಯಲ್ಲಿ ಯಾವ ಕ್ರಮವೂ ಇರಲಿಲ್ಲ, ಒಂದು ಉಳಿದೆಲ್ಲವುಗಳಿಂತ ಪ್ರತಿ ಭಿನ್ನ; ಸಾಧಾರಣವಾಗಿ ಆಕಾಶದ ೨೦ ಚದರಡಿ ಪ್ರದೇಶದಲ್ಲಿ ಒಂದು ಕ್ವೇಸಾರ್ ಇದೆ ಎನ್ನಬಹುದಿತ್ತು ಮಾತ್ರ.

೨೯-೩-೧೯೭೯ರ ರಾತ್ರಿ. ದೂರದರ್ಶಕ ವೀಕ್ಷಣೆಗೆ ನೂತನ ವಿಸ್ಮಯ ಪ್ರಕಟವಾಯಿತು: ಒಂದು ಜೊತೆ ತದ್ರೂಪ ಕ್ವೇಸಾರುಗಳು ಕೇವಲ ೬ ಕೋನಸೆಕೆಂಡುಗಳ ಅಂತರದಲ್ಲಿ ಕಣ್ಣು ಮಿಟುಕಿಸುತ್ತಿವೆ! ಈ ವೈಚಿತ್ರ್ಯಕ್ಕೆ ವೈಜ್ಞಾನಿಕ ವಿವರಣೆ ಒದಗಿಸುವ ದಿಶೆಯಲ್ಲಿ 'ಅಂತರಬ್ರಹ್ಮಾಂಡ ಗುರುತ್ವ ಮಸೂರ'ದ ಪರಿಕಲ್ಪನೆಯನ್ನು ಮುಂದಿಡಲಾಯಿತು.

ಬ್ರಹ್ಮಾಂಡ – galaxy – ಎಂದರೆ ಹಲವು ಕೋಟಿ ನಕ್ಷತ್ರಗಳ ಗುರುತ್ವಾತ್ಮಕ ಒಕ್ಕೂಟ. ನಮ್ಮ ಸೂರ್ಯ ಇಂಥ ಒಂದು ಬ್ರಹ್ಮಾಂಡದ ಸದಸ್ಯ ತಾರೆ – ಆಕಾಶಗಂಗೆ ಎಂದು ಇದರ ಹೆಸರು. ಇದರಲ್ಲಿ ೪೦೦,೦೦೦,೦೦೦,೦೦೦ ವಿವಿಧ ಗಾತ್ರಗಳ ರಾಶಿಗಳ ವಿಕಾಸಹಂತಗಳ ನಕ್ಷತ್ರಗಳು ಪರಸ್ಪರ ಗುರುತ್ವಾಕರ್ಷಣೆಯಿಂದ ಬಂಧಿತವಾಗಿವೆ.

ವಿಶ್ವದಲ್ಲಿ ಅಸಂಖ್ಯ ಬ್ರಹ್ಮಾಂಡಗಳಿವೆ. ಈ ಪೈಕಿ ಕೆಲವು ನಮಗೆ ಮಸೂರದ ಆಕಾರದಲ್ಲಿ ಕಾಣುವುದು ಸಾಧ್ಯವಿದೆ. ಪ್ರತಿಯೊಂದು ಬ್ರಹ್ಮಾಂಡವನ್ನು ಆವರಿಸಿ ಒಂದೊಂದು ಗುರುತ್ವಕ್ಷೇತ್ರ ಉಂಟು – ನಕ್ಷತ್ರವನ್ನು ಆವರಿಸಿ ಗುರುತ್ವಕ್ಷೇತ್ರವಿರುವಂತೆ. ಈಗ, ನಮ್ಮ (ಭೂಮಿಯ) ನೆಲೆಗೂ ಅತಿ ದೂರದ ಒಂದು ಕ್ವೇಸಾರಿಗೂ ನಡುವೆ ಮಸೂರಾಕಾರದಲ್ಲಿ ಒಂದು ಬ್ರಹ್ಮಾಂಡ ವಿನ್ಯಾಸಗೊಂಡಿದ್ದರೆ (ನಾವಿರುವುದು ಆಕಾಶಗಂಗೆ ಎಂಬ ಬ್ರಹ್ಮಾಂಡದಲ್ಲಿ ಎಂದು ನೆನಪಿರಲಿ) ಸಹಜವಾಗಿ ಇದಕ್ಕೆ ಅಂತರಬ್ರಹ್ಮಾಂಡಗುರುತ್ವಮಸೂರವೆಂಬ ಹೆಸರು ಒಪ್ಪುತ್ತದೆ.

೧೯೭೯ರಲ್ಲಿ ಪ್ರಕಟವಾದ ತದ್ವತ್ ಕ್ವೇಸಾರುಗಳ ರಹಸ್ಯ ಭೇದಿಸುವ ದಿಶೆಯಲ್ಲಿ ಇಂಥ ಒಂದು ಅಂತರಬ್ರಹ್ಮಾಂಡಗುರುತ್ವಮಸೂರವನ್ನು ಊಹಿಸಿ, ಇದರ ವಿವರಗಳನ್ನು ಸೈದ್ಧಾಂತಿಕವಾಗಿ ನಿರ್ಧರಿಸಿ, ಈ ಪ್ರಕಾರ ಮಸೂರದ ಅಸ್ತಿತ್ವವನ್ನು ಸ್ಥಿರೀಕರಿಸಬಲ್ಲ ಶೋಧನೆ ತಪಾಸಣೆಗಳನ್ನು ಮುಂದುವರಿಸಿದ್ದಾಯಿತು: ಸುಳುಹುಗಳನ್ನು ಅರ್ಥೈಸಿ ಮುಂದಕ್ಕೆ ಸಾಗುವ ಪತ್ತೇದಾರನ ರೋಮಾಂಚಕ ಸಾಹಸ.

೧೫-೧೧-೧೯೭೯ ರಾತ್ರಿ. ವಿಶ್ವ ಒಲಿಯಿತು. ತಪಾಸಣೆ ಫಲಿಸಿತು. ಅಂತರಬ್ರಹ್ಮಾಂಡಗುರುತ್ವಮಸೂರದ ಶೋಧವಾಯಿತು. ತದ್ವತ್ ಕ್ವೇಸಾರುಗಳ ರಹಸ್ಯ ಬಯಲಾಯಿತು. ಐನ್‌ಸ್ಟೈನ್ ವಾದ ಸ್ಥಿರೀಕೃತವಾಯಿತು.

⊗ <u>ವಿಶ್ವದಲ್ಲಿ ನಾವು ಏಕಾಂಗಿಗಳೇ?</u>

ಅನ್ಯಲೋಕದಲ್ಲಿ ಬುದ್ಧಿವಂತ ಜೀವಿಗಳಿವೆಯೇ? ಅಥವಾ ಸಮಸ್ತ ವಿಶ್ವದಲ್ಲಿ ಮಾನವ ಏಕಮೇವಾದ್ವಿತೀಯ ಸೃಷ್ಟಿ ವೈಚಿತ್ರ್ಯವೇ? ಈ ಪ್ರಶ್ನೆಗಳು ಪ್ರಾಚೀನ ಮಾನವ ಕಣ್ತೆರೆದಂದೇ ಉದ್ಭವಿಸಿರಬೇಕು. ಆಯಾಯುಗದ ವಿಜ್ಞಾನ ಮತ್ತು ತಂತ್ರವಿದ್ಯೆಯ ಮಟ್ಟ ಅನುಸರಿಸಿ ಇವುಗಳಿಗೆ ಬೇರೆ ಬೇರೆ ಉತ್ತರಗಳು ಲಭಿಸಿವೆ. ವಿಶ್ವದಲ್ಲಿ ಮಾನವ ಏಕೈಕ ಬುದ್ಧಿವಂತ ಜೀವಿ ಅಲ್ಲ, ಆಗಿರಬೇಕಾಗಿಯೂ ಇಲ್ಲ — ವಿಶ್ವ ಪಕ್ಷಪಾತ ನೀತಿಯನ್ನು ಅನುಸರಿಸುವುದಿಲ್ಲ! ಆದ್ದರಿಂದ ಬುದ್ಧಿವಂತಿಕೆಯ ಮಾನಕದಲ್ಲಿ ಮಾನವನಿಗೆ ಸಮವಾಗುವ, ಮತ್ತು ಅವನನ್ನು ಮೀರಿಸುವ ಬುದ್ಧಿವಂತಿಕೆಗಳು ವಿಶ್ವದ ಅಪಾರ ವಿಸ್ತಾರದಲ್ಲಿ ಹರಡಿಹೋಗಿರುವುದು ಅಸಂಭಾವ್ಯವಲ್ಲ ಎಂದು ವಿಜ್ಞಾನಿಗಳು ನಂಬಿದ್ದಾರೆ.

ಬುದ್ಧಿವಂತಿಕೆ ಎಂದರೇನು? ಭೂಮಿಯಿಂದ ಹೊರಗೆ, ಇನ್ನು ನಿಖರವಾಗಿ ಹೇಳುವುದಾದರೆ ಸೌರವ್ಯೂಹದಿಂದ ಆಚೆಗೆ, ಇರಬಹುದಾದ ಜೀವಿಗಳು ವಿಜ್ಞಾನ ಮತ್ತು ತಂತ್ರವಿದ್ಯೆಯಲ್ಲಿ ಕನಿಷ್ಠ ಪಕ್ಷ ನಮ್ಮ ವರ್ತಮಾನ (ಇಪ್ಪತ್ತನೆಯ ಶತಮಾನದ ಕೊನೆಯ ದಶಕ) ಮಟ್ಟವನ್ನಾದರೂ ಏರಿದ್ದರೆ, ಅವನ್ನು ಭೂಮ್ಯತೀತ ಬುದ್ಧಿವಂತ ಜೀವಿಗಳು ಅಥವಾ ಭೂಮ್ಯತೀತ ಬುದ್ಧಿವಂತಿಕೆ ಎನ್ನುತ್ತೇವೆ.

ಬುದ್ಧಿವಂತಿಕೆಯ ಈ ವಿಶಿಷ್ಟ ಮಟ್ಟದ ಮಾನಕ ಏನು? ಇಂದು ನಾವು ರೇಡಿಯೊ ತರಂಗಗಳ ನೆರವಿನಿಂದ ಭೂಮಿಯ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಹೆಚ್ಚು ಕಡಿಮೆ ತಾತ್ಕ್ಷಣಿಕ ಸಂಪರ್ಕ ಪಡೆಯುತ್ತೇವೆ. ವಾಯುಮಂಡಲದಲ್ಲಿ ವಿಮಾನಸಂಚಾರ ಮಾಡುತ್ತೇವೆ. ಆಕಾಶಯಾನ ಸಾಧಿಸಿದ್ದೇವೆ. ಚಂದ್ರನ ಮೇಲೆ ನಮ್ಮ ಪ್ರತಿನಿಧಿಯನ್ನು ಇಳಿಸಿ ಹಿಂದಕ್ಕೆ ಬರಮಾಡಿಕೊಂಡಿದ್ದೇವೆ. ರೇಡಿಯೊ ತರಂಗಗಳನ್ನು ವಿಶ್ವದ ವಿವಿಧ ಭಾಗಗಳಿಗೆ ಪ್ರಸರಿಸಿ "ನಾವಿಲ್ಲಿದ್ದೇವೆ" ಎಂಬುದನ್ನು ಅರುಹುವಲ್ಲಿ ನಿರತರಾಗಿದ್ದೇವೆ. ಅದೇ ವೇಳೆ, ಆಕಾಶದಿಂದ ನಮ್ಮೆಡೆಗೆ ಬರುತ್ತಿರುವ ರೇಡಿಯೊ ಅಲೆ, ಬೆಳಕು, ಎಕ್ಸ್‌ಕಿರಣ ಮುಂತಾದ ವಿದ್ಯುತ್ಕಾಂತ ವಿಕಿರಣಪ್ರಕಾರಗಳನ್ನು

ಕಲೆಹಾಕಿ ವಿಶ್ಲೇಷಿಸಿ ವಿಶ್ವದ ಬಗ್ಗೆ ಹೊಸ ಮಾಹಿತಿಗಳನ್ನು ತಿಳಿಯ ಬಲ್ಲವರಾಗಿದ್ದೇವೆ. ಆದ್ದರಿಂದ "ಬುದ್ಧಿವಂತ" ಪದದ ಅರ್ಥ ನಿರ್ಣಯವಿಷ್ಟು: ಅನ್ಯಲೋಕಗಳೊಡನೆ ಸಂಪರ್ಕ ಏರ್ಪಡಿಸಬಲ್ಲ ಪ್ರಬುದ್ಧ ತಂತ್ರವಿದ್ಯೆಯಲ್ಲಿ ಪರಿಣತಿ ಮತ್ತು ಆ ಪರಿಣತಿ ಗಳಿಸಿರುವ ಜೀವಿಸಮೂಹ. ಮಾನವ ಈ ತೆರನಾದ ಪರಿಣತಿ ಗಳಿಸಿದ್ದು ೧೯೩೦ರ ಈಚೆಗೆ ಮಾತ್ರ. ಆದ್ದರಿಂದ ಬುದ್ಧಿವಂತಿಕೆಯು ಮಾನವಕುಲದಲ್ಲಿ ಆಗ ಇನ್ನೂ ಕಣ್ಣು ತೆರೆಯುತ್ತಿರುವ ನವಜಾತ ಶಿಶು.

ವರ್ತಮಾನ ಚಿಂತನೆಯ ಸಾರವಿಷ್ಟು:

- ಭೂಮ್ಯತೀತ ಬುದ್ಧಿವಂತಿಕೆಯ ಅಸ್ತಿತ್ವವನ್ನು ತಾತ್ತ್ವಿಕವಾಗಿ ಅಂಗೀಕರಿಸಿದೆ.
- ಅದೇನಿದ್ದರೂ ಭೂಮಿಯಂಥ ಅನಕ್ಷತ್ರ ಕಾಯದಲ್ಲಿ ಮಾತ್ರವೇ ವಿಕಸಿಸುವುದು ಸಾಧ್ಯ. ಆದ್ದರಿಂದ ವಿಶ್ವದಲ್ಲಿ ಅನಕ್ಷತ್ರಕಾಯಸಂಯುಕ್ತ ನಕ್ಷತ್ರಗಳನ್ನು ಪತ್ತೆಹಚ್ಚುವುದು ಮೊದಲ ಹೆಜ್ಜೆ.
- ಇಂಥ ಒಂದು ಅನಕ್ಷತ್ರ ಕಾಯ ಅಥವಾ ಹಲವು ಕಾಯಗಳ ಇರವು ಖಾತ್ರಿಯಾದ ಬಳಿಕ ಅದರಿಂದ/ಅವುಗಳಿಂದ ಭೂಮಿಗೆ ಬರುವ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಅವುಗಳಲ್ಲಿ ನಿಸರ್ಗಸಹಜವಲ್ಲದ ಆದರೆ ಬುದ್ಧಿವಂತಿಕೆಗೆ ಮಾತ್ರ ಸಹಜವಾದ ಅಂಶಗಳೇನಾದರೂ ಇವೆಯೇ ಎಂದು ನಿರ್ಧರಿಸುವುದು ಮುಂದಿನ ಹೆಜ್ಜೆ.
- ಇವೆ ಎಂದಾದರೆ ಆ ಭಾಷೆಯನ್ನು ಅರ್ಥವಿಸಬೇಕು, ಅದೇ ರೀತಿ ಆ ಮೂಲಕ್ಕೆ ನಮ್ಮ ಮಾಹಿತಿಯನ್ನು, ಆ ಜೀವಿಗಳಿಗೆ ಅರ್ಥವಾಗುವ ಭಾಷೆಯಲ್ಲಿ, ಪ್ರೇಷಿಸಬೇಕು. ಹೀಗೆ ಅಂತರ-ಬುದ್ಧಿವಂತಿಕೆ ಸಂವಾದ ಏರ್ಪಡಿಸುವುದು ತದನಂತರದ ಹೆಜ್ಜೆ.
- ಇಲ್ಲಿ ನಾವೇ ಏಕೆ ಮುಂದಾಳುತನ ವಹಿಸಬೇಕು? ನಮ್ಮ ಬುದ್ಧಿವಂತಿಕೆ ಈಗ ೨೧ನೆಯ ಶತಮಾನದ ಹೊಸ್ತಿಲಿನಲ್ಲಿದೆ. ಇದನ್ನು ೧ ಎಂದೂ ೩೧ನೆಯ ಶತಮಾನದ ಹೊಸ್ತಿಲಿನಲ್ಲಿ ನಾವು ಪಡೆಯಲಿರುವ ಬುದ್ಧಿವಂತಿಕೆಯನ್ನು ೨ ಎಂದೂ ಮುಂತಾಗಿ ಭಾವಿಸಿದರೆ, ವಿಶ್ವದ ವಯಸ್ಸು ೧೫,೦೦೦,೦೦೦,೦೦೦ ವರ್ಷಗಳು ಎಂದು ಗಮನಿಸುವಾಗ, ಬುದ್ಧಿವಂತಿಕೆಯು ಮಾನವಕುಲದಲ್ಲಿ ೧೦೦, ೨೦೦, ೩೦೦ ಮುಂತಾದ ಮಟ್ಟಗಳಿಗೇರಿರುವ ಅನ್ಯ ಬುದ್ಧಿವಂತಿಕೆಗಳಿರುವುದು ಸಂಭಾವ್ಯವೆಂದು ಅಂಗೀಕರಿಸಬೇಕಾಗುತ್ತದೆ ಅಂಥ ಪ್ರಬಲ ಬುದ್ಧಿವಂತಿಕೆಗಳು ನಮ್ಮ ಬಾಲಿಶ ಬುದ್ಧಿವಂತಿಕೆಯನ್ನು ಈಗಾಗಲೇ ಗಮನಿಸಿ ಗುರುತಿಸಿ ನಮ್ಮತ್ತ ತಮ್ಮ ಸ್ನೇಹಸಂದೇಶಗಳನ್ನು ಬೀರುತ್ತಿರುವುದು ಅಸಂಭಾವ್ಯವೇನೂ ಅಲ್ಲ. ಅಂಥವನ್ನು ನಾವು ಹುಡುಕಿ ಹೆಕ್ಕಿ ಅರ್ಥವಿಸುವುದೂ ಕೂಡ ಸಾಧ್ಯವಿದೆ.

ಉಭಯ ದಿಶೆಗಳಲ್ಲಿಯೂ ತಾಂತ್ರಿಕ ಪ್ರಯತ್ನಗಳೂ ವೈಜ್ಞಾನಿಕ ಶೋಧಗಳೂ ಮುಂದುವರಿದಿವೆ. ಯಶಸ್ಸು? ಕಾದು ನೋಡುವುದೊಂದೇ ಕರ್ಮ! ಜಾನ್ ಅಪ್‌ಡೈಕ್ ಬರೆದಿದ್ದಾರೆ: human was the music,

natural was the static (ಜೀವ ಸಾಯುತ್ತಿತ್ತು, ವಿಶ್ವ ಸ್ತಬ್ಧಿಸಿತ್ತು).

* ನಮ್ಮ ಮೂಲವೆಲ್ಲಿ?

ನಾವು ಭೂಮಿಜರು, ನಿಜ. ಅಂದರೆ ಭೂಮಿಯಲ್ಲಿ ನೈಸರ್ಗಿಕವಾಗಿ ದೊರೆಯುವ 92 ವಿವಿಧ ರಾಸಾಯನಿಕ ಧಾತುಗಳು ಅಸಂಖ್ಯ ಪಾತ್ರಗಳನ್ನು ವಹಿಸಿ ಈ ಗ್ರಹದಲ್ಲಿ ಜೀವೋತ್ಪತ್ತಿಯಾಗಿದೆ. ಇದರ – ಅಂದರೆ ಈ ಜೀವ ಬಳ್ಳಿಯ – ಒಂದು ಕುಡಿಯಾಗಿ ನಾವಿದ್ದೇವೆ. ನಮ್ಮ ದೇಹ ಎಂದರೆ ಹೈಡ್ರೋಜನ್, ಕಾರ್ಬನ್, ಆಕ್ಸಿಜನ್, ಕ್ಯಾಲ್ಸಿಯಂ, ನೈಟ್ರೋಜನ್, ಕಬ್ಬಿಣ ಮುಂತಾದ ರಾಸಾಯನಿಕಗಳ ಸಂಕೀರ್ಣ ಸೌಧ. ಇವೆಲ್ಲವೂ ಭೂಮಿಯಿಂದ ಬಂದಿವೆ.

ಈ ಧಾತುಗಳನ್ನು ಭೂಮಿ ಸೃಷ್ಟಿಸಿದೆಯೇ? ಇಲ್ಲ! ಭೂಮಿಯಂಥ ಒಂದು ಕ್ಷುದ್ರ ಗಗನ ಕಾಯ ಯಾವ ಧಾತುವನ್ನೂ ಸೃಷ್ಟಿಸಲಾರದು.

ಸುಮಾರು 5 ಬಿಲಿಯನ್ (5,000,000,000) ವರ್ಷಗಳ ಹಿಂದೆ, ಸಂಘನನವಾಗಿ, ಒಂದೇ ಮೇಘ ಸೂರ್ಯ ಮತ್ತು ಇದನ್ನು ಪರಿಭ್ರಮಿಸುತ್ತಿರುವ ಗ್ರಹೋಪಗ್ರಹಗಳೆಲ್ಲವೂ ಮೈದಳೆದುವು. ಸೌರವ್ಯೂಹದ ಮೂಲವನ್ನು ಸೌರನೀಹಾರಿಕೆಯೆಂದು ಕರೆಯುತ್ತೇವೆ. ಇದು ಪ್ರಾಥಮಿಕ ಮೂಲಕಣಗಳ (ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್ ಇತ್ಯಾದಿ) ಮತ್ತು ಅತ್ಯಂತ ಸರಳ ಧಾತು ಹೈಡ್ರೋಜನ್ನಿನ ವಿಸ್ತಾರ ಮೇಘ. ಅಂದಮೇಲೆ ಮಾತೃಕಾಯದಿಂದ ಸೌರವ್ಯೂಹದ ಸಮಸ್ತ ಕಾಯಗಳೂ – ಸೂರ್ಯ ಮತ್ತು ಭೂಮಿ ಕೂಡ ಸೇರಿದಂತೆ – ಜನಿಸಿದ ಮೂಲದ್ರವ್ಯ ಇದು ಮಾತ್ರ. ಹಾಗಾದರೆ ಮೇಲಿನ ಮಟ್ಟದ ಸಂಕೀರ್ಣ ಧಾತುಗಳು (ಕಬ್ಬಿಣ, ಯುರೇನಿಯಂ ಇತ್ಯಾದಿ) ಭೂಮಿಯಲ್ಲಿ ಹೇಗೆ ರಚಿತವಾದುವು?

ನಮ್ಮ ನಕ್ಷತ್ರವಾದ, ಸುಮಾರು 100,000 ಭೂಮಿಗಳನ್ನು ನುಂಗಬಲ್ಲ, ಸೂರ್ಯನಲ್ಲಿ ಕೂಡ ಈ ಎಲ್ಲ ಧಾತುಗಳು ಇಲ್ಲ! ಅಲ್ಲಿರುವುದೇನಿದ್ದರೂ ಮೂಲಕಣಗಳ ಜೊತೆಗೆ ಹೈಡ್ರೋಜನ್, ಹೀಲಿಯಂ, ಕಾರ್ಬನ್ ಮತ್ತು ಪ್ರಾಯಶಃ ಆಕ್ಸಿಜನ್. ಕಬ್ಬಿಣ ಇಲ್ಲ. ಸೂರ್ಯ ಇದನ್ನು ಸೃಷ್ಟಿಸಲಾರದು.

ಧಾತುಗಳ ನಿರ್ಮಾಣಕ್ಕೆ ಅಗಾಧ ಸಾಂದ್ರ ಉಷ್ಣತೆ ಅಗತ್ಯ, ನಮ್ಮದ್ದೂ ದ್ರವ್ಯ ಎಲ್ಲವೂ ಒಂದೆಡೆ ಕ್ರೋಢೀಕೃತ ಸಂಘಟನೆಗಳೂ ಬೇಕು. ಸೌರಾಕಾಶದಲ್ಲಿ ಈ ಸೌಲಭ್ಯವಿಲ್ಲ. ಭೂಮಿಯಲ್ಲಿರುವ ಸಂಕೀರ್ಣ ಧಾತುಗಳ ಮೂಲ ಸೂರ್ಯನೂ ಅಲ್ಲ! ಈ ಒಗಟಿನ ಒಡಪು ಏನು?

ಪ್ರಸಕ್ತ ಶತಮಾನದ ಉತ್ತರಾರ್ಧದಲ್ಲಿ ಈ ಪ್ರಶ್ನೆಗೆ ಉತ್ತರ ದೊರೆತಿದೆ: ಸೂಪರ್ನೋವಾ ಸ್ಫೋಟನೆಯಲ್ಲಿ ಸಂಕೀರ್ಣ ಧಾತುಗಳ

ಪಾಕಗೊಂಡು ವಿಶ್ವದ ಕಡೆಗೆ ಹೊರಕ್ಕೆ ಅಪಾರ ವೇಗದಿಂದ ಎಸೆಯಲ್ಪಡುತ್ತವೆ.
ಸಂಕ್ಷೇಪವಾಗಿ

* ಸೂರ್ಯನಂತೆ, ಆದರೆ ಹಲವು ಸುಮಾರು ಪಟ್ಟು ಗಾತ್ರದ, ಬಿಳಿ ನಕ್ಷತ್ರ, ಹೈಡ್ರೋಜನ್ ಅನಿಲ ಮೋಡದಲ್ಲಿ ಹುಟ್ಟುತ್ತದೆ. ಇದು ಎರಡು ವಿರುದ್ಧ ಬಲಗಳ ರಣರಂಗ: ಗುರುತ್ವದ ಸಂಕೋಚಕ ಬಲ, ವಿಕಿರಣದ (ಶಾಖ, ಬೆಳಕು ಮುಂತಾದವು) ವ್ಯಾಕೋಚಕ ಬಲ.

⊛ ನಕ್ಷತ್ರದಹನದಲ್ಲಿ, ಮೊದಲ ಹಂತದಲ್ಲಿ, ಉರಿಯುವ ಹೈಡ್ರೋಜನ್, ಉತ್ಪನ್ನ ವಿಕಿರಣ, ಮತ್ತು ಶೇಷ (ಬೂದಿ) ಹೀಲಿಯಮ್. ಮೊದಲನೆಯ ಹಂತದ ತಾರೆಗೆ ಹೈಡ್ರೋಜನ್ ನಕ್ಷತ್ರವೆಂದು ಹೆಸರು. ಉದಾಹರಣೆಗೆ ಸೂರ್ಯ.

⊛ ಎರಡನೆಯ ಹಂತದಲ್ಲಿ ಉರಿಯುವ ಹಿಂದಿನ ಹಂತದ ಶೇಷ — ಹೀಲಿಯಮ್; ಉತ್ಪನ್ನ ವಿಕಿರಣ, ಮತ್ತು ಶೇಷ ಕಾರ್ಬನ್. ಇದು ಹೀಲಿಯಮ್ ನಕ್ಷತ್ರ.

⊛ ಮುಂದಿನ ಹಂತಗಳು ನಿಯಾನ್, ಆಕ್ಸಿಜನ್, ಸಲ್ಫರ್, ಸಿಲಿಕಾನ್ ಮತ್ತು ಕಬ್ಬಿಣ. ಕಬ್ಬಿಣ ತಾರೆಯಲ್ಲಿ ಪರಿಸ್ಥಿತಿ ಉಲ್ಬಣಿಸುತ್ತದೆ: ಗುರುತ್ವದ ಮಹತ್ತರ ನಿರಂತರ ಸಂಕೋಚಕ ಬಲ ಈ ತಾರೆಯ ಗರ್ಭದಲ್ಲಿ ಬೈಜಿಕ ಕ್ರಿಯೆಗಳನ್ನು ಪ್ರೇರಿಸಲು ಶಕ್ತವಾಗುವುದಿಲ್ಲ, ಹಾಗೆಂದು ಈ ಬಲ ಸ್ಥಗಿತವಾಗುವುದೂ ಇಲ್ಲ. ಈ ದುರ್ಭರ ಸನ್ನಿವೇಶದಲ್ಲಿ ಕಬ್ಬಿಣ ತಾರೆ ಆಸ್ಫೋಟಿಸುತ್ತದೆ: ಇದೇ ಸೂಪರ್‌ನೋವಾ ಆಸ್ಫೋಟನೆ ಅಥವಾ ಸೂಪರ್‌ನೋವಾ. ಇದು ಸಂಭವಿಸುವ ಕ್ಷಿಪ್ರಾವಧಿಯಲ್ಲಿ ಮೈದಳೆಯುವ ಸಂಮರ್ದ, ಉಷ್ಣತೆ, ದ್ರವ್ಯನಿಬಿಡತೆ ಎಲ್ಲವೂ ಸೇರಿ ಕಬ್ಬಿಣದಿಂದ ಮೇಲಿನ ಹಂತದ ಸಮಸ್ತ ಸಂಕೀರ್ಣ ಧಾತುಗಳೂ ಪಾಕಗೊಳ್ಳುತ್ತವೆ, ಮತ್ತು ಆಸ್ಫೋಟನೆಯ ಫಲವಾಗಿ ಇಡೀ ವಿಶ್ವವಿಸ್ತಾರದಲ್ಲಿ ಮುಕ್ತ ಸಂಚಾರಿಗಳಾಗುತ್ತವೆ.

ಇಂಥ 'ಅಂತರಪಿಶಾಚಿಗಳು' ಭೂಮಿಯಂಥ ಅನಕ್ಷತ್ರ ಪಾತ್ರಗಳಲ್ಲಿ ಜಮೆಯಾಗುತ್ತವೆ. ಎಲ್ಲಿಯೋ ಎಂತೋ ಎಂದೋ ಜೀವದ ಕಿಡಿ ಮಿನುಗಿದಾಗ, ಮಿನುಗಿ ಬೆಳಗಿದಾಗ, ಬೆಳಗಿ ಅರಿವು ಮಿಡಿದಾಗ ಅಲ್ಲಿ ಮಾನವನನ್ನು ಕಾಣುತ್ತೇವೆ. ಆದ್ದರಿಂದ ನಾವು ಭೂಮಿಜರು ನಿಜ, ಆದರೆ ಸೂಪರ್‌ನೋವಾಸಂಜಾತರೆಂಬುದು ಹೆಚ್ಚು ನಿಜ!

ನಿನ್ನೊಡಲಣುಗಳಾವ ಕಾಯವನು ಸೇರುವುವೊ
ಮಣ್ಣಾವುದರಿಂದ ಗರ್ಭವತಿಯಹುದೊ
ಅನ್ನವದರಿಂದಾರ್ಗೆ ಬೀಜದರಿಂದೇನೊ
ಬಲ್ಲವರಾರದನು ಮಂಕುತಿಮ್ಮ

೮ ಅತಿಥಿ
ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಕುವೆಂಪು ನಗರ ಮೈಸೂರು ೫೭೦೦೨೩

ದೂರವಾಣಿ ೫೪೭೫೪೯
೧೨-೦೭-೧೯೯೭

# ಚಾರಣ

ಚಾರಣಧೀರರ – ರಣಧೀರರ ಕೂಡ – ಈ ಮಹಾಧಿವೇಶನದ ಸರ್ವಾಧ್ಯಕ್ಷ ಸ್ಥಾನಕ್ಕೆ ನನ್ನನ್ನು ಕರೆಯುವುದರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಗೊ. ರು. ಚನ್ನಬಸಪ್ಪನವರ ಪ್ರೇರಣೆಯು ಸಹ "one who can does, can't talks – ಶಕ್ತ ಕಾರ್ಯಪ್ರವೃತ್ತ, ಅಶಕ್ತ ವಾಗ್ಪಂಡಿತ" ಖಂಡಿತ ಅಲ್ಲವೆಂಬ ದೃಢಭರವಸೆ ನನಗುಂಟು. ಏಕೆಂದರೆ ಇಂದಿಗೂ ನಾನು ಚಾರಣಪ್ರಿಯ ಮತ್ತು ಭಾಷಣಾದೂರ ಆಗಿದ್ದೇನೆ. ಚಾರಣದ ಸಿಹಿಕಹಿಗಳನ್ನು ಪ್ರತಿಯೊಬ್ಬನೂ ಪ್ರತ್ಯಕ್ಷ ಪ್ರಯೋಗದಿಂದಲೇ ಅನುಭವಿಸಬೇಕು – ಗ್ರಂಥವಾಚನದಿಂದ ಇಲ್ಲವೇ ಭಾಷಣಶ್ರವಣದಿಂದ ಅಲ್ಲ. ಆದ್ದರಿಂದ 'ಚಾರಣ'ದ ಮೊದಲ ಪಾಠ "ನಡೆದು ನೋಡೈ, ನೀಂ ಕೊಡಗಿನ ಬೆಡಗಂ." ಈ ಕವಿವಾಣಿಯಲ್ಲಿ 'ಕೊಡಗು' ಪದ ಸಮಗ್ರ ನಿಸರ್ಗವನ್ನು ಪ್ರತೀಕಿಸುತ್ತದೆ.

ಅಂದ ಹಾಗೆ ಇಂಗ್ಲಿಷಿನ trekking ಪದಕ್ಕೆ ಸಂವಾದಿಯಾಗಿ 'ಚಾರಣ' ಪದ ಕನ್ನಡದಲ್ಲಿ ಬಳಕೆಗೆ ಬಂದಿರುವುದು ಈಚಿನ ವರ್ಷಗಳಲ್ಲಿ ಮಾತ್ರ. ಆದರೆ ಸ್ವತಃ ಈ ಪದ ಕನ್ನಡ ವಾಙ್ಮಯದಲ್ಲಿ ತೀರ ಹಳೆಯದು. ಕಿಟ್ಟೆಲ್ ಪ್ರಕಾರ ಚಾರಣವೆಂದರೆ "wandering; a strolling actor; a bard; a celestial singer; a panegyrist of the gods" ಇತ್ಯಾದಿ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು (೧೯೭೭) ಇನ್ನೂ ಹೆಚ್ಚಿನ ಛಾಯೆಗಳನ್ನು ಬಿಂಬಿಸುತ್ತದೆ: "ಸಂಚಾರ; 'ಚಂಡಶಾಸನಂ ಚಾರಣದಾಸಿಯಿಂ ನುಡಿಸಲ್ಕೆ'; 'ಈತನನಂತರಿಕ್ಷದೊಳ್ ಕರಗಳನೆತ್ತಿ ಹಾಯುಂಪಿಸಿಯೆಂದರೆ ಕೀರ್ತಿಸರಲ್ತೆ ಚಾರಣರ್'; ದೇವಗಾಯಕ; ಗಗನಗಾಮಿ ಮುನಿ" ಇತ್ಯಾದಿ. ನಿಸರ್ಗವನ್ನು ಅನುಭವಿಸಿ ಅನ್ವೇಷಿಸಿ ಅರಿತು ಆನಂದ ಪಡುವುದೇ ಚಾರಣ.

ಇಂದಿನ ನಗರ ಜೀವನದ ಶ್ವಾಸಬಂಧಕ ಕೃತಕ ಪರಿಸರದಲ್ಲಿ ಮುರುಟುತ್ತಿರುವ ಮಕ್ಕಳಿಗೆ, ಇತರ ದಿಗ್ಬಂಧಿತ ಅಥವಾ ಸೀಮಿತ ಕ್ರೀಡೆಗಳಂತೆ, ಚಾರಣವೂ ಒಂದು ಶಿಸ್ತುಬದ್ಧ ಕವಾಯತು ಆಗಿದೆ. ಇದರ ಅಂಧ ವಿಧಿನಿಯಮಗಳ ಯಾಂತ್ರಿಕ ಪಾಲನೆ. ಇಂಥ ನೀರಸ ಏಕತಾನತೆ ಪಸರಿಸುವುದು ಆನಂದವನ್ನಲ್ಲ, ಬಿಡಚಲನ್ನು. ಬಹು ಹಿಂದೆ, ೧೯೨೦ರ ದಶಕದಲ್ಲಿ ಕೊಡಗಿನ ಶಿಶುಗಳಾಗಿ ಬೆಳೆಯುತ್ತಿದ್ದ ನನಗೂ ನನ್ನ ಓರಗೆಯವರಿಗೂ ಚಾರಣ, ಈ ಪದದ ವ್ಯುತ್ಪತ್ತಿಯಾಗಲೀ ಅರ್ಥಬಾಹುಳ್ಯವಾಗಲೀ ಗೊತ್ತಿರದೆ, ದೈನಂದಿನ ಅನಿವಾರ್ಯ ಉಲ್ಲಾಸದಾಯಕ ಆವಶ್ಯಕತೆಯಾಗಿತ್ತು. ನಡೆಯುವುದರ ಹೊರತು ಇತರ ಚಲನಮಾಧ್ಯಮಗಳು ನಮಗೆ ಅಲಭ್ಯ. ಮನೆಯಿಂದ ಶಾಲೆಗೆ ಹೋಗಿಬರಬೇಕಾದರೆ ಅಥವಾ ಬಂಧುಮಿತ್ರರಲ್ಲಿಗೆ ಭೇಟಿನೀಡಬೇಕಾದರೆ ಬೆಟ್ಟವೇರಿ ತಪ್ಪಲಿಳಿದು ಕಣಿವೆ ದಾಟಿ ಬಯಲು ಹಾಯ್ದು ಹೊಳೆಯಾನೀಸಿ ಸಾಗುವುದೊಂದೇ ರಾಜ ಮಾರ್ಗ, ಠೀವಿ ಮಾರ್ಗ ಕೂಡ!

ಠೀವಿ ಮಾರ್ಗ? ಹೌದು, ಅಲ್ಲೊಂದು ಸ್ಪರ್ಧೆ ತಂತಾನೇ ಏರ್ಪಡುತ್ತಿತ್ತು: ಎಷ್ಟು ಶೀಘ್ರವಾಗಿ ನಾನು ಈ 'ಹಾದಿದೂರ'ವನ್ನು ಕ್ರಮಿಸಬಲ್ಲೆ? ಈ ಕಡಿದು ಗುಡ್ಡ ಏರಬಲ್ಲೆ? ಅಥವಾ ಗುರಿಮುಟ್ಟಿ ಹಿಂತಿರುಗಬಲ್ಲೆ? ವ್ಯಕ್ತಿ

ತನ್ನ ಅರಿವಿಗೆ ಬಾರದೆ ನಿಸರ್ಗದ ಜೊತೆ ಹೂಡುವ ಪೈಪೋಟಿ ಇದು. ಇದರಿಂದ ಆತನಿಗೆ ತನ್ನ ಸಾಮರ್ಥ್ಯ ದೌರ್ಬಲ್ಯಗಳ ಅರಿವು ಮೂಡುವುದರ ಜೊತೆಗೆ ನಿಸರ್ಗದ ವಿಧಿ ನಿಯಮ ಸೂತ್ರಗಳಿಗೆ ಇಣುಕುನೋಟವೂ ಲಭಿಸುವುದು, ಸ್ನೇಹಮನೋವೃತ್ತಿ (team spirit) ವರ್ಧಿಸುವುದು. ಎಂದರೆ 'ಚಾರಣ'ದ ಎರಡನೆಯ ಸಾರ: "ಇಳಿ ನೀರಿಗೆ, ತಳ ಶೋಧಿಸು." ಇದರ ಅರ್ಥ: ಆದಿಗ್ರಂಥವಾದ ನಿಸರ್ಗದ ಅರ್ಥಪೂರ್ಣ ವಾಚನವೇ ಚಾರಣ. ಹೀಗಲ್ಲದೆ ಯಾವುದೇ ಮನುಷ್ಯಕೃತ ಗ್ರಂಥ ಪಠಣ ಅಥವಾ ಇತರರ ಅನುಭವ ನಿರೂಪಣೆಯ ಶ್ರವಣದಿಂದೂ ನಮಗೆ ಚಾರಣದ ನಿಜ ಹೂರಣ ಒದಗಿಸದು.

ನನ್ನ ಬಾಲ್ಯದಿನಗಳಲ್ಲಿ ಶಿವರಾಮ ಕಾರಂತರ ಚಾರಣಪ್ರಯೋಗಗಳು ನಮಗೆಲ್ಲ ಉತ್ಸಾಹದ ಚಿಲುಮೆಗಳಾಗಿದ್ದುವು. ಅವರು ಪ್ರಕಟಿಸಿದ 'ಚಿತ್ರಮಯ ದಕ್ಷಿಣ ಕನ್ನಡ' (೧೯೫೪) ನಮ್ಮೆದುರು ಅಲಿಬಾಬನ ಗವಿಬಾಗಿಲು ತೆರೆದು ಒಳಗಿನ ಅನರ್ಘ್ಯ ರತ್ನಗಳನ್ನು ಅನಾವರಣಗೊಳಿಸಿತ್ತು. ಸಹಜವಾಗಿ ಅಂದು ನನ್ನಂಥ ಅನುಭವಶೂನ್ಯ ಆದರೆ ಉತ್ಸಾಹಪೂರ್ಣ ಬಾಲಕರು ಚಾರಣದ ಬಗ್ಗೆ ಅತೀವ ಆಸಕ್ತಿ ತಳೆದೆವು. ಅವರು ಪುತ್ತೂರಿನಿಂದ ನಡೆದು ಕುದುರೆಮುಖ ಶಿಖರ ಏರಿದರೆ ನಾವು ಮಡಿಕೇರಿಯಿಂದ ಹೊರಟು ಕೋಟೆಬೆಟ್ಟ ಹತ್ತಿದೆವು, ತಲಕಾವೇರಿಗೆ ನಡೆದೆವು, ತಡಿಯಂಡಮೋಳುವಿನ ನೆತ್ತಿಗೆ ಲಗ್ಗೆ ಹಾಕಿದೆವು ಇತ್ಯಾದಿ. ಈ ದಿಶೆಯಲ್ಲಿ ಕಾರಂತರ 'ಮರಳಿ ಮಣ್ಣಿಗೆ' ಮತ್ತು 'ಬೆಟ್ಟದ ಜೀವ' ಹಾಗೂ ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆನಾಡಿನ ಚಿತ್ರಗಳು' ನಮ್ಮ ಮುಂದೆ ನೂತನ ರಸಲೋಕವನ್ನೇ ಬಿತ್ತರಿಸಿದುವು. ಇತರರು ಸಾಧಿಸಿದ್ದನ್ನು ನಾವು ಸಾಧಿಸಬೇಕು, ಇತರರಿಗಿಂತ ಎದ್ದು ಕಾಣುವಂಥ ಏನನ್ನಾದರೂ ನಾವು ಪ್ರದರ್ಶಿಸಬೇಕು — ಇವೇ ನಮ್ಮ ಪ್ರೇರಕ ಸ್ವಪ್ನಗಳು. ಇಂಥ ಎಲ್ಲ ಸಾಹಸಗಳೂ ಆರಂಭದಲ್ಲಿ ಒಬ್ಬೊಬ್ಬರ ಹುಚ್ಚಿನ ಅಥವಾ ಕೆಚ್ಚಿನ ಫಲವಾಗಿ ಮೈದಳೆದುವು ನಿಜ. ಆದರೆ ಅನುಭವ ಅತಿಶೀಘ್ರದಲ್ಲಿ ನಮಗೆ ಕೆಲವು ಮೂಲಪಾಠಗಳನ್ನು ಬೋಧಿಸಿತು.

ಬೆಟ್ಟದ ಬುಡದಲ್ಲಿ ನಿಂತು ಕೊಡಿಯತ್ತ ದಿಟ್ಟಿ ಹಾಯಿಸಿ. ಆ ಭವ್ಯತೆಯ ಎದುರು ನಾವೆಂಥ ಕ್ಷುದ್ರ ಪ್ರಾಣಿ ಎಂಬ ಅರಿವು ಒಡನೆ ನಮಗೆ ಸ್ಫುರಿಸಿದುದು. ಇದರ ಫಲವಾಗಿ ನಮ್ಮಲ್ಲಿ ಮೂಡಬೇಕಾದದ್ದು ವಿನಯ — ಭಯವಲ್ಲ, ಅಹಂಕಾರವಲ್ಲ, ಮೂರ್ಖಧೈರ್ಯವೂ ಅಲ್ಲ. ವಿನಯದಿಂದ ನಡೆಯುವುದೆಂದರೆ ನಿಸರ್ಗದ ವಿಧಿನಿಯಮಗಳಿಗೆ ಅನುಸಾರವಾಗಿ ಚಾರಣವಿಧಾನವನ್ನು ಅಳವಡಿಸುವುದೆಂದರ್ಥ. ಹೀಗಲ್ಲದೆ ನಾವು ಭಯಪಟ್ಟರೆ ಉತ್ತರಕುಮಾರರಾಗುವೆವು, ಅಹಂಕಾರದಿಂದ ಹೂಂಕರಿಸಿದರೆ ಕೈಲಾಸವೆತ್ತಹೋದ ರಾವಣನಾಗುವೆವು (ವಿಂಶತಿಕರ), ಮೂರ್ಖಧೈರ್ಯದಿಂದ ಈ ದುಸ್ಸಾಹಸಕ್ಕೆ ದುಮುಕಿದರೆ "ನೀರೊಳಗಿರ್ದುಂ ಬೆಮರ್ದ" ಉರಗಪತಾಕ ದುರ್ಯೋಧನನಾಗುವೆವು. ಚಾರಣ ಕಲಿಸಿದ ಮೂರನೆಯ ಪಾಠವಿದು: "ನಿಸರ್ಗದ ಜೊತೆ ಸ್ಪರ್ಧೆ ಸುತರಾಂ ಸಲ್ಲ."

One-up-manship ಎಂಬ ಒಂದು ಇಂಗ್ಲಿಷ್ ಪದವಿದೆ — "ನಾ ಮೊದಲು'

ಅಥವಾ "ನಾನೇ ಮೊದಲು" ಎಂಬ ಅಹಂಕಾರದ ವಿಕಟ ಪ್ರದರ್ಶನ, ಸ್ವಾರ್ಥದ ವಿಕೃತ ಬಾಹ್ಯರೂಪ, ಮತ್ತು ಗರ್ವದ ನಗ್ನ ಮುಖ. "ನಾವು ಎಲ್ಲ ರೀತಿಗಳಲ್ಲೂ ಇತರರಿಗಿಂತ ಶ್ರೇಷ್ಠ" ಎಂಬ ಬಗೆ. ನಾವು ಹತ್ತು ಜನ ಒಂದು ತಂಡವಾಗಿ ಚಾರಣ ತೊಡಗುತ್ತೇವೆ. ಇಲ್ಲಿ ಅಗ್ಗದ ಪ್ರವೃತ್ತಿ one-up-manship ಹಣುಕಿದ್ದಾದರೆ ಅದರ ಮೊದಲ ಬಲಿ ಶುದ್ಧ ಚಾರಣವೇ. ಸಾಮೂಹಿಕ ಸಾಹಸದಲ್ಲಿ ನಾನುತನ ನಶಿಸಿ ಚಾರಣದ ಯಶಸ್ಸೊಂದೇ ಗಮ್ಯವಾಗಬೇಕು. ಮೌಂಟ್ ಎವರೆಸ್ಟ್ ಶಿಖರದ ಮೇಲೆ ಮೊದಲು ನಿಂತದ್ದು ತೇನ್‌ಸಿಂಗ್ ನಾರ್ಕೆಯೋ ಎಡ್ಮಂಡ್ ಹಿಲರಿಯೋ, ಚಂದ್ರನನ್ನು ಮೊದಲು ಸ್ಪರ್ಶಿಸಿದ್ದು ನೀಲ್ ಆರ್ಮ್‌ಸ್ಟ್ರಾಂಗೋ ಮೈಕೇಲ್ ಆಲ್ಡ್ರಿನ್ನೋ ಮುಖ್ಯವಲ್ಲ — ಆ ದುರ್ಗಮಾಭೇದ್ಯ ಸಾಹಸದಲ್ಲಿ ಮಾನವ ಎಂದು ಹೀಗೆ ಜಯಶೀಲನಾದ, ಅದರಿಂದ ಅನುಗತವಾಗುವ ಪಾಠಗಳೇನು, ಮುಂದಿನ ನಡೆ ಏನು ಇವು ಮಾತ್ರ ಲಕ್ಷ್ಯಾರ್ಹ. ಅಂದ ಮೇಲೆ 'ಚಾರಣ'ದಿಂದ ನಾವು ಕಲಿಯುವ ನಾಲ್ಕನೆಯ ಪಾಠ: "ಚಾರಣದ ಯಶಸ್ಸು ಶಿಸ್ತು, ಸೌಹಾರ್ದ ಮತ್ತು ಸ್ವಾರ್ಥರಾಹಿತ್ಯ ಎಂಬ ಮೂರು ಪ್ರಧಾನ ಪೂರಕ ಗುಣಗಳ ಅಂತರವರ್ತನೆಯನ್ನು ಅವಲಂಬಿಸಿದೆ."

ಇವೆಲ್ಲ ಪಾಠಗಳನ್ನು ಅನುಭವದಿಂದ ಕಲಿತು ಇನ್ನು ಗುರುತರ ಸಾಹಸಗಳಿಗೆ ಸಿಗದದ್ದಾಯಿತು. ಈಗ ನನ್ನ ಅನುಭವದ ಉಗ್ರಾಣದಿಂದ ಮೂರು ಪ್ರಮುಖ ಘಟನೆಗಳನ್ನು ಇವು ಬಿತ್ತರಿಸುವ ಸಾರ್ವತ್ರಿಕ ಸಂದೇಶದ ಸಲುವಾಗಿ ಉದಾಹರಿಸುತ್ತೇನೆ.

⊛ ಕಾಲೇಜ್ ಉಪನ್ಯಾಸಕನೂ ಎನ್‌ಸಿಸಿ ಅಧಿಕಾರಿಯೂ ಆಗಿದ್ದ ನನ್ನ ಹಿರಿತನದಲ್ಲಿ ಸುಮಾರು ೨೦ ವಿದ್ಯಾರ್ಥಿ-ಕ್ಯಾಡೆಟ್‌ಗಳ ತಂಡ ನಾಲ್ಕು ದಿನಗಳ ಚಾರಣಕ್ಕೆ ಮುಂದಾಯಿತು. ಪೂರ್ವಸಿದ್ಧ ಕ್ರಮದಂತೆ ನಮ್ಮ ಆತಿಥೇಯರು ಚಾರಣಮಾರ್ಗದಲ್ಲಿದ್ದ ಕೃಷಿಕಗೃಹಸ್ಥರು. ಅವರೆಲ್ಲರೂ ಪ್ರೀತಿಯಿಂದ ಆ ಕೈಂಕರ್ಯ ಸಲ್ಲಿಸಲು ಮುಂಬಂದವರು. ಇಂಥ ಒಬ್ಬರ ಮನೆಯಲ್ಲಿ, ಮರೋಪಚಾರಕ್ಕೆ ಸರಿಯಾಗಿದ್ದ ಭೋಜನ ಮುಗಿದನಂತರ, ಆ ಸಭ್ಯರು ಉಪಚಾರ ಒಂದು ಮಾತು ನುಡಿದರು: "ನಮ್ಮ ಅಡುಗೆ ನಿಮಗೆ ಹಿಡಿಸಿತೇ!" ನಮ್ಮ ತಂಡದ ಒಬ್ಬ ಕ್ಯಾಡೆಟ್ ಹೇಳಿದ: "ಎಲ್ಲ ಸರಿ ಸ್ವಾಮೀ! ಒಂದಿಷ್ಟು ಖಾರ ಇದ್ದಿದ್ದರೆ...." ಆ ಅಧಿಕಪ್ರಸಂಗ ಅಸಭ್ಯನನ್ನು ಆಗಿಂದಾಗಲೇ ತಂಡದಿಂದ ಬರಖಾಸ್ತು ಮಾಡಿಬಿಟ್ಟೆ. ಪಾಠವಿದು: "ಅಸಭ್ಯವರ್ತನೆ 'ಚಾರಣ'ದ ಮಾರಣಹೋಮಕ್ಕೆ ಕಾರಣವಾಗುತ್ತದೆ."

⊛ ಯಾವುದೇ ಸಾಮೂಹಿಕ ಸಾಹಸದ ವೇಳೆ ವ್ಯಕ್ತಿಯ ಮತ್ತು ತಂಡದ ಪ್ರಥಮ ಶತ್ರು, ನಿಮ್ಮ ಊಹೆಯಂತಲ್ಲದೇ, ನೀರು. ಒಂದು ಶಿಬಿರದಲ್ಲಿ ಭಾಗವಹಿಸುತ್ತಿದ್ದಾಗ ನನ್ನ ತಂಡದ ಕ್ಯಾಡೆಟ್‌ಗಳಿಗೆ ಕಡ್ಡಾಯವಾಗಿ ಅಪ್ಪಣೆ ವಿಧಿಸಿದ್ದೆ: "ನನ್ನ ಅನುಮತಿ ಇರದೇ ಯಾರೂ ಸ್ನಾನಕ್ಕೆ ಹೋಗತಕ್ಕದ್ದಲ್ಲ." ಆದರೆ ಆ ಒಂದು ಅಪರಾಹ್ನ ನಮ್ಮ ಶಿಬಿರದ ವರಿಷ್ಠ ನಾಯಕರ ನೇರ ಹುಕುಂ ಪ್ರಕಾರ ಎಲ್ಲ ತಂಡಗಳವರೂ ಹೊಳೆಗೆ ಮೀಯಲೆಂದು ಧಾವಿಸಿದರು. ಈ ವಿಚಾರ ನನಗೆ ತಿಳಿಯುವ ಮೊದಲೇ ಒಬ್ಬ ಕ್ಯಾಡೆಟ್ ನೀರಿನಲ್ಲಿ ಮುಳುಗಿರುವನೆಂಬ ಘೋರ ವಾರ್ತೆ ಬಂದು ಇರಿಯಿತು. ಒಂದೇ ನೆಗೆತಕ್ಕೆ ಹೊಳೆದಂಡೆ ತಲುಪಿದಾಗ ಕಂಡದ್ದೇನು?

ಶಿಸ್ತಿನ ತಿಬಾಲಮ್ಮನ ಬದಲು ಕೋಲಾಹಲದ ಪಾತ್ರ, ಮತ್ತು ಈ ಗೊಂದಲದ ನಡುವೆ ಸುವ್ಯವಸ್ಥಿತವಾಗಿ ನಿಂತು ನನ್ನ ಬರವನ್ನು ಕಾಯುತ್ತಿದ್ದ ನಮ್ಮ ತಂದೆ. ಪಾಠ ಇದು: "ಶಿಖರದ ಯಶಸ್ಸಿಗೆ ಶಿಸ್ತಿನ ಪೂರ್ವಸಿದ್ಧತೆ ಅನಿವಾರ್ಯ."

⊛ ಆಗ ನಾನು ಮೂವತ್ತರ ವಯಸ್ಸಿನವನಿರಬೇಕು. ಮಡಿಕೇರಿಯಲ್ಲಿದ್ದೆ. ಊರ ಸುತ್ತಲಿನ ಎಲ್ಲ ಕಾಫಿ ತೋಟಗಳೂ ನನಗೆ ಅಂಗೈಗೆರೆಗಳಷ್ಟೇ ಸುಪರಿಚಿತ. ನನ್ನ ಗೆಳೆಯರು — ಸರ್ಕಾರಿ ಉನ್ನತ ಅಧಿಕಾರಿಗಳು — ಹಲವರು ತಮ್ಮನ್ನು ನಿಶಾನಿಮೊಟ್ಟೆ ಶಿಖರಕ್ಕೆ ಕರೆದೊಯ್ಯಬೇಕೆಂದು ದುಂಬಾಲುಬಿದ್ದರು. ಸ್ಥೂಲದೇಹಿ, ಕೋಮಲಕಾಯ, ಕೂರ್ಮವೇಗಿ ಮತ್ತು ಹರಿಣಚಪಲ ಎಂಬ ನಾಲ್ವರು ಭಾಗಿಗಳಿಗೆ ಶಿಖರದ ಶಿಸ್ತು ಕುರಿತು ಪಾಠ ಮಾಡಿ ಒಂದು ಮುಂಜಾನೆ ರಂಗಪ್ರವೇಶಿಸಿಯೇ ಬಿಟ್ಟೆವು. ಸರಪಳಿಯ ತ್ರಾಣ ಅದರ ದುರ್ಬಲ ಕೊಂಡಿಯಲ್ಲಿದೆ; ತಂಡದ ವೇಗವನ್ನು ಅದರ ಕೂರ್ಮವೇಗಿ ನಿಯಂತ್ರಿಸುತ್ತಾನೆ; ಗೆದ್ದರೆ ನಾಯಕನನ್ನು ಯಾರೂ ಪ್ರಶಂಸಿಸರು; ಸೋತರೋ? ಎಲ್ಲರೂ ಆತನನ್ನು ದೂಷಿಸುವವರೇ; ನಿನಗೆ ನೀನೇ ಗೆಳೆಯ, ನಿನಗೆ ನೀನೇ — ಈ ಎಲ್ಲ ಪಾಠಗಳನ್ನೂ ಪ್ರತ್ಯಕ್ಷಭಾಗಿತ್ವದಿಂದ ಕಲಿತಿದ್ದ ನನಗೂ ಈ ಮಿತ್ರಚತುಷ್ಟಯದ ನಿಯಂತ್ರಣ ಅತಿ ಕಷ್ಟವಾಯಿತು. ನಿಶಾನಿಮೊಟ್ಟೆ ಏರಿದ್ದಾಯಿತು. ಪರ್ವತಾರೋಹಿಗಳಿಗೆ ಒಂದು ಸಂಗತಿ ಚೆನ್ನಾಗಿ ತಿಳಿದಿರುತ್ತದೆ: ಆರೋಹಣ ಕಷ್ಟವಲ್ಲ, ಆದರೆ ಅವರೋಹಣ ಅತಿ ಅಪಾಯಕಾರಿ. ನಿಶಾನಿಮೊಟ್ಟೆ ಇಳಿಯುವಾಗ ನಾನು ಉದ್ದೇಶಪೂರ್ವಕ ಕೂರ್ಮವೇಗಿಯನ್ನು ಮುಂದೆ ಬಿಟ್ಟು ಹರಿಣಚಪಲನನ್ನು ಕೊನೆಯಲ್ಲಿ ನನ್ನ ಜೊತೆ ನಿಲುಗೊಳಿಸಿ "ಮಂದನಡೆ ಮುಂದೆ" ಎಂದು ಆಣತಿ ನೀಡಿದೆ. ಆದರೆ ಹರಿಣಚಪಲ ನನ್ನ ಆದೇಶ ಉಲ್ಲಂಘಿಸಿ ಆ ಕಡಿದು ಬರೆಯ ಅಂಚಿಗೆ ನೇರ ಹಾದಿಯಲ್ಲಿ ನೆಗೆದೇ ಬಿಟ್ಟ. ಏನಾಯಿತೆಂದು ನೋಡುವಷ್ಟರಲ್ಲಿ ಆತ ದೃಷ್ಟಿದೂರನಾಗಿದ್ದ, ಆಗ ಕೇಳಿದ್ದು "ನಾರಾಯಣ ರಾವ್, ನಾ—ರಾ—..." ಹುಟ್ಟಿಕೊಂಡವನ ಆಕ್ರಂದನ, ಮುಳುಗುವವನ ನಾರಾಯಣಜಪ, ಮಾಯಾಹರಿಣದ "ಹಾ ಲಕ್ಷ್ಮಣಾ!" ನಿನಾದ. ಅರಣ್ಯದ ಗುಪ್ತಗಾಡಿನಲ್ಲಿ ಬೈಲದಾರಿ ನೇರದಾರಿ ಮುಂತಾದ ಮಿಥ್ಯಾದಾರಿಗಳು ಮರಣಕ್ಕೆ ರಹದಾರಿಗಳು. ಆತ ಬರೆಯಂಚಿನಲ್ಲಿ ಪಾಚಿ ಪ್ರಪಾತದ ಕೊಳ್ಳಕೊಟ್ಟೆಯ ಮೇಲೆ ಎಮ್ಮೆ ನೆಗೆದಂತೆ ಕೆಡೆದಿದ್ದ. ಬದುಕಿ ಬಂದ. ಅದ್ಯಂದ ಮಹಾಸಾಹಸಿ ಅರ! ಅದರಿಂದ ಎರಡನೆಯ ಪಾಠ: "ಶಿಖರದ ನಿರ್ವಹಣೆಯಲ್ಲಿ ನಿಷ್ಠುರ ನಿರಂಕುಶತೆ ಅನಿವಾರ್ಯ."

ಸ್ನೇಹಿತರೇ! ವ್ಯಕ್ತಿ ಇಲ್ಲಿ ಇದ್ದಾನೆ, ನಿಸರ್ಗ ಅಲ್ಲಿ ಇದೆ, ಇಲ್ಲಿ ಇದೆ, ಎಲ್ಲೆಲ್ಲಿಯೂ ಇದೆ — ಮನುಷ್ಯಕೃತ ವಿಕೃತ ನಗರಗಳ ಹೊರತಾಗಿ. ಅಲ್ಲಿರುವುದು ವನಶ್ರೀ, ಇಲ್ಲಿರುವುದು ಬರಶ್ರೀ ಯಾನೆ concrete jungle. ವ್ಯಕ್ತಿ–ನಿಸರ್ಗ ಅನ್ಯೋನ್ಯ ಅಂತರಕ್ರಿಯೆಯೇ ಪಾಠ. ನಿಮ್ಮ ನಿಮ್ಮ ಶಿಸ್ತು, ಬದ್ಧ ಪ್ರಾಮಾಣಿಕ ಪ್ರಯತ್ನಾನುಸಾರ ನಿಮಗೆ ಆನಂದಲಭ್ಯವಾಗುತ್ತದೆ. ಅತಿಯಶಸ್ಸಿನ ಹಾಲಾಹಲ ಘೂರ್ಣಿಸುವಾಗ ಅದನ್ನು ಕೊರಳಲ್ಲಿ ಧರಿಸುವ ನೀಲಕಂಠರೂ ಯಶಸ್ಸಿನ ಅಮೃತ ಪ್ರವಹಿಸುವಾಗ ಅದನ್ನು ಇತರರಿಗೆ ಹಂಚುವ ಮೋಹಿನಿಯೂ ನೀವಾಗಬೇಕು. ಒಟ್ಟಾಗಿ ನಡೆಯುವುದರಲ್ಲಿ ನಿಜ ಆನಂದವಿದೆಯೇ ಹೊರತು ತುಳಿಯುವುದರಲ್ಲಿ ಅಲ್ಲ — ಬದುಕೇ

ಒಂದು ಬೃಹತ್ಕಾರ್ಯವೆಂಬುದನ್ನು ನೀವು ಅಂಗೀಕರಿಸುವಿರಾದರೆ.

ಸಮಾರೋಪವಾಗಿ ಒಂದು ಎಚ್ಚರಿಕೆ ಮಾತು. ಮೌಲ್ಯಗಳು ತೀವ್ರವಾಗಿ ಕುಸಿದಿರುವ ಈ ದಿನಗಳಲ್ಲಿ 'ಚಾರಣ'ವೂ ಒಂದು ಉದ್ಯಮವಾಗಿದೆ ಎಂಬುದು ನನಗೆ ತಿಳಿದಿದೆ. ಎಲ್ಲ ಹಣ, ಅಧಿಕಾರ, ಸವಲತ್ತು, ದವಲತ್ತು, ಪ್ರಚಾರ ಮುಂತಾದ ಸ್ವಾರ್ಥಬಂಧಿತ ಕೃತಕ ತಂತ್ರಗಳು 'ಚಾರಣ'ದ ಹೆಸರಿನಲ್ಲಿ ಮೆಲ್ಲನುಸುಳುತ್ತಿವೆ. ಇಲ್ಲಿ ಚಾರಣದ ಹರಣ ಮಾಡಲು ಮರಣ ಒಪ್ಪುವರು. ಯಾವ ಪತ್ರಿಕಾ ಹೇಳಿಕೆಯಲ್ಲಿ 'ಚಾರಣ' ಕುರಿತು ಸಮ್ಮೇಳನ ನಡೆಸಿದರು, ಯಾವ ಮಂತ್ರಿ ಮಹೋದಯರು ಎಂಥ ವಂದಿ ಮಾಗಧರಿಂದ ಸನ್ಮಾನಿತರಾಗಿ ಎಷ್ಟು ನುಡಿಮುತ್ತುಗಳನ್ನು ಉದುರಿಸಿದರು, ಯಾವ ಯಾವ ಸಮೂಹ ಮಾಧ್ಯಮಗಳಲ್ಲಿ ಎಷ್ಟೆಷ್ಟು ಪ್ರಚಾರ ದೊರೆಯಿತು ಇವೇ ಮುಂತಾದವನ್ನು ನೀವು ಎಷ್ಟೆಷ್ಟು ದೂರವಿಡುತ್ತೀರೋ ನಿಮಗೆ ಚಾರಣಸುಖ ಅಷ್ಟಷ್ಟು ಹೆಚ್ಚು ಲಭಿಸುವುದು. ಇಂಥ ಪ್ರತ್ಯಕ್ಷ ಪ್ರಯೋಗಾಧ್ಯಯನವಾಗಿ ಈ ಸಮ್ಮೇಳನದ ಕಾರ್ಯಕಲಾಪಗಳು ಮುನ್ನಡೆಯಲಿ ಎಂದು ಹಾರೈಸುತ್ತೇನೆ. ರಾಘವಾಂಕನ ನುಡಿಗಳಲ್ಲಿ "ನಡೆವರೆಡಹದೆ ಕುಳಿತರೆಡಹುವರೇ!"

॥ ⊞ ⊞ ⊞ ॥ ಜಿ. ಟಿ. ನಾರಾಯಣರಾವ್

೨೦. ೧೦. ೧೯೯೪
೮ 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ
ಮೈಸೂರು ೫೭೦೦೨೩
ದೂರವಾಣಿ ೨೪೭೨೪೯

೨೧ ನವಂಬರ್ ೧೯೯೨ರಂದು ಬರೆಯುವವರು "ಕೊಡಗಿನ ಬೆಡಗು" (ತಲಕಾವೇರಿಯ ಬಳಿ - ಬ್ರಹ್ಮಗಿರಿಯ ಮೇಲಿನಿಂದ) ಎಂಬ ಪದ್ಯ ಬರೆದರು; ಅದರ ಎರಡು ಕಂದಪದ್ಯಗಳು:

ಗಿರಿಗಳ ಕಂದರಗಳ ನಿ
ರ್ಝರಗಳ ವಿಪಿನಗಳ ವಕ್ರಪಥಗಳ ದರಸುಂ
ದರ ಶಮಕರ ರೂಪಂಗಳ
ನಂಬೊಡೆ ನೀಂ ನಡೆದು ನೋಡು ಕೊಡಗಿನ ಬೆಡಗಂ
ಪ್ರಕೃತಿಯು ನರ್ತನರಂಗಂ
ಸುಕೃತಾತ್ಮರಿಗಿದುವೆ ಲೋಚನೋತ್ಸವರಂಗಂ
ಅಕೃತಕ ಕವಿತಾರಂಗಂ
ವಿಕೃತಮನಸ್ಕರಿಗಿದೊಂದು ಶಾಲೆಯಾರಂಗಂ

# ಋಷಿವಾಕ್ಯ ಮತ್ತು ವಿಜ್ಞಾನಕಲೆ

೧೯೬೦ ದಶಕದ ಆರಂಭ ವರ್ಷಗಳು. ಆಗ ಪ್ರೊಫೆಸರ ಕೆ. ದಾಮೋದರ ಕಿಣಿಯವರೂ ನಾನೂ ಮಂಗಳೂರು ಸೇಂಟ ಅಲೋಶಿಯಸ್ ಕಾಲೇಜಿನಲ್ಲಿ ಸಹೋದ್ಯೋಗಿಗಳಾಗಿದ್ದೆವು. ಮುಂದೆ ನಮ್ಮಿಬ್ಬರ ನೆಲೆಗಳು ಬೇರೆ ಬೇರೆ ಆದವಾದರೂ ವೃತ್ತಿ ಮತ್ತು ಪ್ರವೃತ್ತಿ ಮೊದಲಿನವೇ ಇದ್ದುದರಿಂದ ಪರಸ್ಪರ ಪ್ರೀತ್ಯಾದರಗಳು ಸದಾ ಹಸುರಾಗಿದ್ದುವು. ಈಗ ಅವರಿಲ್ಲ. ಆದರೆ

ಅವನ ಕೃತಿಯ ನೋಡಿ ಮಣಿವೆ
ಅವನ ದನಿಯ ಕೇಳಿ ನಲಿವೆ.....
ಅವನ ಲೀಲೆಗಳನು ಕಾಣ್ಬೆ
ಅವನ ಕಾಣೆವು (ಡಿವಿಜಿ)

If you seek a monument look around!
ಕಿಣಿಯವರು ಎನಗಿಂತ ಕಿರಿಯರಿಲ್ಲವೆಂಬಂತೆ ಬಾಳಿ ಇವರಿಗಿಂತ ಹಿರಿಯರಿಲ್ಲವೆಂಬುದನ್ನು ತಮ್ಮ ನಡೆನುಡಿ ಬಗೆಗಳಿಂದ ಜಗಕ್ಕೆ ಪ್ರತಿಪಾದಿಸಿದರು. ಶ್ರೀಯುತರ ಸ್ಮರಣಾರ್ಥ ಏರ್ಪಡಿಸಿರುವ ಈ ಸಮಾರಂಭಕ್ಕೆ ನನ್ನನ್ನು ಕರೆದು ಪ್ರೊಫೆಸರ ಕೆ. ದಾಮೋದರ ಕಿಣಿ ಮೆಮೋರಿಯಲ ಕಮಿಟಿಯ ಸದಸ್ಯರು, ಮುಖ್ಯವಾಗಿ ಪ್ರಾಂಶುಪಾಲ ಜೆ. ಎನ್. ಭಟ ಮತ್ತು ಪ್ರೊಫೆಸರ ಎಂ. ರಾಮಚಂದ್ರ, ನನ್ನನ್ನು ವಿಶೇಷವಾಗಿ ಗೌರವಿಸಿದ್ದಾರೆ. ಈ ಎಲ್ಲ ಮಿತ್ರರಿಗೂ ಹಾರ್ದಿಕ ನಮನ ಸಲ್ಲಿಸುತ್ತೇನೆ.

– ೨ –

ಸಮಿತಿ ನನಗೆ ಸೂಚಿಸಿದ ಶೀರ್ಷಿಕೆಗಳು ಮೂರು: ಋಷಿವಾಕ್ಯ ಮತ್ತು ವಿಜ್ಞಾನ ಕಲೆ, ಕಲಾನುರಕ್ತಿ ಮತ್ತು ವ್ಯಕ್ತಿತ್ವ ವೃದ್ಧಿ, ವೈಜ್ಞಾನಿಕ ಮನೋಧರ್ಮ. ಈ ಪ್ರತಿಯೊಂದೂ ನನಗೆ ಸಮ ಪ್ರೀತಿಯ ವಿಷಯವೇ. ಆದರೆ "ಋಷಿವಾಕ್ಯ ಮತ್ತು ವಿಜ್ಞಾನಕಲೆ" ಚಿಂತನೆಗೂ ಸಂಶ್ಲೇಷಣೆಗೂ ಹೊಸ ಸವಾಲು ಒಡ್ಡುದುದರಿಂದ ಇದನ್ನೇ ಆಯ್ದಿದ್ದೇನೆ. ಶೀರ್ಷಿಕೆಯ ಸೆಲೆ 'ಮಂಕುತಿಮ್ಮನ ಕಗ್ಗ'ದಲ್ಲಿದೆ:

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ
ಜಸವು ಜನಜೀವನಕೆ ಮಂಕುತಿಮ್ಮ

ಮೇಲುನೋಟಕ್ಕೆ ಮತ್ತು ಮೊದಲ ಓದಿಗೆ ತೀರ ಸರಳವೆನ್ನಿಸುವ ಈ ಸಾಲುಗಳಲ್ಲಿ ಡಿವಿಜಿಯವರು ನಮ್ಮ ಸಮಸ್ತ ಚಿಂತನಪ್ರಕಾರಗಳೂ ಊರ್ಧ್ವಗಾಮಿಗಳಾಗುವಾಗ ತಳೆಯುವ ಮೂರು ನಿರ್ದಿಷ್ಟ ಸ್ಥಿತಿಗಳನ್ನು

ಸೂತ್ರರೂಪದಲ್ಲಿ ಘೋಷಿಸಿದ್ದಾರೆ. ಇದರ ವ್ಯಾಖ್ಯಾನ ಮಾಡುವ ಮೊದಲು ಒಂದು ವೈಯಕ್ತಿಕ ಅನುಭವ ಹೇಳಬೇಕು.

೧೯೬೪–೬೯ ಅವಧಿಯಲ್ಲಿ ನಾನು ಬೆಂಗಳೂರುನಿವಾಸಿ ಆಗಿದ್ದೆ. ಭೌತಿಕವಾಗಿ ಡಿವಿಜಿ-ಆಶ್ರಮದ ಸಮೀಪದಲ್ಲಿದ್ದೆ. 'ಮಂಕುತಿಮ್ಮನ ಕಗ್ಗ' ಅಧ್ಯಯನಗೈದು, ಅದರಲ್ಲಿ ಸಮೃದ್ಧವಾಗಿ ಸ್ಫುರಿಸುವ ಆಧುನಿಕ ವೈಜ್ಞಾನಿಕ ರೂಪಕಗಳನ್ನು ಗುರುತಿಸಿ, ಅವುಗಳಿಗೆ ಟಿಪ್ಪಣಿ ಬರೆದು ಅವರಿಗೊಪ್ಪಿಸಿದೆ. "ನೀವು ಆಧುನಿಕ ವೈಜ್ಞಾನಿಕ ಪರಿಕಲ್ಪನೆಗಳನ್ನು (modern scientific concepts) ಚೆನ್ನಾಗಿ ಅರಿತವರಾಗಿರಬೇಕು!" ಈ ತೆರನಾಗಿ ನನ್ನ ಕುತೂಹಲ ವ್ಯಕ್ತಪಡಿಸಿದೆ.

ನನ್ನ ಈ ಅಯಾಚಿತ ಶಿಫಾರಸು ಅವರಿಗೆ ಅಪ್ರಿಯವಾಗಲಿಲ್ಲ ಎಂಬುದು ಅವರು ಬೀರಿದ ಮುಗ್ಧ ಮಂದಹಾಸದಿಂದ ಸ್ಪಷ್ಟವಾಯಿತು. ಅವರೆಂದರು: "ಅಪ್ಪಾ! ನಾನು ಕಾಲೇಜು ಮೆಟ್ಟಿಲು ಹತ್ತಿದವನಲ್ಲ. ಆದರೆ ಜೀವನಧರ್ಮ ಮತ್ತು ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದ ಸಮಸ್ತ ಚಿಂತನಪ್ರಕಾರಗಳಲ್ಲಿಯೂ ಆಸಕ್ತಿ ತಳೆದವನು. ಈ ದಿಶೆಯಲ್ಲಿ ನನ್ನ ಅನುಭವಸಾರವನ್ನು ಯಥಾಮತಿ ಯಥಾಶಕ್ತಿ ನಿರೂಪಿಸಿದ್ದೇನೆ, ಅಷ್ಟೆ. ಇದು ಆಧುನಿಕ ವಿಜ್ಞಾನರಂಗದಲ್ಲಿಯೂ ಪ್ರಸ್ತುತವಾಗಿದೆಯೆಂದರೆ ನನಗಾದ ಸತ್ಯದರ್ಶನ, ಭಾಗಶಃವೇ ಆದರೂ, ಮತ್ತು ನಾನದನ್ನು ಅರಿತು ಅದಕ್ಕೆ ನೀಡಿರುವ ವ್ಯಾಖ್ಯಾನ ತಪ್ಪಾಗಿಲ್ಲವೆಂದು ತಿಳಿಯುತ್ತೇನೆ. ಜ್ಞಾನಮೇರು ಅಭಿಯಾನಕ್ಕೆ ಚಿಂತನೆಗಳು ಎತ್ತು ಮಾರ್ಗಗಳು ಅಷ್ಟು. ಈಗ, ತತ್ತ್ವಶಾಸ್ತ್ರ ಮತ್ತು ವಿಜ್ಞಾನ ತಮ್ಮತಮ್ಮ ಪಥಗಳಲ್ಲಿ ಆರೋಹಿಸುತ್ತಿರುವಾಗ, ಉಭಯರಿಗೂ ಗೋಚರವಾಗುವ ಕೆಲವು ಸಾಮಾನ್ಯ ದೃಶ್ಯಗಳಿರುತ್ತವೆ. ಈ ಕಾರಣದಿಂದಲೇ ತತ್ತ್ವಶಾಸ್ತ್ರದಲ್ಲಿಯ ಒಂದು ದರ್ಶನ ವಿಜ್ಞಾನದಲ್ಲಿಯೂ, ವಿಲೋಮವಾಗಿ, ವಿಜ್ಞಾನದಲ್ಲಿಯ ಒಂದು ದರ್ಶನ ತತ್ತ್ವಶಾಸ್ತ್ರದಲ್ಲಿಯೂ ಧ್ವನ್ಯರ್ಥ ನೀಡುವುದಾಗಿದೆ."

– ೨ –

ನಾನು ಮೂಲತಃ ವಿಜ್ಞಾನದ ವಿದ್ಯಾರ್ಥಿ. ಎಂದೇ ವಿಜ್ಞಾನದ ಪಥದಲ್ಲಿ ಗಮಿಸುವಾಗ "ಋಷಿವಾಕ್ಯ ಮತ್ತು ವಿಜ್ಞಾನಕಲೆ" ನನಗೇನು ಧ್ವನ್ಯರ್ಥ ಕೊಡುವುದೆಂಬುದನ್ನು ವಿವರಿಸಲು ಪ್ರಯತ್ನಿಸುತ್ತೇನೆ.

"ಕಲಾತ್ಮಕ ಮತ್ತು ವೈಜ್ಞಾನಿಕ ಅನುಭವಗಳಿಗೆ ಸಾಮಾನ್ಯವಾಗಿರುವುದೇನು ?" ಎನ್ನುವ ಪ್ರಶ್ನೆಗೆ ವಿಜ್ಞಾನಿ-ಋಷಿ ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ಬರೆದಿರುವ ಉತ್ತರ: "ಎಲ್ಲಿ ಪ್ರಪಂಚ ನಮ್ಮ ವೈಯಕ್ತಿಕ ಆಶೆ ಆಕಾಂಕ್ಷೆಗಳ ರಂಗಭೂಮಿ ಆಗುವುದು ಕೈದಾಗುವುದೋ ಎಲ್ಲಿ ನಾವು ಇದರೆದುರು ಮುಕ್ತ ಜೀವಿಗಳಾಗಿ ಇದನ್ನು ಮೆಚ್ಚುತ್ತ, ಪ್ರಶ್ನಿಸುತ್ತ ಮತ್ತು ವೀಕ್ಷಿಸುತ್ತ

ನಿಲ್ಲುವೆವೋ ಅಲ್ಲಿ ನಾವು ಕಲೆಯ ಮತ್ತು ವಿಜ್ಞಾನದ ಪ್ರಪಂಚವನ್ನು ಪ್ರವೇಶಿಸಿರುತ್ತೇವೆ. ನೋಡಿದ್ದನ್ನು ಅನುಭವಿಸಿದ್ದನ್ನು ತರ್ಕಶಾಸ್ತ್ರದ ಪರಿಭಾಷೆಯಲ್ಲಿ ಚಿತ್ರಿಸಿದ್ದಾದರೆ ಆಗ ನಾವು ವಿಜ್ಞಾನದಲ್ಲಿ ಉದ್ಯುಕ್ತರಾಗಿರುತ್ತೇವೆ. ಜಾಗೃತ ಮನಸ್ಸಿಗೆ ಅಪ್ರವೇಶ್ಯವಾಗುವ ಅಂತರ್ಬೋಧೆಯಿಂದ (intuition) ಅರ್ಥಪೂರ್ಣವಾದದ್ದೆಂಬುದಾಗಿ ಪರಿಗಣಿಸಲ್ಪಡುವ ರೂಪಗಳ ಮೂಲಕ ಅದನ್ನು ಸಂವಹನಿಸಿದ್ದಾದರೆ ಆಗ ನಾವು ಕಲೆಯಲ್ಲಿ ಮಗ್ನರಾಗಿರುತ್ತೇವೆ. ವೈಯಕ್ತಿಕ ಕಾಳಜಿ ಮತ್ತು ಸಂಕಲ್ಪಗಳಿಗೆ ಅತೀತವಾದ ಆ ಯಾವುದೋ ಒಂದರ ಬಗೆಗೆ ಪ್ರೇಮನಿಷ್ಠೆಯೇ ಇವೆರಡಕ್ಕೂ ಸಾಮಾನ್ಯವಾದದ್ದು."

ಸಂಗೀತದಿಂದ ವಿಜ್ಞಾನದ ಮೇಲೆ ಏನಾದರೂ ಪ್ರಭಾವ ಇದೆಯೇ ಎಂಬ ಪ್ರಶ್ನೆಗೆ ಐನ್‌ಸ್ಟೈನ್ ನೀಡಿದ ಉತ್ತರ: "ಸಂಗೀತ ಸಂಶೋಧನ-ಕಾರ್ಯವನ್ನು ಪ್ರಭಾವಿಸದು. ಆದರೆ ಎರಡೂ ಪೋಷಿತವಾಗುವುದು ಹಂಬಲಿಕೆಯ ಅದೇ ಸೆಲೆಯಿಂದ. ಇವು ಒದಗಿಸುವ ವಿಮೋಚನಾನುಭವ ಕಾರಣವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿದೆ."

"ನೋಡಿದ್ದನ್ನು ಅನುಭವಿಸಿದ್ದನ್ನು" ಸಂವಹನಿಸುವ ಮಾಧ್ಯಮವನ್ನು ಅವಲಂಬಿಸಿ ವಿಜ್ಞಾನ, ಕಲೆ ಎಂಬ ಎರಡು ಚಿಂತನಪ್ರಕಾರಗಳು ವರ್ಧಿಸುತ್ತವೆ. ಅಂದರೆ ಗಮ್ಯ ಒಂದೇ, ಗಮನಪಥ ಎರಡು. ಅಂದ ಮೇಲೆ ಉಭಯಸಾಮಾನ್ಯ ಲಕ್ಷಣಗಳು ಇರಬೇಕಲ್ಲವೇ? ಅರ್ಥಾತ್ ವಿಜ್ಞಾನದಲ್ಲಿ ಕಲೆ, ಅಂತೆಯೇ, ಕಲೆಯಲ್ಲಿ ವಿಜ್ಞಾನ ಅಂತರ್ಗತವಾಗಿರಬೇಕಲ್ಲವೇ? ಈ ಪ್ರಶ್ನೆಗಳಿಗೆ ಉತ್ತರ ಅರಸಲು ವಿಜ್ಞಾನದ ಮೂಲಪ್ರೇರಣೆಯನ್ನು ತಿಳಿಯುವುದು ಅಗತ್ಯ.

— ೪ —

ವಿಶ್ವದ ಅನಂತಾಲ್ಪ ಅಂಶವಾಗಿ ಮಾನವ ಇದ್ದಾನೆ. ಈತ ವಿಶ್ವ ವಿದ್ಯಮಾನಗಳನ್ನು ಬೆರಗುಗಣ್ಣುಗಳಿಂದ ನೋಡಿ ಅವುಗಳ ಹಿನ್ನೆಲೆಯಲ್ಲಿರಬಹುದಾದ ನಿಯಮಗಳ ಶೋಧನೆಗೆ ಮುಂದಾಗುತ್ತಾನೆ. ವಿಜ್ಞಾನದ ಆರಂಭವಿದು. ವಿಶ್ವ ಒಡ್ಡುವ ಉದ್ದೀಪನೆಗೆ (stimulus) ಮಾನವಮತಿ ಪ್ರದರ್ಶಿಸುವ ಅನುಕ್ರಿಯೆಯೇ (response) ವಿಜ್ಞಾನ. ಇದು ಮಾನವಮತಿ-ವಿಶ್ವ ಅಂತರಕ್ರಿಯೆಯ (interaction) ಶಿಶು. ನಮ್ಮ ಇಂದ್ರಿಯಗ್ರಾಹ್ಯ ಘಟನೆಗಳಿಗೆ ಕಾರಣವಾಗಿರುವ ಚೇತನ, ಬಲ ಅಥವಾ ಪ್ರಭಾವದ ಶೋಧನೆ ವಿಜ್ಞಾನದ ಲಕ್ಷ್ಯ. ಇದನ್ನು ಸಾಧಿಸುವಲ್ಲಿ ಮಾನವ ಅನುಸರಿಸುವ ಮಾರ್ಗಕ್ಕೆ ವೈಜ್ಞಾನಿಕ ವಿಧಾನ (scientific method) ಎಂದು ಹೆಸರು. ವಿಶ್ವನಿಯಮ ಶೋಧನಾರ್ಥ ಮಾನವಮತಿ ನಿರ್ಮಿಸುವ ಯುಕ್ತಪಥವಿದು. ಇಲ್ಲಿ, ವಿಶ್ವವೇ ಅಂತಿಮ ನಿರ್ಣಾಯಕ, ಮಾನವ ಅಲ್ಲ.

ವೈಜ್ಞಾನಿಕ ವಿಧಾನದ ವಿವಿಧ ಹಂತಗಳಿವು: ಲಕ್ಷ್ಯ ವಿದ್ಯಮಾನ ಕುರಿತಂತೆ ಸಾಧ್ಯವಾಗುವಷ್ಟು ವ್ಯಾಪಕವಾಗಿ ಮಾಹಿತಿಸಂಗ್ರಹಣೆ; ಈ ಕಚ್ಚಾ ಸರಕನ್ನು ವ್ಯವಸ್ಥಿತವಾಗಿ ಅಳವಡಿಸಿ ಇದರ ವಿಶ್ಲೇಷಣೆ; ಹೀಗೆ ಲಭಿಸಿದ ವಿಶ್ಲೇಷಿತ ಮಾಹಿತಿಗೆ ಅಥವಾ ಸಾರಕ್ಕೆ ಒಪ್ಪುವ ವಾದದ (hypothesis) ಮಂಡನೆ — ಇದೊಂದು ಭಾವನಾತ್ಮಕ ಪ್ರತಿರೂಪ (conceptual model), ಯಾವ ಚೇತನದ ಕಾರಣವಾಗಿ ಈ ಕಾರ್ಯ ಸಂಭವಿಸಿರಬಹುದು ಎಂಬುದನ್ನು ಅಂತರ್ಬೋಧೆ ಮತ್ತು ಪ್ರತಿಭೆ ನೆರವಿನಿಂದ ಊಹಿಸುವುದು; ಈ ವಾದವನ್ನು ಪುನಃ ಪುನಃ ಲಕ್ಷ್ಯ ವಿದ್ಯಮಾನಕ್ಕೆ ಅನ್ವಯಿಸಿ ವಾದದ ಸಿಂಧುತ್ವವನ್ನು ದೃಢೀಕರಿಸುವುದು — ಪ್ರಾಯೋಗಿಕ ತಪಾಸಣೆ. ಈ ಕೊನೆಯ ಹಂತದಲ್ಲಿ ತೇರ್ಗಡೆ ಆಗುವ ವಾದವನ್ನು ಸಿದ್ಧಾಂತ (theory) ಎಂದು ಅಂಗೀಕರಿಸಲಾಗುವುದು. ಇದು ಸಮಸ್ಯೆಯ ಜ್ಞಾತ ಮುಖಗಳೆಲ್ಲವುಗಳಿಗೂ ತಾರ್ಕಿಕ ಮತ್ತು ಪ್ರಾಯೋಗಿಕ ವಿವರಣೆ ಕೊಡುವುದರ ಜೊತೆಗೆ ಅದರ ಅಜ್ಞಾತ ಮುಖಗಳ ಕಡೆಗೆ ಬೆಳಕನ್ನು ಬೀರುವುದು — ಅಂದರೆ ವಿಜ್ಞಾನಿಗೆ ಮುಂದಿನ ಹಾದಿಯನ್ನು ತೋರಿಸುತ್ತದೆ ಕೂಡ.

ವಿಶ್ವರಹಸ್ಯಗಳನ್ನು ಅರಿಯಲು ನಮಗಿರುವ ಏಕೈಕ ವಿಶ್ವಾಸಾರ್ಹ ಮಾರ್ಗ ವೈಜ್ಞಾನಿಕ ವಿಧಾನ — ಜ್ಞಾತದಿಂದ ಅಜ್ಞಾತದೆಡೆಗಿನ ತಾರ್ಕಿಕ-ಪ್ರಾಯೋಗಿಕ ಪಥಗಮನ.

— ೫ —

ವೈಜ್ಞಾನಿಕವಿಧಾನದಲ್ಲಿ ಮೂರು ಆರೋಹಣಸ್ಥಿತಿಗಳನ್ನು ಗುರುತಿಸಬಹುದು:

೧ ವಿದ್ಯಮಾನದ ಇಲ್ಲವೇ ಸಮಸ್ಯೆಯ ಅರಿವು. ವಿಶ್ವದ ಭೌತ ವೀಕ್ಷಣೆ ಇಲ್ಲಿಯ ನಡೆ, ನಮ್ಮ ಇಂದ್ರಿಯಗಳೇ ಗ್ರಾಹಕಗಳು. ಇದನ್ನು ಮೂರ್ತ ಅಥವಾ ಭೌತ ಸ್ಥಿತಿಯೆಂದು ಕರೆಯೋಣ.

೨ ಮೂರ್ತಸ್ಥಿತಿಯಲ್ಲಿ ಸಂಗ್ರಹಿಸಿದ ಮಾಹಿತಿಗಳಿಂದ ಸಾರವನ್ನು ಆಸವಿಸಲು ಮಾನವಮತಿ ಪ್ರಯೋಗಿಸುವ ಪ್ರತಿಭಾನ್ವಿತ ಊಹೆ ಅಥವಾ ವಾದ. ಇದನ್ನು ತಾರ್ಕಿಕ ಸ್ಥಿತಿಯೆಂದು ಹೆಸರಿಸೋಣ.

೩ ಈ ವಾದದ ಚಿಗಿಹಲಗೆ ಮೇಲೆ ನಿಂತು ಅಜ್ಞಾತದ ಅಮೂರ್ತತೆಯತ್ತ ನೆಗೆತ. ಕುವೆಂಪುವಾಣಿಯಲ್ಲಿ "ಮೀರುವೆನು ವಾಗ್ದೇವಿಯಮೃತರಸನೆಯ ಲಸನ್ನಾವೆಯಂ..... ಮೀರುವೆನು ಮತಿಚಿದ್ರಸಾಬ್ಧಿಯಂ." ಇದನ್ನು ಅಮೂರ್ತ ಅಥವಾ ~~ಸಾರ್ವತ್ರಿಕ~~ ತಾತ್ವಿಕ ಸ್ಥಿತಿಯೆಂದು ಗುರುತಿಸೋಣ.

ಈ ~~ಸಾರ್ವತ್ರಿಕ~~ ತಾತ್ವಿಕ ಸ್ಥಿತಿ ಮಾನವಪ್ರತಿಭೆಯ ಪರಮೋನ್ನತ ಸಿದ್ಧಿ. ಜ್ಞಾನಮೇರುವಿನೆಡೆಗಿನ ನಿಜವಾದ ಆರೋಹಣ ಆರಂಭವಾಗುವುದು ಇಲ್ಲಿ. ಇಲ್ಲಿಂದ ಮೇಲಕ್ಕೆ ವಿಜ್ಞಾನ, ಕಲೆ ಎಂಬ ದ್ವೈತ ಅಳಿದು

ವಿಜ್ಞಾನಕಲೆ ಎಂಬ ಅದ್ವೈತ ಮಾತ್ರ ಉಳಿಯುತ್ತದೆ — ಋತಚಿದ್ವ್ಯಾಪ್ತಿಗೆ ಸೇರುವಾಗ ನದಿಗಳ ಅನೇಕತೆ ಮಾಸುವಂತೆ.

ವಿಜ್ಞಾನದ ಈ ಸಾಗರೋಲ್ಲಂಘನ ಅಥವಾ ಸೀಮೋಲ್ಲಂಘನ ಸಾಹಸ ಕುರಿತು ಗಣಿತವಿದ ರಿಚರ್ಡ್ ಕೂರಂಟ್ (೧೮೮೮-೧೯೭೨) ಬರೆದಿದ್ದಾರೆ: "ನಿಗಮನ (deduction) ಹೇಗೆ ಅಂತರ್ಬೋಧೆಯಿಂದ ಪ್ರೋತ್ಸಾಹಿಸಲ್ಪಡತಕ್ಕದ್ದೋ ಹಾಗೆ ಉತ್ತರೋತ್ತರ ಸಾರ್ವತ್ರೀಕರಣಾಗ್ರ್ಯಯುಚೇಕೆನ್ನುವ ಅಭಿಪ್ರೇರಣೆ (the impulse to progressive generalization) ವರ್ಣಮಯ ವಿವರ ಕುರಿತ ಗೌರವ ಪ್ರೀತಿಗಳಿಂದ ಪಾಕಗೊಂಡಿರತಕ್ಕದ್ದು, ಮತ್ತು ಸಂತುಲಿತವಾಗಿರತಕ್ಕದ್ದು. ಬಿಡಿ ಸಮಸ್ಯೆಯನ್ನು ಘನ ಸಾರ್ವತ್ರಿಕ ಸಿದ್ಧಾಂತಗಳ ವಿಶೇಷ ನಿದರ್ಶನವೆಂಬ ಕೆಳದರ್ಜೆಗೆ ಇಳಿಸುವುದು ಸಲ್ಲ. ವಾಸ್ತವವಾಗಿ, ವಿಶಿಷ್ಟವಾದುದರ ಪರಿಗಣನೆಯಿಂದ ಸಾರ್ವತ್ರಿಕ ಸಿದ್ಧಾಂತಗಳು ಉದ್ಭವಿಸುತ್ತವೆ. ಇವು ತಳದಲ್ಲಿರುವ ಇನ್ನಷ್ಟು ವಿವಿಕ್ತ ಪದಾರ್ಥವನ್ನು ಹೆಕ್ಕಿ ವ್ಯವಸ್ಥೆಗೊಳಿಸಲು ನೆರವಾಗದಿದ್ದರೆ ಅರ್ಥಶೂನ್ಯವೆನ್ನಿಸುತ್ತವೆ. ಸಾರ್ವತ್ರಿಕತೆ ಮತ್ತು ವೈಯಕ್ತಿಕತೆ (generality and individuality), ನಿಗಮನ ಮತ್ತು ನಿರ್ಮಾಣ (deduction and construction), ತರ್ಕ ಮತ್ತು ಕಲ್ಪನೆ (logic and imagination) ಇವುಗಳ ನಡುವಿನ ಅಂತರವರ್ತನೆಯೇ ಗಣಿತದ ಗಹನ ಸತ್ತ್ವ. ನಿರ್ದಿಷ್ಟ ಸಾಧನೆಯೊಂದರ ತಿರುಳಿನಲ್ಲಿ ಗಣಿತದ ಈ ಮುಖಗಳ ಪೈಕಿ ಒಂದು ಅಥವಾ ಇನ್ನೊಂದು ಇರುವುದು ಶಕ್ಯ. ಸುದೀರ್ಘ ವ್ಯಾಪ್ತಿ ಇರುವ ಒಂದು ವಿಕಸನದಲ್ಲಿ ಇವೆಲ್ಲವೂ ಭಾಗಗಳಾಗಿರುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ, ಇಂಥ ಒಂದು ಅಭಿವೃದ್ಧಿ ಅಥವಾ ವಿಕಸನ "ಮೂರ್ತ" ನೆಲದಲ್ಲಿ ("concrete" ground) ಆರಂಭವಾಗಿ ಅಮೂರ್ತೀಕರಣದ (abstraction) ಮೂಲಕ ತಳಭಾರವನ್ನು ತೊರೆದು ಹಾರಿ, ನೌಕಾಯಾನ (navigation) ಮತ್ತು ವೀಕ್ಷಣೆ (observation) ಸುಲಭವಾಗುವ ಅಸಾಂದ್ರವಾಯುವಲಯದ ಉನ್ನತ ಸ್ತರಗಳಿಗೆ ಉತ್ತರಣಗೊಂಡಿರುವುದು. ಈ ಆರೋಹಣದ ಬಳಿಕ, ಹೊಸತಾಗಿ ಸರ್ವೇಕ್ಷಿಸಲಾದ, ಬಿಡಿ "ವಾಸ್ತವತೆ"ಯ (individual "reality") ನಿಮ್ನ ತಳಗಳಲ್ಲಿದ್ದು ನಿರ್ದಿಷ್ಟ ಗುರಿಗಳನ್ನು ತಲಪುವ ನಿರ್ಣಾಯಕ ಪರೀಕ್ಷೆ ಎದುರಾಗುವುದು. ಸಂಕ್ಷೇಪವಾಗಿ, ಅಮೂರ್ತ ಸಾರ್ವತ್ರಿಕತೆಯೆಡೆಗಿನ ಆರೋಹಣ ಮೂರ್ತ ಮತ್ತು ವಿಶಿಷ್ಟದಿಂದ (concrete and specific) ತೊಡಗಿ ಅಲ್ಲಿಗೇ ಮರಳತಕ್ಕದ್ದು."

ಉದಾಹರಣೆಗೆ, A ಮತ್ತು B ಎಂಬ ಎರಡು ಬಿಂದುಗಳನ್ನು ಜೋಡಿಸುವ ಸರಳರೇಖೆ ABಯನ್ನು ಎಳೆಯೋಣ. ಇದು ಮೂರ್ತ ಚಿತ್ರ, ಅಥವಾ ವಾಸ್ತವತೆ. ಕಣ್ಣಿಗೆ ಕಾಣುತ್ತದೆ. ತಾತ್ತ್ವಿಕವಾಗಿ AB

ಸರಳರೇಖೆಯನ್ನು ಉಭಯದಿಕ್ಕುಗಳಲ್ಲಿಯೂ (AB ಮತ್ತು BA) ಮಿತಿ ಇಲ್ಲದೇ ವಿಸ್ತರಿಸಬಹುದು. ಆದರೆ ವ್ಯಾವಹಾರಿಕವಾಗಿ ಇದು ಕಾರ್ಯಸಾಧ್ಯವಲ್ಲ. ಈಗ, ಸರಳರೇಖೆಯ ಈ ಪರಿಕಲ್ಪನೆಯನ್ನು ಗಣಿತಭಾಷೆಗೆ ಅಮೂರ್ತೀಕರಿಸೋಣ. $y = mx + c$ ಎಂಬ ಸಮೀಕರಣ ಮೈದಳೆಯುವುದು. ಸುಂತ ಗಣಿತಮತಿ AB ವಾಸ್ತವತೆಯಲ್ಲಿ $y = mx + c$ ಅಮೂರ್ತತೆಯನ್ನು $y = mx + c$ ಅಮೂರ್ತತೆಯಲ್ಲಿ AB ವಾಸ್ತವತೆಯನ್ನು ಕಾಣುವುದು. ಇಷ್ಟೇ ಅಲ್ಲ. $y = mx + c$ ಸಮೀಕರಣವನ್ನು ಗಣಿತವ್ಯಾಕರಣಾನುಸಾರ ಅನ್ವೇಷಿಸಿದಾಗ ವಾಸ್ತವತೆ ಕುರಿತ ಅನೇಕ ಹೊಸಸಂಗತಿಗಳು ತಿಳಿಯುತ್ತವೆ. ಹೀಗೆ "ಅಮೂರ್ತ ಸಾರ್ವತ್ರಿಕತೆಯೆಡೆಗಿನ ಆರೋಹಣ ಮೂರ್ತ ಮತ್ತು ವಿಶಿಷ್ಟದಿಂದ ತೊಡಗಿ ಅಲ್ಲಿಗೇ ಮರಳುತ್ತದೆ."

— ೮ —

ವೈಜ್ಞಾನಿಕವಿಧಾನ ನಮಗೆ ಪ್ರದಾನಿಸಿದ ಮೂರು ಆರೋಹಣ ಸ್ಥಿತಿಗಳಿಂದ — ಮೂರ್ತ, ತಾರ್ಕಿಕ, ~~ಸಾರ್ವತ್ರಿಕ~~ ತಾತ್ವಿಕ — ಡಿವಿಜಿ ಮಂಕುತಿಮ್ಮನ ನುಡಿಚಿತ್ರವನ್ನು ಇನ್ನೊಮ್ಮೆ ಪರಿಶೀಲಿಸೋಣ:

ಹೊಸಚಿಗುರು ಹಳೆಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ
ಜಸವು ಜನಜೀವನಕೆ ಮಂಕುತಿಮ್ಮ

ಇಲ್ಲಿ ಡಿವಿಜಿಯವರು ಮೂರು ಉತ್ತರೋತ್ತರ ಸ್ಥಿತಿಗಳಲ್ಲಿ ಜೀವನ ಧರ್ಮವನ್ನೇ ವ್ಯಾಖ್ಯಿಸಿದ್ದಾರೆಂದು ನನಗೆ ಕಾಣುತ್ತದೆ.

೧ "ಹೊಸಚಿಗುರು ಹಳೆಬೇರು ಕೂಡಿರಲು ಮರಸೊಬಗು." ಇದು ಎಲ್ಲರಿಗೂ ಸುಲಭವಾಗಿ ಅನುಭವಗೋಚರವಾಗುವ ನೈಸರ್ಗಿಕ ವಾಸ್ತವತೆ. ಬೇರು ನೆಲದಲ್ಲಿ ಗಟ್ಟಿ ತಳಊರಿ ರಸ ಹೀರಿ ಸಸ್ಯಕ್ಕೆ ಪ್ರೋಚಾಗಿ ಊಡಿದ ಹೊರತು ಚಿಗುರು ಪಲ್ಲವಿಸದು, ಮತ್ತು ಇಂಥ ಪಲ್ಲವದ ದೃಶ್ಯ ಫಲ ಸೊಬಗು ಅಥವಾ ಚೆಲುವು ಎಂಬ ವಾಸ್ತವ ಚಿತ್ರ. ವೈಜ್ಞಾನಿಕ ವಿಧಾನದಲ್ಲಿಯ ಮೂರ್ತ ಸ್ಥಿತಿಗೆ ಇದು ಸಂವಾದಿಯಾಗಿದೆ.

೨ "ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ." ವ್ಯಕ್ತಿ ಸಾಮಾಜಿಕವಾಗಿ ಉತ್ಕರ್ಷಿಸಬೇಕಾದರೆ ಅನುಸರಿಸಬೇಕಾದ ವ್ಯಾವಹಾರಿಕ ನೀತಿ ಇದರಲ್ಲಿ ನಿಹಿತವಾಗಿದೆ. ನಮ್ಮ ಸಮಸ್ತ ಕಾರ್ಯಕಲಾಪಗಳೂ ನೀತಿ-ಪ್ರೀತಿ ಸಮನ್ವಯದಿಂದ ನಿಯಂತ್ರಿತವಾಗಿರತಕ್ಕದ್ದು — ಇದೇ ಧರ್ಮ, ವ್ಯಕ್ತಿ-ವ್ಯಕ್ತಿ ನಡುವಿನ ವರ್ತನೆ ಹೇಗಿರಬೇಕೆಂಬುದನ್ನು ವಿಧಿಸುವ ಸಂಹಿತೆ. ಪ್ರೀತಿರಹಿತ ನೀತಿ ಬರಡು — ಗೌತಮನಂತೆ; ನೀತಿರಹಿತ ಪ್ರೀತಿ ಕುರುಡು — ಧೃತರಾಷ್ಟ್ರನಂತೆ. ಸಂಚಿತಾನುಭವದಿಂದ ಪಾಠ ಕಲಿತು ವರ್ತಮಾನದಲ್ಲಿ ಕ್ರಿಯಾಶೀಲನಾಗಿ ಬಾಳು ಎನ್ನುವುದು

ಧ್ವನಿ. ಪ್ರಸಕ್ತ ಕಾಲದಲ್ಲಿ ಹಿಂದಿನವರ "ಹೊಸಬೆಳಕು" "ಹೊಸ ಯುಕ್ತಿ"ಯಾಗಿಯೂ "ಹಳೆಬೇರು" "ಹಳೆತತ್ತ್ವ"ವಾಗಿಯೂ "ಸೊಬಗು" "ಧರ್ಮ"ವಾಗಿಯೂ ರೂಪಾಂತರಗೊಂಡಿವೆ — ಮಹಾಕಾವ್ಯದ ಕುಂಚದ ಚಿತ್ರರೇಖೆಗಳು ಘನಧ್ವನಿಯಾಗಿ ಮಾರ್ಪಡುವಂತೆ! ಮೂರ್ತ ಸ್ಥಿತಿಯಿಂದ ತಾರ್ಕಿಕ ಸ್ಥಿತಿಗೆ ತೀರ ಸಹಜವಾಗಿ ಸಂಭವಿಸಿರುವ ಉತ್ತಾರಣ ಇದು.

೨ ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ ಜಸವು ಜನಜೀವನಕೆ." ಇಲ್ಲಿ ಶಾಸ್ತ್ರಕಲಾಸಂಪನ್ನ ಡಿವಿಜಿಯವರ ಚಿಂತನೆ ಮೂರ್ತ ಮತ್ತು ತಾರ್ಕಿಕ ಸ್ಥಿತಿಗಳೆರಡನ್ನೂ ಉತ್ತರಿಸಿ ಮೌಲ್ಯಗಳ ಹಾಗೂ ಅಮೂರ್ತತೆಯ "ಋತಚಿದ್ರಸಾಬ್ಧಿ"ಯಲ್ಲಿ ಲೀನವಾಗಿರುವುದನ್ನು ಕಾಣುತ್ತೇವೆ. "ಋಷಿವಾಕ್ಯ"ವೆಂದರೆ ಸಿದ್ಧಾಂತ, "ವಿಜ್ಞಾನಕಲೆ"ಯೆಂದರೆ ಮೂರ್ತವಿಜ್ಞಾನ ಅಮೂರ್ತ ಕಲೆಯಾಗಿ ಉತ್ತಾರಣಗೊಂಡಿರುವ ರಸಪಾಕ, ಮಾನವಚಿಂತನೆಯ ಪರಮೋನ್ನತ ಸಿದ್ಧಿ, ವಿಶ್ವವ್ಯಾಖ್ಯಾನ. ಜೀವನನಾಣ್ಯದ ಎರಡು ಮಗ್ಗುಲುಗಳಿವು: ಋಷಿವಾಕ್ಯ, ವಿಜ್ಞಾನಕಲೆ. ಋಷಿವಾಕ್ಯವಿಲ್ಲಿ ಶಾಸ್ತ್ರಾಲಂಬನಕ್ಕೆ ಸಂವಾದಿಯಾದದ್ದು, ವಿಜ್ಞಾನಕಲೆ ಅಂಕಿತಮೌಲ್ಯಕ್ಕೆ ಸಂವಾದಿಯಾದದ್ದು. ಇವೆರಡೂ ಮೇಳವಿಸಿದಾಗ ನಾಣ್ಯ ಶುಭ್ರವಾಗಿ ಚಲಾವಣೆಯಲ್ಲಿದ್ದು ಸಂಪತ್ತಿನ ವರ್ಧನೆಗೆ ಕಾರಣವಾಗುವುದು. "ಜನಜೀವನದ ಜಸ" ಅಥವಾ ಯಶಸ್ಸು ಇದೇ.

— ೨ —

ಹೀಗೆ ಮಂಕುತಿಮ್ಮವಾಣಿಯಿಂದ ಪ್ರೇರಿತರಾಗಿ ವಿಜ್ಞಾನಮಾರ್ಗದಿಂದ ಕಲಾಮಾರ್ಗದೊಂದಿಗೆ "ಋತಚಿದ್ರಸಾಬ್ಧಿ"ಯಲ್ಲಿ ಲೀನರಾಗಿರುವ ನಾವು ಇದರಲ್ಲೇ ಮೇಲೆ ಮೇಲೆ ಏರಲು ಪ್ರಯತ್ನಿಸೋಣ.

ಮೂಲಪ್ರಶ್ನೆ: "ವಿಜ್ಞಾನಿ ನಿಸರ್ಗಾಧ್ಯಯನಮಗ್ನನಾಗುವುದು ಏಕೆ?" ಗಣಿತವಿದ ಆನ್ರೀ ಪ್ವಾನ್‌ಕಾರೆ (೧೮೫೪-೧೯೧೨) ಈ ಪ್ರಶ್ನೆಗೆ ಸಮರ್ಪಕ ಉತ್ತರವಿತ್ತಿದ್ದಾರೆ: "ನಿಸರ್ಗಪ್ರಯೋಜನಕಾರಿ ಎಂಬ ಕಾರಣದಿಂದ ವಿಜ್ಞಾನಿ ಅದನ್ನು ಅಧ್ಯಯನಗೈಯ್ಯುವುದಿಲ್ಲ; ಅವನು ಅದನ್ನು ಅಧ್ಯಯನಗೈಯ್ಯುವುದು ಅದರಲ್ಲಿ ಅವನಿಗೆ ಆನಂದ ಲಭಿಸುವುದರಿಂದ; ಅದರಲ್ಲಿ ಅವನಿಗೆ ಆನಂದ ಲಭಿಸುವುದು ಅದು ಸುಂದರವಾಗಿರುವುದರಿಂದ. ನಿಸರ್ಗ ಸುಂದರವಾಗಿರದಿದ್ದರೆ ಅದನ್ನು ತಿಳಿಯುವುದು ನಿಷ್ಪ್ರಯೋಜಕವಾಗಿರುತ್ತಿತ್ತು; ನಿಸರ್ಗವನ್ನು ತಿಳಿಯುವುದು ನಿಷ್ಪ್ರಯೋಜಕವಾಗಿದ್ದರೆ ಜೀವನ ಅರ್ಥಶೂನ್ಯವಾಗಿರುತ್ತಿತ್ತು. ಇಂದ್ರಿಯಗಳಿಗೆ ಎದ್ದು ಕಾಣುವ ಸುಂದರತೆಯನ್ನು — ಅಂದರೆ ಗುಣಗಳ ಮತ್ತು ತೋರಿಕೆಗಳ ಬಾಹ್ಯ ಸುಂದರತೆಯನ್ನು — ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲವೆಂಬುದು ಸ್ಪಷ್ಟ; ಆ ಸುಂದರತೆಯನ್ನು ಕಡೆಗಣಿಸುವೆನೆಂದಲ್ಲ; ಅದೆಂದೂ ನನ್ನ ಉದ್ದೇಶವಲ್ಲ; ಆದರೆ ಅದಕ್ಕೆ ವಿಜ್ಞಾನದ

ಜೊತೆ ಏನೂ ವ್ಯವಹಾರವಿಲ್ಲ; ಬದಲು, ನನ್ನ ಮನಸ್ಸಿನಲ್ಲಿರುವುದು ಭಾಗಗಳ ಸುಸಂಗತ ಮೇಳನದಿಂದ ಲಭಿಸುವ ಮತ್ತು ಪರಿಶುದ್ಧ ಪ್ರತಿಭೆ ಗ್ರಹಿಸುವ ಆ ಗಹನತರ ಸೌಂದರ್ಯ." ("...... I mean that profounder beauty which comes from the homogeneous order of the parts, and which a pure intelligence can grasp.")

"ಭಾಗಗಳ ಸುಸಂಗತ ಮೇಳನ"ವನ್ನು "ಅಂಗಸೌಷ್ಠವ" ಎನ್ನುವುದುಂಟು

ಚಲನಶೀಲ ಗೋಚರ ಜಗತ್ತಿನ ತಳದಲ್ಲಿರಬಹುದಾದ – ಇದೆಯೆಂದು ನಂಬಲಾದ – ಶಾಶ್ವತ ಸೌಂದರ್ಯದ ಅನ್ವೇಷಣೆ ವಿಜ್ಞಾನಿಯ ವಾಂಛೆ:

ಮನಕೆ ತೋರ್ವ ಸೊಬಗನೆಲ್ಲ
ತನಗೆ ತುಷ್ಟಿಯಪ್ಪ ತೆರದಿ
ಜನಕೆ ನುಡಿಯಲರಿತ ಸುಕವಿ
ತಿಲಕನಾತನು
ಅಣುವಿನಿಂದ ಬರೆವ ಕಲೆಯ
ಕಲಿತನಾತನು (ಡಿವಿಜಿ)

ವಿಜ್ಞಾನಿಯ ಈ ಸೌಂದರ್ಯಾನ್ವೇಷಕ ದೃಷ್ಟಿಯನ್ನು ಸ್ಪಷ್ಟೀಕರಿಸುವ ಸಲುವಾಗಿ ಭೌತವಿಜ್ಞಾನಿ ರಿಚರ್ಡ್ ಪಿ. ಫೈನ್‌ಮನ್ (೧೯೧೮-೮೮) ಒಂದು ನಿದರ್ಶನ ನೀಡುತ್ತಾರೆ:

"ನನಗೊಬ್ಬ ಕಲಾವಿದ ಸ್ನೇಹಿತನಿದ್ದಾನೆ. ಅನೇಕ ಸಂದರ್ಭಗಳಲ್ಲಿ ಆತ ತಳೆಯುವ ಒಂದು ನಿಲುವನ್ನು ಮಾತ್ರ ನಾನು ಒಪ್ಪಲಾರೆ. ಸುಂದರ ಪುಷ್ಪವೊಂದನ್ನು ಈ ಕಲಾವಿದಮಿತ್ರ ಕೈಯ್ಯಲ್ಲಿ ಹಿಡಿದುಕೊಂಡು 'ನೋಡು, ಇದೆಷ್ಟು ಚೆಲುವಾಗಿದೆ!' ಎನ್ನುತ್ತಾನೆ. ನಾನು ಒಪ್ಪುತ್ತೇನೆ. ಅಲ್ಲಿಗೇ ಮಾತು ನಿಲ್ಲಿಸದೆ ಆತ ಮುಂದುವರಿದು ನನ್ನನ್ನು ಕುಟುಕುತ್ತಾನೆ: 'ಒಬ್ಬ ಕಲಾವಿದನಾಗಿ ನಾನಿದರ ಸುಂದರತೆಯನ್ನು ಆಸ್ವಾದಿಸಿ ಆನಂದಿಸಬಲ್ಲೆ. ಆದರೆ ಒಬ್ಬ ವಿಜ್ಞಾನಿಯಾಗಿ ನೀನು ಮಾಡುವುದೇನು? ಇದರ ಅಂಗೋಪಾಂಗಗಳನ್ನು ಛಿದ್ರಿಸಿ ಛೇದಿಸಿ ಸುಂದರತೆಯನ್ನು ಸಂಹರಿಸಿ ಇಡೀ ಚೆಲುವನ್ನು ವಿರೂಪಗೊಳಿಸುವುದು!' ಕಲಾವಿದನ ಮಾತು ಕುತರ್ಕ ಎಂಬುದು ಸುಸ್ಪಷ್ಟ. ಏಕೆಂದರೆ ಆತ ಕಾಣುವ ಸುಂದರತೆ [ಪ್ರಾನ್ಸ್ಟಾರೀ ಮಾತಿನಲ್ಲಿ 'ಬಾಹ್ಯಸುಂದರತೆ'] ಇತರ ಎಲ್ಲ ವ್ಯಕ್ತಿಗಳಿಗೂ ಲಭ್ಯವಿದೆ. ಆತನಷ್ಟು ಪರಿಷ್ಕೃತ ಸಂವೇದನೆ ನನಗಿಲ್ಲದಿದ್ದರೂ ನಾನು ಕೂಡ ಆತನಂತೆಯೇ ಆ ಹೂವನ್ನು ನೋಡಿ ಸಂತೋಷಿಸಬಲ್ಲೆ. ಆದರೆ ಅದೇ ವೇಳೆ ನಾನು ಹೂವಿನಲ್ಲಿ ಆತ ಕಾಣುವುದಕ್ಕಿಂತ ಅದೆಷ್ಟೋ ಅಧಿಕ ವಿವರಗಳನ್ನು ಗುರುತಿಸಿ ಸಂತೋಷಿಸಬಲ್ಲೆ: ಹೂವಿನ ಎಸಳುಗಳನ್ನು ನೇಯ್ದಿರುವ ಕೋಶಗಳು (cells),

ವರ್ಣಕಗಳ ವಿನ್ಯಾಸ, ತಳದಲ್ಲಿಯ ಅನುಪಾತಮಾನಗಳ ಅಳವಡಿಕೆ, ಇತ್ಯಾದಿ
[ಫ್ರಾನ್ಸ್ವಾರ್ ನುಡಿಯಲ್ಲಿ 'ಭಾಗಗಳ ಸುಸಂಗತ ಮೇಳನದಿಂದ ಉದಿಸುವ
ಮತ್ತು ಪರಿಶುದ್ಧ ಪ್ರತಿಭೆ ಗ್ರಹಿಸುವ ಆ ಗಹನತರ ಸೌಂದರ್ಯ.']
ನಿಸರ್ಗಶಿಲ್ಪಿಯ ಸುಂದರಕೃತಿ ಬಹಿರಂಗದಲ್ಲಿ ಮಾತ್ರವಲ್ಲ, ಅಂತರಂಗದ
ಸೂಕ್ಷ್ಮಾತಿಸೂಕ್ಷ್ಮ ವಿವರಗಳಲ್ಲಿಯೂ ಸೌಂದರ್ಯಭರಿತವಾಗಿದೆ."

ಹೀಗೆ ನಮ್ಮ ಉನ್ನತ ಬೌದ್ಧಿಕ ನೌಕಾಯನದಲ್ಲಿ ಹಲವಾರು ಸಾಮಾನ್ಯ
ಮತ್ತು ರೂಢ ಪದಗಳು ವಿಶಿಷ್ಟ ಪಾರಿಭಾಷಿಕಾರ್ಥಗಳನ್ನು ಮೈಗೂಡಿಸಿ-
ಕೊಂಡು ಲಕಲಕಿಸುತ್ತವೆ; ಮೂರನ್ನು ಇಲ್ಲಿ ವಿಶದವಾಗಿ ಪರಿಶೀಲಿಸಿದೆ.

೧ ಸುಂದರತೆ. ಇದು ಇಂದ್ರಿಯಗಳಿಗೆ ಎದ್ದು ಕಾಣುವ ಚೆಲುವು.
ಇಂಗ್ಲಿಷಿನಲ್ಲಿ the beautiful. "ಸುಂದರತೆಯ ತಳಹದಿಕೆ
ಗಣಿತ" ("Mathematics is the archetype of the
beautiful" — Kepler). ಎಲ್ಲಿ ಸುಂದರತೆ ಇದೆಯೋ ಅಲ್ಲಿ
ಗಣಿತವಿದ್ದೇ ಇದೆ ಎಂಬುದು ಇಂಗಿತ. ಎಲ್ಲಿ ಗಣಿತವಿದೆಯೋ ಅಲ್ಲಿ
ಸುಂದರತೆ ಇರಲೇಬೇಕು ಎಂಬುದು ವಿಜ್ಞಾನಿಯ ದೃಢ ಭರವಸೆ. ಈ
ನಿಲವಿನಿಂದ — ಅಂದರೆ ಗಣಿತವನ್ನು ಕೇವಲ ಬೌದ್ಧಿಕ ಕ್ರೀಡೆಯಾಗಿ
ಅಭಿವರ್ಧಿಸಿ ಲಭ್ಯಫಲಿತಾಂಶಗಳಿಗೆ ಸಂವಾದಿಯಾಗುವ ನೈಸರ್ಗಿಕ
ವಿದ್ಯಮಾನಗಳನ್ನು ಶೋಧಿಸುವ ನಿಲವಿನಿಂದ — ಮುನ್ನಡೆದ ವಿಜ್ಞಾನಿ
ಯಶಸ್ವಿಯಾಗಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ.

೨ ಸೌಂದರ್ಯ. ಇದು ಸುಂದರತೆಯ ತಳದಲ್ಲಿರುವ ಶಾಶ್ವತ
ಆಧಾರ. ಮಾನವನಿಗೆ ಅಗೋಚರ. ಆದರೆ ಇದ್ದೇ ಇದೆಯೆಂಬ ದೃಢ
ವಿಶ್ವಾಸ — ಕಾವೇರಿಗೆ ಬ್ರಹ್ಮಗಿರಿ ಹೇಗೆ ಹಾಗೆ ಸುಂದರತೆಗೆ ಸೌಂದರ್ಯ.
ಇಂಗ್ಲಿಷಿನಲ್ಲಿ beauty.

ಸುಂದರತೆಯೆನುವುದೇಂ? ಜನಕೆ ಮೈಮರೆಯುವಾ-
ನಂದದೊಳಮರುವುವೇಂ? ವಿಶ್ವಚೇತನದಾ
ಸ್ಪಂದನವೆ ಸೌಂದರ್ಯಮದುವೆ ಜೀವನಮೂಲ
ಬಂಧುರತೆ ಬೊಮ್ಮನದು ಮಂಕುತಿಮ್ಮ

ಆಂತರಂಗಿಕ "ಸೌಂದರ್ಯ"ದ ಬಾಹಿರಂಗಿಕ ಮುಖವೇ "ಸುಂದರತೆ."
ವಿಜ್ಞಾನಿಯೂ ಕಲಾವಿದ ದಾರ್ಶನಿಕರಂತೆ ಸೌಂದರ್ಯಾರಾಧಕ, ಸೌಂದರ್ಯಾ-
ನ್ವೇಷಕ ಮತ್ತು ಸೌಂದರ್ಯಲೋಲ. ಈ ಉನ್ನತ ಮತ್ತು ಅಮೂರ್ತ
ನೆಲೆಯಲ್ಲಿ, ಈ ಹಿಂದೆ ಹೇಳಿದಂತೆ, ವಿಜ್ಞಾನಕಲೆ ಅಥವಾ ಕಲಾವಿಜ್ಞಾನ
ಮಾತ್ರ ಇರುವುದು.

೩ ಸತ್ಯ. ಸೌಂದರ್ಯದ ಇನ್ನೊಂದು ರೂಪ ಅಥವಾ ಹೆಸರು.
ಇಂಗ್ಲಿಷಿನಲ್ಲಿ truth. ಜಾನ್ ಕೀಟ್ಸ್ (೧೭೯೫-೧೮೨೧) ಮಾತಿನಲ್ಲಿ

Beauty is truth.

truth beauty — that is all
Ye know on earth,
and all ye need to know

ಸೌಂದರ್ಯವೇ ಸತ್ಯ
ಸತ್ಯವೇ ಸೌಂದರ್ಯ — ~~ಅಷ್ಟೇ~~ ನಿನಗೆ
~~ನಿನಗೆ~~ ತಿಳಿದಿರುವುದೇ ಧರೆಯಲ್ಲಿ ಇಷ್ಟೇ
~~ಮತ್ತು~~ ನೀನು ತಿಳಿಯಬೇಕಾದ್ದು ~~ದ್ದೆಲ್ಲ ಕೂಡಾ~~ ಇಷ್ಟೇ

2 ಋತ. ಸತ್ಯದ ಬಾಹ್ಯ ಅಂದರೆ ಗೋಚರ ಮುಖವಿದು. ಇಂಗ್ಲಿಷಿನಲ್ಲಿ the true. ಈಶೋಪನಿಷತ್ತಿನಲ್ಲಿಯೂ ಶ್ಲೋಕ:

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಂ
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ
ಹೊನ್ನ ತಟ್ಟೆಯು ಕವಿದು, ಪೋಷಕನೆ, ಓ ಸೂರ್ಯ
ನಿನ್ನೊಳಿಹ ಸತ್ಯದಾನನವ ಮರೆಯಿಸಿದೆ
ನನ್ನಿಯಿಂ ತೆಗೆ ಅದನು; ಸತ್ಯದೊಳ್ ಮನವೆನಗೆ
ಎನ್ನ ಕಣ್ಣಿಗದ ತೋರು; ಧರ್ಮಬೀಜವದು (ಡಿವಿಜಿ)

“ಓ ಪೋಷಕನಾದ ಸೂರ್ಯನೇ, ಸತ್ಯದ ಮುಖವನ್ನು ನಿನ್ನ ಬಿಂಬದ ಚಿನ್ನದ ತಟ್ಟೆ ಮುಚ್ಚಿದೆ. ಸತ್ಯಧರ್ಮಾಪೇಕ್ಷೆಯಾದ ನನ್ನ ಕಣ್ಗೆ ಸತ್ಯ ಕಾಣುವಂತೆ ಆ ತಟ್ಟೆಯನ್ನು ನೀನು ತೆಗೆದು ಹಾಕು.” (ಡಿವಿಜಿಯವರ ವಿವರಣೆ)

ಇಲ್ಲಿ “ಸತ್ಯ” ಮತ್ತು “ಹೊನ್ನ ತಟ್ಟೆ” ಈ ಹಿಂದಿನ ವಿವರಣೆಯಲ್ಲಿಯ “ಸೌಂದರ್ಯ” ಮತ್ತು “ಸುಂದರತೆ” ಪರಿಕಲ್ಪನೆಗಳನ್ನು ಪ್ರತೀಕಿಸುತ್ತವೆ. ಶಾಶ್ವತ, ಶಿವ, ಅಂತರ್ಗತ, ಅಗೋಚರ ಪದಾರ್ಥವೇ “ಸತ್ಯ.” ಇದರ ವ್ಯತ್ಯಯ ಶೀಲ, ರುದ್ರ, ಬಹಿರ್ಗತ, ಗೋಚರ ಪದಾರ್ಥವೇ “ಋತ.” ಅಯಸ್ಕಾಂತ “ಸತ್ಯ,” ಕಾಂತತ್ವ “ಋತ.”

ಸೂಜಿಗಲ್ಲು ತಿರುಗತಿತ್ತ ಹೊಳೆವ್ಯಾಗ
ಸೂಜಿಯೊಂದು ತೇಲತಿತ್ತ ಹೊಳೆಯಾಗ (ಬೇಂದ್ರೆ)

ಇಲ್ಲಿ ಸೂಜಿಗಲ್ಲು “ಸತ್ಯ,” ಸೂಜಿ “ಋತ.”

ಈಗ, ಹೊನ್ನ ತಟ್ಟೆಯ ಮುಸುಕು ತೆಗೆದಾಗ ಮಾತ್ರ, ಅಂದರೆ ಋತದ ಕವಚ ಭೇದಿಸಿದಾಗ ಮಾತ್ರ, ಸತ್ಯದರ್ಶನವಾಗುತ್ತದೆ. ಋತದ ಅನ್ವೇಷಣೆ ವಿಜ್ಞಾನ. ವಿಜ್ಞಾನದ ಗಮ್ಯ ಕಲೆ. ಋಷಿವಾಕ್ಯ ವಿಶ್ವಸತ್ಯ ಕುರಿತದ್ದು. ಇದರತ್ತ ಗಮಿಸುವುದು ವಿಜ್ಞಾನದ ಕಾರ್ಯ.

(4) ಮೂರನೆಯ ಸ್ಥಿತಿ ಮಾನವನೆದುರು ಆದರ್ಶ, ಮೌಲ್ಯ ಅಥವಾ ಗಮ್ಯವನ್ನು ಒಡ್ಡುತ್ತದೆ: ಅದು ಇದೆ, ಆದರೆ ದೊರೆಯದು; ಅದು ಬರಸೆಳೆಯುತ್ತದೆ, ಆದರೆ ಕಾಣ ತಿಳಿಯದು; ಅದು ಸಾಗುತಿದೆ, ನಾವು ಗೆಲ್ಲಬೇಕು. ಅಂದರೆ, ಗಮ್ಯ-ಗಮನ ಸಂಬಂಧವಿದು. ಗಮನದಿಂದ ಗಮ್ಯವೋ ಗಮ್ಯದಿಂದ ಗಮನವೋ ಬೀಜವೃಕ್ಷ ನ್ಯಾಯದಂತೆ. ಮಾನವನ ಸಕಲ ಸೃಜನಶೀಲ ಕ್ರಿಯೆಗಳನ್ನು ಪ್ರೇರಿಸಿ ಪೋಷಿಸುವುದು ಈ ಗಮನ-ಗಮ್ಯ ಅಂತರಕ್ರಿಯೆ. ಇದೇ ಸಾಹಿತ್ಯ-ವಿಜ್ಞಾನಕಲೆ ಮೂಲ. ಇದರಿಂದಲೇ "ಜನವು ಜನಜೀವನಕೆ." ಗೋಪಾಲಕೃಷ್ಣ ಅಡಿಗರ ನುಡಿಯಲ್ಲಿ "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?"

ಕ್ರಮ್ಗೆ ತದ್ವಂತಿಕೆ: 'ಬಂದುದನು ಮುಟ್ಟದವರು, ನೆರೆ ಬಳಸಿಕೊಳ್ಳದವರು'

ಫಲವಾಗಿ ಇದು(ವಿಜ್ಞಾನ) ಕಲೆಯಾಗಿ ರೂಪಾಂತರಿಸಲ್ಪಡುತ್ತದೆ (metamorphosis). ಹೀಗೆ ಇವೆರಡು — ಸಾಹಿತ್ಯ ಮತ್ತು ವಿಜ್ಞಾನಕಲೆ — ಪರಸ್ಪರ ಪ್ರೇರಕ ಪೋಷಕವಾಗಿ "ಮೇಳವಿಸಿ ಜನಿಸು ಜನನೀವನಕೆ." ಆಗ ವ್ಯಕ್ತಿ ಆನಂದಲೋಲನಾಗುತ್ತಾನೆ:

ತಮೋಲೋಕತಿಮಿರವಳಿಯಲಿ,
ಪರಂಜ್ಯೋತಿ ಬೆಳಗಲಿ:
ಋತದ ಶಿವದ ಆನಂದದ
ಚಿದ್ಭೂತ ತೋಳ್ಗಳ (ಕುವೆಂಪು)

(*)

— ೮ —

ಖಭೌತವಿಜ್ಞಾನಿ ಎಸ್. ಚಂದ್ರಶೇಖರ್ (೧೯೮೦) ಬರೆದಿದ್ದಾರೆ: "This 'shuddering before the beautiful,' this incredible fact that a discovery motivated by a search after the beautiful in mathematics should find its exact replica in Nature, persuades me to say that beauty is that to which the human mind responds at its deepest and most profound. Indeed, everything I have tried to say in this connection has been stated more succinctly in the Latin mottos:

Simplex sigillum veri — The simple is the seal of the true.

and

Pulchritudo splendor veritatis — Beauty is the splendour of truth."

"ಗಣಿತದಲ್ಲಿ ಸುಂದರತೆಯ ಶೋಧನೆಗಾಗಿ ಪ್ರವರ್ತಿತವಾದ ಒಂದು ಆವಿಷ್ಕಾರ ನಿಸರ್ಗದಲ್ಲಿ ತನ್ನ ಯಥಾ ಪ್ರತಿರೂಪವನ್ನು ದರ್ಶಿಸಬಹುದೆಂಬ ಊಹಾತೀತ ಸಂಗತಿ — 'ಸುಂದರತೆಯ ಸಾನ್ನಿಧ್ಯದಲ್ಲಿ ವಿದ್ಯುದಾಲಿಂಗನಾನುಭವ — ಮಾನವಮತಿ ಇದರ ತೀರ ತಳದಲ್ಲಿ, ಮತ್ತು ಅತ್ಯಂತ ಪ್ರಗಲ್ಭತೆಯಲ್ಲಿ ಸೌಂದರ್ಯಕ್ಕೆ ಸಂವೇದನಶೀಲವಾಗಿದೆ ಎನ್ನಲು ನನ್ನನ್ನು ಪ್ರೇರಿಸುತ್ತದೆ. ವಾಸ್ತವವಾಗಿ, ನಾನಿಲ್ಲಿ ಈ ವಿಚಾರ ಕುರಿತು ಏನನ್ನು ಹೇಳಲು ಪ್ರಯತ್ನಿಸಿರುವೆನೋ ಅದು ಈ ಮುಂದಿನ ಲ್ಯಾಟಿನ್ ಧ್ಯೇಯವಾಕ್ಯಗಳಲ್ಲಿ ಬಲು ಅಡಕವಾಗಿ ಹೇಳಲ್ಪಟ್ಟಿದೆ:

ಋತದ ಪರಿಮುದ್ರೆ ಸರಳತೆ
ಸತ್ಯದ ಪ್ರಕಾಶ ಸೌಂದರ್ಯ."

೨೬-೧೦-೧೯೯೪ ಜಿ. ಟಿ. ನಾರಾಯಣರಾವ್

# ಗೆಳೆಯರ ಬಳಗದ ಮೊಳೆಯಾರ

ಪುತ್ತೂರಿನಲ್ಲಿ ಆ ಮುಂಜಾನೆ ನನಗೆ ಬಿಡುವಿತ್ತು. ನಿಡುಗಾಲದ ಗೆಳೆಯ ಮೊಳೆಯಾರರ ನೆಲೆ ಅರಸಿ ನಡೆದೆ. ದಾರಿಯಾವುದಯ್ಯಾ ವೈಕುಂಠಕೆ? ತಲಪಿದ್ದು ಪರ್ಣಕುಟೀರವನ್ನಲ್ಲ ಅಕ್ಷರಯಕ್ಷ — ಪಡುವಣ ಕಡಲಿನ ತೆಂಗಿನ ಮಡಲಿನ ಮರೆಯಲಿ ಮೆರೆಯುವ ಬೀಡಿಂಗೆ. ಮನೆ ಮುಂದಿನ ಜಗಲಿ ಅಂಚಿನಲ್ಲಿ ಅವರು ಸುಖಾಸನದ ಮೇಲೆ ಸಾವಧಾನ ಭಂಗಿಯಲ್ಲಿ ಅಧ್ಯಯನಮಗ್ನರಾಗಿದ್ದ ದೃಶ್ಯ ಅಲ್ಲಿಯ ಜ್ಞಾನದೀಪ್ತ ಶಾಂತ ಪರಿಸರಕ್ಕೆ ಅನುಗುಣವಾಗಿಯೇ ಇತ್ತು; ಪ್ರಾಚೀನ ಋಷ್ಯಾಶ್ರಮದ ಅರ್ವಾಚೀನ ಪ್ರತಿಬಿಂಬ. ನೆನೆಯುತೆನ್ನ ಮನಂ ಬನವಾಸಿ ದೇಶಮಂ. ಆ ಗಳಿಗೆ ನನ್ನಲ್ಲಿ ಸಿಂಚನಿಸಿದ ಕೌತುಕ ಗಾಢತರವೋ ಅಕಾಲ-ಅಸ್ಥಲದಲ್ಲಿ ಅನಿರೀಕ್ಷಿತವಾಗಿ ಪ್ರತ್ಯಕ್ಷನಾದ ನನ್ನ ದರ್ಶನದಿಂದ ಅವರಲ್ಲಿ ಬುದ್ಬುದಿಸಿದ ಸಂಭ್ರಮ ತೀವ್ರತರವೋ ಹೇಳಲಾರೆ. ನಮ್ಮ ಭಾಗ್ಯ ದೊಡ್ಡದೋ ನಿಮ್ಮ ಭಾಗ್ಯ ದೊಡ್ಡದೋ!

ಅವರು ಆಗ ಮುದ್ರಾ ಕರಡು ತಿದ್ದುವ ಕರ್ತವ್ಯನಿರತರಾಗಿದ್ದರು — ಕರ್ತೃತ್ವಶಾಲಿ ಎಸಗುತ್ತಾನೆ, ಸೋಮಾರಿಯೋ ಹರಟುತ್ತಾನೆ. ಈ ಕರ್ತೃತ್ವಶಾಲಿ ಸಾಹಿತಿಯ ಎದುರು ಹರಟೆಮಲ್ಲ ನಾನು! ಅವರ ಪಕ್ಕದಲ್ಲೇ ಅಚ್ಚುಮನೆಯ (ಯಮ)ದೂತ ಕರಡನ್ನು ಆದಷ್ಟು ಬೇಗ ಅವರಿಂದ ಪಡೆದು (=ಕಸಿದು) ಒಗಿಯಲು ಹನುಮಂತನಂತೆ ನಿಂತಿದ್ದ. ನನ್ನ ಈ ಆಗಮನ (= ಅತಿಕ್ರಮ ಪ್ರವೇಶ) ಅವನಿಗೆ ಸುತರಾಂ ಸಹ್ಯವಾಗಲಿಲ್ಲವೆಂಬುದನ್ನು ಅವನ ಕಣ್ಣುಗಳು ಹೇಳುತ್ತಿದ್ದುವು. ಆದರೆ ಮೊಳೆಯಾರರು ಪೂರ್ವಭಾಷಿಗಳು, ಮೃದುಭಾಷಿಗಳು ಮತ್ತು ಮಿತಭಾಷಿಗಳು. ಅವರು ಸುಖಾಸನದಿಂದೆದ್ದು ನನ್ನನ್ನು ಸ್ವಾಗತಿಸುವ ಮೊದಲೇ ನಾನು ನನ್ನ ಎಂದಿನ ಕ್ರಮದಲ್ಲಿ ಮೊದಲ ಬಾಣ ಹೊಡೆದೇ ಹೊಡೆದೆ: ಅತಿಕ್ಷಿಪ್ರಗತಿಯಲ್ಲಿ ಅತಿತಾರ ಶ್ರುತಿಯಲ್ಲಿ ಅರಚುವಾತನೆ ಕಣಾ ಪರಮ ಸುಖಪುರುಷ! "ಇದು ನಿಮ್ಮ ಊಟದ ಬಿಟ್ಟಿ ಕೆಲಸವೋ!" ಪುಸ್ತಕ ವಾಚನ, ಲೇಖನ, ಸಂಪಾದನ, ಮುದ್ರಣ, ಸಂವಹನ ಮುಂತಾದ ಪುಸ್ತಕ ಸಂಬಂಧ ಸಮಸ್ತ ಪ್ರಕ್ರಿಯೆಗಳಲ್ಲಿಯೂ ಇವರಿಗಿಂತ ಅಧಿಕ ಶ್ರದ್ಧಾಸಕ್ತ ಸಹಿತ ನಿರ್ವ್ಯಾಜ ಸೇವೆ ಸಲ್ಲಿಸುವವರು ವಿರಳಾತಿವಿರಳ. ಈ ಎಲ್ಲ ರಾಗಭಾವಗಳೂ "ಬಿಟ್ಟಿ" ವಿಶೇಷಣದಲ್ಲಿ ಅಧ್ಯಾಹಾರ.

"ಹೌದೋ ಮಾಗ! ನಾನೇ ಇದನ್ನು ಮುದ್ರಣಾಲಯಕ್ಕೆ ಮಧ್ಯಾಹ್ನ ತಂದುಕೊಡುತ್ತೇನೆ. ಈಗ ನೀನು ಹೋಗು."

"ಬೇಡ ಬೇಡ. ಆ ಕರ್ತವ್ಯ ಮೊದಲು ಮುಗಿಸಿ. ನಾನು ತೆಪ್ಪಗೆ ಕುಳಿತಿರುವೆನು. ಹೇಳದೆಯೆ ಬರುವಾತ....."

"ಗೆಳೆಯರೊಳಗಗ್ರಗಗೆ!" ಅವರು ಪ್ರಾರ್ಥಿಸಿದರು.

ಮೊಳೆಯಾರರು ಗೆಳೆಯರಿಗೆ ಮಣಿಯುವ ಪರಿ ಇದು.

- ೨ -

ಪುತ್ತೂರಿನ ಹತ್ತಿರ ಆರ್ಯಾಪು ಗ್ರಾಮದಲ್ಲಿ ನನ್ನ ಭಾವನ ಮನೆ ಇದೆ. ಸಾಹಿತ್ಯಪ್ರೇಮಿಯಾದ ಈತನ ಕಪಾಟಿನಲ್ಲಿ ಓರಣವಾಗಿ ಜೋಡಿಸಿಟ್ಟಿದ್ದ ಪುಸ್ತಕಗಳ ಪೈಕಿ ಒಂದು ನನ್ನ ವಿಶೇಷ ಲಕ್ಷ್ಯ ಸೆಳೆಯಿತು: ಶೀರ್ಷಿಕೆ, ವಿನ್ಯಾಸ, ಹಾಳೆ, ಮುದ್ರಣ, ಲೇಖನ ನೂತನತೆ ಒಂದೊಂದರಿಂದಲೂ. ಎತ್ತಿಕೊಂಡೆ. ಮೊದಲ ಪುಟ ತೆರೆದೆ. ಕಣ್ಣಾಡಿಸಿದೆ. ಬುದ್ಧಿ ಕೆಲಸಿದೆ. ಕೊನೆಯ ಪುಟ ತಲುಪಿದೆ. ಆ ವೇಳೆಗೆ ಗಂಟೆಗಳೇ ನನ್ನ ಅರಿವಿಗೆ ಬಾರದೆ ಕಳೆದುಹೋಗಿದ್ದುವು. ಅನುಭವಗಾಥೆ, ವರ್ಣನೆಯಲ್ಲಿಯ ಔಚಿತ್ಯಪ್ರಜ್ಞೆ ಮತ್ತು ಸಮಗ್ರವಾಗಿ ಅನುಸಾರಿಸುತ್ತಿದ್ದ ಮಾನವೀಯತೆ ಆ ಮಟ್ಟದವಾಗಿದ್ದುವು. ಲೇಖಕರ ಅನುಭವ ಭಾಷಾಮಾಧ್ಯಮದ ಸರಹದ್ದು ಮೀರಿ ನೇರ ನನ್ನ ಸೆಳೆತ್ತೇ ಆದಂಥ ಪರಿಸ್ಥಿತಿ. ಆಗ ನಾನು ಸಲ್ಲಿಸಿದ ನುಡಿನಮನ: "ಜಿಮ್ ಕಾರ್ಬೆಟರ ಪ್ರಸಿದ್ಧ ಮೃಗಯಾ ಗ್ರಂಥಗಳ ಸಾಲಿಗೆ ಸೇರಬಲ್ಲ ಪುಸ್ತಕವಿದು. ಕುವೆಂಪು ಅವರ ಬೇಟೆಯ ಅನುಭವಗಳನ್ನು ಓದಿ ರೋಮಾಂಚನಗೊಂಡವರಿಗೆ ರೈಗಳವರ ಈ ಪುಸ್ತಕ ಅಷ್ಟೇ ರುಚಿಕರವಾದ ಕೋಳಿಯ ಕೊದ್ದಲನ ಮೇಲೋಗರವನ್ನು ಹುರಿದ ಹಂದಿ ಮಾಂಸದ ಭಕ್ಷ್ಯವನ್ನು ಪ್ರೀತಿಯಿಂದ ಬಡಿಸುತ್ತದೆ." (ಅಂದ ಹಾಗೆ ನಿಜ ಜೀವನದಲ್ಲಿ ನಾನು ಶುದ್ಧ ಸಸ್ಯಾಹಾರಿ ಯಾನೆ ಪುಳಿಚಾರಿ!)

ಲೇಖಕ ಕೆದಂಬಾಡಿ ಜತ್ತಪ್ಪ ರೈಗಳ ಗ್ರಾಮನಿವಾಸ ಅಷ್ಟೇ ಸಮೀಪದಲ್ಲಿದ್ದುದರಿಂದ ಭಾವನೂ ನಾನೂ ಸೀದಾ ಅವರಲ್ಲಿಗೆ ಸಂಚರಿಸಿದೆವು. ಅರುವತ್ತರ ಇಳಿ ಹರೆಯದ, ಪರಿಪಕ್ವ ದೃಷ್ಟಿಯ ಮತ್ತು ಎಂದೂ ಹಿಂಗದ ಹುರುಪಿನ ಈ ಅಪ್ಪಟ ದೇಸೀ ನುಡಿಗಾರನೊಂದಿಗಿನ ಮಾತುಕತೆಯೊಂದು ವಿನೂತನ ಅನುಭವ. ಇವರನ್ನು ಪತ್ತೆ ಹಚ್ಚಿ, ಇವರ ಅನುಭವದ ಬೀಸಿಗೆ ಮಾತಿನ ಮೋಡಿ ತೊಡಿಸಿ, ಅಚ್ಚು ಮೊಳೆಗಳಿಗೆ ಅಳವಡಿಸಿ "ಬೇಟೆಯ ನೆನಪುಗಳು" ಪುಸ್ತಕ ಪೇಟೆಯ ಬೆಳಕು ಕಾಣುವಲ್ಲಿ ಮೊಳೆಯಾರರು ವಹಿಸಿದ ಪಾತ್ರ ಸಾಮಾನ್ಯವಾದದ್ದೇನೂ ಅಲ್ಲ. "ಬೇಟೆಯ ನೆನಪುಗಳು" ಪುಸ್ತಕದ ಲೇಖಕ ಕೆದಂಬಾಡಿ, ನಿಜ; ಕೆದಂಬಾಡಿಯವರ ಆವಿಷ್ಕರ್ತ ಮೊಳೆಯಾರ ಎಂಬುದೂ ಅಷ್ಟೇ ನಿಜ. ಇಂಥ ಉತ್ಖನನ ಮತ್ತು ಕಂಡರಣೆ ಕೈಂಕರ್ಯ ಇವರ ಜೀವನದ ಆಧಾರಶ್ರುತಿ. ಸ್ವತಃ ಸಾಹಿತಿಯಾಗಿರುವ ಮೊಳೆಯಾರರು ಯುವ ಅಥವಾ ಅಜ್ಞಾತ ಸಾಹಿತಿಗಳನ್ನು ಇಲ್ಲವೇ ಪ್ರತಿಭೆಗಳನ್ನು ಅರಸಿ ಲಾಲಿಸಿ ಪಾಲಿಸಿ ಪೋಷಿಸಿ ಸಾಹಿತ್ಯರಂಗಪ್ರವೇಶಗೊಳಿಸುವಲ್ಲಿ ನಿರ್ವಹಿಸುವ ವಿವಿಧ ಸೃಜನಶೀಲ ಪಾತ್ರಗಳು ಅನ್ಯಾದೃಶವಾದವು.

ಪುತ್ತೂರಿನ ಕನ್ನಡ ಚಟುವಟಿಕೆಗಳ ಜೊತೆ ನನ್ನ ನಿಕಟ ಸಂಪರ್ಕ ನನ್ನ ವಯಸ್ಸಿನಷ್ಟೇ 'ಪ್ರಾಚೀನ'ವಾದದ್ದು. ಮೊಳಹಳ್ಳಿ ಶಿವರಾಯ, ಉಗ್ರಾಣ ಮಂಗೇಶರಾಯ, ಕಡವ ಶಂಭು ಶರ್ಮರಿಂದ ತೊಡಗಿ ಶಿವರಾಮ ಕಾರಂತ, ಬೆಳ್ಳಿ ರಾಮಚಂದ್ರ ರಾವ್, ವಿ.ಬಿ. ಸುಬ್ಬಯ್ಯನವರ ವರೆಗೂ ನನ್ನ ನೆನಪು ಹರಿಯುತ್ತದೆ. ಇಲ್ಲಿ ಬಾರಿಸಿದ ಮತ್ತು ಬಾರಿಸುವ ಕನ್ನಡ ಡಿಂಡಿಮ ಕನ್ನಡದ ಕಿವಿಗಳಿರುವಲ್ಲೆಲ್ಲ ಅನುನಾದಿಸಿದೆ ಮತ್ತು ಅನುನಾದಿಸುತ್ತದೆ ಎನ್ನುವುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಏಕೆಂದರೆ ಇಲ್ಲಿಯ ನೆಲದಿಂದ ಉದ್ಭವಿಸುವ ಕನ್ನಡ ಚಟುವಟಿಕೆಗಳು ಮೂರು ಸ್ತರಗಳಲ್ಲಿ ಜನಮನಸಂಸ್ಕಾರವನ್ನು ಸಾಧಿಸುತ್ತ ಬಂದಿವೆ: ಭಾಷಣ, ಗೋಷ್ಠಿ ಮುಂತಾದ ಸ್ಥಳೀಯ ಕ್ರಿಯಾ ಕಲಾಪಗಳು, ಪರಸ್ಥಳಗಳಲ್ಲಿಯ ಅಥ್ಯರನ್ನು ಇಲ್ಲಿಗೆ ಆಹ್ವಾನಿಸಿ ಅವರೊಂದಿಗೆ ಅಂತರಕ್ರಿಯೆ ನಡೆಸುವ ಹೃದಯಸ್ಪಂದನಗಳು, ಕನ್ನಡದಲ್ಲಿ ಉತ್ತಮ ಕೃತಿಗಳನ್ನು ಪ್ರಕಟಿಸಿ ಶುದ್ಧ ಸಾತ್ವಿಕ ಅಭಿರುಚಿಯನ್ನು ಪ್ರೇರಿಸುವ ಕಲಾಪಗಳು. ಇದೇ ಸಂದರ್ಭದಲ್ಲಿ ಈ ಪುಟ್ಟ ಪಟ್ಟಣದಲ್ಲಿ ಮೂರು ಕನ್ನಡ ಸಂಘಗಳು ಪರಸ್ಪರ ಪೂರಕ ಪ್ರೇರಕವಾಗಿ ಕಾರ್ಯಮಗ್ನವಾಗಿರುವುದು ಕೇವಲ ಆಕಸ್ಮಿಕವಲ್ಲ: ಕರ್ನಾಟಕ ಸಂಘ (ಸಾರ್ವಜನಿಕ), ಸಂತ ಫಿಲೋಮಿನಾ ಕಾಲೇಜ್ ಕನ್ನಡ ಸಂಘ, ವಿವೇಕಾನಂದ ಕಾಲೇಜ್ ಕನ್ನಡ ಸಂಘ. ಬೋಳಂತಕೋಡಿ ಈಶ್ವರ ಭಟ್ಟರು, ವಿ.ಬಿ. ಮೊಳೆಯಾರರು ಮತ್ತು ವಿ.ಬಿ. ಅರ್ತಿಕಜೆಯವರು ಈ ಸಂಘಗಳನ್ನು ಪ್ರತೀಕಿಸುವ ಮತ್ತು ಪ್ರತಿನಿಧಿಸುವ ಜೀವಶಕ್ತಿಗಳು ನಿಜ, ಆದರೆ ಇವರೆಲ್ಲರೂ ಪುತ್ತೂರಿನ ಎಲ್ಲ ಕನ್ನಡ ಸಂಘಗಳ ಹಿನ್ನೆಲೆಯಲ್ಲಿ ಸ್ಪಂದಿಸುತ್ತಿರುವ ಚೈತನ್ಯ ಚಿಲುಮೆಗಳೆಂಬುದು ಅಷ್ಟೇ ನಿಜ. ಈ ಪ್ರತಿಯೊಬ್ಬ ವ್ಯಕ್ತಿಯೂ ಸ್ವಾರ್ಥರಹಿತ ಸಂಘಟಕ, ಶ್ರೇಷ್ಠ ಲೇಖಕ, ಉತ್ತಮ ಸಂಪಾದಕ ಮತ್ತು ಜನಪ್ರಿಯ ನಾಯಕ ಎಂಬುದು ಗಮನಾರ್ಹ.

ಬೇರೊಂದು ಸಂದರ್ಭದಿಂದ ಆಯ್ದ ಉಲ್ಲೇಖ ನೆನಪಿಗೆ ಬರುತ್ತದೆ: "ಕನ್ನಡಮ್ಮನ ದೇಗುಲ ಹಲವಾರು ಭಾಗವಿಭಾಗಗಳಿಂದ ನಿರ್ಮಿತವಾಗಿರುವ ಸಂಕೀರ್ಣ ರಚನೆ. ಇದರ ನಿವಾಸಿಗಳ ಸ್ವಭಾವಗಳು ವಿಧವಿಧವಾಗಿರುವುದೊಂದೇ ಅಲ್ಲ, ಇವರು ದೇವಾಲಯದೊಳಗೆ ಉತ್ಪಾದಿಸುವ ಬಲಗಳು ಕೂಡ ಹಾಗೆಯೇ. ಇವರ ಪೈಕಿ ಹುಟ್ಟಿನ ಪ್ರತಿಯೊಬ್ಬನೂ ತನ್ನ ಬುದ್ಧಿ ಸಾಮರ್ಥ್ಯದ ಉತ್ಕೃಷ್ಟತೆ ಬಗ್ಗೆ ಸಂತೃಪ್ತಿ ಪಡೆದವನಾಗಿದ್ದು ಕನ್ನಡ ಚಟುವಟಿಕೆಗಳಲ್ಲಿ ಉದ್ಯುಕ್ತನಾಗಿರುವನು. ತನ್ನ ಜೀವದ

ಪ್ರಬಲ ಚಡಪಡಿಕೆಗಳು, ಆಸೆ ಆಕಾಂಕ್ಷೆಗಳು ಹೊರಹೊಮ್ಮಲು ಅವಕಾಶ ಒದಗಿಸಿ ಬಾಳ ಹಂಬಲಗಳನ್ನು ಈಡೇರಿಸಿಕೊಳ್ಳಲು ಚೆನ್ನಾಗಿ ಒಗ್ಗುವ ಕ್ರೀಡೆಯಾಗಿ ಕನ್ನಡವನ್ನು ಈತ ಕಂಡುಕೊಂಡಿದ್ದಾನೆ. ಉಪಯುಕ್ತ ಸಿದ್ಧಿಗಳನ್ನು ಗಳಿಸುವುದಕ್ಕೆ ಮಾತ್ರ ತಮ್ಮ ವಿದ್ಯಾ ಸಾಮಗ್ರಿಯನ್ನು ವ್ಯಯಿಸುವ ಹಲಮಂದಿಯೂ ಇದ್ದಾರೆ ನಿಜ. ಈಗ, ದೇವದೂತನೊಬ್ಬ ಧರೆಗಿಳಿದು ಬಂದು ಇವೆರಡು ವರ್ಗಗಳಿಗೂ ಸೇರಿದ ಎಲ್ಲರನ್ನೂ ದೇವಾಲಯದಿಂದ ಉಚ್ಚಾಟಿಸುವುದಾದ ಪಕ್ಷ ಗಮನಾರ್ಹ ಮಂದಿ ಹೊರಗೆ ಹೋಗುತ್ತಾರೆ. ಹಾಗಿದ್ದರೂ ದೇಗುಲದೊಳಗೆ ಈಗಿನ ಹಾಗೂ ಹಿಂದಿನ ಕೆಲವೊಂದು ಮಂದಿ ಉಳಿದೇ ಇರುತ್ತಾರೆ. ಈ ವಿರಳರ ಸಾಲಿನಲ್ಲಿ ನಾವು ನಮ್ಮ ಮೊಳೆಯಾರರನ್ನು ಎಣಿಸುತ್ತೇವೆ. ಏಕೆಂದರೆ ಇವರಿಗೆ ನಮ್ಮ ತುಂಬು ಹೃದಯದ ಅಭಿವಂದನೆ, ಪ್ರೀತಿ ಸಲ್ಲುತ್ತವೆ."

— ೪ —

ಶಿಕ್ಷಣಾಲಯಗಳ ಕಾರ್ಖಾನೆಗಳಲ್ಲಿ (ಕಸಾಯಿಖಾನೆಗಳು?) ಸಿದ್ಧವಾಗಿ ದಿಢೀರನೆ ವೃತ್ತಿಗೆ 'ಅವತರಿಸಿದ' ಯಂತ್ರ ಅಥವಾ ಕೀಲುಗೊಂಬೆ ಅಲ್ಲ ಮೊಳೆಯಾರರು. ನೆಲದ ಬಯಕೆ, ಪರಿಸರದ ಸೆಳೆತ, ಬದುಕಿನ ನಿರಂತರ ನವನವೋನ್ಮೇಷಶಾಲಿ ಅನುಭವ, ಸಹೃದಯತೆ ('ಒಳ್ಳೆ ಜೀವಾವಳಿಯೊಳು ಬಾನಲ್ಲದೆ ಕುಂದ ಕಾಣದಿರು' ಗುಣ) ಮತ್ತು ಆಕಾರದ ಎರಕಗೊಂಡು ಇವರ ವ್ಯಕ್ತಿತ್ವ ಅರಳಿದೆ. ಕುವೆಂಪು ಪಂಜೆಯವರಿಗೆ ಸಲ್ಲಿಸಿದ ನುಡಿಕಾಣಿಕೆ ಇಲ್ಲಿ ನೆನಪಿಗೆ ಬರುತ್ತದೆ: "ಹಾಯು ಜೀವ ಸೀರಿ ನಿವಾದಿರಾಚಾರ್ಯ!"

ಜನನ ೨೬-೬-೧೯೩೬. ತಂದೆ ಶಂಕರನಾರಾಯಣಭಟ್ಟರು ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿ ಪ್ರಕಾಂಡ ಪಂಡಿತರು, ಗ್ರಂಥ ಕರ್ತರು ಮತ್ತು ಪ್ರಕಾಶಕರು. ಬಡತನ ಹುಟ್ಟಿನಿಂದ ಬಂದ ಬಳುವಳಿ. ಆದರೆ ಬುದ್ಧಿ ಶ್ರೀಮಂತಿಕೆ ಹಾಗೂ ಹೃದಯ ಸಂಸ್ಕಾರ ಈ ಬಾಹ್ಯ ಪೀಡನೆಯಿಂದ ಸೊರಗಲಿಲ್ಲ ಮಾತ್ರವಲ್ಲ, ಅದನ್ನೊಂದು ಸವಾಲಾಗಿ ಸ್ವೀಕರಿಸಿ ಆ ಪ್ರತಿಬಂಧಕವನ್ನು ಮೀರಿ ಬೆಳೆದುವು. "ವೃತ್ತಿಯ ಲಕ್ಷ್ಮೀಪುತ್ರರು ಯಾರು!" ಹಲವಾರು ಹೆಸರುಗಳು ಉದುರಬಹುದು, ಇವು ಕಾಲದಿಂದ ಕಾಲಕ್ಕೆ ಬದಲಾಗುತ್ತಲೂ ಇರುವುವು. 'ವೃತ್ತಿಯ ಸರಸ್ವತಿ ಆರಾಧಕರು ಯಾರು!" ಮೊಳೆಯಾರರ ಹೆಸರು ಈ ಯಾದಿಯಲ್ಲಿ ಶಾಶ್ವತ ಸ್ಥಾನ ಪಡೆದಿರುವುದು ಅವರ ಜೀವನ ಸಾಧನೆ ಸಿದ್ಧಿಗಳಿಗೆ ಬರೆದಿರುವ ಭಾಷ್ಯ.

ಇಂಥವರಿಗೆ ನಿವೃತ್ತಿ ಎಂಬ ಪದ ಒಂದು ಲೌಕಿಕ ಭ್ರಮೆಯನ್ನು ಸೂಚಿಸುವ ಅರ್ಥಕೋಶದ ಅಕ್ಷರಸಮುಚ್ಚಯ ಮಾತ್ರ. ಏಕೆಂದರೆ

ಸರಸ್ವತೀಪುತ್ರರಿಗೆ ನಿವೃತ್ತಿ ಎಂಬುದೇ ಇಲ್ಲ (ಮಹಾನಿರ್ಯಾಣಾ-ನಂತರವೂ ಅವರು ತಮ್ಮ ಕೃತಿಗಳ ಮೂಲಕ ಚಿರಸ್ಥಾಯಿ ಆಗಿರುತ್ತಾರೆ). ವೃತ್ತಿಜೀವನದಿಂದ ಪ್ರವೃತ್ತಿ ಜೀವನಕ್ಕೆ ಬಡ್ತಿಗೊಂಡಿರುವುದರ ಸಾಕ್ಷಿ ಈ ಕೃತಿ.

ಒಂದೆಡೆ ಗೆಳೆಯರೊಬ್ಬರು ಬರೆದಿದ್ದಾರೆ: "ಏನೂ ತಿಳಿಯದವರಿಗಿಂತ ಓದಿದವರು ಮೇಲು. ಓದಿದವರಿಗಿಂತ ನೆನಪಿಟ್ಟುಕೊಂಡಿರುವವರು ಮೇಲು. ನೆನಪಿಟ್ಟವರಿಗಿಂತ ಚೆನ್ನಾಗಿ ಅರಿತವರು ಮೇಲು. ಅರಿತವರಿಗಿಂತ ಅರಿತು ಕೆಲಸಮಾಡುವವರು ಮೇಲು ಎಂದು ಮನುಸ್ಮೃತಿ ಸಾರುತ್ತದೆ." ಈ 'ಅರಿತು ಕೆಲಸಮಾಡುವವರ' ಸಾಲಿಗೆ ಸೇರಿರುವ ಗೆಳೆಯರಾದ 'ನಿವೃತ್ತ' (= ಅಧಿಕ ಪ್ರವೃತ್ತ) ಜೀವನ ಕನ್ನಡ ಕಂಪಿನ ಸೊಗಸನ್ನು ಹೆಚ್ಚಿಸುವಂತಾಗಲಿ!

೦೫-೦೪-೧೯೯೪ ಜಿ.ಟಿ.ನಾರಾಯಣರಾವ್

ದೂರವಾಣಿ [illegible]

೮ 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ,

ಕುವೆಂಪುನಗರ

ಮೈಸೂರು ೫೭೦೦೨೩

ಗೆಳೆಯರ ಬಳಗದ ಗೆಳೆಯರ
ಕನ್ನಡ ನಾಡಿನ ಗರಿಗಾರ
ಜನರಿಂ ದೊರೆತ ಪ್ರಶಸ್ತಿ
ನಿನಗಿದೊ ಅರ್ಪಿಸ ನಮಸ್ಕಾರ

ಜಿ. ಟಿ. ನಾರಾಯಣರಾವ್
ಚಿತ್ರ: ಕೆ. ಮುರಲೀಧರರಾವ್

# ಮಾನವ ಗಣಕ ಲಿಯೊನ್ಹಾರ್ಡ್ ಆಯ್ಲರ್

~~‘ಶ್ರೀನಿವಾಸ ರಾಮಾನುಜನ್’ ಲೇಖನದಲ್ಲಿ (‘ಕಸ್ತೂರಿ’ ಡಿಸೆಂಬರ್ 1987) ಮೂವರು ಪ್ರಖ್ಯಾತ ಪಾಶ್ಚಾತ್ಯ ಗಣಿತವಿದರ ಬಗ್ಗೆ ಉಲ್ಲೇಖವಿದೆ.~~

ರಾಮಾನುಜನ್ ಅವರ ಸೃಜನಶೀಲ ಮತ್ತು ನವನವೋನ್ಮೇಷಶಾಲಿ ಪ್ರತಿಭೆ ಕುರಿತಂತೆ ಜಿ. ಎಚ್. ಹಾರ್ಡಿ ಬರೆದಿದ್ದಾರೆ "ಇವರನ್ನು ನಾನು ಆಯ್ಲರ್ ಮತ್ತು ಯಾಕೊಬಿ ಜೊತೆ ಮಾತ್ರ ಹೋಲಿಸಬಲ್ಲೆನಷ್ಟೆ."

ಅವರ ಉಲ್ಕಾಸದೃಶ ಮಹೋಜ್ವಲ ಅಲ್ಪಕಾಲಿಕ ಜೀವನ ಕುರಿತಂತೆ ಮತ್ತೆ ಹಾರ್ಡಿ ಬರೆದಿದ್ದಾರೆ "ಮಹಾಪುರುಷನೊಬ್ಬ ತಾರುಣ್ಯದಲ್ಲಿ ಗತಿಸುವುದು ಘೋರ ನಷ್ಟ ನಿಜ. ಆದರೆ ಹೋಲಿಕೆಯಿಂದ ಹೇಳುವುದಾದರೆ ಒಬ್ಬ ಗಣಿತವಿದ ಮೂವತ್ತರ ವೇಳೆಗಾಗುವಾಗ ಸಾಕಷ್ಟು ವೃದ್ಧನಾಗಿರುತ್ತಾನೆ. ಆದ್ದರಿಂದ ಅವನ ಮರಣ ಕಾಣುವಷ್ಟರ ಮಟ್ಟಿನ ಸರ್ವನಾಶವಲ್ಲ. ಅಬೆಲ್ ಇಪ್ಪತ್ತಾರರಲ್ಲಿ ಸತ್ತ."

ಈ ಮಹಾಮಹಿಮರ ಸಾಲಿಗೆ ದಾಖಲಾಗಲೇಬೇಕಾದ ಇನ್ನಿಬ್ಬರು ಗಣಿತ ಧೀಮಂತರಿದ್ದಾರೆ: ಗೌಸ್ ಮತ್ತು ಗ್ಯಾಲ್ವಾ.

ಗಣಿತವಿದರ ರಾಜ ಗೌಸ. ಅಜನ್ಯ ಪ್ರತಿಭೆ ಮತ್ತು ಪರಿಶ್ರಮದ ಶೌರ್ಯ ಸುಪುಷ್ಟವಾಗಿ ಸಂಲಗ್ನಗೊಂಡು ಈತನನ್ನು ಸಾರ್ವಕಾಲಿಕ ಮಹಾಗಣಿತವಿದನನ್ನಾಗಿ ಕಂಡರಿಸಿವೆ.

ಇನ್ನು ಗ್ಯಾಲ್ವಾ. ಅಪ್ರೋಚಗಸ್ ಮತ್ತು ಸಾಂಪ್ರದಾಯಿಕ ಮಾತ್ಯ ರಾಮಾನುಜನ್ ಅವರ ಜೀವನವೃತ್ತವನ್ನು ಹೋಲಿಸಿದುವು. ಗ್ಯಾಲ್ವಾ ಅವರೋ ಪ್ರಖರ ಗಣಿತ ಪ್ರತಿಭಾನ್ವಿತನಾಗಿದ್ದರೂ ವ್ಯಾವಹಾರಿಕವಾಗಿ ಶುದ್ಧ ಬುದ್ಧಿಶೂನ್ಯತೆಯಿಂದ ವರ್ತಿಸಿ ಪ್ರಾಣವನ್ನೇ ಪಣವಾಗಿ ಒಡ್ಡಿ ಇನ್ನೂ ಇಪ್ಪತ್ತು ತುಂಬುವ ಮೊದಲೇ ಅಕಾಲ ಮೃತ್ಯುವಿಗೆ ತುತ್ತಾದ.

ಪ್ರಸಕ್ತ ಲೇಖನ ಆಯ್ಲರನ ಜೀವನ ಹಾಗೂ ಸಾಧನೆ ಕುರಿತ ಸ್ಥೂಲ ಪರಿಚಯ.

## ಮೂರ್ತವೆತ್ತ ವಿಶ್ಲೇಷಣಾಗಣಿತ

ಆಯ್ಲರನನ್ನು ಮೂರ್ತವೆತ್ತ ವಿಶ್ಲೇಷಣಾಗಣಿತ, ವಿಶ್ಲೇಷಣಾಗಣಿತದ ಅವತಾರ ಪುರುಷ ಎಂದು ಮುಂತಾಗಿ ವರ್ಣಿಸುವುದುಂಟು. ಹಾಗೆಂದರೇನು ಎಂದು ತಿಳಿಯಲು ಧನಪೂರ್ಣಾಂಕಗಳ ಸುಲಭ ಪ್ರಪಂಚದಲ್ಲಿ ಒಮ್ಮೆ ಲಘುವಾಗಿ ವಿಹರಿಸೋಣ.

1, 2, 3, 4, 5, ........ ಸಂಖ್ಯೆಗಳನ್ನು ಬರೆಯುತ್ತ ಹೋಗಿ. ಹನುಮಂತಲಾಂಗೂಲದ ಕೊನೆಯನ್ನಾದರೂ ತಲಪೀರಿ, ಈ ಶ್ರೇಣಿಯ ಕೊನೆ ಪದ ಮಾತ್ರ ಎಂದೂ ತಲಪಲಾರಿರಿ. ಗಣಿತಜ್ಞರ ಪ್ರಕಾರ ಇಲ್ಲೊಂದು ಬಿಕ್ಕಟ್ಟು ತಲೆದೋರುತ್ತದೆ. ಇಂಥ ಸನ್ನಿವೇಶದಲ್ಲಿ ಅವರು ನೂತನ ಪರಿಕಲ್ಪನೆಯೊಂದನ್ನು ವ್ಯಾಖ್ಯಿಸಿ ಗಣಿತವಾಹಿನಿಗೆ ಮುಂದೆ ಹರಿಯಲು ಅವಕಾಶ ಮಾಡಿಕೊಡುತ್ತಾರೆ. ಅನಂತದ ಪರಿಕಲ್ಪನೆ ಸೃಷ್ಟಿಸಿದ್ದೇ ಹೀಗೆ. ಅಂತ್ಯವಿಲ್ಲದ್ದು ಅಥವಾ ಸಾಂತವಲ್ಲದ್ದು ಅನಂತ. ನಾವು ಊಹಿಸಬಹುದಾದ ಯಾವ ಗರಿಷ್ಠ ಸಂಖ್ಯೆಯೂ ಇದರ ಎದುರು ತೃಣಸದೃಶ. ಅನಂತವನ್ನು $\infty$ ಎಂಬ ಪ್ರತೀಕದಿಂದ

(2) ಸೂಚಿಸುತ್ತವೆ. ಇದನ್ನು ನಿರೂಪಿಸಿದಾತ, 1656ರಲ್ಲಿ ಜಾನ್ ವಾಲಿಸ್ (1616-1703) ಎಂಬ ಇಂಗ್ಲಿಷ್ ಗಣಿತಜ್ಞ.

ಪದಗಳ ಸಂಖ್ಯೆ ಅನಂತವಿರುವ ಶ್ರೇಣಿಗೆ ಅನಂತ ಶ್ರೇಣಿಯೆಂದು ಹೆಸರು. ಇಂಥ ಎರಡು ಅನಂತಶ್ರೇಣಿಗಳನ್ನು ಪರಿಶೀಲಿಸೋಣ:

$$1+2+3+4+5+\cdots\cdots\infty \qquad \ldots(1)$$

$$1+1/2+1/4+1/8+1/16+\cdots\cdots\infty \qquad \ldots(2)$$

(1)ನೆಯದರಲ್ಲಿ ಎರಡನೆಯ ಪದದಿಂದ ತೊಡಗಿ ಪ್ರತಿ ಪದವೂ ಅದರ ಹಿಂದಿನ ಪದಕ್ಕಿಂತ 1 ಜಾಸ್ತಿ ಇದೆ. (2)ನೆಯದರಲ್ಲಿ ಪ್ರತಿ ಪದವೂ ಅದರ ಹಿಂದಿನ ಪದದ ಅರ್ಧ ಬೆಲೆ ಹೊಂದಿದೆ. (1)ನೆಯದರ ಪದಗಳ ಮೊತ್ತ ಅತಿ ತೀವ್ರವಾಗಿ ಏರುತ್ತ ಹೋಗುತ್ತದೆ. (2)ನೆಯದರಲ್ಲಿ ಈ ಏರಿಕೆಯ ಗತಿ ಅತಿ ನಿಧಾನ. ಇನ್ನೂ ಒಂದು ವ್ಯತ್ಯಾಸ ಉಂಟು: (1)ನೆಯ ಶ್ರೇಣಿಯ ಮೊತ್ತ ಯಾವುದೇ ಮಿತಿಗೆ ಬಂಧಿತವಾಗದೆ ವೃದ್ಧಿಸುತ್ತದೆ; (2)ನೆಯ ಶ್ರೇಣಿಯ ಮೊತ್ತವಾದರೋ ಕುಂಟುತ್ತ ತೆವಳುತ್ತ ಬರುತ್ತದೆ ನಿಜ, ಆದರೆ ಇದು ಎಂದೂ 2ನ್ನು ತಲಪುವುದೇ ಇಲ್ಲ.

ಉದಾಹರಣೆಗೆ (1)ನೆಯ ಶ್ರೇಣಿಯ ಮೊದಲ 10 ಪದಗಳ ಮೊತ್ತ 55. ಇದು (2)ನೆಯ ಶ್ರೇಣಿಯಲ್ಲಿ 1.998046875.

ಅಲ್ಲದೆ (1)ನೆಯ ಶ್ರೇಣಿಯ ಮೊತ್ತ ಸಾಧಾರಣ ಎಲೆಕ್ಟ್ರಿಕ ಟಾರ್ಚ್ ಲೈಟಿನಿಂದ ಹೊರಟ ಬೆಳಕಿನ ದೂಲದಂತೆ ಅಪಸರಿಸುತ್ತ (ವಿಸ್ತಾರವಾಗುತ್ತ) ಹೋಗುತ್ತದೆ; (2)ನೆಯ ಶ್ರೇಣಿಯ ಮೊತ್ತ ಮಸೂರದ ಮೂಲಕ ಸಾಗುವ ಬಿಸಿಲ ಕಂಬಿಯಂತೆ ಅಭಿಸರಿಸುತ್ತ (ಸಂಕೋಚಿಸುತ್ತ) ಹೋಗುತ್ತದೆ. ಆದ್ದರಿಂದ (1)ನೆಯ ವರ್ಗದ ಶ್ರೇಣಿಗಳಿಗೆ ಅಪಸರಣ ಶ್ರೇಣಿಗಳೆಂದೂ (divergent series) (2)ನೆಯ ವರ್ಗದವುಗಳಿಗೆ ಅಭಿಸರಣ ಶ್ರೇಣಿಗಳೆಂದೂ (convergent series) ಹೆಸರು.

ಅಪಸರಣ ಶ್ರೇಣಿಯ ಮೊತ್ತ ಅನಂತ. ಅಭಿಸರಣ ಶ್ರೇಣಿಯದು ಸಾಂತ.

ಪ್ರತೀಕಗಳ (symbols) ಬಳಕೆ ಸಂಖ್ಯೆಗಳಿಂದ ಮುಂದಿನ ಹಂತ: $a, b, c, x, y, z$ ಇತ್ಯಾದಿ.

ಈಗ 1ನ್ನು $(1-x)$ನಿಂದ ಸಾಂಪ್ರದಾಯಿಕವಾಗಿ ಭಾಗಿಸಿದಾಗ ಒಂದು ಅನಂತ ಶ್ರೇಣಿ ಲಭಿಸುತ್ತದೆ:

$$\frac{1}{1-x} = 1+x+x^2+x^3+\cdots\cdots\infty \qquad \ldots(3)$$

ಬೀಜಗಣಿತದ ಸಾಧಾರಣ ನಿಯಮದ ಪ್ರಕಾರ ಶ್ರೇಣಿ (3)ರಲ್ಲಿ ಅಜ್ಞಾತ $x$ಗೆ ಯಾವ ಬೆಲೆ ಆದೇಶಿಸಿದರೂ ಉಭಯ ಪಾರ್ಶ್ವಗಳೂ ತಾಳೆಯಾಗಬೇಕು. $x$ಗೆ 2ನ್ನು ಆದೇಶಿಸೋಣ. ಆಗ ಶ್ರೇಣಿ (3)

$$-1 = 1+2+4+8+\cdots\cdots\infty \qquad \ldots(4)$$

(3) ಎಂದಾಗುವುದು: ಎಡ ಪಾರ್ಶ್ವದ ಋಣ ಸಂಖ್ಯೆ (-1) ಬಲ ಪಾರ್ಶ್ವದ ಅನಂತವಾಗಿ ವೃದ್ಧಿಸುವ ಧನ ಸಂಖ್ಯೆಗಳ ಮೊತ್ತಕ್ಕೆ ಸಮವಾಗಬೇಕು! ಇದು ಶುದ್ಧ ಅಸಂಬದ್ಧ. ಈ ಅಸಂಬದ್ಧತೆ ಹುಟ್ಟಿದ್ದು ಹೇಗೆ?

x ನ ಯಾವುದೇ ಬೆಲೆಗೆ (3)ರ ಉಭಯ ಪಾರ್ಶ್ವಗಳೂ ಸಮ ಆಗುವುವೆಂದು ಅಂಗೀಕರಿಸಿ ಮುಂದುವರಿದದ್ದೇ ಇಲ್ಲಿಯ ದೋಷ. ಹಾಗಾದರೆ ಈಗೇನು ಮಾಡಬೇಕು? ಈ ಸಂದಿಗ್ಧತೆಗೆ ಪರಿಹಾರ ಒದಗಬೇಕಾದರೆ ನಿಶಿತ ಗಣಿತಮತಿಯೂ ಖಚಿತ ತಾರ್ಕಿಕ ಚಿಂತನೆ ಅನಿವಾರ್ಯ ಅಗತ್ಯ. ಅಜ್ಞಾತ x ನ ವರ್ತನೆಗೆ — ಅಂದರೆ ಅದಕ್ಕೆ ನಾವು ಆದೇಶಿಸಬಹುದಾದ ಬೆಲೆಗಳಿಗೆ — ಕೆಲವು ನಿರ್ಬಂಧಗಳನ್ನು ವಿಧಿಸಲೇಬೇಕಾಗುತ್ತದೆ. ಈ ಹಾದಿಯಲ್ಲಿ ಸಾಗುವಾಗ ಗಣಿತವಿದ ತಜ್ಞ ವೈದ್ಯನೋಪಾದಿಯಲ್ಲಿ ರೋಗನಿದಾನಗೈದು ಯೋಗ್ಯ ಚಿಕಿತ್ಸೆ ಕೈಗೊಳ್ಳಬೇಕಾಗುತ್ತದೆ. ಅನಂತ ಶ್ರೇಣಿಗಳ ಅಪಸರಣೆ ಮತ್ತು ಅಭಿಸರಣೆ ಕುರಿತ ನಿದಾನ ಮತ್ತು ಚಿಕಿತ್ಸಾ ಕ್ರಮಗಳಿಗೆ ವಿಶ್ಲೇಷಣಗಣಿತ (analysis) ಎಂದು ಹೆಸರು.

ಈ ಕ್ಷೇತ್ರದಲ್ಲಿ ನವಮನ್ವಂತರ ಪ್ರವರ್ತಕನಾದ ಆಯ್ಲರನಿಗೆ ಮೂರ್ತಿವೆತ್ತ ವಿಶ್ಲೇಷಣಗಣಿತವೆಂಬ ಬಿರುದು ಬಂದದ್ದು ಅನ್ವರ್ಥಕವಾಗಿದೆ.

## ಸಂಖ್ಯಾಲೋಕ ಸಂಚಾರಿ

ಸಂಖ್ಯಾಪ್ರಪಂಚ ಮತ್ತು ಪ್ರತೀಕಲೋಕ ಇವನ ಸ್ವಂತ ವಿಹಾರರಂಗ. ಅಗಾಧ ಜ್ಞಾಪಕಶಕ್ತಿ, ವಿಸ್ತಾರ ಮತ್ತು ಸಂಕೀರ್ಣ ಗಣಿತ ಗಣನೆಗಳನ್ನು ಆಧುನಿಕ ಗಣಕಗಳ ಕ್ಷಿಪ್ರತೆಯಿಂದಲೂ ದಕ್ಷತೆಯಿಂದಲೂ ನಿರ್ವಹಿಸಬಲ್ಲ ನಿಶಿತಮತಿ, ಮಾಹಿತಿಗಳ ಎಂಥ ಗೊಂದಲದ ಸಂತೆಯಿಂದಲೂ ಗಣಿತ ಸತ್ತ್ವವನ್ನು ನೇರವಾಗಿ ಗ್ರಹಿಸಬಲ್ಲ ಸುತೀಕ್ಷ್ಣ ದೃಷ್ಟಿ, ಸತತ ಕಾರ್ಯತತ್ಪರತೆ ಇವೆಲ್ಲ ಗುಣಗಳ ಸಾಕಾರಮೂರ್ತಿ ಆಯ್ಲರ್.

ಪಿಯರಿ ದ ಫರ್ಮಾ (1601-65) ಎಂಬ ಫ್ರೆಂಚ್ ಗಣಿತ ಧೀಮಂತ ಸದಾ ಅವಿಭಾಜ್ಯಗಳನ್ನು* (primes) 'ಉದುರಿಸುವ' ಒಂದು ಗಣಿತೋಕ್ತಿಯನ್ನು ಉಪಜ್ಞಿಸಿರುವುದಾಗಿ (invent) ಸಾರಿದ. ಇದರ ಪ್ರಕಾರ ದೊರೆತ ಮೊದಲ ನಾಲ್ಕು ಸಂಖ್ಯೆಗಳೆಲ್ಲವೂ ಅವಿಭಾಜ್ಯಗಳಾಗಿದ್ದುವು: 5, 17, 257, 65537. ಇವನ್ನು ಭಾಗಿಸಬಲ್ಲ ಅಪವರ್ತನಗಳೇ ಇಲ್ಲ. ಇದೇ ಉಕ್ತಿಯ ಪ್ರಕಾರ ದೊರೆತ ಐದನೆಯ ಸಂಖ್ಯೆ 4294967297. ಇದು ಕೂಡ ಅವಿಭಾಜ್ಯವೇ? ಅಲ್ಲವೆಂದು ಆಯ್ಲರ್ ಸಾಧಿಸಿದ (1732):

$$4294967297 = 641 \times 6700417$$

ವೃತ್ತದ ಪರಿಧಿ ಮತ್ತು ವ್ಯಾಸ ಇವುಗಳ ನಿಷ್ಪತ್ತಿ ಒಂದು

---

* 1 ಮತ್ತು ಸ್ವತಃ ಆ ಸಂಖ್ಯೆಯಿಂದ ಮಾತ್ರ ಭಾಗವಾಗುವ ಧನಪೂರ್ಣಾಂಕಗಳು. 2, 3, 5, 7, 11, 13, 17, 19 ಇವು ಮೊದಲ ಎಂಟು ಅವಿಭಾಜ್ಯಗಳು.

(4) ಸ್ಥಿರಸಂಖ್ಯೆ. ಇದರ ಬೆಲೆ 3 ಮತ್ತು 4ರ ನಡುವೆ ಇದೆ. ಖಚಿತ ಬೆಲೆ ನಿರ್ಧರಿಸುವುದು ಅಸಾಧ್ಯ. ಈ ಸ್ಥಿರಸಂಖ್ಯೆಗೆ $\pi$ ಎಂಬ ಸಾಂಕೇತಿಕ ಪ್ರತೀಕ ಸೂಚಿಸಿದಾತ ಆಯ್ಲರ್. $d$ ವ್ಯಾಸವಿರುವ ವೃತ್ತದ ಪರಿಧಿ $\pi d$.

ಋಣಸಂಖ್ಯೆಯ ವರ್ಗಮೂಲ ಅರ್ಥಹೀನ ಭಾವನೆ ಎಂಬುದು ಸಾಧಾರಣ ನಂಬಿಕೆ. $\sqrt{4} = +2$ ಅಥವಾ $-2$. ಹಾಗಾದರೆ $\sqrt{-4} = ?$ ಈ ಸಂದಿಗ್ಧತೆ ಬಿಡಿಸಲು ಆಯ್ಲರ್ $\sqrt{-1} = i$ ಎಂದು ಪ್ರತೀಕಿಸಿ $i^2 = -1$ ಎಂದು ವ್ಯಾಖ್ಯಿಸಿದ. ಈ ಸುಲಭೋಪಾಯ ಸಂಖ್ಯಾಪ್ರಪಂಚವನ್ನು ಊಹಾತೀತವಾಗಿ ವಿಸ್ತರಿಸಿದೆ.

$$1 + \frac{1}{1!} + \frac{1}{2!} + \frac{1}{3!} + \frac{1}{4!} + \ldots\ldots\ldots \infty \qquad \ldots(5)$$

ಇದೊಂದು ಅಭಿಸರಿಸುವ ಅನಂತಶ್ರೇಣಿ. ಇದರ ಮೊತ್ತ 2 ಮತ್ತು 3ರ ನಡುವೆ ಇದೆ. ಖಚಿತ ಬೆಲೆ ನಿರ್ಧರಿಸುವುದು ಅಸಾಧ್ಯ. ಈ ಸ್ಥಿರಸಂಖ್ಯೆಗೆ $e$ ಎಂಬ ಸಾಂಕೇತಿಕ ಪ್ರತೀಕ ಸೂಚಿಸಿದಾತ ಆಯ್ಲರ್. (ಅಂದ ಹಾಗೆ $1! = 1$, $2! = 2\times1$, $3! = 3\times2\times1$, $4! = 4\times3\times2\times1$ ಇತ್ಯಾದಿ.)

ಮುಂದೆ ತ್ರಿಕೋಣಮಿತಿಯ ಉತ್ಪನ್ನಗಳನ್ನು ($\sin x$, $\cos x$ ಮುಂತಾದವು) $i$ಯನ್ನು $e$ಯನ್ನು ಬೆಸೆದು

$$e^{2\pi i} = \cos 2\pi + i \sin 2\pi = 1 \qquad \ldots(6)$$

ಎಂಬ ಪರಮಸುಂದರ ಫಲ ಪಡೆದಾತ ಆಯ್ಲರ್.

ಈ ಮಹಾಮತಿಯ ಇತರ ಕೊಡುಗೆಗಳನ್ನು ಉನ್ನತ ಗಣಿತದ ಜಟಿಲ ಕ್ಷೇತ್ರ ಪ್ರವೇಶಿಸದೇ — ಆದ್ದರಿಂದ ಗಣಿತದ ಪರಿಭಾಷೆಗೆ ಶರಣಾಗದೇ — ವಿವರಿಸುವುದು ಕಡು ಕಷ್ಟ.

## ಟಾಪಾಲಜಿಯಲ್ಲಿ ಮೊದಲ ಪಾಠ

ಈ ಲೇಖನ ಪ್ರಕಟವಾಗಿರುವ ಕಾಗದದ ಹಾಳೆಯನ್ನು ಎಳೆದು ನೋಡಿ — ಹರಿದುಹೋಗುತ್ತದೆ; ತಿರುಚಿನೋಡಿ — ಮುದುಡಿ ಮುದ್ದೆಯಾಗುತ್ತದೆ. ಉಭಯ ಸಂದರ್ಭಗಳಲ್ಲಿಯೂ ಅಕ್ಷರಗಳಾಗಲೀ ಚಿತ್ರಗಳಾಗಲೀ ವಿರೂಪಗೊಳ್ಳುವುದಿಲ್ಲ. ಹೀಗಲ್ಲದೇ ಇದೊಂದು ರಬ್ಬರ್ ಹಾಳೆಯಾಗಿದ್ದರೆ (ಅಂದರೆ ಸ್ಥಿತಿಸ್ಥಾಪಕ ಗುಣ ಉಳ್ಳದ್ದಾಗಿದ್ದರೆ) ಇವೇ ಕ್ರಿಯೆಗಳಿಗೆ ಇದರ ವರ್ತನೆ ಹೇಗಿರುತ್ತಿತ್ತು? ಎಳೆದಾಗ ಎಳೆತದ ದಿಶೆಯಲ್ಲಿ ತುಸು ಮಲುಚಿಕೊಂಡು ವಿಸ್ತರಿಸಿರುತ್ತಿತ್ತು. ತಿರುಚಿದಾಗ ಬೇರೆ ಯಾವುದೋ ಭಂಗಿ ತಳೆದಿರುತ್ತಿತ್ತು. ಉಭಯ ಸಂದರ್ಭಗಳಲ್ಲಿಯೂ ಇದರ ಮೇಲಿನ ಅಕ್ಷರಗಳೂ ಮತ್ತು ಚಿತ್ರಗಳೂ ವಿರೂಪಗೊಂಡು ವಿಚಿತ್ರವಾಗಿ ಕಾಣುತ್ತಿದ್ದುವು. ಮೂಲ ಚಿತ್ರಗಳಿಗೂ — ಅಂದರೆ ರಬ್ಬರ್ ಹಾಳೆ ಸಹಜಸ್ಥಿತಿಯಲ್ಲಿದ್ದಾಗಿನವು — ಈ ವಿಕೃತ ಚಿತ್ರಗಳಿಗೂ ನಡುವೆ ಏನಾದರೂ ಜ್ಯಾಮಿತೀಯ ಸಂಬಂಧ ಸ್ಥಾಪಿಸುವುದು ಸಾಧ್ಯವಾದೀತೇ? ಈ ಪ್ರಶ್ನೆಗೆ ಉತ್ತರ ಅರಸುವ ಗಣಿತವಿಭಾಗಕ್ಕೆ ಟಾಪಾಲಜಿ ಎಂದು ಹೆಸರು — ಸಂಸ್ಥಿತಿ ವಿಜ್ಞಾನ, ಜನಪ್ರಿಯ ಭಾಷೆಯಲ್ಲಿ ರಬ್ಬರ್ ಹಾಳೆ ಜ್ಯಾಮಿತಿ.

ಜರ್ಮನಿಯ ಕೋನಿಗ್ಸ್‌ಬರ್ಗ್‌ನಲ್ಲಿ ಪ್ರೆಗೆಲ್ ನದಿ ಹರಿ

~~ಚಿತ್ರ 1 ಮತ್ತು ಚಿತ್ರ 2~~

(5) ಯುತ್ತದೆ(~~ಚಿತ್ರ 1~~). C ಮತ್ತು D ಇದರ ಎರಡು ದಂಡೆಗಳು. A ಮತ್ತು B ಇದರಲ್ಲಿರುವ ಎರಡು ನಡುಗುಡ್ಡೆ(ದ್ವೀಪ)ಗಳು. 1ರಿಂದ 7ರ ವರೆಗಿನ ಏಳು ಸೇತುವೆಗಳು ಈ ನಡುಗುಡ್ಡೆಗಳನ್ನು ದಂಡೆಗಳನ್ನು ಪರಸ್ಪರ ಸಂಪರ್ಕಿಸಿವೆ.

ನಡುಗುಡ್ಡೆಗಳಿಗೆ ವಾಯುವಿಹಾರಾರ್ಥ ಬರುತ್ತಿದ್ದ ಅಸಂಖ್ಯರ ಪೈಕಿ ಕೆಲವು 'ಬುದ್ಧರು' ಇಲ್ಲೊಂದು ಹೊಸ ಮೋಜು ಕಂಡರು: ದಂಡೆ, ಸೇತುವೆ ಅಥವಾ ನಡುಗುಡ್ಡೆ ಮೇಲಿನ ಯಾವುದೇ ನೆಲೆಯಿಂದ ಹೊರಟು ಪ್ರತಿಯೊಂದು ಸೇತುವೆಯನ್ನು ಒಮ್ಮೆ ಮತ್ತು ಒಮ್ಮೆ ಮಾತ್ರ ಅಡ್ಡಹಾಯುತ್ತ ಉಭಯ ನಡುಗುಡ್ಡೆಗಳನ್ನು ~~ಸಂಪ~~ ಸಂಪರ್ಕಿಸುತ್ತ ಹೊರಟಲ್ಲಿಗೇ ಮರಳುವುದು ಸಾಧ್ಯವೇ?

ಚಿತ್ರ (1)ರಲ್ಲಿ ಇಂಥ ಒಂದು ಪ್ರಯತ್ನ ಕಾಣಿಸಿದೆ: P ಯಿಂದ ತೊಡಗಿ Q ವರೆಗೆ ನಡಿಗೆ ಬಲು ಸಲೀಸು. ಈಗ ಸೇತುವೆ 5 ದಾಟಲು ಬಾಕಿ ಇದೆ; ಅಲ್ಲದೇ P ಗೆ ಹಿಂತಿರುಗಲೂ ಬೇಕಾಗಿದೆ. ಸಮಸ್ಯೆಯ ವಿಷಮ ಮರ್ಮವಿದೇ — ಯಾವುದೇ ಸೇತುವೆ ಮೇಲೆ ಒಂದು ಸಲ ಮಾತ್ರ ನಡೆಯತಕ್ಕದ್ದು — ಈ ಹಾದಿಯಲ್ಲಿ ಮುಂದೆ ಸಾಗುವಂತಿಲ್ಲ. ನೀವು ಬೇರೆ ಯಾವುದೇ ನೆಲೆಯಿಂದ ಹೊರಟು ಇನ್ನಾವುದೇ ಪಥ ಹಿಡಿದು ನಡೆದು ನೋಡಿ: ಕೊನೆ ಹಂತದಲ್ಲಿ 'ದಾರಿಯಾವುದಯ್ಯಾ ವೈಕುಂಠಕೆ?' ಎನ್ನುವ ಕುರುಡುಗಲ್ಲಿ ತಲಪಿರುತ್ತೀರಿ.

ಎಲ್ಲಿ ಸಾಮಾನ್ಯ ಪ್ರಜ್ಞೆ ಮುಸಳುತ್ತದೋ ಅಲ್ಲಿ ಗಣಿತಪ್ರಜ್ಞೆ ಮಿನುಗುತ್ತದೆ.

ಆಯ್ಲರನ ಮುಂದೆ ಈ ಸಮಸ್ಯೆಯನ್ನು ಮಂಡಿಸಲಾಯಿತು. ಬಿಡಿವಿವರಗಳ ಅಮಿತ ಗೊಂದಲಗಳ ನಡುವೆ ಪ್ರಮೇಯ ಅಥವಾ ಸೂತ್ರ ಹುಡುಕುವುದರಲ್ಲಿ ಈತ ಅಗ್ರಗಣ್ಯ — ನೆಲದ ಮೇಲಿನ ಅಪಾರ ವಿಸ್ತಾರದಲ್ಲಿ ಯಾದೃಚ್ಛಿಕವಾಗಿ ಹರಡಿಹೋಗಿರುವ ಎಡ್ಡತಿಡ್ಡುಗಳ, ಅಂಕುಡೊಂಕುಗಳ ಹಾಗೂ ಹರಕು ಮುರುಕುಗಳ ಕಲಸಿನಿಂದ ಮೇಲೆ ಮೇಲೆ ಏರಿದಂತೆ ಇವನ್ನೆಲ್ಲ ಬಂಧಿಸಿಟ್ಟಿರುವ ಪ್ರಾಕೃತಿಕ ರೇಖೆಗಳೋ ~~ನೈಸ~~ ನೈಸರ್ಗಿಕ ವಿನ್ಯಾಸಗಳೋ ಗೋಚರಿಸುವಂತೆ. ಆ ಕ್ಷಣದಲ್ಲಿ ಆಯ್ಲರ್ ಕಂಡದ್ದು ದಂಡೆಗಳನ್ನು ನಡುಗುಡ್ಡೆಗಳನ್ನು ಪ್ರತಿನಿಧಿಸುವ ~~ಬಿಂದು~~ ಬಿಂದುಗಳನ್ನು ಮತ್ತು ಇವನ್ನು ಪರಸ್ಪರ ಬೆಸೆಯುವ ವಕ್ರರೇಖೆಗಳನ್ನು, ಉಳಿದ ಅನಾವಶ್ಯಕ ದೃಶ್ಯಗಳನ್ನಲ್ಲ — ಅರ್ಜುನನ ಮೀನಿನ ಕಣ್ಣು ಮಾತ್ರ ಕಂಡಂತೆ.

ಚಿತ್ರ (2)ರಲ್ಲಿ A ಯಿಂದ D ವರೆಗಿನ ನಾಲ್ಕು ಬಿಂದುಗಳು ಚಿತ್ರ (1)ರಲ್ಲಿಯ ಸಂವಾದೀ ನೆಲೆಗಳನ್ನು, 1ರಿಂದ 7ರ ವರೆಗಿನ ವಕ್ರರೇಖೆಗಳು ಸಂವಾದೀ ಸೇತುವೆಗಳನ್ನು ಪ್ರತಿನಿಧಿಸುತ್ತವೆ. ಚಿತ್ರ (2)ನ್ನು ಆಧರಿಸಿ ಆಯ್ಲರ್ ಕೋನಿಗ್ಸ್‌ಬರ್ಗಿನ ಸಪ್ತ ಸೇತುವೆಗಳ ತತ್ತ ಸಮಸ್ಯೆಗೆ ಗಣಿತಪರಿಹಾರ ನೀಡಿ ಅದನ್ನು ಸೂತ್ರವಾಗಿಸಿದ.

ಚಿತ್ರ (2)ರಲ್ಲಿ ಯಾವುದೇ ಬಿಂದುವಿನಲ್ಲಿ ಪೆನ್ಸಿಲ್ ಮೊನೆಯೂರಿ ~~ಇದನ್ನು~~ ಎಂದೂ ಮೇಲೆತ್ತದೇ ಪ್ರತಿಯೊಂದು ವಕ್ರರೇಖೆಯ

(6) ಮೇಲೆಯೂ ಒಂದು ಸಲ ಮಾತ್ರ ಸರಿಯುತ್ತ ಹೊರಟಲ್ಲಿಗೆ ಹಿಂತಿರುಗುವುದು ಸಾಧ್ಯವೇ? ಉದಾಹರಣೆಗೆ C-1-A-4-D-2-A-3-C-6-B-5-A ಹಾದಿ ಹಿಡಿಯಬಹುದು. ಮುಂದೆ ಹೇಗೆ ಹೋಗುವುದು? 7 ಉಳಿದಿದೆ, C ಗೆ ಮರಳಬೇಕಾಗಿದೆ!

ಆಯ್ಲರ್ ಈ ಸಮಸ್ಯೆಯನ್ನು ಗಣಿತೀಯವಾಗಿ ವಿಶ್ಲೇಷಿಸಿ ಇದು ಅಸಾಧ್ಯವೆಂದು ರುಜುವಾತಿಸಿದ (1736). ಮುಂದೆ ಹತ್ತೊಂಬತ್ತನೆಯ ~~ಶತ~~ ಶತಮಾನದಲ್ಲಿ ವಿಜೃಂಭಿಸಿ ಇಂದು ಆಧುನಿಕ ಗಣಿತದ ಪ್ರಮುಖ ಅಂಗವಾಗಿ ನಳನಳಿಸುತ್ತಿರುವ ಟಾಪಾಲಜಿಯು ತೀರ ಅಸಾಂಪ್ರದಾಯಿಕ, ಅಗಮನಾರ್ಹ ಆದರೆ ಅಸಾಧಾರಣ ಉಗಮವಾದದ್ದು ಹೀಗೆ — ಆಯ್ಲರನ ಪ್ರಖರ ಗಣಿತ ಮನೀಷೆಯಲ್ಲಿ, ತನ್ನ ಕಾಲಕ್ಕಿಂತ ಒಂದು ಶತಮಾನ ಮೊದಲೇ. ~~ಟಾಪಾ~~ ಟಾಪಾಲಜಿಯ ಆದ್ಯಪ್ರವರ್ತಕರ ಪೈಕಿ ಆಯ್ಲರನೂ ಒಬ್ಬ.

ಯಾವುದೇ ಬಹುಫಲಕದಲ್ಲಿ (ಚಿತ್ರ(3)ರಲ್ಲಿ a ಚತುಷ್ಫಲಕ, b ಷಟ್ಫಲಕ, c ಸಪ್ತಫಲಕ) ಶೃಂಗ V, ಫಲಕ F ಮತ್ತು ಅಂಚು E ಈ ಸಂಖ್ಯೆಗಳ ನಡುವೆ ಒಂದು ಅನುಭವಜನ್ಯ ಸರಳಸಂಬಂಧವಿದೆ:

ಚಿತ್ರ 3

V, F, E all italics u.c.

| ಫಲಕನಾಮ | V | F | E |
|---|---|---|---|
| ಚತುಷ್ಫಲಕ ... | 4 | ... 4 | ... 6 |
| ಷಟ್ಫಲಕ ... | 8 | ... 6 | ... 12 |
| ಸಪ್ತಫಲಕ ... | 7 | ... 7 | ... 12 |

ಈ ಸಂಬಂಧವೇನೆಂಬುದನ್ನು ಈಗ ನೀವೇ ಊಹಿಸಬಲ್ಲಿರಿ:

$$V + F - E = 2 \quad \cdots (7)$$

ಬಹುಫಲಕಗಳನ್ನು ಕುರಿತಂತೆ ಇದೊಂದು ಸಾರ್ವತ್ರಿಕ ನಿಯಮ. ಟಾಪಾಲಜಿಯಲ್ಲಿ ಇದೊಂದು ಖಚಿತ ಪ್ರಮೇಯವೆಂದು ಮೊದಲಬಾರಿಗೆ ಸಾಧಿಸಿದವ ಆಯ್ಲರ್.

## ಗಣಿತ ವಿದ್ಯುಜ್ಜನಕ

ಸ್ವಿಟ್ಸರ್ಲೆಂಡಿನ ಬಾಸಿಲ್ ಎಂಬಲ್ಲಿ ಆಯ್ಲರ್ 15-4-1707ರಂದು ಜನಿಸಿದ. ತಂದೆ ಪಾಲ್ ಆಯ್ಲರ್ ಕಾಲ್ವಿನ್ ಪಂಥದ ಧಾರ್ಮಿಕ ಗುರು. ತೃಪ್ತಿದಾಯಕ ಹಾಗೂ ಗೌರವಾನ್ವಿತ ಜೀವನ. ಬಾಲ್ಯದಲ್ಲಿ ಇವನು ಉತ್ತಮ ಗಣಿತ ವಿದ್ಯಾರ್ಥಿ. ಜೇಕಬ್ ಬರ್ನೂಲ್ಲಿ (1654-1705) ಎಂಬ ಪ್ರಸಿದ್ಧ ಗಣಿತವಿದ್ವಾಂಸನ ಶಿಷ್ಯನಾಗಿ ಗಣಿತ ತತ್ತ್ವಗಳ ಬಗ್ಗೆ ಸೂಕ್ಷ್ಮ ಅಂತರ್ದೃಷ್ಟಿ ಬೆಳೆಸಿಕೊಂಡಿದ್ದ. ಆದರೆ ಮುಂದೆ ಪಾಲ್ ಹಿಡಿದ ವೃತ್ತಿಯ ಕಾರಣವಾಗಿ ಈ ಅಂತರ್ದೃಷ್ಟಿಗೆ ಪ್ರವರ್ಧಿಸಲು ಅವಕಾಶ ಒದಗಲಿಲ್ಲ.

ಸಹಜವಾಗಿಯೇ ತಂದೆ ತನ್ನ ಸುಪುತ್ರನಿಗೆ ಗಣಿತ ಬೋಧಿಸಿದ. ಬುದ್ಧಿ ವಿಕಸನಕ್ಕೆ ಗಣಿತ, ಜೀವನ ನಿರ್ವಹಣೆಗೆ ಧಾರ್ಮಿಕ ಗುರುತ್ವ — ಇದು ಇವನು ಮಗನ ಭವಿಷ್ಯ ಕುರಿತಂತೆ ತಳೆದ ಧೋರಣೆ. ಲಿಯೊನ್ಹಾರ್ಡ್ ಧಾರ್ಮಿಕ ಶಿಕ್ಷಣವನ್ನೇನೋ ಪಡೆದ. ಆದರೆ ಗಣಿತ ಇವನಲ್ಲಿ ತನ್ನ ಮುಖವಾಣಿಯನ್ನು ಆಯ್ದಿತ್ತೋ ಎಂಬಂತೆ ಆ

(7) ದಿಶೆಯಲ್ಲಿ ಇವನ ವ್ಯಕ್ತಿತ್ವ ಸಾಗರೋತ್ತರಣಾಪೂರ್ವ ಹನುಮಂತನ ರೀತಿ ಅತಿಶಯವಾಗಿ ವರ್ಧಿಸಿತು.

ಶಾಲೆ ಕಾಲೇಜ್ ಶಿಕ್ಷಣ ಇವನಿಗೆ ನಿಮಿತ್ತ ಮಾತ್ರ. ಬಾಸೆಲ್ ವಿಶ್ವವಿದ್ಯಾಲಯದಿಂದ ~~ಯದಿಂದ~~ ಹದಿನೇಳನೆಯ ವಯಸ್ಸಿನಲ್ಲಿ ಮಾಸ್ಟರ್ ಪದವಿ ಪಡೆದ (1724). ಇವನ ಗಣಿತದಾಹ ಗಮನಿಸಿದ ಯೋಹಾನಿಸ್ ಬರ್ನೂಲ್ಲೀ (1667-1748, ಜೇಕಬ್ ಬರ್ನೂಲ್ಲೀಯ ತಮ್ಮ, ಪ್ರಸಿದ್ಧ ಗಣಿತಪಂಡಿತ) ಇವನಿಗೆ ವಾರಕ್ಕೊಮ್ಮೆ ಖಾಸಗಿ ಗಣಿತ ಪಾಠ ಬೋಧಿಸಿದ. ಈ ಶಿಷ್ಯ ಹೇಗಿದ್ದ? ವಾರಪೂರ್ತಿ ಅಧ್ಯಯನ, ಚಿಂತನ ಮತ್ತು ಲೇಖನ ~~ವ್ಯವ~~ ವ್ಯವಸಾಯ ಮಾಡಿ ಪ್ರತಿಸಲವೂ ಗುರುವಿಗೆ ಹೊಸ ಸವಾಲು ಎಸೆಯುತ್ತಿದ್ದ!

ವಯಸ್ಸಿಗೆ ಬಂದ ಮಗ ತನ್ನ ಹುದ್ದೆಗೆ ಕಾಲಿಟ್ಟು ನೆಮ್ಮದಿ ಬಾಳು ಸಾಗಿಸಬೇಕೆಂಬುದು ತಂದೆಯ ಅಭಿಲಾಷೆ. ಆದರೆ ಆಯ್ಲರ್ ಎಂಬ ನಾಣ್ಯ ಈಗಾಗಲೇ ಗಣಿತ ಟಂಕಶಾಲೆಯಿಂದ ಲಾಂಛನಸಹಿತ ಹೊರಬಂದಿತ್ತು ~~ದಿತ್ತು~~ ಚಲಾವಣೆಗೆ. ಇವನ ಗಣಿತ ಧೀಮಂತಿಕೆಯ ಹರವು ಮತ್ತು ಆಳ ಅರಿತಿದ್ದ ಬರ್ನೂಲ್ಲೀ ಸಹೋದರರ ಸಾಮಯಿಕ ಹಿತೋಕ್ತಿಯ ಫಲವಾಗಿ ತಂದೆ ಮಗನ ಭವಿಷ್ಯದ ಬಗ್ಗೆ ಮತ್ತೆ ಹಸ್ತಕ್ಷೇಪ ಮಾಡಲಿಲ್ಲ. ಮಗ ಮಾತ್ರ ಜೀವನಪರ್ಯಂತ ಆಸ್ತಿಕ ಶಿಖಾಮಣಿಯಾಗಿಯೇ ಬಾಳಿದ.

ಇತಿಹಾಸ ಕಾಲದಿಂದ ಕಾಲಕ್ಕೆ ಎಸೆಯುವ ಹಲವಾರು ಆಕಸ್ಮಿಕಗಳಿವೆ. ಇವು ಯಾವುದೇ ತೆರನಾದ ವೈಜ್ಞಾನಿಕ ವಿಶ್ಲೇಷಣೆಗೂ ~~ಒಳ~~ ಒಳಪಡುವುದಿಲ್ಲ. ಆದರೂ ಹಿನ್ನೋಟ ಒದಗಿಸುವ ಸೌಕರ್ಯದಿಂದ ವೀಕ್ಷಿಸಿ ಇವುಗಳಲ್ಲಿ ಕಂಡುಬರುವ ಅದ್ಭುತ ಹೊಂದಾಣಿಕೆಯನ್ನು ~~ಮೆಚ್ಚದಿರ~~ ಮೆಚ್ಚದಿರಲಾಗುವುದಿಲ್ಲ. ಆಯ್ಲರ್ ರಂಗಪ್ರವೇಶಿಸಿದಾಗ ಪರಿಸ್ಥಿತಿ ಹೇಗಿತ್ತೆಂಬುದನ್ನು ಈ ದೃಷ್ಟಿಯಿಂದ ಪರಿಶೀಲಿಸೋಣ.

ನಿಕೊಲಾಸ್ ಕೊಪರ್ನಿಕಸ್ (1473-1543) ಸೂರ್ಯಕೇಂದ್ರವಾದ ~~ವಾದ~~ ಮಂಡಿಸಿ ಖಗೋಳವಿಜ್ಞಾನದ ಭವಿಷ್ಯಾಭಿವರ್ಧನೆಗೆ ಭದ್ರ ಅಡಿಪಾಯ ಒದಗಿಸಿದ. ಕೇಂದ್ರಸ್ಥಾನದಲ್ಲಿ ಸೂರ್ಯ ಇದ್ದು (ಭೂಮಿ ಅಲ್ಲ) ಅದರ ಸುತ್ತ ಗ್ರಹೋಪಗ್ರಹಗಳು ಪರಿಭ್ರಮಿಸುತ್ತವೆ ಎಂಬುದು ಈ ವಾದದ ಸಾರ.

ಗೆಲಿಲಿಯೋ ಗೆಲಿಲೀ (1564-1642) ವಿಶ್ವದಲ್ಲಿಯ ನೈಸರ್ಗಿಕ ಘಟನೆಗಳನ್ನು ಪ್ರಯೋಗಾಲಯದ ನಿಯಮಿತ ಹಾಗೂ ನಿರ್ಬಂಧಿತ ಪರಿಸರದಲ್ಲಿ ಪುನರಾವರ್ತಿಸಿ ಭೌತ ಘಟನೆಗಳ ಹಿನ್ನೆಲೆ ನಿಯಮಗಳನ್ನು ಶೋಧಿಸಿದ. ಇವನ್ನು ಗಣಿತದ ನಿರಪೇಕ್ಷ ಪರಿಭಾಷೆಗೆ ತರ್ಜುಮಿಸಿ ನೈಸರ್ಗಿಕ ವಿದ್ಯಮಾನಗಳ ಅಧ್ಯಯನಕ್ಕೆ ನೂತನ ದೃಷ್ಟಿ ಒದಗಿಸಿದ.

ಯೋಹನ್ ಕೆಪ್ಲರ್ (1571-1630) ಗ್ರಹಚಲನನಿಯಮಗಳನ್ನು ಆವಿಷ್ಕರಿಸಿ ಸೌರವ್ಯೂಹಕ್ಕೆ ಉಚಿತ ಭೌತ ಅಸ್ತಿತ್ವ ನೀಡಿದ. ಈ ವ್ಯೂಹ ಅರಿಯಲಾಗದ ಒಂದು ಸಂತೆ ಅಲ್ಲ, ವಿವರಿಸಬಹುದಾದ ~~ದಾದ~~ ಒಂದು ವ್ಯವಸ್ಥೆ ಎಂದು ವಿಶದೀಕರಿಸಿದ.

ರೆನೆ ಡೇಕಾರ್ಟ್ (1596-1650) ಸರಳ ಹಾಗೂ ವಕ್ರ ರೇಖೆಗಳ ಸಮುಚ್ಚಯವಾದ ರೇಖಾಗಣಿತವನ್ನು (ಜ್ಯಾಮಿತಿ)

(8) ಬೈಜಿಕ ಪ್ರತೀಕಗಳ ಸಮುಚ್ಚಯವಾದ ಬೀಜಗಣಿತದ ಜೊತೆ ಸಮನ್ವಯಗೊಳಿಸಿ ಬೀಜರೇಖಾಗಣಿತವನ್ನು (ವಿಶ್ಲೇಷಣಾ ಜ್ಯಾಮಿತಿ) ಪ್ರವರ್ತಿಸಿದ. ಇದರ ಪ್ರಕಾರ

$$x^2+y^2+2gx+2fy+c=0 \qquad \ldots(8)$$

ಎಂಬ ಸಮೀಕರಣ ಚಿತ್ರ (4)ರಲ್ಲಿ ಕಾಣಿಸಿರುವ ವೃತ್ತದ ಬೈಜಿಕ ರೂಪ; ಚಿತ್ರ (4) ಸಮೀಕರಣ (8)ರ ಪ್ರತ್ಯಕ್ಷ ರೂಪ. ರೇಖಾಗಣಿತದಿಂದ ಬೀಜಗಣಿತಕ್ಕೆ ಮತ್ತು ವಿಪರ್ಯಯವಾಗಿ ಅಂತರಣಾಕಾಯನಗೈಯುವ ಈ ಸೌಲಭ್ಯ ಉಭಯ ಕ್ಷೇತ್ರಗಳ ಅತಿಶಯ ವೃದ್ಧಿಗೆ ಅಪಾರ ನೂಕುಬಲ ಒದಗಿಸಿತು.

ಐಸಾಕ್ ನ್ಯೂಟನ್ (1642-1727) ಈ ದೈತ್ಯರ ಹೆಗಲ ಮೇಲೆ ನಿಂತು ನವ ದಿಗಂತಗಳನ್ನು ಅನಾವರಣಗೊಳಿಸಿದ. ಅಲ್ಲಲ್ಲಿ ಬಿಡಿಬಿಡಿಯಾಗಿ ಬಿದ್ದುಹೋಗಿದ್ದ ಮಣಿಗಳನ್ನು ಕೋದು ಸುಂದರ ಹಾರ ನೇಯ್ದ. ಅದೇ ವಿಶ್ವಗುರುತ್ವಾಕರ್ಷಣ ನಿಯಮ, ವಿಶ್ವವನ್ನು 'ನಿಯ್ಯಾಳುತ್ತಿರುವ' ಭೌತ ಬಲದ ಗಣಿತ ವ್ಯಾಖ್ಯಾನ. ಕಲನಶಾಸ್ತ್ರವನ್ನು — ಅಂದರೆ ಅನಂತಾಲ್ಪ ಕಾಲದಲ್ಲಿ ಜರಗುವ ಅನಂತಾಲ್ಪ ಚಲನೆಯ ಮರ್ಮವನ್ನು ವಿವರಿಸುವ ಗಣಿತವಿಭಾಗ — ಕೂಡ ಈತ ಸೃಷ್ಟಿಸಿದ.

ಗಾಟ್‌ಫ್ರೈಡ್ ವಿಲ್‌ಹೆಲ್ಮ್ ಲೈಪ್‌ನಿಟ್ಸ್ (1646-1716) ಸ್ವತಂತ್ರವಾಗಿ ಕಲನಶಾಸ್ತ್ರವನ್ನು ಉಪಜ್ಞಿಸಿ ಅದರ ಆಧುನಿಕ ಪರಿಭಾಷೆಯನ್ನು ಚಲಾವಣೆಗೆ ತಂದ. ಆಧುನಿಕ ಗಣಿತ ಲೈಪ್‌ನಿಟ್ಸ್‌ಕೃತ ಕಲನಶಾಸ್ತ್ರದ (calculus) ಮೂಲಕ ಸಂವಹನಿಸುತ್ತದೆ ಎನ್ನುವುದುಂಟು.

ಗೆಲಿಲಿಯೋ ಗತಿಸಿದ ವರ್ಷ ನ್ಯೂಟನ ಜನಿಸಿದ್ದೊಂದು ಆಕಸ್ಮಿಕ. ಅದೇ ನ್ಯೂಟನ ಮಡಿದ ವರ್ಷ ಇಪ್ಪತ್ತರ ಆಯ್ಲರ್ ಉತ್ಸಾಹಾತಿಶಯದಿಂದ ಗಣಿತವಾಹಿನಿಗೆ ಧುಮುಕಿದ್ದೊಂದು ಯೋಗಾಯೋಗ.

ವಿಶ್ಲೇಷಣಾ ಜ್ಯಾಮಿತಿ, ಖಗೋಳವಿಜ್ಞಾನ, ಕಲನಶಾಸ್ತ್ರ, ಸಂಖ್ಯಾಸಿದ್ಧಾಂತ ಮುಂತಾದ ಸ್ವತಂತ್ರ ಖಂಡಗಳಾಗಿ ಪ್ರವರ್ಧಿಸುತ್ತಿದ್ದ ಗಣಿತಶಾಖೆಗಳನ್ನು ವಿಶ್ಲೇಷಣಗಣಿತದ ಭವ್ಯ ಸೂತ್ರದಿಂದ ಬಂಧಿಸಿದ್ದು ಮಾತ್ರವಲ್ಲ ಅವುಗಳ ಸ್ವಚ್ಛಂದ ವಿಕಾಸಕ್ಕೆ ಶಿಸ್ತಿನ ಕಡಿವಾಣ ತೊಡಿಸಿ ಅವು ಸರಿಯಾದ ಹಾದಿಯಲ್ಲಿ ಸಾಗುವಂತೆ ವಿಧಿಸಿದ್ದು ಆಯ್ಲರನ ಜಾಜ್ವಲ್ಯಮಾನ ಪ್ರತಿಭೆ.

ಇವನೊಬ್ಬ ಜೀವಂತ ವಿದ್ಯುಜ್ಜನಕ. ಸಮೃದ್ಧವಾಗಿ ಮತ್ತು ಸಂತತವಾಗಿ ಗಣಿತ ಸಂಶೋಧನ ಪ್ರಬಂಧಗಳನ್ನು ಬರೆದ. "ಮೇಲುನೋಟಕ್ಕೆ ಕಾಣುವಂತೆ ಆಯ್ಲರ್ ಯಾವ ಪ್ರಯತ್ನವೂ ಇಲ್ಲದೆ ಗಣನೆಮಾಡುತ್ತಿದ್ದ — ವ್ಯಕ್ತಿ ಉಸಿರಾಡುವಂತೆ ಅಥವಾ ಹದ್ದು ಗಾಳಿಯಲ್ಲಿ ತೇಲುವಂತೆ" ಎಂದು ಭೌತವಿಜ್ಞಾನಿ ಡಾಮಿನಿಕ್ ಫ್ರಾಂಕೋಯಿಸ್ ಜೀನ್ ಅರಾಗೋ (1786-1853) ಬರೆದಿದ್ದಾನೆ.

'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ಈತನವು—

(9.) ಗಣಿತ ಭಾವನೆಗಳು ಈತನ ಮನಸ್ಸಿನ ಅಂತರಾಳದಿಂದ ಪುಂಖಾನುಪುಂಖವಾಗಿ ಪ್ರವಹಿಸುತ್ತಿದ್ದುವೋ ಅವುಗಳಿಗೆ ಮೂರ್ತ ಅಥವಾ ಲಿಖಿತ ರೂಪ ಕೊಡುವುದು ಮಾತ್ರ ಈತನ ಕೆಲಸವೋ ಎಂಬಂತೆ. ಊಟದ ಕರೆ ಬಂದು ಇನ್ನೇನು ಲೇಖನಿ ಕೆಳಗಿಟ್ಟು ಅಲ್ಲಿಗೆ ಹೋಗಬೇಕು ಎನ್ನುವ ಕ್ಷಣ, ಸನ್ನಿವೇಶದಲ್ಲಿಯೂ ಪ್ರಬಂಧ ನಿರೂಪಣೆ ಈತನಿಗೆ ಅಲಾವಿಹಾರವಾಗಿತ್ತು. ಜೀವನ ಸಂಧ್ಯಾಕಾಲದಲ್ಲಿ ಪೂರ್ತಿ ಹದಿನೇಳು ವರ್ಷ ಪೂರ್ಣಾಂಧನಾಗಿ ನರಳಿದನಾದರೂ ಗಣಿತ ಭಾವನೆಗಳು ಮಾತ್ರ ಅಬಾಧ ಏಕಪ್ರಕಾರವಾಗಿ ಪ್ರವಹಿಸುತ್ತಿದ್ದುವು. ಬಳಪದ ಹಲಗೆಯೇ ಆಗ ಇವನ ಒಡನಾಡಿ.

## ದೇವರ ಅಸ್ತಿತ್ವಕ್ಕೆ ಗಣಿತಸಾಧನೆ

ಡೆನಿಸ್ ಡಿಡೆರೋ (1713-84) ಪ್ರಥಮ ಫ್ರೆಂಚ್ ವಿಶ್ವಕೋಶ ನಿರ್ಮಾಪಕ. ತತ್ತ್ವಶಾಸ್ತ್ರ, ಮತಧರ್ಮ, ಇತಿಹಾಸ, ಸಾಹಿತ್ಯ, ಮಾನವಿಕಗಳು ಮುಂತಾದ ಚಿಂತನ ಪ್ರಕಾರಗಳಲ್ಲಿ ಜಂಗಮ ಗ್ರಂಥಾಲಯ. ಕಾರ್ಯನಿರ್ವಹಣೆಯಲ್ಲಿ ಸಾಕ್ಷಾತ್ ಭೀಮನೇ. ನಿರ್ಭೀತ, ವಿಚಾರಪರಿಪ್ಲುತ ಮತ್ತು ಸ್ವತಂತ್ರ ಭಾವನೆಗಳನ್ನು ತರ್ಕಬಂಧುರವಾಗಿ ಸಾಕ್ಷ್ಯಾಧಾರಸಹಿತ ನಿರೂಪಿಸುವುದರಲ್ಲಿ ಸಿದ್ಧಹಸ್ತ. ಉಗ್ರ ನಿರೀಶ್ವರವಾದಿ. ಪ್ರತಿವಾದಿ ಭಯಂಕರ. ಅಂದಿನ ಸಂಪ್ರದಾಯಾನುಸಾರ ರಾಜಾಸ್ಥಾನಗಳಿಗೆ ವಿಜಯಯಾತ್ರೆ ಹೋಗಿ ಅಲ್ಲಿಯ ಪಂಡಿತರನ್ನು ತತ್ತ್ವಶಾಸ್ತ್ರೀಯ ವಿಚಾರಗಳಲ್ಲಿ ವಾದಕ್ಕೆ ಆಹ್ವಾನಿಸಿ ಅವರೊಡನೆ ಚರ್ಚಿಸಿ ಗೆದ್ದು ತನ್ನ ಹಿರಿಮೆ ಸ್ಥಾಪಿಸುವುದರಲ್ಲಿ ಅಜಾತಶತ್ರು. ರಾಜತ್ವ ಮತ್ತು ದೇವತ್ವ ಇವನ ಎರಡು ಪ್ರಬಲ ವೈರಿಗಳು. ಪ್ರಚಲಿತ ಹವೆಯಾದರೋ ಇವೆರಡಕ್ಕೂ ತೀರ ಅನುಕೂಲವಾಗಿದ್ದು (ನೆನಪಿರಲಿ: ರಾಜಾ ಪ್ರತ್ಯಕ್ಷ ದೇವತಾ; ನ್ಯಾಯಸಂಹಿತೆಯ ನಿಯಮಗಳು ರಾಜನಿಗೆ ಅನನ್ವಯವಾಗವು) ರಾಜರು ದೇವರ ಹಾಗೂ ಧರ್ಮದ ಹೆಸರಿನಲ್ಲಿ ನಿರಂಕುಶತೆ, ಹಿಂಸೆ ಹಾಗೂ ಕ್ರೌರ್ಯಗಳ ಮೂರ್ತರೂಪರಾಗಿದ್ದುದು ವಿರಳವಾಗಿರಲಿಲ್ಲ.

ಸಹಜವಾಗಿ ಡಿಡೆರೋ ಅನೇಕ ಕಷ್ಟಕಾರ್ಪಣ್ಯಗಳಿಗೂ ಶಿಕ್ಷೆ ಹಿಂಸೆಗಳಿಗೂ ತುತ್ತಾಗಬೇಕಾಯಿತು. ಆದರೂ ಹಠಮಾರಿ. ತಾನು ನಂಬಿದ ಹಾದಿ ಮೇಲೆ ನಡೆಯುತ್ತಿದ್ದ ದಿಟ್ಟ. ಒಮ್ಮೆ ಈತ ರಷ್ಯಾದ ಮಹಾರಾಣಿ ಕ್ಯಾತರೀನಳ (1762-96) ಆಸ್ಥಾನವಿದ್ವಾಂಸರಿಗೆ ಪಂಥಾಹ್ವಾನವಿತ್ತು ಪ್ರತಿವಾದವೆದುರಿಸಲು ಅಲ್ಲಿಗೆ ಹೋದ. ಇವನೇನಾದರೂ ಗೆದ್ದರೆ ನಾಸ್ತಿಕತ್ವಕ್ಕೆ ಜಯ ಲಭಿಸುವುದು ದಿಟ. ಹಾಗಾದರೆ ಭಗವಂತನ ಗತಿ? ಮಿಗಿಲಾಗಿ ರಾಣಿಯ ಸ್ಥಿತಿ? ವಾಸ್ತವ ಪರಿಸ್ಥಿತಿ ಏನೆಂದರೆ ಇವನನ್ನು ಎದುರಿಸಬಲ್ಲ ಆಸ್ತಿಕ ವಿದ್ವನ್ಮಣಿ ಆ ಆಸ್ಥಾನದಲ್ಲಿ ಮಾತ್ರವಲ್ಲ, ರಾಜ್ಯದಲ್ಲೇ ಇರಲಿಲ್ಲ.

ಹೀಗಾಗಿ ರಾಣಿ ಆಸ್ತಿಕ ಶಿಖಾಮಣಿ ಆಯ್ಲರನನ್ನು ಈ ಬೌದ್ಧಿಕ 'ಮಲ್ಲಕಾಳಗ' ಎದುರಿಸಲು ಸ್ವಪ್ರೇರಣೆಯಿಂದ ಕರೆಸಿಕೊಂಡಳು. ವೈರಿಯ ದುರ್ಬಲ ತಾಣಕ್ಕೆ ಹಠಾತ್ ಪ್ರಹಾರ ಘಾತಿಸುವುದೊಂದು

ಹಳೆಯ ಯುದ್ಧ ತಂತ್ರ. ಡಿಡ್ರೋ ಇತರ ವಿಷಯಗಳಲ್ಲಿ ಪ್ರಗಲ್ಭ ಪಂಡಿತನಾಗಿದ್ದರೂ ವಿಜ್ಞಾನ, ತತ್ರಾಪಿ ಗಣಿತ, ಕುರಿತಂತೆ ನವಜಾತ ಶಿಶುವಿನ ಅನರ್ಘ್ಯ ಜ್ಞಾನ ಪೂರ್ಣನಾಗಿದ್ದನೆಂಬ ದಿವ್ಯ ಸತ್ಯವನ್ನು ಆಯ್ಲರ್ ಪತ್ತೆ ಹಚ್ಚಿದ.

"ನಮ್ಮ ಆಸ್ಥಾನದಲ್ಲಿ ಪ್ರಸಿದ್ಧ ಗಣಿತವಿದ್ವಾಂಸನೊಬ್ಬನಿದ್ದಾನೆ. ಭಗವದಸ್ತಿತ್ವ ಕುರಿತಂತೆ ಅವನಲ್ಲೊಂದು ಗಹನ ಗಣಿತ ಸಾಧನೆ ಇದೆ. ನೀವು ಇಚ್ಛಿಸಿದಲ್ಲಿ ನಾಳೆ ಅದನ್ನು ಆಸ್ಥಾನದಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸಲಾಗುವುದು" ಎಂಬ ವಾರ್ತೆಯನ್ನು ಡಿಡ್ರೋನಿಗೆ ಅರುಹಲಾಯಿತು. ತುಂಬ ಸಂತೋಷದಿಂದ ಅವನಿದನ್ನು ಸ್ವಾಗತಿಸಿದ.

ಮರುದಿನ ರಾಣಿಯ ಒಡ್ಡೋಲಗ ಪೂರ್ಣವೈಭವದಿಂದ ವಿಜೃಂಭಿಸುತ್ತಿತ್ತು. ಡಿಡ್ರೋ ಪಾಂಡಿತ್ಯಜನ್ಯ ಘನ ಧಾರ್ಷ್ಟ್ಯದಿಂದ ಸುಖಾಸೀನನಾಗಿದ್ದ. ಬಾಣ ಬೀರಿದಂತೆ ಅಥವಾ ಉಗ್ಗಿಸಿದಂತೆ ಆಯ್ಲರ್ ವೇದಿಕೆಯೇರಿ ತಾರಸ್ಥಾಯಿಯಲ್ಲಿ ಆರ್ಭಟಿಸಿದ:

"ಮಹಾಮಾನ್ಯರೇ! $(a+b^n)/x = x$. ಆದ್ದರಿಂದ ದೇವರಿದ್ದಾನೆ. ಉಸುರಲಿ ನಿಮ್ಮ ಉತ್ತರ!"

ಇದೊಂದು ಅಸಾಮಾನ್ಯ ತರ್ಕಭೂಯಿಷ್ಠವಾದವೆಂದು ಭಾವಿಸಿದ ಡಿಡ್ರೋ ಇದಕ್ಕೆ ಉತ್ತರ ಕೊಡಲಾಗದೇ ತಬ್ಬಿಬ್ಬಾದ. ಆಸ್ಥಾನ ವಿದ್ವಾಂಸರು (ವಿದೂಷಕರು?) ಕಿಲಕಿಲನೆ ನಕ್ಕು ಅವನ ಅಪಮಾನದ ಗಾಯಕ್ಕೆ ಬರೆ ಹಾಕಿದರು. ಅನ್ಯಮಾರ್ಗ ತೋರದೇ ಡಿಡ್ರೋ ರಾಣಿಯ ಅನುಗ್ರಹಪೂರ್ವಕ ಅನುಮತಿ ಪಡೆದು ಆ ಕ್ಷಣ ಅಲ್ಲಿಂದ ನಿಷ್ಕ್ರಮಿಸಿಯೇ ಬಿಟ್ಟ!

ಗಣಿತ ಚರಿತ್ರಕಾರ ಇ. ಟಿ. ಬೆಲ್ ಬರೆದಿದ್ದಾರೆ "ಈ ವಿಜಯೋಲ್ಲಾಸದಿಂದ ತೃಪ್ತನಾಗದ ಆಯ್ಲರ್ ಇದೇ ವಿಚಾರವನ್ನು ಅತಿ ನಿಷ್ಠುರವಾಗಿ ಪರಿಗಣಿಸುತ್ತ, ತನ್ನ ಮೆಚ್ಚಿನ ಕೂಸಿಗೆ ಸುಂದರ ಕುಲಾವಿ ತೊಡಿಸಿ ದೇವರ ಅಸ್ತಿತ್ವದ ಬಗ್ಗೆ ಶ್ರೀಮದ್ಗಂಭೀರ ಸಾಧನೆ ನೀಡಿದ. ಅಲ್ಲದೇ ಜೀವ ಎಂಬುದು ದ್ರವ್ಯ ಪದಾರ್ಥವಲ್ಲವೆಂದೂ ಸಾಧಿಸಿದ. ಇವೆರಡು ದೈವಿಕ ಸಾಧನೆಗಳೂ ಸಮಕಾಲೀನ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಉನ್ನತ ಸ್ಥಾನ ಪಡೆದುವೆಂದು ವರದಿಯಾಗಿದೆ. ಇವು ಮಹಾಪ್ರತಿಭಾನ್ವಿತನೊಬ್ಬನ ಪ್ರಾಯಶಃ ಗಣಿತೀಯವಾಗಿ ಅಪ್ರಾಯೋಗಿಕ ಬುದ್ಬುದ ಪರಿಪಕ್ವ ಮುಕ್ತಾಫಲಗಳು!"

## ಗಣನೆಯ ಕೊನೆ

ಬೆಲ್ ಬರೆದಿದ್ದಾರೆ "ಸಾವು ಅಡರುವ ಕೊನೆ ಕ್ಷಣದ ತನಕವೂ ಆಯ್ಲರ್ ದೈಹಿಕವಾಗಿ ಚುರುಕಾಗಿದ್ದ, ಮಾನಸಿಕವಾಗಿ ಹರಿತವಾಗಿದ್ದ. ಎಪ್ಪತ್ತೇಳ ವಯಸ್ಸಿನಲ್ಲಿ, 18-9-1783ರಂದು, ಮಡಿದ. ಅದೇ ಅಪರಾಹ್ನ ಅವನು ಬಲೂನಿನ ವಾಯುಯಾನ ನಿಯಮಗಳ ಶೋಧನೆಯಲ್ಲಿ ಮಗ್ನನಾಗಿದ್ದ. ಎಂದಿನಂತೆ ಬಳಪದ ಹಲಗೆಯ ಮೇಲೆ ಗೀಚುತ್ತಿದ್ದ. ಲೆಕ್ಸೆಲ್ ಮತ್ತು ಈತನ ಕುಟುಂಬದ ಜೊತೆ ರಾತ್ರಿ ಭೋಜನ ಮುಗಿಸಿದ. ತೀರ ಈಚೆಗಿನ (1781) ಆವಿಷ್ಕಾರವಾಗಿದ್ದ 'ಹರ್ಷಲನ ಗ್ರಹ'ದ (ಯುರೇನಸ್) ಕಕ್ಷೆಯ ರೂಪರೇಖೆಗಳನ್ನು ಗಣಿಸಿದ. ಮೊಮ್ಮಗನನ್ನು ಆಟವಾಡಲು ಕರೆಸಿಕೊಂಡ. ಆಟ ಮುಂದುವರಿದಿತ್ತು. ಕುಸು ಚಹಾ ಸೇವಿಸಿದ. ಅಷ್ಟರಲ್ಲಿ

# ಸಭ್ಯತೆಯ ಸಾಕಾರ ಮೂರ್ತಿ

ವ್ಯಕ್ತಿಯ ಅಂತರಂಗದ ಸಂರಚನೆ 'ಸಂಸ್ಕೃತಿ,' ಬಹಿರಂಗದ ಸದ್ವರ್ತನೆ 'ಸಭ್ಯತೆ.' ಎಂಥ ದುರ್ಭರ ಸನ್ನಿವೇಶದಲ್ಲಿಯೂ ಸಭ್ಯತೆಯೊಂದರ ಹೊರತು ಬೇರೇನನ್ನೂ ಸೂಸದ ಹೃದಯಸಂಸ್ಕಾರವೇ ಸಂಸ್ಕೃತಿ — ಗಂಧದಂತೆ. 'ವ್ಯಕ್ತಿತ್ವ' ಸದಾ ಚಲಾವಣೆಯಲ್ಲಿರುವ ನಾಣ್ಯ. ಇದರ ಒಂದು ಮುಖ ಸಂಸ್ಕೃತಿ, ಇನ್ನೊಂದು ಸಭ್ಯತೆ. ಮೊದಲನೆಯದು ನಾಣ್ಯದ ಮುಖತ್ವವನ್ನು ಸ್ಥಾಪಿಸುತ್ತದೆ, ಎರಡನೆಯದು ಅದಕ್ಕೆ ಮೌಲ್ಯ ಬಂಕಿಸುತ್ತದೆ. ಸಂಸ್ಕೃತಿ ಸ್ಥಾವರ, ಸಭ್ಯತೆ ಜಂಗಮ.

'ಸಂಸ್ಕೃತಿ' ಪುಸ್ತಕದಲ್ಲಿ ಡಿವಿಜಿಯವರು 'ಸಂಸ್ಕೃತಿಯ ಮೂಲಸ್ಥಾನಗಳನ್ನು 'ಆರು ಗಣ'ಗಳಾಗಿ ವಿಂಗಡಿಸಿದ್ದಾರೆ: 'ಧ್ಯೇಯಯುತ-ಧರ್ಮ, ಸಾಹಿತ್ಯಾದಿ ಸರಸಕಲೆ, ವಿಜ್ಞಾನ, ದೇಶವಿದೇಶಚರಿತ್ರೆ ಮತ್ತು ಮಹಾಪುರುಷ ವೃತ್ತಾಂತ, ಸ್ವಸಮಾಜಪ್ರಭಾವ, ಮನುಷ್ಯನ ಅಂತರಂಗದ ಆತ್ಮಪರಿಶೋಧನೆ ಆತ್ಮಸಂಯಮಗಳು.' ಇವುಗಳಿಗೆ ವಿವರಣೆ ನೀಡುತ್ತ ಅವರು ಸಮಾರೋಪಿಸಿದ್ದಾರೆ: "ಮೊದಲಿನ ಐದೂ ಪರಿಣಾಮ ಹೊಂದುವುದು ಆರನೆಯದರಲ್ಲಿ. ಒಂದು ಕಡೆ ಬುದ್ಧಿಗೆ ಸಂಸ್ಕಾರ, ಮತ್ತೊಂದು ಕಡೆ ಹೃದಯಕ್ಕೆ ಸಂಸ್ಕಾರ — ಈ ಎರಡೂ ಬಗೆಯ ಸಂಸ್ಕಾರಗಳಿಂದ ಪರಿಪಕ್ವವಾಗತಕ್ಕದ್ದು ಜೀವದ ಅಂತರಂಗ. ಹಾಗೆ ಪರಿಪಕ್ವವಾದ ಜೀವವು ಜಗತ್ತಿನೊಳಕ್ಕೆ ಉಸಿರುವ ಸುಗಂಧವೇ ಸಂಸ್ಕೃತಿ."

ಧರ್ಮಸ್ಥಳದ ಯಾತ್ರಿಯಾಗಿ, ವಾರ್ಷಿಕ ಸರ್ವಧರ್ಮಸಮ್ಮೇಳನದ ಪ್ರೇಕ್ಷಕನಾಗಿ, ಜ್ಞಾನವಿಜ್ಞಾನಪ್ರಸಾರಾರ್ಥ ಶ್ರೀಕ್ಷೇತ್ರ ನಡೆಸುತ್ತಿರುವ ವಿದ್ಯಾಸಂಸ್ಥೆಗಳ ವೀಕ್ಷಕನಾಗಿ, 'ಮಂಜುವಾಣಿ' ಮಾಸಿಕದ ಮತ್ತು ಶ್ರೀಕ್ಷೇತ್ರದ ಇತರ ಪ್ರಕಟನೆಗಳ ವಾಚಕನಾಗಿ, ಶ್ರೀಕ್ಷೇತ್ರದಿಂದ ಜನಕಲ್ಯಾಣಕೈಂಕರ್ಯಕ್ಕೆ ಕಾಲದೇಶಜಾತ್ಯತೀತವಾಗಿ ಹರಿಯುತ್ತಿರುವ ದಾನಸೇವೆ ಮಾರ್ಗದರ್ಶನ ಮುಂತಾದವುಗಳಲ್ಲಿ ಪ್ರತ್ಯಕ್ಷ ಭಾಗಿಯಾಗಿ ಅಥವಾ ಅವುಗಳ ನಿರಪೇಕ್ಷ ವೀಕ್ಷಕನಾಗಿ, ಅಥವಾ ಧರ್ಮಾಧಿಕಾರಿಗಳ ನುಡಿನಡೆಬಗೆಗಳಿಂದ ಪ್ರಭಾವಿತನಾಗಿ ಒಬ್ಬ ಜೀವನಕುತೂಹಲಿ ವ್ಯಕ್ತಿ, ವೀರೇಂದ್ರ ಹೆಗ್ಗಡೆಯವರ ಬಗ್ಗೆ ಹೇಳಬಹುದಾದ್ದನ್ನು ಡಿವಿಜಿ-ವಾಣಿ ಒಳಗೊಂಡಿದೆ.

೧೯೪೭ರಷ್ಟು ಹಿಂದೆಯೇ ಗೋಪಾಲಕೃಷ್ಣ ಅಡಿಗರು 'ಮೈವೆತ್ತ ಔಚಿತ್ಯ' ಎಂಬ ಕವನ ಬರೆದರು. ಅದರ ಮೊದಲ ಚರಣ:

> ಮೈವೆತ್ತ ಔಚಿತ್ಯವನು ಕಂಡೆ ನಾಮೊನ್ನೆ —
> ಭಾವ ಜೀವಗಳ ಸಂಸ್ಕಾರ ಸಾಕಾರವನು
> ನವ್ಯತೆಯ ಮರ್ಮವನು ಭವ್ಯತೆಯ ಕರ್ಮವನು
> ಕಾವ್ಯ ಕಮಲದ ಮಧುರ ಮಕರಂದ ಸಾರವನು
> ಜೀವನಪಯೋನಿಧಿಯ ಪೀಯೂಷ ಪೂರವನು

ಅವರ ಮತ್ತು ನನ್ನ ಸಂಬಂಧ ಸ್ನೇಹಗಳು ೧೯೭೩ರಿಂದೀಚೆಗೆ

ಬೆಳೆದು ಬಂದಿವೆ. ೧೯೬೫-೬೯ ಅವಧಿ. ಆಗ ನಾನು ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಗಣಿತೋಪನ್ಯಾಸಕನಾಗಿಯೂ ಎನ್‌ಸಿಸಿ ಅಧಿಕಾರಿಯಾಗಿಯೂ ಕೆಲಸಮಾಡುತ್ತಿದ್ದೆ. ಅಂದು ಹೆಗ್ಗಡೆಯವರು ಆ ಕಾಲೇಜಿನಲ್ಲಿ ಬಿಎ ವಿದ್ಯಾರ್ಥಿ. ಆ ವಿದ್ಯಾರ್ಥಿಗಳಿಗೆ 'ಜನರಲ್ ಸೈನ್ಸ್' (ಸಾಮಾನ್ಯ ವಿಜ್ಞಾನ) ಎಂಬ ಒಂದು ಅಧ್ಯಯನವಿಷಯವಿತ್ತು. ಇದರ ಅಂಗವಾಗಿ ಖಗೋಳವಿಜ್ಞಾನದ ಸುಮಾರು ಹತ್ತು ಉಪನ್ಯಾಸಗಳನ್ನು ನಾನು ನೀಡಬೇಕಾಗಿತ್ತು.

ಆ ಅವಧಿಯಲ್ಲಿ ಒಮ್ಮೆ ನಾವು ನಮ್ಮ ಎನ್‌ಸಿಸಿ ತಂಡವನ್ನು ಕುದುರೆಮುಖ ಶಿಖರಾರೋಹಣ ಸಾಹಸಕ್ಕಾಗಿ ಬೆಂಗಳೂರಿನಿಂದ ಉಜಿರೆ ಮೂಲಕ ನಾವೂರಿಗೆ ಒಯ್ದೆವು. ಹಿಂತಿರುಗುವ ವೇಳೆ ಶ್ರೀಕ್ಷೇತ್ರದ ಮೂಲಕ ಪಯಣಿಸುವುದೆಂದು ಯೋಜಿಸಿ ಅಂದಿನ ಧರ್ಮಾಧಿಕಾರಿ ರತ್ನವರ್ಮ ಹೆಗ್ಗಡೆಯವರಿಗೆ (ವೀರೇಂದ್ರರ ತಂದೆ) ಅಧಿಕೃತ ಪತ್ರ ಬರೆದಿದ್ದೆವು.

ಸರಿ, ಕಾರ್ಯಕ್ರಮಾನುಸಾರ ಶ್ರೀಕ್ಷೇತ್ರದಲ್ಲಿ ನಾವು ಹೆಗ್ಗಡೆಯವರ ಭೇಟಿಗೆ ಹೋದೆವು. ಅವರ ಪಕ್ಕದಲ್ಲೇ ನಿಂತಿದ್ದ ಈ ಯುವ ತೇಜಸ್ವಿ ಪುತ್ರ, ತಂದೆಗೆ ನನ್ನನ್ನು ಪರಿಚಯಿಸುತ್ತ "ಇವರು ಕಾಲೇಜಿನಲ್ಲಿ ನನಗೆ ಜನರಲ್ ಸೈನ್ಸ್ ಕಲಿಸಿದ ಉಪಾಧ್ಯಾಯರು" ಎಂದರು. ಸಹಜವಾಗಿ ಧರ್ಮಾಧಿಕಾರಿಗಳ ದೃಷ್ಟಿಯಲ್ಲಿ ನನ್ನ ಅಂತಸ್ತು ಏರಿತು. ಅಧಿಕಾರಾರೋಹಣಪೂರ್ವಪರ್ವದಲ್ಲಿದ್ದ ಈ ತರುಣಧಮನಿ ತಮ್ಮ ಒಬ್ಬ ಸಾಮಾನ್ಯ ಅಧ್ಯಾಪಕನನ್ನು ಎಷ್ಟು ಆತ್ಮೀಯತೆಯಿಂದ ನಡೆಸಿಕೊಂಡರು ಎಂಬುದು ಇಲ್ಲಿ ಗಮನಿಸಬೇಕಾದ ಶಿಷ್ಟವರ್ತನೆ: 'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ.'

ಅಂದು ಆ ಕಾಲೇಜಿನಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಜಿ. ಬ್ರಹ್ಮಪ್ಪನವರು ಹೆಗ್ಗಡೆಯವರ ತರಗತಿಗೆ ಕನ್ನಡಪಾಠಮಾಡಿದರು. ಮತ ಪ್ರಚಾರಕನ ನಿಷ್ಠೆ ಮತ್ತು ಸೇವಾ ಮನೋಭಾವಸಹಿತ ಬ್ರಹ್ಮಪ್ಪನವರು ಸಾಹಿತ್ಯ ಮತ್ತು ಧರ್ಮಗ್ರಂಥಗಳ ಅಧ್ಯಯನ, ಪ್ರಕಟಣೆ ಮತ್ತು ವಿತರಣೆ ಕೈಗೊಂಡವರು. ವ್ಯಾವಹಾರಿಕವಾಗಿ ಇಂಥವರು ಯಶಸ್ವಿಗಳಾಗುವುದು ತೀರ ವಿರಳ. ಧರ್ಮಕರ್ಮಜೀವಿ ಬ್ರಹ್ಮಪ್ಪ ಈ ~~[illegible]~~ ನಿಯಮಕ್ಕೆ ಅಪವಾದವಾಗಿದ್ದರು.

ಅವರು ವೃತ್ತಿನಿವೃತ್ತರಾದ ಬಳಿಕ (೧೯೮೦ರ ದಶಕ) ಮೈಸೂರಿಗೆ ಬಂದು ನೆಲಸಿದರು — ನಾನಿರುವ ಬಡಾವಣೆಯಲ್ಲೇ (೧೯೬೯ರಿಂದ ನಾನು ಮೈಸೂರುನಿವಾಸಿ). ಆಗ ಈಗ ಅಕಸ್ಮಾತ್ ಭೇಟಿ. ಕುಶಲ ಪ್ರಶ್ನೆ. ಮಕ್ಕಳ ಯೋಗಕ್ಷೇಮ ವಿಚಾರಿಸಿದಾಗ ಅವರು ಧನ್ಯತೆ ಬೀರುವ ಪದಗಳಲ್ಲಿ ಹೀಗೆ ವೀರೇಂದ್ರ ಹೆಗ್ಗಡೆಯವರ ಅಹೇತುಕ ಅಭಯಹಸ್ತದಿಂದ ನಮ್ಮ ಬದುಕಿಗೆ ನೆಮ್ಮದಿ ಬಂದಿದೆ ಎಂದು ವಿವರಿಸಿದ್ದು ಈಗಲೂ ನನ್ನ ಕಣ್ಣ ಮುಂದೆ ಸ್ಪಷ್ಟವಾಗಿದೆ.

ಇನ್ನೊಮ್ಮೆ ಅಯೋಜಿತ ಭೇಟಿ. ಬ್ರಹ್ಮಪ್ಪ ಕೇಳಿದರು "ನೀವು ಪವಾಡ ನಂಬುತ್ತೀರಾ?"

"ಇಲ್ಲ. ಖಂಡಿತ ಇಲ್ಲ. ಪವಾಡ ಸಂಭವಿಸುವುದೇ ಇಲ್ಲ. ತಾನು ವಿವರಿಸಲಾಗದ ಯಾವುದೋ ಘಟನೆ ವ್ಯಕ್ತಿಯ ಎದುರು ಘಟಿಸಿಂದು ನಿಂತಾಗ ತನ್ನ ಮಾನಸಿಕ ದೌರ್ಬಲ್ಯವನ್ನು ಆತ ಪವಾಡದಲ್ಲಿ ಕಾಣುತ್ತಾನೆ.

ಹೇಡಿಗಳ ತಂಗುದಾಣ ಪವಾಡ."

ಅವರೆಷ್ಟು ಮೃದುಕೋಮಲವೋ ನಾನಷ್ಟೇ ದೃಢ ಕಠೋರ. ಆ ಕುಬ್ಜ ಗಾತ್ರದ ಶ್ವೇತವಸನಧಾರಿ ಒಂದು ಬಾಣ ಹೂಡಿದರು: "ನೀವು ಹಾಗೆ ಹೇಳುವಿರೆಂದು ನನಗೆ ಗೊತ್ತು. ಆದರೆ ನಮ್ಮ ಅಂದಿನ ವೀರೇಂದ್ರ ಹೆಗ್ಗಡೆಯವರ ಇಂದಿನ ಸಾಧನೆ ಬಗ್ಗೆ ನಿಮ್ಮ ವಿಜ್ಞಾನ ಏನು ವಿವರಣೆ ಕೊಡುತ್ತದೆ?"

ಅವರ ಹೃದಯ ತುಂಬಿ ಬಂದಿತ್ತು, ನನ್ನದೂ ಕೂಡ. ಗುರಿ ಒಂದೇ, ದಾರಿಗಳು ಬೇರೆ: ಅವರದು ಸಾತ್ವಿಕ ಧಾರ್ಮಿಕನ ಭಕ್ತಿ ದೃಷ್ಟಿ, ನನ್ನದು ವಿಜ್ಞಾನಿಯ ಕಾರ್ಯ-ಕಾರಣ ಸಂಬಂಧಾನ್ವೇಷಕ ದೃಷ್ಟಿ.

ನಾನೆಂದೆ: "ಅವರ ಸಾಧನೆಗಳು ಸಾತನುತಿಯಲ್ಲಿ ಪವಾಡಗಳೆಂದೋ ಪವಾಡಸದೃಶಗಳೆಂದೋ ವರ್ಣಿತವಾಗುವುದು ನಿಜ. ಇಂಥ ವರ್ಣನೆ ಮುಗ್ಧ ಆರಾಧಕರ ಭಾವುಕ ಉದ್ಗಾರ ಮಾತ್ರ. ವ್ಯಕ್ತಿ 'ನಾನುತನ' ತೊರೆದು ಹಾಕಿ ಶಾಶ್ವತ ಜೀವನ ಮೌಲ್ಯಗಳ ಜೊತೆ ಹುದುಗೂಡಿದಾಗ ಆತನ ಒಂದೊಂದು ಕ್ರಿಯೆಯೂ ಜನೋಪಕಾರಿಯಾಗಿ ಮಹತ್ತ್ವ ಗಳಿಸುತ್ತದೆ. ಹೆಗ್ಗಡೆ-ಪವಾಡದ ಹಿನ್ನೆಲೆ ಇದು."

ಪ್ರಾಯಶಃ ೧೯೮೯. ಆ ಮುಂಜಾನೆ **ರಭಸ**ವಾಗಿ ಸೈಕಲ್ ತುಳಿಯುತ್ತಿದ್ದೆ. ದೂರದಲ್ಲೇ ಅವರ ಛಾಯೆ ಅಲುಗಿದಂತೆ ಭಾಸವಾಯಿತು. ಆ ಕಡೆಗೇ ದೌಡಾಯಿಸಿದೆ. ಹೌದು: ಅವರೇ—ಬ್ರಹ್ಮಪ್ಪನವರೇ. ಆದರೆ ವಯಸ್ಸಿಗೆ ಮೀರಿದ ನಿಶ್ಶಕ್ತಿ ಮತ್ತು ಖಿನ್ನತೆ ಅವರನ್ನು ಹಿಂಡಿ ಜಗ್ಗಿದ್ದುವು. ಅವರಿಗೆ ಹೇಳಿಕೊಳ್ಳುವಂಥ ಯಾವ ಸಮಸ್ಯೆಯೂ ಇರಲಿಲ್ಲ ಎಂದು ಮಾತಿನಿಂದ ತಿಳಿಯಿತು.

ನೇರವಾಗಿ ಹೆಗ್ಗಡೆಯವರಿಗೆ ಈ ಚಿತ್ರ ವರದಿಮಾಡಿದೆ: "ಪ್ರಾಯಶಃ ನಿಮ್ಮಿಂದ ಒಂದು ಸಾಂತ್ವನ ನುಡಿ, ಸಾಧ್ಯವಾದರೆ ಪ್ರತ್ಯಕ್ಷ ಭೇಟಿ ಈ ಸಾರ್ಥಕ ಜೀವಿಗೆ ಕೃತಾರ್ಥತೆಯ ಸಂಜೀವಿನೀಸ್ಪರ್ಶ ನೀಡೀತು."

ತಿಂಗಳುಗಳುರುಳಿದುವು. ಇನ್ನೊಂದು ಆಕಸ್ಮಿಕ ಭೇಟಿ: ಅದೇ ಲವಲವಿಕೆಯ ಅದೇ ಮುಗ್ಧ ಹಾಸದ ಹಿಂದಿನ ಬ್ರಹ್ಮಪ್ಪ! ಅವರೇ ವಿವರಿಸಿದರು: ಹೆಗ್ಗಡೆಯವರ ಪ್ರೀತಿಪೂರ್ವಕ 'ಕಡ್ಡಾಯ ಆಣತಿ' ಮೇರೆಗೆ ಇವರು ಉತ್ಕೃಷ್ಟ ಶುಶ್ರೂಷಾಲಯದಲ್ಲಿ ಸಾಕಷ್ಟು ಕಾಲ ಉಚಿತ ಚಿಕಿತ್ಸೆ ಮತ್ತು ವಾಸ್ತವ್ಯ ಪಡೆದು ಹೊಸ ಹುರುಪಿನಿಂದ ಮನೆಗೆ ಮರಳಿದ್ದರು. 'ಒಲವಿನಲ್ಲಿ ಬೆಳಿ, ಒಲವಿನಲ್ಲಿ ಉಳಿ, ಒಲವೆ ಬಾಳ ಚೆಲುವು.'

2

ಸನ್ನಿವೇಶದ ಶಿಶುವಾಗಿ ತಾಬೇದಾರಿಕೆಯ 'ನೆಮ್ಮದಿ' ಗಳಿಸಿದ್ದ ನಾವು, ನಮ್ಮ ಮಕ್ಕಳು ಮಾತ್ರ ತಾಬೇದಾರರಾಗತಕ್ಕದ್ದಲ್ಲ, ಸ್ವತಂತ್ರ ಮತ್ತು ಮೌಲ್ಯಯುತ ಜೀವನ ನಡೆಸತಕ್ಕದ್ದು ಎಂಬ ಆಶಯ ತಳೆದಿದ್ದೆ; ಇಂಥ ಪರಿಸರದಲ್ಲಿ ಅವರ ವ್ಯಕ್ತಿತ್ವವಿಕಾಸವಾಗಲು ನನ್ನ ಮಿತಿಯೊಳಗೆ ತಕ್ಕಷ್ಟು ಅವಕಾಶಗಳನ್ನು ಒದಗಿಸಿದ್ದೆ.

ಹಿರಿಮಗ ಇಂಗ್ಲಿಷ್ ಎಂಎ ಮುಗಿಸಿದ. ಮಂಗಳೂರಿನಲ್ಲಿ ಪುಸ್ತಕ ಮಾರಾಟ ಮಳಿಗೆ ಪ್ರಾರಂಭಿಸುವುದು ಅವನ ಉದ್ದೇಶ. ನಮ್ಮ ಆಪ್ತ ಬಂಧು ಮಿತ್ರರು ಈ 'ಹುಚ್ಚುಸಾಹಸ'ದ ಬಗ್ಗೆ ಪ್ರಾಮಾಣಿಕ

ಕಳಕಳಿ ವ್ಯಕ್ತಪಡಿಸಿದರು: "ನನ್ನಂಥ ಪ್ರಭಾವಶಾಲಿಯ(?) ಮಗ, ತತ್ರಾಪಿ ಇಂಗ್ಲಿಷ್ ಎಂಎ ಪದವೀಧರ, ಐಎಎಸ್‌ನಲ್ಲಿ ಇಲ್ಲವೇ ಬ್ಯಾಂಕಿನಲ್ಲಿ ಹಿರಿಹುದ್ದೆ ಹಿಡಿದು ಗಟ್ಟಿ ಸಂಬಳ ಗಿಟ್ಟಿಸಿ ನೆಮ್ಮದಿ ಬಾಳು ನಡೆಸುವುದು ಬಿಟ್ಟು ಈ ಬೊತ್ತ ಗೂಡಂಗಡಿ ಮಾಲೀಕನಾಗುವುದೇ?"

ಅವರ ಸದುದ್ದೇಶಕ್ಕೆ ಕೃತಜ್ಞತೆ ಸೂಚಿಸಿ ಹೇಳಿದೆ: "ಧರ್ಮವ್ಯಾಧ ಪ್ರಕರಣವಾಗಲೀ ಆಯ್ದಕ್ಕಿ ಮಾರಯ್ಯನ ಆದರ್ಶವಾಗಲೀ ಓದಿ ಮರೆಯಬೇಕಾದ ಕತೆಗಳಲ್ಲ, ಸ್ವಾಂಗೀಕರಿಸಿ ಅನುಷ್ಠಾನಿಸಬೇಕಾದ ಜೀವನಮೌಲ್ಯಗಳು — ಆ ದಿಶೆಯಲ್ಲಿ ನಮ್ಮ ಪ್ರಾಮಾಣಿಕ ಪ್ರಯತ್ನ. ವೃತ್ತಿಯಿಂದ ವ್ಯಕ್ತಿಗೆ ಗೌರವವೇ? ವ್ಯಕ್ತಿಯಿಂದ ವೃತ್ತಿಗೆ ಗೌರವವೇ? ಮೊದಲನೆಯದು ಮುಂಚೆಕೆ, ಎರಡನೆಯದು ಪುಷ್ಕರಿಗೆ."

ಅಂಗಡಿಯ ಉದ್ಘಾಟನೆ ಹೇಗೆ? ಸಭ್ಯ ಸುಸಂಸ್ಕೃತ ಆಸಕ್ತ ವಾಚಕ ನಮ್ಮ ಮೊದಲ ಗ್ರಾಹಕನಾಗಬೇಕು. ಆತ ಸಾಂಕೇತಿಕವಾಗಿ ಕೇವಲ ೦.೨೫ ಪೈಸೆ ಬೆಲೆಯ ಪುಸ್ತಕವನ್ನು ನಮ್ಮಿಂದ ನಗದಾಗಿ ಕೊಂಡರೆ ಸಾಕು. ಮೈಸೂರಿನಲ್ಲಿ ಕುಳಿತು ಅಪ್ಪ-ಮಗ ಮಾತಾಡಿದೆವು. ಆಗ ತೀರ ಸಹಜವಾಗಿ ನನ್ನ ಕಣ್ಣೆದುರು ಸುಳಿದದ್ದು ಹೆಗ್ಗಡೆಯವರ ವ್ಯಕ್ತಿತ್ವ: ಆ ವೇಳೆಗೆ(೧೯೭೫) ಅವರ ಜನಹಿತ ಕಾರ್ಯಗಳು ಬಹುಮುಖ ಬಹುರೂಪಿ ಬಹುವ್ಯಾಪಿಯಾಗಿ ಚಿಸಿಲೊಡೆದಿದ್ದುವು.

ಪೂರ್ವಸೂಚನೆ ನೀಡದೆ ಆ ಮುಂಜಾನೆ ನಾವು (ಅಪ್ಪ-ಮಗ) ಶ್ರೀಕ್ಷೇತ್ರದಲ್ಲಿ ಹೆಗ್ಗಡೆಯವರ ದರ್ಶನಾರ್ಥಿಗಳ ಸಾಲು ಸೇರಿದೆವು. ದೂರದಿಂದ ಅವರೇ ನನ್ನನ್ನು ಗುರುತಿಸಿ "ಇನ್ನೊಂದು ಗಂಟೆ ಆದಮೇಲೆ ನಿಮ್ಮನ್ನು ನೋಡುತ್ತೇನೆ, ಆಗಬಹುದೇ? ದಯವಿಟ್ಟು ಒಳಗೆ ಕುಳಿತಿರಿ," ಎಂದರು. ಪೂರ್ವಭಾಷಿ, ಪ್ರಿಯಭಾಷಿ, ಮಿತಭಾಷಿ.

ಅವರ ಒಳಕೊಠಡಿಯ ಬೈಠಕ್ಕಿನಲ್ಲಿ ಭಾಗಿಗಳು ನಾವು ಮೂವರು ಮಾತ್ರ. ಶುದ್ಧ ಖಾಸಗಿ ಭೇಟಿ. ಅಂತರಂಗಿಕ ಭಾವನಾವಿನಿಮಯ. ಅವರ ವೇಳೆ ಅತಿ ಪ್ರಶಸ್ತ; ಹೊರಗೆ ಕಾದಿರುವ ಭಕ್ತರು, ಅಭಿಮಾನಿಗಳು, ಯಾಚಕರು ಮೊದಲಾದವರು ಅಸಂಖ್ಯ; ಆದ್ದರಿಂದ ನನ್ನ ಮಾತು ನೇರವಾಗಿಯೂ ಚುಟುಕಾಗಿಯೂ ಇರಬೇಕು — ಇದು ನನ್ನ ಕಳವಳ ಮತ್ತು ತಳಮಳ. ಆದರೆ ಅವರು ಮಾತ್ರ ಪೂರ್ಣ ನಿರಾಳ. ಆ ಗಳಿಗೆ ನಾವಿಬ್ಬರೇ ಅವರ ಅರ್ಜುನಲಕ್ಷ್ಯ. ಯಾವುದೇ ಕಾಲಮಿತಿಬಂಧನದ ಛಾಯೆ ಅವರ ಕಣ್ಣುಗಳಲ್ಲಿ ಕೂಡ ಸುಳಿಯಲಿಲ್ಲ.

ನಮ್ಮ ತತ್ತ್ವ, ಅದರ ನಿರ್ವಹಣಾವಿಧಾನ ಮತ್ತು ಸದ್ಯದ ಭೇಟಿಯ ಉದ್ದೇಶ ಇವನ್ನು ವಿವರಿಸಿ "ನಿಮ್ಮ ಜಿಲ್ಲೆಯಲ್ಲಿ ತಳವೂರಲಿರುವ ಈ ಸ್ವೋದ್ಯೋಗಿ ಯುವಕನ ಮೊದಲ ಗ್ರಾಹಕರು ನೀವಾಗಬೇಕು" ಎಂದು ಕೋರಿದೆ.

ಗ್ರಂಥಗಳ ಮುದ್ರಿತಯಾದಿ ಮೇಲೆ ಅವರು ಕಣ್ಣಾಡಿಸುತ್ತ ಹಲವಾರು ಶೀರ್ಷಿಕೆಗಳನ್ನು ಗುರುತಿಸಿದರು: "ಸದ್ಯ ಇಷ್ಟು ಸಾಕು. ಬೆಲೆ ಹೇಳಿದರೆ ಅಥವಾ ಮುಂಗಡ ಬೇಕಾದರೆ ಈಗಲೇ ಪಾವತಿಸಬಹುದು."

"ಮೊದಲು ಸರಕು, ಬಳಿಕ ನಿರಖು!"

"ಅದು ನಿಜವಾದ ವ್ಯಾಪಾರ ಶಿಸ್ತು" ಅವರೆದ್ದರು.

ಹಲವು ಸಾವಿರ ರೂಪಾಯಿ ಬೆಲೆಯ ಪುಸ್ತಕಗಳನ್ನು ಅವರು

ಖರೀದಿಸಿದ್ದರು.

೪

ಸಮಾಜದ ಉತ್ಕರ್ಷೆಯ ದಿಶೆಯಲ್ಲಿ ಪ್ರಾಮಾಣಿಕತೆಯಿಂದ ದುಡಿಯುವವರಿಗೆ, ಸ್ವೋದ್ಯೋಗ ಅವಲಂಬಿಸಿ ದೇಶದ ಸಂಪತ್ತು ವರ್ಧಿಸಲು ಕಾರಣರಾಗುವವರಿಗೆ, ಜನರ ಕಷ್ಟ ಕಾರ್ಪಣ್ಯಗಳಲ್ಲಿ ಅಜ್ಞಾನ ಮೌಢ್ಯಗಳಲ್ಲಿ ದೇವರ ಅಸ್ತಿತ್ವ ಕಂಡು ಅವುಗಳ ನಿವಾರಣಾರ್ಥ ನಿಷ್ಠೆಯಿಂದ ನಿಷ್ಕಾಮ ಕರ್ಮ ಎಸಗುವವರಿಗೆ — ಒಟ್ಟಾರೆ 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆ'ಯಲು ಪ್ರಯತ್ನಿಸುವವರಿಗೆ — ಬೆಂಬಲವಾಗಿ ಹೆಗ್ಗಡೆಯವರ ಅಭಯ ಹಸ್ತ ಸದಾ ಇದ್ದದ್ದೇ.

ನನ್ನ ಓರಗೆಯವರು ಮಂಗಳೂರಿನಲ್ಲಿ ಕಾಲೇಜ್ ವಿದ್ಯಾರ್ಥಿಗಳಾಗಿದ್ದಾಗ, ೧೯೪೨-೪೪, ಮೊಳಹಳ್ಳಿ ಶಿವರಾಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಚಳವಳಿಯ ನೇತಾರರೆಂದು ಪ್ರಖ್ಯಾತರಾಗಿದ್ದರು. ಜನಶಕ್ತಿ, ಸಂಘಟನ ಚಾತುರ್ಯ, ಮಾರ್ಗೋದ್ದೀಪಕ ಕಾರ್ಯ ಮುಂತಾದ ಸರ್ವ ಜನಹಿತ ಕ್ರಿಯಾಕಲಾಪಗಳಲ್ಲಿ ಇವರು ಸಿದ್ಧಹಸ್ತರು — ಗಾಂಧೀಜಿಯವರಂತೆ. ಆಧುನಿಕ ಜ್ಞಾನವಿಜ್ಞಾನಗಳನ್ನು ಕಲಾಪ್ರಕಾರಗಳನ್ನು ಇವರು ವಿಶೇಷವಾಗಿ ಗ್ರಾಮೀಣ ಜನತೆಗೆ ಒಯ್ದು ಅವರ ಬದುಕನ್ನು ಸಹಕಾರದ ನೆಲಗಟ್ಟಿನಲ್ಲಿ ಸ್ವಯಂಸೇವೆಯ ದುಡಿಮೆಯಲ್ಲಿ ಮತ್ತು ಪ್ರೀತಿವಿಶ್ವಾಸಗಳ ಪರಿಸರದಲ್ಲಿ ನೆಲೆಗೊಳಿಸಿದರು.

ಮಂಗಳೂರಿನಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮೊಳಹಳ್ಳಿಯವರು ಭಾಷಣಮಾಡಿದಾಗ ನಡೆದ ಒಂದು ಸಂವಾದ ಈಗಲೂ ನೆನಪಿಗೆ ಬರುತ್ತದೆ — ಹೆಚ್ಚು ಅರ್ಥಪೂರ್ಣವಾಗಿ ಕೂಡ. ಅವರೆಂದರು "ಯಾವ ಸತ್ಕಾರ್ಯವೂ ಹಣದ ಅಭಾವದಿಂದ ನಿಂತದ್ದಿಲ್ಲ."

ಯಾವುದೇ ಕೆಲಸಕ್ಕೆ ಹಣ ಒದಗಿಸುವುದು ಅತಿ ಕಠಿಣ ಸಾಹಸವೆಂಬುದು ಆ ದಿಶೆಯಲ್ಲಿ ಕಿಂಚಿತ್ತೂ ಕೆಲಸಮಾಡದಿದ್ದ ನಮ್ಮಂಥ ಸಿದ್ಧಾಂತ ಚತುರರ ಅಂದಿನ ತೀರ್ಮಾನವಾಗಿತ್ತು. ಸಹಜವಾಗಿಯೇ ಸ್ವಲ್ಪ ಬಿರುಸಿನಿಂದ ಪ್ರಶ್ನೆ ಹಾಕಿದೆವು: "ಯಾವ ಆಧಾರದಿಂದ ಇಷ್ಟು ಖಚಿತವಾಗಿ ಘೋಷಿಸುವಿರಿ?"

"ಐದು ದಶಕಗಳಿಗೂ ಮಿಕ್ಕಿ ಸಾರ್ವಜನಿಕ ಸ್ವಯಂಸೇವಾರಂಗದಲ್ಲಿ ನೇರ ನಡೆನುಡಿ ಬಗೆ ಸಹಿತ ದುಡಿದುದರಿಂದ ದೊರೆತ ಅನುಭವ. ಯುವ ಉತ್ಸಾಹಿಗಳೇ! ನೀವು ನಿಮ್ಮನ್ನು ಯಾವುದೇ ಜನಹಿತಕಾರ್ಯಕ್ಕೆ ಪೂರ್ಣಮನ, ನಿಷ್ಠುರ ಪ್ರಾಮಾಣಿಕತೆ ಮತ್ತು ಹಿಂಗದ ಉತ್ಸಾಹಗಳಿಂದ ಸಮರ್ಪಿಸಿಕೊಂಡದ್ದಾದರೆ ಕ್ರಮೇಣ ನಿಮಗೂ ಇದೇ ಅನುಭವ ಸ್ಫುರಿಸದಿರದು. ಸಾಕ್ಷ್ಯಾಧಾರ ಒದಗಿಸಲು ಅಥವಾ ಪ್ರಯೋಗ ಪುರಾವೆ ಪೂರೈಸಲು ಇದು ವಿಜ್ಞಾನದ ಭೌತಕ್ಷೇತ್ರವಲ್ಲ, ಜೀವನದ ಸೃಜನಶೀಲ ಹೃದಯರಂಗ, ವ್ಯಕ್ತಿಯ ಭಾವದ ಅಂತರಂಗ."

ಮಹಾವಿಜ್ಞಾನಿ ಐಸಾಕ್ ನ್ಯೂಟನ್ (೧೬೪೨-೧೭೨೭) ಬರೆದಿದ್ದಾನೆ: "ನಾನು ಇತರರಿಗಿಂತ ತುಸು ಆಚೆಗೆ ಇಣುಕಿನೋಡಿರುವುದು ನಿಜವಾದರೆ ದೈತ್ಯರ ಭುಜಗಳ ಮೇಲೆ ನಿಂತಿರುವುದೇ ಅದರ ಕಾರಣ." ಇನ್ನೊಂದು ಸಲ: "ಲೋಕಕ್ಕೆ ನಾನು ಹೇಗೆ ಕಾಣುವೆನೋ ಊಹಿಸಲಾರೆ. ಆದರೆ

ನನ್ನ ಮಟ್ಟಿಗೆ ಹೇಳುವುದಾದರೆ ನಾನೊಬ್ಬ ಕಡಲ ಕಿನಾರೆಯಲ್ಲಿ ಆಡುತ್ತಿರುವ ಕಿರಿಹೈದ ಮಾತ್ರ. ಆಗ ಈಗ ನುಣುಪಾದ ಒಂದು ಹರಳನ್ನೋ ಚೆಲುವಾದ ಒಂದು ಚಿಪ್ಪನ್ನೋ ನಾನು ಹೆಕ್ಕಬಹುದು. ಆದರೆ ಸತ್ಯದ ಹೆಗ್ಗಡಲೇ ನನ್ನೆದುರು ಅರಸಲ್ಪಡದೆ ಚೆಲ್ಲಿಕೊಂಡಿದೆ."

ಪ್ರಾಚೀನ ಪರಂಪರೆಯ ಅರ್ವಾಚೀನ ಮಾಗೆಯೇ ಇಂದಿನ ವೃಕ್ಷ: ಅದರಲ್ಲಿ ಬೇರು, ಇದರಲ್ಲಿ ಎಲೆ, ವರ್ತಮಾನದಲ್ಲಿ ಹಣ್ಣು!

ಶಿವರಾಯರು ಬೆಳಗಿದ ಉಲ್ಲಾಸಮಯ ಸಂಸಾರದ ದಿವ್ಯಫಲ ಶಿವರಾಮ ಕಾರಂತರು. ಆಗ ಶ್ರೀಕ್ಷೇತ್ರದಲ್ಲಿ ಧರ್ಮಾಧಿಕಾರಿಗಳಾಗಿದ್ದ ಮಂಜಯ್ಯ ಹೆಗ್ಗಡೆಯವರು ಕಾರಂತರ ಸೃಜನಶೀಲತೆಗೆ ಉತ್ತೇಜಕ ಪ್ರಯೋಗಾವಕಾಶವನ್ನು ಧರ್ಮಸ್ಥಳದಲ್ಲಿ ಒದಗಿಸಿಕೊಟ್ಟರು. ಹೀಗೆ ಧರ್ಮಸ್ಥಳ ಸಾಹಿತ್ಯ-ಕಲಾಸ್ಥಳವೂ ಆಗಿ ಅರಳುವ ಭೂಮಿಕೆ ಏರ್ಪಟ್ಟಿತು. ಮಂಜಯ್ಯ ಹೆಗ್ಗಡೆಯವರ ಅನಂತರ ಪಟ್ಟಕ್ಕೆ ಬಂದ ರತ್ನವರ್ಮ ಹೆಗ್ಗಡೆಯವರ ಕಾಲದಲ್ಲಿ ಶ್ರೀಕ್ಷೇತ್ರ ಧರ್ಮ, ಸಾಹಿತ್ಯ, ಕಲೆಗಳ ತ್ರಿವೇಣೀಸಂಗಮವಾಗಿ ಪ್ರವರ್ಧಿಸಿತು.

ಹೀಗೆ ಒಂದು ಭವ್ಯ ಪರಂಪರೆಯ ಸಮರ್ಥ ನ್ಯಾಸಧಾರಿಯಾಗಿ ಆ 'ದೈತ್ಯರ ಭುಜಗಳ ಮೇಲೆ' ನಿಂತು ವೀರೇಂದ್ರ ಹೆಗ್ಗಡೆಯವರು ಶ್ರೀಕ್ಷೇತ್ರದ ಚಟುವಟಿಕೆಗಳನ್ನು ಹಲವು ಹನ್ನೊಂದು ಆಯಾಮಗಳಲ್ಲಿ ವಿಸ್ತರಿಸಿದ್ದಾರೆ, ವಿಸ್ತರಿಸುತ್ತಿದ್ದಾರೆ: "ಮುಟ್ಟದ ದಿಙ್ಮಂಡಲಗಳ ಅಂಚ, ಆಚೆಗೆ ಚಾಚದ ತನ್ನಯ ಚುಂಚ."

ಹಿಂದೆ ಡಿವಿಜಿ ಮಾತುಗಳನ್ನು ಉಲ್ಲೇಖಿಸಿದ್ದೇನೆ: 'ಸಂಸ್ಕೃತಿಯ ಮೂಲಸ್ಥಾನ.' ವೀರೇಂದ್ರ ಹೆಗ್ಗಡೆಯವರ ವಿವಿಧ ಜನಕ್ಷೇಮ ಕಾರ್ಯಗಳು (ಇದನ್ನು ಅಲ್ಲಿ ವಿವರಿಸಿದ್ದೇನೆ) ನ್ಯೂಟನ್-ಸೂಕ್ತಿಗಳಿಗೆ ಬರೆಯಬಹುದಾದ ಜ್ವಲಂತ ಭಾಷ್ಯ.

ಶ್ರೀ

ಮೈಸೂರಿನ ಕುವೆಂಪುನಗರ ಬಡಾವಣೆ ೧೯೭೦ರ ದಶಕದಲ್ಲಿ ತ್ರಿವಿಕ್ರಮನಂತೆ ಎಲ್ಲ ದಿಶೆಗಳಲ್ಲಿಯೂ ಹಿಗ್ಗತೊಡಗಿತು — ಹಸುರು ಹಚ್ಚಡದ ತಣ್ಪು ವೈವಿಧ್ಯ ಮೂಲವಾಗಿ ಕಾಂಕ್ರೀಟ್ ಕಾಡಿನ ರುದ್ರ ಏಕತಾನತೆ 'ವಿಜೃಂಭಿಸ'ಲಾರಂಭಿಸಿತು. ಸುಂದರ ನಗರದ ಸುತ್ತುಮುತ್ತು ನಾಡಿಯ ಮಿಡಿತವೇ ಇಲ್ಲದ ಸನ್ನಿವೇಶ. ಆಗ ಇಲ್ಲಿಯ ಕೆಲವು ಮಂದಿ ಕಲಾಪ್ರಿಯರು ಎಚ್ಚೆತ್ತುಗೊಂಡು ಗಾನಭಾರತೀ ಎಂಬ ಹೆಸರಿನ ಸಾರ್ವಜನಿಕ ಸ್ವಯಂಸೇವಾ ಸಾಂಸ್ಕೃತಿಕ ಸಂಸ್ಥೆಯನ್ನು ಸ್ಥಾಪಿಸಿದರು (೧೯೭೮). ಆ ವೇಳೆಗೆ ನಾನು ಮೈಸೂರಿನಲ್ಲಿ ನೆಲಸಿ ಒಂಬತ್ತು ಸಂವತ್ಸರಗಳು ಸಂದಿದ್ದುವು. ಜೀವಂತ ಅಭಿಜಾತ ಸಂಗೀತ ಶ್ರವಣ ನನ್ನ ಪ್ರೀತಿಯ ಹವ್ಯಾಸ. ಹೀಗಾಗಿ ಈ ಸಂಸ್ಥೆ ಏರ್ಪಡಿಸುತ್ತಿದ್ದ ಸಂಗೀತ ಕಚೇರಿಗಳಿಗೂ ನನ್ನ ಸೌಕರ್ಯಾನುಸಾರ ಹೋಗುತ್ತಿದ್ದೆ.

ಆತ್ಮಸ್ನೇಹಿತರ ಆತ್ಮೀಯ ಒತ್ತಾಯ ನಿರಾಕರಿಸಲಾಗದೆ, ಸ್ವಂತೇಚ್ಛೆಗೆ ವಿರುದ್ಧವಾಗಿ, ನಾನು ಗಾನಭಾರತೀ ಸಂಸ್ಥೆಯ ಒಬ್ಬ ಸಾಮಾನ್ಯ ಸದಸ್ಯನಾಗಿ ಸೇರಿದೆ (೧೯೮೦). ಆ ವರ್ಷ ನಡೆದ ಮಹಾಸಭೆಯಲ್ಲಿ ನನ್ನನ್ನು ಕಾರ್ಯಕಾರೀ ಸಮಿತಿಗೆ ಅಕ್ಷರಶಃ ತಳ್ಳಿದರು. ಮುಂದಿನ ಚುನಾವಣೆಯಲ್ಲಿ ಗೌರವ ಕೋಶಾಧಿಕಾರಿ ಎಂಬ ಮುಳ್ಳಿನ ಪಾಗು ಹೇರಿದರು.

ಅಲ್ಲಿಯತನಕ ಸಂಸ್ಥೆ ಮೂರು ಪ್ರಮುಖ ದಿಶೆಗಳಲ್ಲಿ ಮೂಲಭೂತ ರಚನಾತ್ಮಕ ಕೆಲಸಗಳನ್ನು ಮಾಡಿ ಅಜ್ಞಾತದತ್ತ ಸೀಮೋಲ್ಲಂಘನಕ್ಕೆ ಭದ್ರ ಭೂಮಿಕೆ ನಿರ್ಮಿಸಿತ್ತು: ೧ ಕಾರ್ಯಕ್ರಮ ಕುರಿತಂತೆ ಬಹ್ವಂಗಣ, ವೈವಿಧ್ಯ ಮತ್ತು ಸ್ಥಳೀಯ ಕಲಾಚೇತನಗಳಿಗೆ ಅವಕಾಶಗಳು; ೨ ವ್ಯವಸ್ಥಾಪನೆ ಕುರಿತಂತೆ ಶುದ್ಧ ಪ್ರಜಾಪ್ರಭುತ್ವಾತ್ಮಕ ವಿಧಾನಗಳು — ಇಲ್ಲಿ ಸಂಸ್ಥೆ ಮುಖ್ಯವೇ ಹೊರತು 'ನಾನು' ಅಲ್ಲ; ಹಣಕಾಸು ವ್ಯವಹಾರಗಳಲ್ಲಿ ನಿಷ್ಠುರ ಪ್ರಾಮಾಣಿಕತೆ; ೩ ಸ್ವಂತ ನಿವೇಶನದ ಖರೀದಿ; ಹನಿಹನಿಯಾಗಿ ಹಣ ಸೇರಿ ಇದು ಸಾಧ್ಯವಾಗಿತ್ತು.

೧೯೮೭-೮೮ರ ವೇಳೆಗೆ ಹೊಸ ಆಸೆ ಚಿಗುರಿತು: ಸ್ವಂತನಿವೇಶನದಲ್ಲಿ ಭವನ ನಿರ್ಮಾಣ. ಕೈಯಲ್ಲಿದ್ದ ಹಣ ಕೆಲವು ಸಾವಿರ ಮೀರಿರಲಿಲ್ಲ. ಆದರೆ ಭವನನಿರ್ಮಾಣ ಬೇಡುವ ಕನಿಷ್ಠ ಮೊಬಲಗು ಹಲವು ಲಕ್ಷಗಳು! ಈ ಅಗಲ ಮತ್ತು ಆಳ ಕಮರಿ ಜಿಗಿದು ಗುರಿತಲಪಬಲ್ಲ ಹನುಮಂತನೆಲ್ಲಿ? ಇದ್ದವರೆಲ್ಲ ಜಾಂಬವಂತರೇ!

ಇದೇ ಅವಧಿಯಲ್ಲಿ ನಮ್ಮ ಪ್ರತಿಯೊಂದು ಉತ್ಸವಕ್ಕೂ ನಾವು ಹೆಗ್ಗಡೆಯವರನ್ನು ಆಹ್ವಾನಿಸುತ್ತಿದ್ದೆವು, ಮತ್ತು ಅವರಿಂದ ಸಹಾಯಧನ ಯಾಚಿಸುತ್ತಿದ್ದೆವು. ಅವರು ಮೊದಲನೆಯದನ್ನು "ಇನ್ನೊಮ್ಮೆ ನೋಡೋಣ, ಕಾಲಾವಕಾಶವಿಲ್ಲ" ಎಂದು ಮುಂದೂಡುತ್ತಿದ್ದರು; ಎರಡನೆಯದಕ್ಕೆ ಸಮೃದ್ಧ ಧನಸಹಾಯ ನೀಡುತ್ತಿದ್ದರು.

೧೯೮೮ರಲ್ಲಿ ನಾವೊಂದು ಯೋಜನೆ ತಯಾರಿಸಿ ಅವರ ನೆರವು ಕೋರಿದೆವು: ಶ್ರೀಕ್ಷೇತ್ರದ ವತಿಯಿಂದ ಸಭಾಭವನದ ನಿರ್ಮಾಣ, ಇದರಲ್ಲಿ ಒಂದು ರಾಮ ಮಂದಿರವೂ ಇರಬೇಕು. ಹೀಗೂ ಶ್ರೀಕ್ಷೇತ್ರ ಬೇರೆಬೇರೆ ನಗರಗಳಲ್ಲಿ ಕಲ್ಯಾಣ ಮಂದಿರಗಳನ್ನು ಕಟ್ಟಿ ಸಮಾಜಕ್ಕೆ ಉಪಕಾರ ಸಲ್ಲಿಸಿದ್ದ ನಿದರ್ಶನಗಳಿದ್ದುವು.

ಹೆಗ್ಗಡೆಯವರು ಅಸಿಧಾರೆಯಂತೆ ಸ್ಪಷ್ಟವಾಗಿ ನುಡಿದರು "ಭವನನಿರ್ಮಾಣಕ್ಕೆ ಶ್ರೀಕ್ಷೇತ್ರ ನೇರವಾಗಿ ಪ್ರವೇಶಿಸದು. ರಾಮಮಂದಿರ ಅಥವಾ ಇತರ ಯಾವುದೇ ಹೊಸ ದೇವಾಲಯ ಕಟ್ಟುವ ವಿಚಾರ ಕೈಬಿಡಿ. ಸಾರ್ವಜನಿಕ ಜೀವನದ ಉತ್ಕರ್ಷೆಗೆ ಕಾರಣವಾಗಬಲ್ಲ ಯಾವುದೇ ರಚನಾತ್ಮಕ ಯೋಜನೆ ಸಿದ್ಧಪಡಿಸಿಕೊಂಡು ಬನ್ನಿ."

ಸಂದೇಶ ಸ್ಪಷ್ಟ: ವಾಸ್ತವತೆಗೆ ನಿಮ್ಮ ಹೃದಯ ಮೊದಲು ಮಿಡಿಯಲಿ, ಉಳಿದ ವಿವರಗಳು ತಂತಾವೇ ಆಯಾ ಕಾಲಕ್ಕೆ ಹೊಂದಿಬರುತ್ತವೆ. ನಿಜ, ಸಾಧನೆಯಿಂದ ಯಾಚನೆಗೆ ಬೆಲೆಯೇ ವಿನಾ ಕೇವಲ ಯೋಚನೆಯಿಂದಲ್ಲ.

ಕಾರ್ಯಶೀಲ ಯೋಜನೆ ತಯಾರಿಸಿದೆವು; ನಮ್ಮ ಶಕ್ತಿಮೀರಿ ಸಂಪನ್ಮೂಲಗಳನ್ನು ಕ್ರೋಡೀಕರಿಸಿದೆವು; ಸರ್ವಸನ್ನದ್ಧರಾಗಿ ಹೆಗ್ಗಡೆಯವರನ್ನು ನೋಡಿದೆವು (೧೯೯೦ರ ಉತ್ತರಾರ್ಧ) — ಶ್ರೀಕ್ಷೇತ್ರದಲ್ಲಿ.

ನಾಡಿನ ಈ ಶ್ರೇಷ್ಠ ಶ್ರಾವಕ ನಮ್ಮ ನುಡಿ ಆಲಿಸಿದರು, ಆಮೂಲ್ಯ ಯೋಜನೆ ಎಲ್ಲವನ್ನೂ ಅಭ್ಯಸಿಸಿದರು, ಪ್ರಶ್ನೆ ಕೇಳಿದರು — ಚೆಕ್ ಪುಸ್ತಕ ತರಲು ಆಪ್ತ ಸಹಾಯಕನಿಗೆ ಆದೇಶಿಸಿದರು.

"ಚೆಕ್ ಯಾರ ಹೆಸರಿಗೆ ಬರೆಯಬೇಕು?"

"ಗಾನಭಾರತೀ(ರಿ), ಮೈಸೂರು."

ಈ ಪೂರ್ವವಿಧಿ ಮುಗಿದ ಬಳಿಕ ಮೊಬಲಗನ್ನು ನಮ್ಮ ಸಮಕ್ಷಮ (ನಾವು ಅವರ ಪಕ್ಕದಲ್ಲಿ ಕುಳಿತಿದ್ದೆವು) ಬರೆಯಲು ತೊಡಗಿದರು. ಅದುಮಿಟಲಾಗದ ಉತ್ಕಟ ಕುತೂಹಲ. ಆದರೆ ಇಣುಕು ನೋಟ ಕೂಡ

ಹಾಯಿಸುವುದು ಶಕ್ಯತೆ ಅಲ್ಲ. ಎಲ್ಲ ಹರಿ. 'ವಾರಿನೋಟ ಹಾರತೆತ್ತ್ಯೇ ಹೊಳ್ಳಿ ಮ್ಯಾಗ!' 'ನಾಹಾಂಗ ನೋಡದಿನ್ಹ್ಯಾಂಗ ತೆಪ್ಪ ಕುಳ್ಳರಲಿ ಅಮೃತ ಹರಿವಾಗ?'

ಬರೆದರು ಶ್ರೀ. (ಮನ ತುಂಬಿಯಿತು ಹರುಷ – ಹೊನ್ನ ಹೆಗ್ಗೆ!) ಬಲಬದಿಗೆ ಮೈದಳಿಯಿತು ಮೂರು ಸೊನ್ನೆಗಳ ಸಾಲು...... ಮುಗಿಯಲಿಲ್ಲ, ಸೇರಿಸಿದರು ಇನ್ನೂ ಒಂದು ಸೊನ್ನೆ. ನಮಗೆ ವಾಯುಲಘಿಮಾನುಭವ (ಗಾಳಿಯಲ್ಲಿ ತಂತಾನೇ ಮೇಲೇರುವುದು levitation).

ಚೆಕ್ಕನ್ನು ಪೂರ್ತಿಗೊಳಿಸಿ ನಮ್ಮ ಅಧ್ಯಕ್ಷರಿಗೆ ಒಪ್ಪಿಸುತ್ತ "ಮುಂದಿನ ವಾರ ಇಷ್ಟೇ ಮೊಬಲಗಿನ ಚೆಕ್ ನಿಮ್ಮ ಕೈ ಸೇರುವುದು. ಮುಂದೆ ನೋಡೋಣ. ಶ್ರೀ ಮಂಜುನಾಥ ಸ್ವಾಮಿಯ ಕೃಪೆ ನಿಮ್ಮ ಮೇಲಿರಲಿ" ಎಂದರು ಮೃದುವಾಗಿ — ನಾವೇ ಅವರಿಗೆ ಮಹದುಪಕಾರ ಮಾಡಿದವ್ರೋ ಎನ್ನುವ ಸಹಜ ವಿನಯದಿಂದ. ದಾಸರು ಬರೆದಿದ್ದಾರೆ: 'ಬಡವರೊಳಗೆ ಎನ್ನಿಂದಾರು ಬಡವರಿಲ್ಲ ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ.'

ನಮ್ಮ ನಿವೇಶನದ ಬೋಳು ಬಯಲು. ಕತ್ತೆಗಳು ಮೇಯುತ್ತ ದನಗಾಹಿಗಳು ಚಿನ್ನಿಕೋಲಾಡುತ್ತ ಹಾಳುಗರೆಯುತ್ತಿದ್ದ ಹರವು. ಆದರೆ ಆ ಗಳಿಗೆ ಅಲ್ಲಿ ಮಯನಿರ್ಮಿತ ವೀಣೆ ಶೇಷಣ್ಣ ಭವನ ಸರ್ವಾಂಗ ಸುಂದರವಾಗಿ ನೆಲದಿಂದೆದ್ದು ನಿಂತದ್ದು ಕಂಡು ಮೈಯಲ್ಲಿ ವಿದ್ಯುತ್ಸಂಚಾರವಾದಹಾಗಾಯಿತು.

ಅದು ನಿಜ. ಕನಸುಗಾರನ ಅಲಸಿಕೆಯ ಆಕಳಿಕೆಯಲ್ಲ, ಭಾವುಕನ ದೈವಿಕ ಉನ್ಮಾದವೂ ಅಲ್ಲ. ಏಕೆಂದರೆ ಮುಂದಿನ ದಿನಗಳಲ್ಲಿ ನಮ್ಮ ವಾನರಸೇನೆ (ಗಾನಭಾರತೀ ಸಂಸ್ಥೆಯ ಸದಸ್ಯರು) ಅಹರ್ನಿಶಿ ವೀಣೆ ಶೇಷಣ್ಣ ಭವನ ನಿರ್ಮಾಣಕ್ಕಾಗಿ ಶ್ರಮಿಸಿತು: ಹೊನ್ನಿನ ಮಳೆ ಸುರಿಯಿತು, ಸರಕುಸೇವೆಗಳ ಹೊಳೆ ಹರಿಯಿತು.

೨೬-೧೦-೧೯೯೧ರಂದು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ವೀಣೆ ಶೇಷಣ್ಣ ಭವನವನ್ನು ಉದ್ಘಾಟಿಸಿ ಜನತೆಗೆ ಅರ್ಪಿಸಿದರು. ಆಗ ಹೆಗ್ಗಡೆಯವರು ಹೇಳಿದ ಮಾತು: "ನನ್ನದು ಸಾಂಕೇತಿಕ ಉದ್ಘಾಟನೆ. ನಿಜವಾಗಿ ದೊರೆಸ್ವಾಮಿ ಅಯ್ಯಂಗಾರ್ಯರು ವೀಣೆಯನ್ನು ಮೀಟಿ ಭವನದ ಬಾಗಿಲನ್ನು ನಮ್ಮೆಲ್ಲರ ಎದೆಯ ಕದಗಳನ್ನು ತೆರೆದಿದ್ದಾರೆ."

ಬೃಹನ್ನನವರು ~~[illegible]~~ ಎಸೆದ ಪ್ರಶ್ನೆ ನೆನಪಿಗೆ ಬಂತು: "ನೀವು ಪವಾಡ ನಂಬುತ್ತೀರಾ?"

ಅಂದು ಹೆಗ್ಗಡೆಯವರು ಮಾಡಿದ ಭಾಷಣದಲ್ಲಿ ಇದಕ್ಕೆ ಉತ್ತರವಿದೆ: "ಕಲೆಯ ಬಗ್ಗೆ ತೀವ್ರ ಕಳಕಳಿ ಮತ್ತು ಸಮರ್ಪಣಾಭಾವವಿಲ್ಲದಿದ್ದರೆ ಈ ರೀತಿಯ ಕಟ್ಟಡವನ್ನು ಈ ಕಾಲದಲ್ಲಿ ನಿರ್ಮಾಣ ಮಾಡುವುದು ಮತ್ತು ಅದನ್ನು ಸುಸೂತ್ರ ರೀತಿಯಲ್ಲಿ ಬಳಸುವುದು ಸಾಧ್ಯವಿಲ್ಲ."

ಸತ್ಕಾರ್ಯ ನಿರ್ವಹಣೆಗಾಗಿ ಜನಬಲ ಸುಸಂಘಟಿತವಾದಾಗ 'ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ.'

ಆ ದಿನಗಳಿಂದ ಹೆಗ್ಗಡೆಯವರ, ಅಂತೆಯೇ ಜಗದ್ಗುರುಗಳವರ ಜೊತೆ ನಮ್ಮ ಅನುಭವಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ

ಹಂಚಿಕೊಂಡಿವೆ. ಅವರಿಬ್ಬರೂ ವ್ಯಕ್ತಪಡಿಸಿದ ಭಾವನೆ ಒಂದೇ: ಉದಾರ ದಾನಿಯ ಪತ್ತೆ ಕಷ್ಟವಲ್ಲ, ಆದರೆ ಅರ್ಹ ಪರಿಗ್ರಾಹಿಯ ಶೋಧ ಅತಿ ಕಷ್ಟ.

ಹೆಗ್ಗಡೆಯವರಿಂದ ಮತ್ತು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಂದ ಗಾನಭಾರತೀ ಸಂಸ್ಥೆಗೆ ಒದಗಿರುವ ಆಶೀರ್ವಾದದ ಹಿನ್ನೆಲೆಯ ಭಾವವನ್ನು ನಯಸೇನನ ಈ ನುಡಿ ಪ್ರತೀಕಿಸುತ್ತದೆ:

ಏನಾನುಮನುದ್ದೇಶಿಸಿ
ದಾನಂದಂಬೆರಸು ಭಕ್ತಿಪೂರ್ವಕದಿಂದಂ
ತಾನೆಸಗಿದು ಮಾಳ್ಪ ದಾನಂ
ತಾನದು ಮುಂದಣ್ಗೆ ಕುಡುವುದಕ್ಷಯ ಸುಖಮಂ

೭

ಧಾರ್ಮಿಕನಾಯಕತ್ವ, ಲೌಕಿಕ ಅಧಿಕಾರ, ಅಪಾರ ಸಂಪತ್ತು, ಯೌವನ ಮತ್ತು ವಿದ್ಯೆ ಏಕ ವ್ಯಕ್ತಿಯಲ್ಲಿ ಏಕಕಾಲದಲ್ಲಿ ಸಂಗಮಿಸಿದಾಗ, ಮತ್ತು ಈ ವಿವಿಕ್ತ ಘಟಕಗಳು ಜೀವಕಾರುಣ್ಯ, ವಿವೇಕ, ನಿರ್ಲಿಪ್ತತೆ, ಧೈರ್ಯ ಮತ್ತು ವಿನಯ ಎಂಬ ಹೃದಯಪ್ರೋಕ್ಷಕರಸಧಾತುಗಳ ಜೊತೆ ಎರಕಗೊಂಡಾಗ ಎಂಥ ವ್ಯಕ್ತಿತ್ವ ಮೈದಳೆಯುತ್ತದೆ? ಸಭ್ಯತೆಯ ಸಾಕಾರಮೂರ್ತಿ.

“ಧಾರ್ಮಿಕನಾಯಕರಾದ ಹೆಗ್ಗಡೆಯವರು ಆ ಕ್ಷೇತ್ರಕ್ಕೇ ತಮ್ಮ ಸರ್ವಸ್ವವನ್ನು ಮೀಸಲಿಟ್ಟು ಶ್ರೀಕ್ಷೇತ್ರವನ್ನು ಜಗತ್ತಿನ ಶ್ರೇಷ್ಠ ಧಾರ್ಮಿಕ ಕೇಂದ್ರವಾಗಿ ಉತ್ತಾರಗೊಳಿಸುವುದರ ಬದಲು ಲೌಕಿಕ ವಿಷಯಗಳಲ್ಲಿ — ಶಿಕ್ಷಣರಂಗ, ವೈದ್ಯಕೀಯ, ಗ್ರಾಮಾಭಿವೃದ್ಧಿ, ಆಧುನಿಕ ತಂತ್ರವಿದ್ಯೆ, ಲಲಿತಕಲೆಗಳು ಮುಂತಾದವುಗಳಲ್ಲಿ — ಹ್ರಾಸಗೊಳಿಸುವುದು ಉಚಿತವೇ?” ಇಂಥ ಸಂದೇಹ, ಪ್ರಶ್ನೆ, ಸವಾಲು ಅಥವಾ ಅಭಿಪ್ರಾಯ ಅನೇಕರಲ್ಲಿ ಮೂಡುವುದುಂಟು. ಧರ್ಮ ಮತ್ತು ವಿಜ್ಞಾನ, ಮತ್ತು ವ್ಯಾಪಕವಾಗಿ ಜೀವನ ಕುರಿತಂತೆ ತೀರ ಸೀಮಿತ ಭಾವನೆಗಳನ್ನೋ ನಂಬಿಕೆಗಳನ್ನೋ ಇರಿಸಿಕೊಂಡಿರುವ, ಅನ್ಯತ್ರ ಋಜುವ್ಯಕ್ತಿಗಳಾಗಿರುವ, ಇಂಥವರಿಗೆ ಈ ಕಿರುಬರಹದಲ್ಲಿ ಕೊಡಬಹುದಾದ ಸಂಕ್ಷೇಪ ವಿವರಣೆ ಇಷ್ಟೇ:

ಮಾನವನ ಅನ್ವೇಷಣಶೀಲ ಮನಸ್ಸು ಬೃಹದ್ವಿಶ್ವದ ಜೊತೆ ಅಂತರಕ್ರಿಯೆ ಎಸಗುವಾಗ ದೇವರು, ಧರ್ಮ, ಆತ್ಮ ಮುಂತಾದ ಪಾರಲೌಕಿಕ ಅಮೂರ್ತ ವಿಚಾರಗಳು ಉದ್ಭವಿಸುತ್ತವೆ; ಇತರ ವ್ಯಕ್ತಿಗಳ ಜೊತೆ ಅಂತರಕ್ರಿಯೆ ಎಸಗುವಾಗ ಸಮಾಜ, ಸರ್ಕಾರ, ಪ್ರಭುತ್ವ ಮುಂತಾದ ಲೌಕಿಕ ಬಲಗಳು ಉಗಮಿಸುತ್ತವೆ; ನೇರವಾಗಿ ಸುತ್ತಲಿನ ಭೌತಜಗತ್ತಿನ ಜೊತೆ ಅಂತರಕ್ರಿಯೆ ಎಸಗುವಾಗ ವಿಜ್ಞಾನ ಮೈದಳೆಯುತ್ತದೆ.

ಮೊದಲನೆಯ ವರ್ಗದವನ್ನು ಒಟ್ಟಾಗಿ ‘ಧರ್ಮ’ ಎಂದೂ ಎರಡನೆಯದವನ್ನು ‘ಪ್ರಭುತ್ವ’ ಎಂದೂ ಮೂರನೆಯದವನ್ನು ‘ವಿಜ್ಞಾನ’ ಎಂದೂ ಹೆಸರಿಸೋಣ. ಇವು ಮೂರೂ ಮಾನವಮತಿಯ ಸೃಷ್ಟಿಗಳು, ನಿಸರ್ಗದತ್ತ ವರಗಳಲ್ಲ. (ಬೆಟ್ಟ, ಕಾಡು, ಕಡಲು, ಗಾಳಿ, ಸೂರ್ಯ, ಚಂದ್ರ ಮುಂತಾದವು ನಿಸರ್ಗದತ್ತ ವರಗಳು.) ಧರ್ಮ, ಪ್ರಭುತ್ವ ಮತ್ತು ವಿಜ್ಞಾನ ಸಾಮ್ರಾಜ್ಯಗಳಿಗೆ ಮಾನವ ಪ್ರಪಂಚದಿಂದಾಚೆಗೆ ಚಲಾವಣೆ ಇಲ್ಲ. ಮಾನವವಿಕಾಸಕ್ಕೆ ಇವು ಅತ್ಯವಶ್ಯ ಪ್ರೋಕ್ಷಕಗಳು: ‘ನಹಿ ಜ್ಞಾನೇನ

ಸದೃಶಂ,' 'ಜ್ಞಾನಂ ವಿಜ್ಞಾನ ಸಹಿತಂ,' 'ಜ್ಞಾನವಿಜ್ಞಾನ ತೃಪ್ತಾತ್ಮಾ' ಇತ್ಯಾದಿ ಗೀತಾಪಂಕ್ತಿಗಳಲ್ಲಿ ಹೆಪ್ಪುಗಟ್ಟಿರುವುದು ಇದೇ ಭಾವನೆ.

ವ್ಯವಹಾರದ ಲೌಕಿಕ ಪ್ರಪಂಚದಲ್ಲಿ 'ಧರ್ಮ' ಮಾನವನಿಗೆ ಚಿತ್ತಸ್ವಾಸ್ಥ್ಯ ಮತ್ತು ಹೃದಯಸಂಸ್ಕಾರ ಒದಗಿಸಲು ಕಾರಣವಾಗುತ್ತದೆ — ದಯೆಯೇ ಧರ್ಮದ ಮೂಲವಯ್ಯಾ!; 'ಪ್ರಭುತ್ವ' ಸಮಾಜದ ಸಂಘಟನೆ, ಶಿಸ್ತು ಮತ್ತು ವಿಕಾಸಗಳಿಗೆ ಕಾರಣವಾಗುತ್ತದೆ — ಒಗ್ಗಟ್ಟಿನಲ್ಲಿ ಬಲವಿದೆ; 'ವಿಜ್ಞಾನ' ಹೊಟ್ಟೆಗೆ ಹಿಟ್ಟು, ಒಡಲಿಗೆ ಬಟ್ಟೆ ಮತ್ತು ಬದುಕಿಗೆ ಸೌಕರ್ಯ ಒದಗಿಸಲು ಕಾರಣವಾಗುತ್ತದೆ —

ನಾವುಣ್ಣುವನ್ನಗಳು ನಾವು ಕುಡಿವುದಕಗಳು
ನಾವುಸಿರುವೆಲರುಗಳು ನಾವುಡುವ ವಸ್ತ್ರ
ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳು
ಜೀವವೆರರ ಶಿಶುವು ಮಂಕುತಿಮ್ಮ

ಧರ್ಮರಹಿತ ಪ್ರಭುತ್ವ ಸ್ವಚ್ಛಂದತೆ, ಪ್ರಭುತ್ವರಹಿತ ಧರ್ಮ ಅನಾಥತೆ; ಪ್ರಭುತ್ವರಹಿತ ವಿಜ್ಞಾನ ಕುತ್ಸಿತೆ, ವಿಜ್ಞಾನರಹಿತ ಪ್ರಭುತ್ವ ಅರಾಜಕತೆ; ವಿಜ್ಞಾನರಹಿತ ಧರ್ಮ ಕುರುಡು, ಧರ್ಮರಹಿತ ವಿಜ್ಞಾನ ಬರಡು. ಆದ್ದರಿಂದ ಧರ್ಮ-ಪ್ರಭುತ್ವ-ವಿಜ್ಞಾನ ಎಂಬ ಮಾನವಕೃತ ಬಲಗಳ ಮಧುರಮೇಳನವೇ ಸುಂದರ ಜೀವನದ ಆಧಾರ ಶ್ರುತಿ. ವರ್ತಮಾನ ಜಗತ್ತಿನ ಅಸಂಖ್ಯ ಸಂಘರ್ಷ, ವ್ಯಾಘಾತ, ಕ್ಷೋಭೆಗಳ ತಳಹದಿಯಲ್ಲಿ ಈ ಶ್ರುತಿ ಕೆಟ್ಟಿರುವುದನ್ನು ಗುರುತಿಸಬಹುದು.

ಅಂದ ಮೇಲೆ ಪರಿಪೂರ್ಣ ವ್ಯಕ್ತಿತ್ವ ಎಂದರೇನು? ಧರ್ಮ, ಪ್ರಭುತ್ವ, ವಿಜ್ಞಾನ ಈ ಮೂರರ ಸಂತುಲಿತ ಮಿಶ್ರಣ, ಸಮನ್ವಯ. ಹೆಗ್ಗಡೆಯವರ ಬಹುಮುಖ ಕ್ರಿಯಾಕಲಾಪಗಳಲ್ಲಿ ಸಾಧನೆ ಸಿದ್ಧಿಗಳಲ್ಲಿ ಅನುರಣಿಸುತ್ತಿರುವುದು ಈ ಸಂತುಲತೆ, ಈ ಸಮನ್ವಯ, ಈ ಮಾನವೀಯತೆ, ಈ ನೈತಿಕತೆ. ಎಂದೇ ಅವರು ಕೇವಲ ಒಂದು ಪಂಗಡದ, ಜಾತಿಯ, ಧರ್ಮದ, ವೃತ್ತಿಯ, ಪ್ರವೃತ್ತಿಯ ಅಥವಾ ಆಸಕ್ತಿಯ ನೇತಾರರಾಗಿಲ್ಲ, ಬದಲು ಎಲ್ಲರ ನೇತಾರರೂ ಆಗಿ ನೆಲದ ಸಾರವಾಗಿದ್ದಾರೆ.

"ಒಂದು ದೇಶದ ಉತ್ಕರ್ಷ ಆ ದೇಶದ ವರಮಾನಸಮೃದ್ಧಿಯನ್ನಾಗಲಿ, ಅಲ್ಲಿ ಎದ್ದು ಕಾಣುವ ಕೋಟೆಕೊತ್ತಲಗಳ ದಾರ್ಢ್ಯವನ್ನಾಗಲಿ, ಅಲ್ಲಿಯ ಸಾರ್ವಜನಿಕ ಸೌಧಗಳ ಸೌಂದರ್ಯವನ್ನಾಗಲಿ ಅವಲಂಬಿಸಿಲ್ಲ; ಬದಲು ಅದು ಆ ದೇಶದಲ್ಲಿರುವ ಸಭ್ಯನಾಗರಿಕರ, ಮತ್ತು ಸುಶಿಕ್ಷಿತ ಪ್ರಜ್ಞಾವಂತ ಶೀಲವಂತ ವ್ಯಕ್ತಿಗಳ ಸಂಖ್ಯಾಬಾಹುಳ್ಯದಲ್ಲಿದೆ. ಆ ದೇಶದ ನೈಜ ಆಸಕ್ತಿ, ಮಹಾ ಸಾಮರ್ಥ್ಯ ಮತ್ತು ವಾಸ್ತವ ಅಧಿಕಾರಬಲ ಇವನ್ನು ಇಲ್ಲಿ — ಈ ಸಂಖ್ಯಾಬಾಹುಳ್ಯದಲ್ಲಿ — ಕಾಣುತ್ತೇವೆ." ಮಾರ್ಟಿನ್ ಲ್ಯೂತರ್ (೧೪೮೩-೧೫೪೬) ವರ್ಣಿಸಿರುವ ಈ ಜೀವಂತ ಮತ್ತು ಸುಖೀ ರಾಜ್ಯದತ್ತ ನಮ್ಮ ಜನತೆಯನ್ನು ಒಯ್ಯುತ್ತಿದ್ದಾರೆ ವೀರೇಂದ್ರ ಹೆಗ್ಗಡೆಯವರು. ಎಂದೇ ಅವರು ನಮ್ಮ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಭರ್ತೃಹರಿಯ ಮಾತಿನಲ್ಲಿ —

ತರುಗಳ್ ಬಾಗುಗುಮುರು ಫಲ
ಭರದಿಂದ ಮುಗಿಲ್ ನವಾಂಬು ಭಾರದಿ ಜೋಲ್ಗುಂ
ಸಿರಿಯೊಳ್ ನಯಯುತರಾರ್ಯರ್
ಪರಿಕಿಸೊಡೆ ಪರೋಪಕಾರಿಗಳ್ಗಿದು ಸಾಜಂ

೨೨-೧೦-೧೯೯೨

ಜಿ. ಟಿ. ನಾರಾಯಣರಾವ್

# ವೀಣೆ ಶೇಷಣ್ಣ ಭವನದ ಕಥೆ

ಜಿ. ಟಿ. ನಾರಾಯಣರಾವ್

ಗಾನಭಾರತೀ ಸಾಂಸ್ಕೃತಿಕ ಸಂಸ್ಥೆಯ ಕಾರ್ಯಕಾರಿ ಮಂಡಳಿಯು ನಾವು ೧೯೯೦ರ ಆದಿಯಲ್ಲಿ 'ವೀಣೆ ಶೇಷಣ್ಣ ಭವನ' ನಿರ್ಮಾಣವನ್ನು ಆರಂಭಿಸಿದೆವು. ಆಗ ಇದರ ಅಂದಾಜು ವೆಚ್ಚ ರೂ ೧೨ ಲಕ್ಷ. ನಮ್ಮಲ್ಲಿದ್ದ ಬಂಡವಾಳವಾದರೋ ರೂ ೩೦,೦೦೦ವನ್ನೂ ಮೀರಿರಲಿಲ್ಲ. ಮಧ್ಯಮ ಹಾಗೂ ನಿಮ್ನ ಮಧ್ಯಮ ವರ್ಗದ ಅಂದಾಜು ೨೦೦ ಸದಸ್ಯರು ನಮ್ಮ ಉಸಿರು. ಇವರಿಂದ ನಾವು ಹಿರಿಮೊತ್ತವನ್ನು ನಿರೀಕ್ಷಿಸುವಂತಿರಲಿಲ್ಲ. ರಾಜಕೀಯ, ಜಾತೀಯ, ಮತಧಾರ್ಮಿಕ, ಭಾಷೀಯ ಅಥವಾ ಅಧಿಕಾರಾತ್ಮಕ ಪ್ರಭಾವ ನಮಗಿರಲಿಲ್ಲ.

ಆದರೂ ಕಣಕ್ಕೆ ಧುಮುಕಿದೆವು — ಮಣಿಪಾಲದ ಮಾಂತ್ರಿಕ ಡಾ. ಟಿ. ಎಂ. ಎ. ಪೈಯವರ ಆದರ್ಶದಿಂದ ಸ್ಫೂರ್ತಿ ಹೀರಿ: ಜನರಿಗೆ ನಮ್ಮ ಉದ್ದೇಶದ ಬಗ್ಗೆ ಭರವಸೆ ಮೂಡಿದರೆ ಯಾವ ಅಡಚಣೆಯೂ ಎದುರಾಗದು.

ಜನರೆಂದರು ಇವರಿಗೆ ಮರುಳು. ಆರಂಭಶೂರರಿವರು. ಮೈಸೂರಿನಲ್ಲಿ ಈಗ ಇರುವ ಕಲಾಸಂಸ್ಥೆಗಳಿಗೇ ಬೇಡಿಕೆ ಇಲ್ಲ — ಈಗ ಇನ್ನೊಂದು!

ನಮ್ಮ ಸಂಸ್ಥೆಯ ಕಾಯಕರು ಪ್ರಜಾಪ್ರಭುತ್ವಾತ್ಮಕ ಗಣತಂತ್ರದಲ್ಲಿ ಭದ್ರ ಆಸರೆ ಪಡೆದು, ಸಂಸ್ಕೃತಿಯ ಹಿತ ನಲ್ನಲಿಸಿದಂತೆ ಒದಗಿದ ಆತ್ಮವಿಶ್ವಾಸದಿಂದ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿದೆವು. ಅವರು ನಮ್ಮ ಯೋಜನೆಯನ್ನು ಆಸಕ್ತಿಯಿಂದ ಕೇಳಿ ಹಲವಾರು ಉತ್ತಮ ವ್ಯಾವಹಾರಿಕ ಸಲಹೆಗಳನ್ನು ನೀಡಿದರು. ರೂ ೧೧,೦೦೦ ದಾನವಿತ್ತು (೧೯೮೯) "ಕೆಲಸ ತೊಡಗಿದ ಮೇಲೆ ಬನ್ನಿ" ಎಂದರು.

೧೯೯೦ ನವಂಬರಿನಲ್ಲಿ ನಾವು ಅವರನ್ನು ಭೇಟಿಯಾಗಿ ನಮ್ಮ ಕಾರ್ಯಪ್ರಗತಿಯನ್ನು ಸಾಕ್ಷ್ಯಾಧಾರ ಸಹಿತ ತೋರಿಸಿ ವಿವರಿಸಿದೆವು. ಆಲಿಸಿದರು, ಪ್ರಶ್ನಿಸಿದರು, ಚೆಕ್ ಹಾಳೆ ತೆರೆದರು, ತಮ್ಮ ನಿರ್ಧಾರವನ್ನು ಬರೆಯತೊಡಗಿದರು — ನಮ್ಮ ಎದುರೇ. ಏನು ಎಷ್ಟು ಹೀಗೆ ಬರೆಯುವರೆಂಬುದನ್ನು ಇಣುಕಿ ನೋಡುವುದು ಶಿಷ್ಟ ಸಂಪ್ರದಾಯವಲ್ಲವೆಂದು ನಮಗೆ ತಿಳಿದಿದ್ದರೂ ಅತ್ತಕಡೆ ಕಡೆಗಣ್ಣೋಟ ಹಾಯಿಸದಿರುವುದು ಸಾಧ್ಯವಾಗಲಿಲ್ಲ.

ರೂಪಾಯಿ (ಅಂಕೆ) ಎದುರು ಅವರು ೧ ಬರೆದರು, ಮುಂದೆ ಸೊನ್ನೆ-ಸೊನ್ನೆ-ಸೊನ್ನೆ, ಇನ್ನೂ ಒಂದು ಸೊನ್ನೆ! ಚೆಕನ್ನು ಅತ್ಯಂತ ಪ್ರಸನ್ನತೆಯಿಂದ ನಮಗೆ ಒಪ್ಪಿಸುತ್ತ "ಇಂದು ೧೦, ಸದ್ಯ ೬೦, ಮುಂದಿನವಾರ ೧೦, ಮತ್ತು ತಿಂಗಳ ಕೊನೆಗೆ ೨೦ — ಹೀಗೆ ೧ ಲಕ್ಷ. ಶ್ರೀ ಮಂಜುನಾಥಸ್ವಾಮಿ ನಿಮಗೆ ಒಳ್ಳೆಯದು ಮಾಡಲಿ," ಎಂದು ಹರಸಿದರು. ನಮ್ಮ ಆನಂದದ ಕುಂಭ ಬಿರಿದು ಕವಿ ಚಿತ್ರದ ಭಾವಬಗ್ಗೆಯೂ ತಕ್ಕ ಚಿತ್ರಣವೇ ಇರಲಿಲ್ಲ.

ಭವನದ ಶಂಕುಸ್ಥಾಪನೆ ಮಾಡಿದಾಗ (೧೯೮೯) ಉದ್ಯಮಪತಿ ಶ್ರೀ ಆರ್. ಗುರು ಮುತ್ತಿನ ಹಾರದಂಥ ನುಡಿ ಮಿನುಗಿದ್ದರು "ಸದುದ್ದೇಶ, ಕಾರ್ಯನಿಷ್ಠೆ, ಋಜುತ್ವ ಮತ್ತು ನಿಃಸ್ವಾರ್ಥತೆ ಸಂಲಗ್ನಗೊಂಡರೆ ಯಾವ ಗುರಿಯೂ ಅಸಾಧ್ಯವಲ್ಲ." 'ಪಂಗುಂ ಲಂಘಯತೇ ಗಿರಿಂ.'

## ನಡೆದುಬಂದದಾರಿ

ಮೈಸೂರಿನ ಕುವೆಂಪುನಗರ ಬಡಾವಣೆ ೧೯೭೦ರಿಂದೀಚೆಗೆ ಅತಿಶಯವಾಗಿ, ಸಾಕಷ್ಟು ಅನಾರೋಗ್ಯಕರವಾಗಿ ಹುಟ್ಟಿ, ಬೆಳೆದು ಬೀಳತೊಡಗಿತು. ವ್ಯಕ್ತಿಯ ಸಾಂಸ್ಕೃತಿಕ ಅಭೀಪ್ಸೆ ಅಭಿವ್ಯಕ್ತಿಗಳಿಗೆ ಅವಕಾಶ ಒದಗಿಸದ ನೆಲ ಕೇವಲ ತುರುಂಗದ ಬಲೆ ಎಂಬ ತಥ್ಯ ಅರಿತಿದ್ದ ಸ್ಥಳೀಯ ಹಿರಿಯರು ಕೆಲವರು ಆಗ ಕಲೆತು ಗಾನಭಾರತೀ ಹೆಸರಿನ ಸ್ವಯಂಸೇವಾ ಸಾಂಸ್ಕೃತಿಕ ಸಂಸ್ಥೆಯನ್ನು ಕರ್ನಾಟಕ ಸರ್ಕಾರದ ಅಧಿನಿಯಮಾನುಸಾರ ಸ್ಥಾಪಿಸಿ ನೋಂದಾಯಿಸಿದರು (೧೯೭೮).

ತಿಂಗಳಿಗೊಮ್ಮೆ ಸಂಗೀತ, ನೃತ್ಯ ಅಥವಾ ಹರಿಕಥೆ, ವಾರ್ಷಿಕವಾಗಿ ಶ್ರೀಕೃಷ್ಣ ಜಯಂತಿ ಮತ್ತು ಶ್ರೀಪುರಂದರ-ತ್ಯಾಗರಾಜ ಸಂಗೀತೋತ್ಸವಗಳು, ಯುವ ಪ್ರತಿಭೆಗಳನ್ನು ಪುರಸ್ಕರಿಸಲು ಸ್ಪರ್ಧೆ ಹಾಗೂ ವೇದಿಕೆ ಅವಕಾಶ, ಹಿರಿಯ ಕಲಾವಿದರಿಗೆ ಸನ್ಮಾನ ಪ್ರದಾನ, ಮತ್ತು ಗ್ರಂಥ ಪ್ರಕಟಣೆ — ಇವು ಈ ಸಂಸ್ಥೆಯ ಮುಖ್ಯ ಚಟುವಟಿಕೆಗಳು.

ಸಂಸ್ಥೆ ಬೆಳೆಯಿತು, ಬಡಾವಣೆ ಮರಿನಗರವೇ ಆಯಿತು, ಸಂಸ್ಥೆಗೆ ಸ್ವಂತ ಸಭಾಂಗಣದ ಆವಶ್ಯಕತೆ ತೀವ್ರವಾಯಿತು. ೧೯೮೦ರಲ್ಲಿ ಒಂದು ಪುಟ್ಟ ನಿವೇಶನ ಖರೀದಿಸಿದೆವು. ಆದರೆ ಅದಿದ್ದ ಸ್ಥಳ ಮಾರುಕಟ್ಟೆಯ ವಿಸ್ತರಣೆಯೋ ಎಂಬಂತಿತ್ತು. ಹೀಗಾಗಿ ಅದನ್ನು ನಗರಾಭಿವೃದ್ಧಿ ಸಮಿತಿಗೆ ವಾಪಸು ಮಾಡಿ, ೧೯೮೮-೮೯, ಹೊಸ ನೆಲೆಯಲ್ಲಿ ನಿವೇಶನ ಪಡೆದೆವು.

ಇದು ಕುವೆಂಪುನಗರ ಬಡಾವಣೆಯ ಆದಿಚುಂಚನಗಿರಿ ರಸ್ತೆಯಲ್ಲಿದೆ. ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು ಉದ್ದಕ್ಕೂ ಕಂಗೊಳಿಸುತ್ತಿರುವ ಈ ಪ್ರದೇಶ ಮೈಸೂರುನಗರದಲ್ಲಿಯ ಒಂದು ಶಾಂತದ್ವೀಪ. ನಿವೇಶನದ ವಿಸ್ತೀರ್ಣ ೨೬೬೪ ಚ.ಮೀ. ಇದರ ಹಿಂದೆ ಅನತಿ ದೂರದಲ್ಲಿ ಚಾಮುಂಡಿಬೆಟ್ಟದ ಭವ್ಯ ಭಿತ್ತಿ ಎದ್ದು ಕಂಗೊಳಿಸುತ್ತದೆ.

ವೀಣೆ ಶೇಷಣ್ಣ (೧೮೫೨-೧೯೨೬), ವಾಗ್ಗೇಯಕಾರ ವಾಸುದೇವಾಚಾರ್ಯ (೧೮೬೫-೧೯೬೧) ಮತ್ತು ಪಿಟೀಲು ಚೌಡಯ್ಯ (೧೮೯೪-೧೯೬೭) ಕರ್ನಾಟಕದ ಮಹಾಕಲಾಚೇತನಗಳು. ಇವರ ಪೈಕಿ ಶೇಷಣ್ಣ ಒಬ್ಬರ ಬಗ್ಗೆ ಮಾತ್ರ ಇನ್ನೂ ಸ್ಮಾರಕ ನಿರ್ಮಿತವಾಗಿರಲಿಲ್ಲ. ಎಂದೇ ನಾವು ಉದ್ದೇಶಿಸಿದ ಕಟ್ಟಡವನ್ನು 'ವೀಣೆ ಶೇಷಣ್ಣ ಭವನ' ಎಂದು ಹೆಸರಿಸಿದೆವು — ಹಾಸು ಹುಟ್ಟುವ ಮೊದಲೇ ಕುಲಾವಿ!

## ಭಿಕ್ಷಾಟನೆಯ ಪರಿ

ಎಲ್ಲ ಸರಿ, ಹಣ ಬರುವ ಪರಿ! ಪ್ರಾರಂಭಾದ್ಯಂತ ಜನಸಂಪರ್ಕ ಮಾಡಿ ಪ್ರತಿಯೊಬ್ಬನೂ ಯಥಾಶಕ್ತಿ ಈ ಕಲಾದಾಸೋಹದಲ್ಲಿ ಭಾಗಿ ಆಗುವಂತೆ ಪ್ರೇರಿಸುವುದು: ರೂ ೧ x ೧೨ ಲಕ್ಷ ದಾನಿಗಳು = ರೂ ೧೨ ಲಕ್ಷ!

ದೇಣಿಗೆ, ಸವಿಸಂಚಿಕೆಗೆ ಜಾಹೀರಾತು, ಸಂಘ ಸಂಸ್ಥೆಗಳಿಂದ ದಾನಸ್ವೀಕಾರ, ಭಾರತ ಸರ್ಕಾರದಿಂದ ಸಹಾಯಧನ ಯೋಜನೆ — ಈ ಚತುರ್ವಿಧ ಮಾರ್ಗಗಳಲ್ಲಿ ಸಾರ್ವಜನಿಕ ಭಿಕ್ಷಾಟನೆ ಆರಂಭಿಸಿದೆವು, ೧೯೯೦ರ ಆದಿಯಲ್ಲಿ.

ಕೆಲಸ ತೋರದಿದ್ದರೆ ಹಣ ಬರದು, ಹಣ ಹರಿಯದೆ ಕೆಲಸ ನಡೆಯದು! ಈ ಸಂದಿಗ್ಧತೆಯಿಂದ ಪಾರಾಗಲು ಮೂರು ವ್ಯಾವಹಾರಿಕ ಕ್ರಮಗಳನ್ನು ಉದ್ಘೋಷಿಸಿದೆವು: ತಿಂಗಳಿಗೆ ರೂ ೩೦,೦೦೦ ಮೌಲ್ಯದ ಕಾಮಗಾರಿ ಮಾತ್ರ ನಿರ್ವಹಿಸತಕ್ಕದ್ದು (ಅಂದಿನ ನಮ್ಮ ಸಾಮರ್ಥ್ಯ ಮಿತಿ ಇದು); ಮೊದಲಿಗೆ ಸ್ಥಾ ಮಂದಿರವನ್ನು ಮಾತ್ರ ಎಬ್ಬಿಸಿ, ಯಥಾವಕಾಶ, ಹಣ ಒದಗಿದಂತೆ ಅಂತಸ್ತುಗಳನ್ನು ಸೇರಿಸತಕ್ಕದ್ದು (ಇದಾದರೂ ಸುಮಾರು ೪ ಲಕ್ಷ ಬೇಡುತ್ತಿತ್ತು); ಉಪಯುಕ್ತತೆ, ಭದ್ರತೆ ಮತ್ತು ಸುಂದರತೆಗಳಿಗೆ ಊನ ಬಾರದಂತೆ ಪರಮ ಮಿತವ್ಯಯದಲ್ಲಿ ನಿರ್ಮಾಣ ಕಾರ್ಯವನ್ನು ನಡೆಸತಕ್ಕದ್ದು.

ವಿಸ್ಮಯಗಳು

"ಇಂದಿನ ವಿಸ್ಮಯವೇನು?" ಒಬ್ಬ ಸದಸ್ಯ ಇನ್ನೊಬ್ಬನ ಜೊತೆ ಮಾತಾಡುವಾಗ "ನಮ್ಮ ಪ್ರತಿನಿಧಿ ಮುಂಬಯಿಯಿಂದ ದೂರವಾಣಿ ಸಂದೇಶ ನೀಡಿದ್ದಾರೆ: ಭಾರೀ ಮೊತ್ತದ ಹಣ ಇಲ್ಲಿ ದೊರೆಯುತ್ತದೆ! ಭವನನಿರ್ಮಾಣ ಕಾರ್ಯವನ್ನು ಯೋಜನಾನುಸಾರ ಪ್ರಾರಂಭಿಸಿ!"

ಮುಂಬಯಿಯಲ್ಲಿ ಸುವರ್ಣವೃಷ್ಟಿ: ರೂ ೧.೫ ಲಕ್ಷ ಖಚಿತ!

ಅಮೇರಿಕದಿಂದ ಡಾಲರ್ ಚೆಕ್‌ಗಳು ಹರಿದು ಬಂದುವು. ಭಾರತದೆಲ್ಲೆಡೆಯ ಸಂಗ್ರಹ ಗಣನೀಯ ಮೊತ್ತದ್ದಾಗಿತ್ತು. ಇದು ೧೯೯೧ರ ಮೊದಲ ದಿನಗಳ ಉಲ್ಲಾಸದಾಯಕ ಚಿತ್ರ. ಇದರಿಂದ ಉತ್ತೇಜಿತರಾದ ನಮ್ಮ ಸದಸ್ಯರು ಮೈಸೂರಿನೊಳಗೆ ಮನೆಮನೆಗೆ ಪಾದಯಾತ್ರೆ ಬೆಳೆಸಿ ಹಣದ ಥೈಲಿಯನ್ನೇ ಹರಿಸಿದರು. ಇಷ್ಟೇ ಅಲ್ಲ: ತಮಗೆ ಬಂದ ಗುರುದಕ್ಷಿಣೆ, ಸಂಭಾವನೆ ಮುಂತಾದ ಮೊಬಲಗುಗಳನ್ನು ದಾನಭಾರತಿಗೆ ಸ್ವಪ್ರವೃತ್ತಿಯಿಂದ ಅರ್ಪಿಸಿ ಕೃತಾರ್ಥರಾದರು.

ಇಲ್ಲಿ ಭಿಕ್ಷಾಟನೆ, ಅಲ್ಲಿ ಭವನನಿರ್ಮಾಣ. ಸಮಿತಿಯ ಸದಸ್ಯರೊಬ್ಬರು ನಿವೃತ್ತ ಎಂಜಿನಿಯರ್. ಇವರು ನಿರ್ಮಾಣ ಕಾರ್ಯದ ಶಿಲ್ಪಿ. ಅನುಭವ, ದರ್ಶನ, ವ್ಯಾವಹಾರಿಕ ಕೌಶಲ ಮತ್ತು ಕೆಚ್ಚು ಇವರ ವ್ಯಕ್ತಿತ್ವದ ಪ್ರಧಾನ ಲಕ್ಷಣಗಳು. ಈ ಆಗರ್ಭಶ್ರೀಮಂತ ಗಾರೆಕತ್ತಿ ಹಿಡಿದು ಕೆಲಸಗಾರರಿಗೆ ಸಾರಣೆಯ ಕ್ರಮ ಕಲಿಸಿದರು, ಮಾಡಿಗೆ ಹತ್ತಿ ಕಲ್ಲಾರು ಚಪ್ಪಡಿಗಳನ್ನು ಹೊದಿಸುವ ವಿಧಾನ ವಿವರಿಸಿದರು, ಮಾರುಕಟ್ಟೆಗೆ ಹೋಗಿ ಅವಶ್ಯ ಸಾಮಗ್ರಿಗಳನ್ನು ಊಹಾತೀತ ಕನಿಷ್ಠ ಬೆಲೆಗಳಲ್ಲಿ ಖರೀದಿಸಿದರು.

ಸರ್ ಎಂ. ವಿಶ್ವೇಶ್ವರಯ್ಯನವರು ರಕ್ತಮಾಂಸಭರಿತರಾಗಿ ಈ ಧರೆಯಲ್ಲಿ ಬಾಳಿದ್ದು ಸರಿ, ಕಟ್ಟುಕತೆಯಲ್ಲ ಎಂಬುದಾಗಿ ಹೊರಗಿನಿಂದ ಬಂದ ಹಿರಿಯ ಎಂಜಿನಿಯರ್ ಒಬ್ಬರು [illegible] ಭವನದ ಪ್ರಗತಿ ಗಮನಿಸಿ ಉದ್ಗರಿಸಿದರು.

ವಿಸ್ಮಯವೇ? ಮರೀಚಿಕೆಯೇ?

ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಗೆ, ಕಾನೂನು ಪ್ರಕಾರ, ನಾವೊಂದು ಅರ್ಜಿ ಸಲ್ಲಿಸಿದ್ದೆವು (ಮಾರ್ಚ್ ೧೯೯೦). ಅದರ ಪ್ರಕಾರ ನಾವು ರೂ ೭ ಲಕ್ಷ ಪಡೆಯಲು ಅರ್ಹರಾಗಿದ್ದೆವು. ಆದರೆ ದೂರದ ನವದೆಹಲಿಯಲ್ಲಿರುವ ಇಲಾಖೆಗೆ ಮೈಸೂರಿನ ಸ್ವಯಂಸೇವಾ ಕಾರ್ಯ "ನಿರ್ವಹಿಸಬೇಕಾದ ಇನ್ನೊಂದು ಕಿರುಕುಳ!" ಸರ್ಕಾರದ ಅಂಕುಡೊಂಕು ಪಂಕ್ತಿಗಳಲ್ಲಿ

ನಮ್ಮ ನಿವೇದನೆಯ ಪಾಡೇನೆಂದು ತಿಳಿಯಲು ನಮ್ಮ ಶ್ರೀ ಒಬ್ಬರು ಸ್ವತಃ ಮಠದಲ್ಲಿ ಅಲ್ಲಿಗೆ ಹೋದರು (ನವಂಬರ ೧೯೯೦).

ಕರ್ನಾಟಕದ ಅಗೋಚರ ಕಿರುದಾರಿಗಳಲ್ಲಿ ಅನಾಥ ಶವಗಳಾಗಿ ಕೊಳೆಯುತ್ತಿದ್ದ ಇಂಥ ಅಸಂಖ್ಯ ಅರ್ಜಿಗಳ ಪ್ರತಿ ನಮ್ಮ ಅರ್ಜಿಯೊಂದೇ ಜಯಗಳಿಸಿತ್ತು: ನಮಗೆ ರೂ. ೨ ಲಕ್ಷ ಮಂಜೂರಾಗಿತ್ತು! ಹೇಗೆ? ಕೇವಲ ನಮ್ಮ ಉಸಿರು, ಸಂಬಂಧಿಸಿದ ದಾಖಲೆಗಳು, ಒಡಲು, ಶ್ರದ್ಧೆಯೇ ಕಾರಣ.

ಸಹಜವಾಗಿ ನಮ್ಮ ಆನಂದ ಮೇರೆ ಮೀರಿತು. ಆದರೆ ವಾಸ್ತವವಾಗಿ ಆ ಮೊಬಲಗನ್ನು ಪಡೆಯಲು ನಾವು ಮಾಡಿದ ಮತ್ತು ಮಾಡುತ್ತಿರುವ 'ಕಾಗದ ಪತ್ರಗಳ' ಮೊಲು ಹಣಕ್ಕೆ ಮೀರುತ್ತದೆ. ರೂ. ೫೦೦೦೦ ಈ ತನಕ ಕೈಸೇರಿದೆ. ಉಳಿದ ರೂ. ೧.೫ ಲಕ್ಷ ಈ ಶತಮಾನಾಂತ್ಯದಲ್ಲಿ ನಮ್ಮ ಕೈಸೇರಿದರೆ ನಾವು ಪರಮ ಭಾಗ್ಯವಂತರು.

<u>ಜಗನ್ನಾಥನ ತೇರಿನ ದೃಢಗಮನ</u>

ಬಿಳಿ ಕಟ್ಟಡ ಭವನ ಪೂರ್ತಿಯಾಗಿದೆ. ಇದನ್ನು ಶನಿವಾರ ೨೬-೧೦-೧೯೯೧ ರಂದು ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದ್ದಾರೆ. ಅವರನ್ನು ಆಹ್ವಾನಿಸಲು ನಾವು ಧರ್ಮಸ್ಥಳಕ್ಕೆ ಹೋಗಿದ್ದಾಗ ನಮ್ಮ ಅನುಭವಗಳನ್ನು ಮುಖತಃ ಕೇಳಿ ಬಹಳ ಸಂತೋಷಪಟ್ಟರು. "ಹಣ ಕೊಡುವುದು ಸಮಸ್ಯೆಯಲ್ಲ, ಆದರೆ ಯಾರಿಗೆ!" ಅವರು ನುಡಿದ ಈ ಸೂಕ್ತವಾಕ್ಯ ಮಾರ್ಮಿಕವಾಗಿದೆ.

ಆರಂಭದಿಂದಲೂ ನಮ್ಮ ಸಂಸ್ಥೆಯ ಆಗುಹೋಗುಗಳ ಬಗ್ಗೆ ವಿಶ್ವಾಸ ಆತ್ಮೀಯ ಪರಿಶುದ್ಧ ಆಸಕ್ತಿ ವಹಿಸಿದ್ದು ತೋರಿಸುತ್ತಿರುವ ಇನ್ನೊಂದು ದಿವ್ಯ ಚೇತನ ಮೈಸೂರಿನ ಶ್ರೀ ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳವರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲು ಸ್ವಾಮಿಗಳು ಸಮ್ಮತಿಸಿ ನಮ್ಮ ಕಾರ್ಯಕ್ರಮವನ್ನು ಆಶೀರ್ವದಿಸಿದ್ದಾರೆ. "ಮನ್ನಣೆಯೊಂದಿರಕೆ ಯೋಗ್ಯರುಗಳೆಲ್ಲ ಬನ್ನಿ! ಬನ್ನಿ ಬನ್ನಿ ಬನ್ನಿ ಬನ್ನಿ!"

ಈ ಕೃತಾರ್ಥ ಮುಹೂರ್ತದಲ್ಲಿ ನಮ್ಮೆಲ್ಲರಿಗೆ ಅನುರಣಿಸುತ್ತಿರುವ ಭಾವವೇನು? ಯೆಹೂದಿ ಮೆನುಹಿನ್ ತಮಗೆ ೭೦ ತುಂಬಿದಾಗ ಅಭಿವ್ಯಕ್ತಿಸಿರುವ ಅಂತರಂಗವಾಣಿ ಇದನ್ನು ಸೂತ್ರೀಕರಿಸುತ್ತದೆ: "ಹಲವು ಮನಗಳ ಮತ್ತು ಸಾಮರ್ಥ್ಯಗಳ ಪ್ರಭಾವದಿಂದ ನನ್ನ ಈ ಸಂಸ್ಥೆ ಪುರಸ್ಕೃತವಾಗಿದೆ. ಇದು ನನ್ನದೆಂಬ ಅರಿವು ನನಗೆ ಸಂತೋಷ ನೀಡುತ್ತದೆ ನಿಜ. ಏಕೆಂದರೆ ಇದರ ಅಸ್ತಿತ್ವಕ್ಕೆ ನಾನು ಹಂಬಲಿಸಿದ್ದೇನೆ ಮತ್ತು ಶ್ರಮಿಸಿದ್ದೇನೆ. ಜೊತೆಗೆ, ಇದು ನನ್ನದಲ್ಲವೇ ಅಲ್ಲ, ಬದಲು, ನನ್ನನ್ನು ಆಶ್ರಯಿಸದ ಸ್ವಾಯತ್ತತೆ ಮತ್ತು ಗುಣಲಕ್ಷಣ ಇದರಲ್ಲಿ ಅಂತರ್ಗತವಾಗಿವೆ ಎಂಬ ಅರಿವು ಕೂಡ ನನಗೆ ಅಷ್ಟೇ ಸಂತೋಷ ನೀಡುತ್ತದೆ."

ಮೂರನೇ ಎಚ್ಚರ
ಜಿ ಟಿ ನಾರಾಯಣರಾವ್
೮ ಅತ್ರಿ ಶಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ
ಮೈಸೂರು ೫೭೦ ೦೨೩

[signature]
೨೨.೦೮.೯೭

# ಕೃತಜ್ಞತಾ ಸಮರ್ಪಣೆ

ಪ್ರೊ. ಬಿ. ಶಶಿಧರ ಪ್ರಸಾದ್ ಅವರು ದೂರವಾಣಿ ಮೂಲಕ ಈ ಅನಿರೀಕ್ಷಿತ ಸಂತೋಷದ ಸಮಾಚಾರ ತಿಳಿದಾಗ ನಾನು ಉದ್ಗರಿಸಿದ್ದು ಒಂದೇ ಒಂದು ಪದ "ನನಗೇ ?!"

ವಾಸ್ತವವಾಗಿ, ದೇಜಗೌ ಟ್ರಸ್ಟ್ ೧೯೯೯ರ ವಿಶ್ವಮಾನವ ಪ್ರಶಸ್ತಿಯನ್ನು ಕನ್ನಡದಲ್ಲಿ ವಿಜ್ಞಾನ ವಾಙ್ಮಯ ನಿರ್ಮಾಪಕರಿಗೆ ಪ್ರದಾನಿಸಲಿದೆ ಎಂಬ ಸುದ್ದಿ ಹಲವು ತಿಂಗಳ ಹಿಂದೆ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಯಿತು; ಅಲ್ಲದೇ ಅರ್ಹರ ಹೆಸರುಗಳನ್ನು ಟ್ರಸ್ಟ್, ಸಾರ್ವಜನಿಕರಿಂದ ಆಹ್ವಾನಿಸಿತು ಕೂಡ. ಆಗ ನಾನು ಇತರ ಕೆಲವು ಹಿರಿಯರ ಬಗ್ಗೆ ಶಿಫಾರಸು ಕಾಗದ ಬರೆದಿದ್ದೆ. ಸ್ವಲ್ಪವೂ ಈ ಹಾರ ನನ್ನ ಕೊರಳಿಗೇ ಬಿದ್ದೀತೆಂಬ ಊಹೆಯಾಗಲೀ ಆಸೆಯಾಗಲೀ ನನ್ನಲ್ಲಿ ಅಂಕುರಿಸಲಿಲ್ಲ.

ಕಾರಣ ತೀರ ಸುಲಭ. ಜಗತ್ತಿನ ಮಹಾವಿಜ್ಞಾನಿಗಳ ಹಾಗೂ ವಿಜ್ಞಾನ ವಾಙ್ಮಯ ನಿರ್ಮಾಪಕರ ಜೊತೆ ಸದಾ ಬೌದ್ಧಿಕ ಸಂವಾದ ಮಗ್ನನಾಗಿರುವ ನಾನು ಆ ಹಿಮಾಲಯಗಳ ಎದುರು ಎಂಥ ಧೂಳಿಕಣ ಎಂಬ ಸಂಗತಿಯನ್ನು ಚೆನ್ನಾಗಿ ಅರಿತಿದ್ದೇನೆ.

ಅದೇ ವೇಳೆ ಇನ್ನೊಂದು ಸಂಗತಿಯೂ ನನಗೆ ಗೊತ್ತಿದೆ: ಕನ್ನಡ ಭಾಷೆಯಲ್ಲಿ ಆಧುನಿಕ ವಿಜ್ಞಾನ ವಾಙ್ಮಯ ನಿರ್ಮಾಣ ವ್ಯವಸ್ಥಿತವಾಗಿ, ಸಮೃದ್ಧವಾಗಿ ಮತ್ತು ಸುಂದರವಾಗಿ ಆಗುತ್ತಿಲ್ಲ; ಆದ್ದರಿಂದ ಈ ರಂಗದಲ್ಲಿರುವ ಕೆಲವೇ ಲೇಖಕರಾದರೂ ನಿಷ್ಠೆಯಿಂದ ಸಲ್ಲಿಸುವ ಕೈಂಕರ್ಯವನ್ನು, ಇದು ಯಾವ ಗುಣಮಟ್ಟದಲ್ಲೇ ಇದ್ದರೂ, ಕನ್ನಡಿಗರು ತಮ್ಮ ಸಹಜ ಔದಾರ್ಯದಿಂದ ಮನ್ನಿಸುತ್ತಾರೆ.

ಏನೇ ಇರಲಿ, ದೇಜಗೌ ಟ್ರಸ್ಟಿನ ಕ್ರಮಶಕ್ತಿ ಆಗಿರುವ ಮತ್ತು ನನ್ನ ಜೀವನದಿಯ ಹರಿವಿಗೆ ಪ್ರಮುಖ ತಿರುವನ್ನು ಅನಿರೀಕ್ಷಿತವಾಗಿಯೂ ಅಯಾಚಿತವಾಗಿಯೂ ಕೊಟ್ಟು ಇಂದು ಈ ಆಶೀರ್ವಾದವನ್ನು ಮಾಡಿ ಹರಸುತ್ತಿರುವ ಪ್ರೊ. ದೇ. ಜವರೇಗೌಡರಿಗೆ ನನ್ನ ಬಗ್ಗೆ ಇರುವ ಪ್ರೀತಿಯ ದ್ಯೋತಕ ಈ ಪ್ರಶಸ್ತಿ ಎಂದು ತಿಳಿದಿದ್ದೇನೆ.

"ಪರಗುಣ ಪರಮಾಣುಪ್ರಮುಮಂ ಗಿರಿಗೈದು ಬಾಳ್ವ" ಶ್ರೀಯುತರ ಹಾಗೂ ದೇಜಗೌ ಟ್ರಸ್ಟಿನ ಸದಸ್ಯರ ಅಂತಃಕರಣಕ್ಕೆ ಕೃತಜ್ಞತೆಯಿಂದ ಮಣಿಯುತ್ತೇನೆ, ಮತ್ತು ಮುಂದೆಯೂ ಈ ಹಿಂದಿನಂತೆ ನಾನು ನನ್ನ ಹಾದಿಯಲ್ಲಿ ನಡೆಯುತ್ತಲೇ ಇರುತ್ತೇನೆಂಬ ಭರವಸೆಯನ್ನು ನೀಡುತ್ತೇನೆ. ಸದಾ ನಡೆಯುತ್ತಿರುವಾತ ಪಡೆಯುವುದು ಏನು ತಾನೇ ಇದ್ದೀತು!

ವಿಶ್ವಮಾನವ ಎಂದೊಡನೆ ವಿಜ್ಞಾನದ ವಿದ್ಯಾರ್ಥಿಯಾದ ನನ್ನ ಮನದಲ್ಲಿ ಮಿಂಚುವ ವ್ಯಕ್ತಿಗಳೆಂದರೆ ರಾಮಾನುಜನ್, ಐನ್‌ಸ್ಟೈನ್, ಬೋರ್, ರಾಮನ್ ಮೊದಲಾದ ಜಗದ್ವಂದ್ಯರು. ಅವರ ಎತ್ತರ ಬಿತ್ತರಗಳನ್ನು ನನ್ನ ಮಿತಿಯೊಳಗೆ ಸಾಧ್ಯವಾದುದಷ್ಟು ಗ್ರಹಿಸಿ ವ್ಯಾಖ್ಯಾನಿಸಬಲ್ಲೆನೇ ಹೊರತು ನಾನೇ ಅವನ್ನೆಂದೂ ಏರಲಾರೆ.

ನನ್ನ ಭಾವಗಾತ್ರಕ್ಕೂ ಬೌದ್ಧಿಕ ಮಿತಿಗೂ ಅತಿಶಯ ಹಿರಿದಾದ ಈ ಗೌರವವನ್ನು ನನಗೆ ತೊಡಿಸುವುದರ ಮೂಲಕ ದೇಜಗೌ ಟ್ರಸ್ಟ್ ಮೂರು ಮುಖ್ಯ ಅಂಶಗಳನ್ನು ಧ್ವನಿಸಿದೆ:

೧ ಕನ್ನಡ ವಿಜ್ಞಾನ ವಾಙ್ಮಯ ಕೃಷಿಯಲ್ಲಿ ಸ್ವಸಂತೋಷಾರ್ಥ ನಾನು ಅನುಸರಿಸಿರುವ ಪಥ ದೋಷಪೂರಿತವಾಗಿಲ್ಲವೆಂಬ ಆಶ್ವಾಸನೆ.

೨ ಯಾವುದೇ ರಂಗದಲ್ಲಿ ಸ್ವಸಾಮರ್ಥ್ಯಾನುಸಾರ ನಿಷ್ಠೆಯಿಂದ ದುಡಿಯುವಾತನ ಮೌನ ಕಾರ್ಯವನ್ನು ಗುರುತಿಸಿ ಹರಸುವ ಔದಾರ್ಯದ ಅಂತರಗಂಗೆ ಇಂದಿಗೂ ನಾಡಿನಲ್ಲಿ ಹರಿಯುತ್ತಿದೆಯೆಂಬ ಸಂದೇಶ.

೩ ತೀರ ಸಾಮಾನ್ಯನೂ ಸಾಮಾಜಿಕ ಪ್ರಜ್ಞೆಯಿಂದ ಬದ್ಧೀಕನಾಗಿ ತನ್ನ ಜೀವನ ಪಥವನ್ನು ರೂಪಿಸಿಕೊಂಡು ಸ್ವತಃ ತಾನೇ ಆ ಪಥವಾಗಿ ಅದರಲ್ಲಿ ಮುನ್ನಡೆದದ್ದಾದರೆ ಅಸಾಮಾನ್ಯನಾಗಲು ವಿಪುಲ ಅವಕಾಶಗಳಿವೆಯೆಂಬ ಭರವಸೆ.

ಇವುಗಳ ಜೊತೆಗೆ ಈ ಪ್ರಶಸ್ತಿ ನನಗೆ ಎಚ್ಚರಿಕೆಯ ಒಂದು ಮಾತನ್ನು ನುಡಿದಿದೆ ಎಂಬುದರ ಅರಿವೂ ನನಗುಂಟು "ನಿನಗೆ ಇನ್ನು ಉಳಿದಿರುವ ಕೆಲವೇ ವರ್ಷಗಳ ಜೀವಿತಾವಧಿಯಲ್ಲಿ ಕನ್ನಡ ವಿಜ್ಞಾನ ವಾಙ್ಮಯ ಕ್ಷೇತ್ರಕ್ಕೆ ನೀನು ಮಾತ್ರ ಸಲ್ಲಿಸಬಹುದಾದ ಕೈಂಕರ್ಯವನ್ನು ಒಡನೆ ಪೂರೈಸತಕ್ಕದ್ದು."

ಆ ಕೈಂಕರ್ಯ ಏನು ಗೊತ್ತೇ?

ಕನ್ನಡದಲ್ಲಿ ವಿಜ್ಞಾನ ಪಾರಿಭಾಷಿಕ ಪದಗಳನ್ನು ವರ್ಣಮಾಲೆಯ ಅನುಕ್ರಮದಲ್ಲಿ ಅಳವಡಿಸಿ ಅವುಗಳಿಗೆ ವಿವರಣೆಯನ್ನು ಅವುಗಳ ಇಂಗ್ಲಿಷ್ ಸಮಾನಾರ್ಥಕಗಳನ್ನು ಒದಗಿಸುವ ಬೃಹತ್ಕೋಶದ ರಚನೆ. ಈ ಉಲ್ಲಾಸದಾಯಕ ಕಾರ್ಯದಲ್ಲಿ ನಾನೀಗಾಗಲೇ ಮಗ್ನನಾಗಿದ್ದು ಕಳೆದ ಒಂದು ವರ್ಷದಲ್ಲಿ ಮೂರನೆಯ ಒಂದು ಭಾಗ ಮುಗಿಸಿದ್ದೇನೆ. ಇನ್ನು ಎರಡು ವರ್ಷಗಳ ಒಳಗೆ ಇದನ್ನು ಪೂರ್ತಿಗೊಳಿಸುವ ಸಂಕಲ್ಪವಿದೆ.

"ನೀನು ಮಾತ್ರ ಸಲ್ಲಿಸಬಹುದಾದ ಕೈಂಕರ್ಯ" ಎನ್ನುವಲ್ಲಿ ನಾನು ವಿನಯದ ಎಲ್ಲೆ ಅತಿಕ್ರಮಿಸಿರುವೆನೇ? ನನ್ನ ವಿವರಣೆ ಇದು:

ಅಂತಿಮವಾಗಿ ಪ್ರತಿ ವ್ಯಕ್ತಿ ಮತ್ತು ಆತನಲ್ಲಿ ನಿಹಿತವಾಗಿರುವ ಶಕ್ತಿ ಸಮಾಜದ ಸೊತ್ತು. ಆದ್ದರಿಂದ ವ್ಯಕ್ತಿ ತನ್ನ ಶಕ್ತಿಯನ್ನು ಸಮಾಜ ಕಲ್ಯಾಣಕ್ಕಾಗಿ ವಿನಿಯೋಗಿಸುವುದೊಂದೇ ಆತ ಋಣಮುಕ್ತನಾಗಲು ಇರುವ ಹಾದಿ. ಹಾಗಾದರೆ ಸಮಾಜ ನನ್ನಲ್ಲಿ ಆವಾಹಿಸಿರುವ ವಿಶೇಷ ಶಕ್ತಿ ಏನು?

ನಾನು ಮಡಿಕೇರಿಯ ಕ್ರಿ.ಶ. ೧೯೨೬ರಲ್ಲಿ ಜನನ. ಮನೆಯಲ್ಲಿಯ ಸಂಗೀತ-ಸಾಹಿತ್ಯ ವಾತಾವರಣ ಮತ್ತು ಜೀವನಶ್ರದ್ಧೆ, ಹಾಗೂ ನನ್ನ ಸುತ್ತಲಿನ ಸಮಾಜದಲ್ಲಿಯ ಸಾಂಸ್ಕೃತಿಕ ಉಲ್ಲಾಸ ಗಾಢವಾಗಿ ನನ್ನನ್ನು ಪ್ರಭಾವಿಸಿದುವು. ಅಲ್ಲಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ, ವಿಶೇಷವಾಗಿ, ಮೂವರು ಗುರುಗಳು ನನ್ನ ವ್ಯಕ್ತಿತ್ವ ವಿಕಾಸಕ್ಕೆ ಭದ್ರ ಬುನಾದಿ ಹಾಕಿದರು: ಎ. ಪಿ. ಶ್ರೀನಿವಾಸರಾಯರು ವಿಜ್ಞಾನವನ್ನು ಜಿ. ಎಸ್. ಕೇಶವಾಚಾರ್ಯರು ಕನ್ನಡವನ್ನು ಆರ್. ಹೆಗ್ಗಡೆಯವರು ಗಣಿತವನ್ನು, ಕೇವಲ ಆಯಾ ವಿಷಯಗಳಾಗಿ ಅಲ್ಲ, ತಮ್ಮ ಜೀವನರೀತಿಗಳೇ ಆಗಿ, ಬೋಧಿಸಿದರು, ಮತ್ತು ಹಾಗೆ ಬಾಳಿ ಹಿರಿ ಆದರ್ಶ ಎದುರಿಟ್ಟರು.

ಮುಂದೆ ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನನ್ನ ವ್ಯಕ್ತಿತ್ವವನ್ನು ಕಡೆದಿರಿಸಿದ ಆಚಾರ್ಯರು ವಿಶೇಷವಾಗಿ ನಾಲ್ವರು: ಗಣಿತಧೀಮಂತ ಕೆ. ಎ. ಕೃಷ್ಣಮೂರ್ತಿಯವರು, ಭೌತವಿಜ್ಞಾನಪುರುಷ ಎಸ್. ನಾರಾಯಣ ಹೊಳ್ಳರು, ಅಭಿನವ ಪಂಪ ಮುಳಿಯ ತಿಮ್ಮಪ್ಪಯ್ಯನವರು ಮತ್ತು, ಮೈವೆತ್ತ ಶೇಕ್ಸ್‌ಪಿಯರ್ ಸಿ. ಆರ್. ಕೇರಳವರ್ಮನವರು.

ತದನಂತರದ ಮದ್ರಾಸು ವಾಸ್ತವ್ಯದಲ್ಲಿ, ೧೯೪೪-೪೯, ನನಗೆ ಒದಗಿದ ಅವಕಾಶಗಳು ಅಸಂಖ್ಯ: ಗಣಿತ, ವಿಜ್ಞಾನ, ಸಂಗೀತ, ಸಾಹಿತ್ಯ, ಚಿತ್ರಸಮೂಹ

ಸಾಮಾಜಿಕ ಪರಿಸರ ಒಂದೊಂದರಲ್ಲಿ. ಕಾಲೇಜಿನಲ್ಲಿ ನನ್ನ ತರಗತಿಯ ವಿದ್ಯಾರ್ಥಿಗಳಾದ ಬಾಗಲೋಡಿ ದೇವರಾಯ, ಕು. ಶಿ. ಹರಿದಾಸ ಭಟ್ಟ, ಶಿವ ನಮಿರಾಜ ಮಲ್ಲ, ಎಂ. ಜನಾರ್ದನ ಮೊದಲಾದ ಪ್ರತಿಭಾನ್ವಿತರ ಜೊತೆಗಿನ ಒಡನಾಟ, ಮಿಂಗಿಂಗ್ ಸುದ್ದಾಟ, ತಮ್ಮ ಛಾಪನ್ನು ನನ್ನ ಮನದ ಮೇಲೆ ಟಂಕಿಸಿದುವು.

ಕಗ್ಗ ಹೊಸೆದೆ. ಕತೆ ಗೀಚಿದೆ. ಪ್ರಬಂಧ ಬರೆದೆ. ಪ್ರಕಟವಾದುವು. ಎರಡು ಕಥಾಸಂಕಲನಗಳು ಮುದ್ರಣವಾಗಿ ಹಲವಾರು ಆವೃತ್ತಿಗಳನ್ನು ಕಂಡುವು. ಆ ವೇಳೆಗೆ ವಯಸ್ಸು ಸುಮಾರು ಇಪ್ಪತ್ತೆರಡು. ಕಾಲೇಜ್ ಅಧ್ಯಾಪಕ ವೃತ್ತಿ. ಒಂದು ಸತ್ಯ ಸಾಕ್ಷಾತ್ಕಾರವಾಯಿತು: ಕತೆ, ಕವಿತೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ವಿಹರಿಸಲು ಬೇಕಾದ ಮನೋಧರ್ಮ ನನಗಿಲ್ಲ. ಒಳಗಿನ ಸಿಡಿಮದ್ದು ಚಡಪಡಿಸುತ್ತಿತ್ತು. ಗ್ಯಾಮೊ, ಜೀನ್ಸ್ ಮೊದಲಾದ ವಿಜ್ಞಾನ-ಸಂಶೋಧಕರು ರಚಿಸಿದ್ದ ಜನಪ್ರಿಯ ಇಂಗ್ಲಿಷ್ ಕೃತಿಗಳು ಮನವೆಲ್ಲ ತುಂಬಿದ್ದುವು. ಕನ್ನಡದಲ್ಲಿ ಆರ್. ಎಲ್. ನರಸಿಂಹಯ್ಯನವರು ಮಾಡುತ್ತಿದ್ದ ನೂತನ ಕೃಷಿ ವಿಶೇಷ ಆಕರ್ಷಣೆಯಾಗಿತ್ತು: ಆಧುನಿಕ ವಿಜ್ಞಾನ ವಿಷಯಗಳನ್ನು ಜೀವಂತ ಕನ್ನಡ ಗದ್ಯದಲ್ಲಿ ಕತೆ ಕಾದಂಬರಿಗಳ ರೀತಿಯಲ್ಲೇ ಉಲ್ಲಾಸದಾಯಕವಾಗಿ ಸಂವಹಿಸುವ ಕಲೆ. ಅಂದ ಹಾಗೆ ನಿಸರ್ಗದ ಕತೆಯೇ ವಿಜ್ಞಾನಸಾಹಿತ್ಯವಲ್ಲವೇ!

ಅಂದಾಜು ೧೯೫೨ರಲ್ಲಿ ಈ ಕ್ಷೇತ್ರಕ್ಕೆ ಕಾಲಿಟ್ಟ ನಾನು ಮತ್ತೆಂದೂ ಹಿಂದೆ ತಿರುಗಿನೋಡಲಿಲ್ಲ, ನಿಲ್ಲಲಿಲ್ಲ, ಕವಲೊಡೆಯಲೂ ಇಲ್ಲ. ಇಲ್ಲಿಯ ಸವಾಲುಗಳು ಅತಿಕಠಿಣ, ಆದರೆ ಅಪರಿಹಾರ್ಯವಲ್ಲ; ಮಿಗಿಲಾಗಿ ಇಲ್ಲಿ ಸ್ಪರ್ಧೆಯೇ ಇರಲಿಲ್ಲ. ಇಂದಿಗೂ ಇಲ್ಲ. ಇದು ಆರೋಗ್ಯದ ಲಕ್ಷಣವಲ್ಲವೆಂಬ ಅರಿವು ನನಗಿದ್ದುದರಿಂದ, ಸಂವಾದೀ ಇಂಗ್ಲಿಷ್ ಸಾಹಿತ್ಯದ ಪಥಕ್ರಮವನ್ನು ಅವಲಂಬಿಸಿ, ನನ್ನ ಹಾದಿಯನ್ನು ನಾನೇ ನಿರ್ಧರಿಸಿದೆ. ಇದನ್ನು ನಿಯಂತ್ರಿಸುವ ಮೂರು ಮುಖ್ಯ ವಿಧಿಗಳಿವು:

೧ ತಾಕತ್ತಿನ ತಾಣದಿಂದ ಮಾತ್ರ ಬರೆಯತಕ್ಕದ್ದು. ಪರಿಣತನ ತಾಂತ್ರಿಕ ಪ್ರಭುತ್ವ ಗಳಿಸಿದ ಹೊರತು ಆ ವಿಷಯದಲ್ಲಿ ಲೇಖನ ಕೃಷಿ ಮಾಡತಕ್ಕದ್ದಲ್ಲ.

೨ ಆಧುನಿಕ ಸೃಜನಶೀಲ ಲೇಖಕನ ಭಾಷಾನಮ್ಯತೆಯಿಂದಲೂ ವ್ಯಾಕರಣಜ್ಞನ ಪದಸಂಪತ್ತಿನಿಂದಲೂ ಸಜ್ಜಾಗಿ ವಿಷಯನಿರೂಪಣೆ ಮಾಡತಕ್ಕದ್ದು. ಪದರಿಕ್ತತೆಯು ಕಾರಣವಾಗಿ ಪರಿಕಲ್ಪನೆಯನ್ನು ಕಿಲುಬುಗೊಳಿಸತಕ್ಕದ್ದಲ್ಲ.

೩ ಧರ್ಮಪ್ರಚಾರಕನ ಉತ್ಸಾಹವನ್ನು ಕರ್ಮಯೋಗಿಯ ನಿರ್ಲಿಪ್ತತೆಯನ್ನು ಈ ಕೃಷಿಗೆ ಆವಾಹಿಸತಕ್ಕದ್ದು. ಕನ್ನಡದ ಸೇವೆ ಗೈಯುವೆನೆಂಬ ಬೂಟಾಟಿಕೆಯ ನಿಲವಿನಿಂದ ಇಲ್ಲವೇ ಇದರಲ್ಲಿ ನನಗೆ ಹಣ ಕೀರ್ತಿ ಸ್ಥಾನ ಮಾನ ದೊರೆಯುವುವೆಂಬ ನಿರೀಕ್ಷೆಯಿಂದ ಈ ರಂಗಕ್ಕೆ ಇಳಿಯತಕ್ಕದ್ದಲ್ಲ.

ನನ್ನ ಪ್ರತಿಯೊಂದು ಬರಹದಲ್ಲಿಯೂ ಈ ವಿಧಿಗಳನ್ನು ಅತ್ಯಂತ ನಿಷ್ಠುರವಾಗಿ ಪಾಲಿಸುತ್ತ ಬಂದಿದ್ದೇನೆ. ಅಧ್ಯಯನ, ಚಿಂತನ, ಬೋಧನ ಹಾಗೂ ಲೇಖನ ವ್ಯವಸಾಯಗಳು ಒದಗಿಸುವ ಆನಂದವೊಂದೇ ನನ್ನ ಶ್ರೀರಕ್ಷಾಬಲ. ಇಂಥ ಒಂದು ನಿಲವಿನ ಫಲವಾಗಿ ನಾನು ಬೆಳೆದಿದ್ದೇನೆ. ಕನ್ನಡ

ಜನತೆಯಿಂದ ಅಯಾಚಿತವಾಗಿ ಪ್ರತಿಪುರಸ್ಕಾರಗಳನ್ನು ಪಡೆದಿದ್ದೇನೆ. ಇಂಥವೂ ಇವುಗಳಿಗೆ ಕಳಶಪ್ರಾಯವಾಗಿ ಲಭಿಸಿದೆ.

ಯಾರ ಜೀವನವೂ ಪೂರ್ವಸಿದ್ಧ ಆಲೇಖ್ಯಾನುಸಾರ ಅರಳುವುದಿಲ್ಲ. ಆಕಸ್ಮಿಕ ತಿರುವುಗಳೇ ಅಧಿಕ. ನನ್ನ ಬದುಕಿನ ನಡೆಯನ್ನು ಬದಲಿಸಿದ ನಾಲ್ಕು ಆಕಸ್ಮಿಕಗಳನ್ನು ಇಲ್ಲಿ ಪ್ರಸ್ತಾವಿಸಬೇಕು:

೧ ಅಂದಾಜು ೧೯೫೫ರಲ್ಲಿ ನಾನು ಬರೆದ ಮೊದಲ ಜನಪ್ರಿಯ ಕನ್ನಡ ವಿಜ್ಞಾನ ಲೇಖನವನ್ನು ಆಗ 'ಕರ್ಮವೀರ'ದ ಸಂಪಾದಕರಾಗಿದ್ದ ಮತ್ತು ಅಂದು ನನಗೆ ಪೂರ್ತಿ ಅಪರಿಚಿತರಾಗಿದ್ದ ಪಾ. ವೆಂ. ಆಚಾರ್ಯರು ಪ್ರಕಟಿಸಿ ಹುರಿದುಂಬಿಸಿದರು.

೨ ಶಿವರಾಮ ಕಾರಂತರು 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳನ್ನು ಬರೆಯುತ್ತಿದ್ದಾಗ, ೧೯೫೯-೬೬, ಮೊದಲ ಮೂರು ವರ್ಷ ಅವರ ಜೊತೆ ಕವಾಯತಿ ಅಭ್ಯಸಿಸುವ ಯೋಗ ನನಗೊದಗಿತು.

೩ ೧೯೬೪ರಲ್ಲಿ ನನ್ನ ಕೋರಿಕೆಗೆ ವಿರುದ್ಧವಾಗಿ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಎಸ್. ಎಸ್. ಧಾವರ್ ನನ್ನನ್ನು ಬೆಂಗಳೂರು ನಗರಕ್ಕೆ ವರ್ಗಮಾಡಿದರು ಮತ್ತು "ಇದರಿಂದ ಖಂಡಿತ ನಿನಗೆ ಒಳ್ಳೆಯದಾಗುತ್ತದೆ" ಎಂದು ಆಶ್ವಾಸಿಸಿದರು. ನಿಜ. ನಾನಲ್ಲಿದ್ದ ನಾಲ್ಕು ವರ್ಷಗಳ ಅವಧಿಯಲ್ಲಿ, ೧೯೬೪-೬೯, ನನಗೆ ದೊರೆತ ಅವಕಾಶಗಳು ಊಹಾತೀತ. ಸಿ. ಎನ್. ಶ್ರೀನಿವಾಸಅಯ್ಯಂಗಾರ್ಯರ ಗರಡಿಯಲ್ಲಿ ಪಳಗಿದೆ, ಅಂದು ಅಪರಿಚಿತರಾಗಿದ್ದ ಜೆ. ಆರ್. ಲಕ್ಷ್ಮಣರಾಯರ ಪ್ರಾದೇಶಾನುಸಾರ ಸಿ. ವಿ. ರಾಮನ್ ಅವರ ಪಾವನ ಏಕಾಂತ ಗುಡಿ ಹೊಕ್ಕು ಅವರಿಂದ ನೇರ ಮಾಹಿತಿ ಪಡೆದು ಪುಸ್ತಕ ಬರೆದೆ ಇತ್ಯಾದಿ.

೪ ೧೯೬೮ರ ಒಂದು ಶುಭ ಪ್ರಾತಃಕಾಲ. ಆಗ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ದೇ. ಜವರೇಗೌಡರು ನನ್ನನ್ನು ಹುಡುಕಿಕೊಂಡು ನಮ್ಮ ಕಾಲೇಜಿಗೆ ಬಂದರು. ಆಗ ತಾನೇ ಮೈಸೂರು ವಿಶ್ವವಿದ್ಯಾನಿಲಯ ವಹಿಸಿಕೊಂಡಿದ್ದ ಕನ್ನಡ ವಿಶ್ವಕೋಶ ಯೋಜನೆಗೆ ನಾನು ವಿಜ್ಞಾನ ಸಂಪಾದಕನಾಗಿ ಬರಬೇಕೆಂದು ಮುಕ್ತ ಮತ್ತು ಆತ್ಮೀಯ ಆಹ್ವಾನ ನೀಡಿ ನನ್ನನ್ನು ದಿಗಿಲುಗೊಳಿಸಿದರು. ನನ್ನ ಸಾಮರ್ಥ್ಯದ ಬಗ್ಗೆ, ಖುದ್ದು ನನಗೇ ಇರದಿದ್ದ, ಭರವಸೆಯನ್ನು ವ್ಯಕ್ತಪಡಿಸಿ ನನ್ನನ್ನು ನಲ್ಮೆಯ ಇರುಕಿಗೆ ಸಿಕ್ಕಿಸಿದರು. ಅರಿಯದ ಕೆಲಸಕ್ಕೆ ನಾನು ಅರ್ಹನಾಗಲಾರೆ, ಅವರ ವಿಶ್ವಾಸಕ್ಕೆ ನಾನು ಎರವಾಗೆ – ಇವೇ ನನ್ನ ಅಳುಕಿನ ಕಾರಣಗಳು. ಹೀಗೂ ಇರಲಿ. ಮರುವರ್ಷ ಈ ಬೃಹತ್ ಕಾರ್ಯಕ್ರಮ ಮುಗಿದಾಗ, ೧೯೬೯, ನಾನು ಮೈಸೂರಿಗೆ ಬಂದೆ, ಹೊಸ ಹುದ್ದೆ ಸೇರಿದೆ, ಸವಾಲು ಎದುರಿಸಿದೆ, ಇಲ್ಲಿಯೂ ಉತ್ತೇಜಕ ಪರಿಸರದಲ್ಲಿ ಆನಂದದಿಂದ ದುಡಿದೆ. ೧೯೮೬ರಲ್ಲಿ ನಿವೃತ್ತನಾದೆ. ವಿಶ್ವಕೋಶ ವಿಭಾಗದಲ್ಲಿ ನನಗಿಂತ ಹಿರಿಯರೂ ಬಹುಶ್ರುತರೂ ಆದ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಎಸ್. ಪ್ರಹ್ಲಾದರಾವ್, ಇವರ ಜೊತೆಯಲ್ಲಿ, ಯುವ ಸಹೋದ್ಯೋಗಿಗಳ ಸಾಹಚರ್ಯದಲ್ಲಿ

ಮತ್ತು ವಿಶ್ವಕೋಶದ ಪ್ರಧಾನ ಸಂಪಾದಕರುಗಳಾಗಿದ್ದ ದೇ. ಜವರೇಗೌಡ, ಹಾ.ಮಾ. ನಾಯಕ ಮತ್ತು ಎಚ್. ತಿಪ್ಪೇರುದ್ರಸ್ವಾಮಿ ಇವರ ಅಂತಿಕದಲ್ಲಿ ನಾನು ಸಹಕಾರ ಮತ್ತು ಪ್ರೋತ್ಸಾಹ ಪಡೆದಿದ್ದೇನೆ.

ಹೀಗೆ, ಮಂಕುತಿಮ್ಮನ ನುಡಿಗಳಲ್ಲಿ "ಜೀವವಿಂತಜ್ಞಾತ ಸೂತ್ರಧಾರನ ಬೊಂಬೆ" ಎಂಬುದು ನನ್ನ ಬದುಕಿನಲ್ಲಿಯೂ ಸಾಬೀತಾಗಿದೆ. "ಹಾಗಾದರೆ ವ್ಯಕ್ತಿಯಾಗಿ ನೀನು ಮಾಡಿದ್ದೇನು?" ಎಂದು ಕೇಳಿದರೆ ಉತ್ತರ ಸರಳ:

ಅವಕಾಶಗಳನ್ನು ಅರಸಿ ನಾನೆಂದೂ ಹೋಗಲಿಲ್ಲ. ಆದರೆ ಒದಗಿ ಬಂದವನ್ನು, ನನ್ನ ಸಾಮರ್ಥ್ಯಕ್ಕಿಂತಲೂ ಮಿಗಿಲಾಗಿ ದೌರ್ಬಲ್ಯದ ಅರಿವಿನಿಂದ, ವಿನಯಪೂರ್ವಕವಾಗಿ ಸ್ವಾಗತಿಸಿದ್ದೇನೆ. ಪ್ರಾಮಾಣಿಕತೆ, ನಿಷ್ಠೆ ಮತ್ತು ಸಾಮಾಜಿಕ ಪ್ರಜ್ಞೆಗಳಿಂದ ಉದ್ದೀಪಕನಾಗಿ ಶ್ರಮಿಸಿದ್ದೇನೆ. ಇದರಿಂದ ಉಲ್ಲಾಸ ಪಡೆದಿದ್ದೇನೆ.

ಕೊನೆಯದಾಗಿ ವೈಯಕ್ತಿಕ ಜೀವನದ ಬಗ್ಗೆ ಒಂದು ಮಾತು. ಅರುವತ್ತಾರರ ಈ ದಾರದಲ್ಲಿ ನಿಂತು ನಡೆದು ಬಂದ ದಾರಿಯನ್ನು ಸಿಂಹಾವಲೋಕಿಸುವಾಗ ಒಂದು ಸಂಗತಿ ಸ್ಪಷ್ಟವಾಗುತ್ತದೆ: ವ್ಯಕ್ತಿತ್ವವನ್ನು ಪೋಷಿಸುವ ಅಥವಾ ಶೋಷಿಸುವ ಆರು ಮುಖ್ಯ ಹಾಗೂ ಪ್ರತ್ಯೇಕ ಪ್ರಭಾವಗಳಿವೆ— ಸ್ವಂತಾರೋಗ್ಯ, ಆರ್ಥಿಕತೆ, ವೃತ್ತಿ, ಹವ್ಯಾಸ, ಬಾಳಸಂಗಾತಿ ಮತ್ತು ಮಕ್ಕಳು. ಈ ಆರು ಪ್ರಭಾವಗಳಲ್ಲಿಯೂ ನಾನು ಪರಮಭಾಗ್ಯಶಾಲಿ. ಅಂದ ಮೇಲೆ ನಾನು ಬೇರೆ ಹೇಗೆ ತಾನೇ ಇರಲು ಸಾಧ್ಯ!

ದೇಜಗೌ ಟ್ರಸ್ಟ್ ಇಂದು ಪ್ರದಾನಿಸಿರುವ ಈ ಪ್ರಶಸ್ತಿ ಮತ್ತು ನೀವೆಲ್ಲರೂ ನನ್ನ ಬಗ್ಗೆ ತೋರಿಸಿರುವ ಈ ಆದರ ನನಗೆ ತುಂಬ ಸಂತೋಷ ಕೊಟ್ಟಿವೆ ಮತ್ತು ಮುಂದಿನ ಸುದೀರ್ಘ ದಾರಿಯ ಮೇಲೆ ನಡೆಯಲು ರಹದಾರಿ ನೀಡಿವೆ. ಹಾರ್ದಿಕ ಕೃತಜ್ಞತೆಗಳು ಮತ್ತು ಅನಂತ ನಮನಗಳು.

ದೂರವಾಣಿ ೨೪೭೪೯ — ೨೬.೦೮.೧೯೯೧

ಜಿ ಟಿ ನಾರಾಯಣ ರಾವ್
೮ ಅತ್ರಿ ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ
ಮೈಸೂರು ೫೭೦೦೨೩

# ವಿಶ್ವಕೋಶದ ರೂಪರೇಖೆ ಮತ್ತು ತಂತ್ರ

ವಿವಿಧ ವಿಷಯಗಳನ್ನು ಅಕ್ಷರಮಾಲಾನುಕ್ರಮದಲ್ಲಿ ಅಳವಡಿಸಿ ಆಯಾ ಶೀರ್ಷಿಕೆಯ ಕೆಳಗೆ ಅದರ ಬಗ್ಗೆ ಖಚಿತ ಮತ್ತು ಸಂಕ್ಷಿಪ್ತ ವಿವರಣೆ ನೀಡುವ ಜ್ಞಾನ ಭಂಡಾರವೇ ವಿಶ್ವಕೋಶ. ಇದು ಹಲವಾರು ಲೇಖಕರ ಸಂಕಲನ: ಜ್ಞಾನಾರ್ಥಿಗಳಿಗೆ ಪರಾಮರ್ಶನ ಗ್ರಂಥ, ಅನ್ವೇಷಕರಿಗೆ ಮಾರ್ಗದರ್ಶಿ, ಆಸಕ್ತರಿಗೆ ಸಹಯಾತ್ರಿ. ವಿಶ್ವಜ್ಞಾನದ ಸಂಗ್ರಹರೂಪವಿದು, ಜ್ಞಾನವಿಕಾಸ ಪಥವನ್ನು ಜ್ಞೇಯನಿಷ್ಠವಾಗಿ (objectively) ಹಂಚಿಸಿರುವ ಆಕರ ಮತ್ತು ನಾಗರಿಕತೆಯ ವರ್ತಮಾನ ಸ್ಥಿತಿಗತಿಗಳನ್ನು ಯಥಾವತ್ತಾಗಿ ಬಿಂಬಿಸುವ 'ಕೈಗನ್ನಡಿ.'

ಉದಾಹರಣೆಗೆ ಮಹಾತ್ಮಗಾಂಧಿ, ಆಕಾಶಯಾನ, ಇರುವೆ, ಇಂಗ್ಲೆಂಡಿನ ಪ್ರಾಣಿವರ್ಗ, ಭಾರತೀಯ ಕಾವ್ಯಮೀಮಾಂಸೆ, ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ, ಕ್ರಿಕೆಟ್ ಅಥವಾ ಪ್ರೋಟೀನ್ ಬಗ್ಗೆ ವಿವರಣೆ ಬೇಕೆಂದಾದಾಗ ವಿಶ್ವಕೋಶದಲ್ಲಿ ಸಂಬಂಧಿತ ಶೀರ್ಷಿಕೆಯ ಪುಟ ತೆರೆದರೆ ಅಲ್ಲಿ ಅದು ದೊರಕುತ್ತದೆ. ಇದು ಸುಲಭವೂ ಕ್ಷಿಪ್ರವೂ ಆದ ಮಾರ್ಗ. ಪರ್ಯಾಯ ಮಾರ್ಗವೆಂದರೆ ಆಯಾ ವಿಷಯ ಕುರಿತ ಆಕರಗ್ರಂಥಗಳಿಗೆ ಶರಣುಹೋಗುವುದು. ಇದು ಸಾಕಷ್ಟು ಕಾಲ ಹಾಗೂ ಶ್ರಮ ಬೇಡುವ ಹಾದಿ. ಎಂದೇ ವಿಶ್ವಕೋಶ ಜ್ಞಾನಯಾನಿಗಳ ನಿರಂತರ ಕೈಪಿಡಿ.

ವಿಶ್ವಕೋಶದಲ್ಲಿ ಸಾಮಾನ್ಯವಾಗಿ ಎರಡು ಬಗೆಗಳನ್ನು ಗುರುತಿಸಬಹುದು:

೧ ಸಾರ್ವತ್ರಿಕ ವಿಶ್ವಕೋಶ. ಇದರಲ್ಲಿ ಜ್ಞಾನದ ಸಮಸ್ತ ಪ್ರಕಾರಗಳೂ ಸ್ಥಾನವಿದೆ. ಸಾಹಿತ್ಯ, ಮನೋವಿಜ್ಞಾನ, ಕ್ರೀಡೆ, ಕಲೆ, ವಿಜ್ಞಾನ, ತಂತ್ರವಿದ್ಯೆ ಮುಂತಾದ ವಿವಿಧ ಶಿಸ್ತುಗಳ ಮಿಶ್ರಪಾಕ ಇದು.

೨ ವಿಷಯ ವಿಶ್ವಕೋಶ. ಇದು ನಿರ್ದಿಷ್ಟ ವಿಷಯವೃಂದಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಉದಾಹರಣೆಗೆ 'ಕ್ರೀಡೆ ವಿಷಯ ವಿಶ್ವಕೋಶ'ದಲ್ಲಿ ಭೌತವಿಜ್ಞಾನ ಕುರಿತ ಲೇಖನ ದೊರೆಯದು, ಮತ್ತು ವಿಲೋಮವಾಗಿ.

ಬಗೆ ಯಾವುದೇ ಇರಲಿ ಅದನ್ನು ರಚಿಸುವ ಬಗೆ (ತಂತ್ರ) ಮೂಲಭೂತವಾಗಿ ಒಂದೇ. ವಿಶ್ವಕೋಶನಿರ್ಮಾಣತಂತ್ರದಲ್ಲಿ ಅಧ್ಯಯನದ ಸೌಕರ್ಯಕ್ಕಾಗಿ ಎರಡು ಭಾಗಗಳನ್ನು ಗುರುತಿಸಬಹುದು:

೧ ಬಹಿರಂಗ. ಇದು ವಿಶ್ವಕೋಶದ ಸಮಗ್ರ ಯೋಜನೆ, ಗಾತ್ರ, ವಿನ್ಯಾಸ ಮುಂತಾದ ಬಾಹ್ಯ ವಿವರಗಳಿಗೆ ಸಂಬಂಧಿಸಿದೆ: ಗಣಕದ ಪರಿಭಾಷೆಯಲ್ಲಿ ವಿಶ್ವಕೋಶದ ಹಾರ್ಡ್‌ವೇರ್ (ಯಂತ್ರವಿನ್ಯಾಸ).

೨ ಅಂತರಂಗ. ಇದು ವಿಶ್ವಕೋಶದ ಮೈತುಂಬುವ ಲೇಖನಗಳ ಹೂರಣಕ್ಕೆ ಸಂಬಂಧಿಸಿದೆ – ಅಂದರೆ ಪ್ರತಿಯೊಂದು ಲೇಖನದ ಮಜಕೂರು. ಗಣಕದ ಪರಿಭಾಷೆಯಲ್ಲಿ ಇದು ವಿಶ್ವಕೋಶದ ಸಾಫ್ಟ್‌ವೇರ್ (ತಂತ್ರವಿನ್ಯಾಸ).

ಇವೆರಡೂ ಅನ್ಯೋನ್ಯಾಶ್ರಯಿಗಳು. ಆದ್ದರಿಂದ ಯಾವುದು ಮುಖ್ಯ ಎನ್ನುವ ಪ್ರಶ್ನೆಗೆ ಅರ್ಥವಿಲ್ಲ. ಯಾವುದು ಮೊದಲು! ಕನ್ನಡದ (ವ್ಯಾಪಕವಾಗಿ ಯಾವುದೇ ಭಾರತೀಯ ಭಾಷೆಯ) ಸಂದರ್ಭದಲ್ಲಿ ಬಹಿರಂಗವನ್ನು ಮೊದಲು ನಿರ್ಧರಿಸಿ ತರುವಾಯ ತದನುಗುಣವಾಗಿ ಅಂತರಂಗವನ್ನು ವಿಸ್ತರಿಸುವುದು ವ್ಯಾವಹಾರಿಕ ಮಾರ್ಗ. ಕಾರಣ?

ನಾಗರಿಕತೆಯ ಸಹಜ ವಿಕಾಸಮಾರ್ಗದಲ್ಲಿ ಮಾನವನ ವಿವಿಧ ಕ್ರಿಯಾಕಲಾಪಗಳು ಅವನ ಮಾತೃಭಾಷೆಯಲ್ಲಿ ನಡೆಯುತ್ತವೆ. ಅಂದರೆ ಕ್ರಿಯೆ ಮತ್ತು ಭಾಷೆ ಪರಸ್ಪರ ಪೂರಕಪ್ರೇರಕವಾಗಿ ಅಭಿವರ್ಧಿಸುತ್ತವೆ. ಕ್ರಿಯೆಯಿಂದ ಭಾಷೆಗೆ ದೃಢತೆ ಮತ್ತು ಬಂಧ ಒದಗುತ್ತವೆ, ಭಾಷೆಯಿಂದ ಕ್ರಿಯೆಗೆ ವ್ಯಾಪ್ತಿ ಮತ್ತು ಅರ್ಥನಿರ್ಧಾರಿತವಾಗುತ್ತವೆ. ಹೀಗೆ ಸಾಗುವಾಗ ಪರಸ್ಪರ ಸಂಬಂಧಿತ ಅನುಭವಗಳು, ಘಟನೆಗಳು, ವಿದ್ಯಮಾನಗಳು ಅಥವಾ ವಿಷಯಗಳು ಸಂಯೋಜಿಸಿ ಜ್ಞಾನದ ಒಂದು ಉಪವಿಭಾಗ ಹದಗಟ್ಟುತ್ತದೆ. ಉದಾಹರಣೆಗೆ ಗಣಿತ, ಭೌತವಿಜ್ಞಾನ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ ಇತ್ಯಾದಿ. ಮುಂದಿನ ಹಂತದಲ್ಲಿ ಇದೇ ರೀತಿ ಉಪವಿಭಾಗಗಳಿಂದ ವಿಭಾಗಗಳು ಮೈದಳೆಯುತ್ತವೆ. ಉದಾಹರಣೆಗೆ ಮಾನವಿಕಗಳು, ವಿಜ್ಞಾನಗಳು, ಸಾಹಿತ್ಯಪ್ರಕಾರಗಳು, ಕಲಾಪ್ರಕಾರಗಳು ಇತ್ಯಾದಿ.

ಈ ವಿಭಾಗಗಳೇ ಜ್ಞಾನವೃಕ್ಷದ ಪ್ರಮುಖ ಶಾಖೆಗಳು. ಮುಂದೆ ಒಂದೊಂದು ವಿಭಾಗವೂ ಹಲವು ಉಪವಿಭಾಗಗಳ ಜತೆಗೂಡಿದ ವಿವಿಧ ಚಿಂತನಪ್ರಕಾರಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ ಕಾವ್ಯ, ನಾಟಕ, ಗದ್ಯ ಮುಂತಾದವು ಸಾಹಿತ್ಯ ಪ್ರಕಾರದಲ್ಲಿಯೂ ವಾಣಿಜ್ಯ, ಮಾರುಕಟ್ಟೆವ್ಯವಹಾರ, ಲೆಕ್ಕಪತ್ರ ಮುಂತಾದವು ಅರ್ಥಶಾಸ್ತ್ರ ಪ್ರಕಾರದಲ್ಲಿಯೂ, ಇತ್ಯಾದಿ, ಸಮಾವೇಶಗೊಂಡಿರುತ್ತವೆ. ಪ್ರತಿಯೊಂದು ಉಪವಿಭಾಗದಲ್ಲಿಯೂ ಅಸಂಖ್ಯ ವಿಷಯಗಳನ್ನು ಗುರುತಿಸುವುದು ಸಾಧ್ಯ. ಇದೊಂದು ನಿರಂತರ ಸಂಯೋಜನ-ವಿಯೋಜನ ಪ್ರಕ್ರಿಯೆ. ಇಲ್ಲಿ ಕೊನೆಯ ಮಾತು ಎಂಬುದೇ ಇಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ಜ್ಞಾನವಿಕಾಸ ಸಹಜಪಥಗಾಮಿಯಾಯಿತು: ಕ್ರಿಯೆಯಿಂದ ಅನುಭವ, ಅನುಭವದಿಂದ ಭಾಷೆ, ಭಾಷೆಯಿಂದ ವಿಷಯ, ಇತ್ಯಾದಿ. ಇದೇ ಪ್ರಯೋಗಾತ್ಮ ಕ್ರಿಯೆಯ ಮುಂದಿನ ಒಂದು ಮಜಲೆಂದರೆ ವಿಶ್ವಕೋಶ ರಚನೆ: ಅಂದರೆ ಚಿಂತನಗಳನ್ನು ಕಲೆಹಾಕಿ ಸಂಪಾದಿಸಿ ವ್ಯವಸ್ಥಿತವಾಗಿ ಅಳವಡಿಸುವುದು — ಅಂತರಂಗ ವಿಸ್ತಾರದಿಂದ ಬಹಿರಂಗ ವಿಸ್ತಾರ ಮೈದಳೆಯುವ ನೈಸರ್ಗಿಕ ಪ್ರಕ್ರಿಯೆ.

ಈ ಐತಿಹಾಸಿಕ ಕಾರಣಗಳು ಭಾರತದಲ್ಲಿ ಕ್ರಿಯಾಶೀಲವಾಗಲಿಲ್ಲ. (ಆಧುನಿಕ ಭಾರತದ ಇತಿಹಾಸ ಪರಿಶೀಲಿಸಿದರೆ ಇದರ ಕಾರಣ ವೇದ್ಯವಾಗುತ್ತದೆ.) ಎಂದೇ ದೇಶೀಯ ಜ್ಞಾನಪ್ರಕಾರಗಳು ಸಹಜಕ್ರಮದಲ್ಲಿ ಅಭಿವರ್ಧಿಸಲಿಲ್ಲ. ಹಾಗಾಗಿ ನಮ್ಮ ನೆಲದಲ್ಲೇ ನಮ್ಮ ತಾಯ್ನುಡಿಗೆ ದ್ವಿತೀಯಕ ಅಂತಸ್ತು: "ನಮ್ಮ ಮನೆಯಲ್ಲಿ ನಾವು ಹೊರಗೆ ದುಡಿವ ಮಕ್ಕಳಾದೆವು, ನಮ್ಮ ಹಿರಿಯರ ಪುಣ್ಯಕೀರ್ತಿಗಳನ್ನುಳಿಸಿಕೊಳ್ಳದೆ ಹೋದೆವು." ಇದು ನಮ್ಮ ಭಾಷೆಗಳ ಯಾವುದೇ ಆಂತರಿಕ ದೌರ್ಬಲ್ಯದ ಫಲವಲ್ಲ — ಇತಿಹಾಸದ 'ಪಿತೂರಿ'ಯ ವಿಷಫಲ. ವಾಸ್ತವವಾಗಿ ಭಾಷೆ ಒಂದು ಮಾನವಕೃತ ಉಪಕರಣ, ಜ್ಞಾನಸಂವಹನ ಹಾಗೂ ಸಂಗ್ರಹಣ ಮಾಧ್ಯಮ. ಆದ್ದರಿಂದ ಅದರ ಸಾಮರ್ಥ್ಯ ದೌರ್ಬಲ್ಯಗಳು ಮನದ ಅದಕ್ಕೆ ಕಾಲದಿಂದ ಕಾಲಕ್ಕೆ ಒದಗುವ ಜೀವನೋತ್ಕರ್ಷ ಧಾತುಗಳನ್ನು ಅವಲಂಬಿಸುತ್ತವೆ: ಚಲಾವಣೆಯಿಂದ ನಾಣ್ಯಕ್ಕೆ, ಬಳಕೆಯಿಂದ ಭಾಷೆಗೂ ಬೆಲೆ.

ಉನ್ನತ ಸ್ತರಗಳಲ್ಲಿ ನಮ್ಮ ಶಿಕ್ಷಣ, ಸಂವಹನ, ಚಿಂತನ ಮುಂತಾದ ಜ್ಞಾನವಿಷಯ ಪ್ರಕ್ರಿಯೆಗಳೆಲ್ಲವೂ ಇಂಗ್ಲಿಷಿನಲ್ಲಿಯೇ ನಡೆಯುತ್ತಾ ಬಂದಿರುವುದರಿಂದ ಇಂದಾದರೂ ಮಾತೃಭಾಷೆಯಲ್ಲಿ ಗ್ರಂಥ ರಚನೆ ಇಲ್ಲವೇ ಬೋಧನೆ ಮಾಡಬೇಕೆಂದಾಗ

ಆಯಾ ವಿಷಯಗಳಲ್ಲಿ ಪ್ರಕಟವಾಗಿರುವ ಇಂಗ್ಲಿಷ್ ಗ್ರಂಥಗಳನ್ನೇ ಅವಲಂಬಿಸಬೇಕಾಗಿರುವುದರಿಂದ ಮತ್ತು ಕನ್ನಡದಲ್ಲಿ ಆಧುನಿಕ ಜ್ಞಾನ ಕುರಿತಂತೆ ಶಿಷ್ಟ ಪಾರಿಭಾಷಿಕ ಪದಗಳು ಒದಗದಿರುವುದರಿಂದ, ಅನಿವಾರ್ಯವಾಗಿ, ವಿಶ್ವಕೋಶದ ಬಹಿರಂಗವನ್ನು ಮೊದಲು ನಿರ್ಧರಿಸಿ ತದನುಸಾರ ಅಂತರಂಗವನ್ನು ರೂಪಿಸಬೇಕಾಗುತ್ತದೆ. ಈಗ ಕನ್ನಡದಲ್ಲಿ ಪ್ರಕಟವಾಗಿರುವ ಕನ್ನಡ ವಿಶ್ವಕೋಶದ ಹನ್ನೆರಡು ಸಂಪುಟಗಳಲ್ಲಿ (೧೯೯೦), ಕನ್ನಡ ವಿಷಯವಿಶ್ವಕೋಶದಲ್ಲಿ ಮತ್ತು ಜ್ಞಾನಗಂಗೋತ್ರಿಯ ಏಳು ಸಂಪುಟಗಳಲ್ಲಿ ಅನುಸರಿಸಿರುವ ವಿಧಾನ ಇದೇ.

ಈಗ ವಿಶ್ವಕೋಶದ ಬಹಿರಂಗವನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ:

೧ ಲಕ್ಷ್ಯವಾಚಕರು. ವಿಶ್ವಕೋಶದ ವಾಚಕರು ಯಾರು — ಅಂದರೆ ಯಾವ ಮಟ್ಟದ ಜ್ಞಾನವಿರುವವರು — ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಿಸಬೇಕು.

೨ ವಿಶ್ವಕೋಶದ ಗಾತ್ರ. ಎಷ್ಟು ಸಂಪುಟಗಳು, ಪ್ರತಿಯೊಂದು ಸಂಪುಟದಲ್ಲಿಯೂ ಎಷ್ಟು ಪುಟಗಳು, ಪುಟದ ವಿಸ್ತಾರ, ಮುದ್ರಣ ವಿನ್ಯಾಸ ಇತ್ಯಾದಿ. ಆರ್ಥಿಕ ಮಿತಿ, ಕಾಲಮಿತಿ, ಸಿಬ್ಬಂದಿಮಿತಿ ಮುಂತಾದ ವಿವರಗಳು ಸೇರುತ್ತವೆ.

೩ ಉಪವಿಭಾಗಗಳಿಗೆ ಪುಟವಿತರಣೆ. ಪೂರ್ವಭಾವಿಯಾಗಿ ಇದನ್ನು ನಿರ್ಧರಿಸಿ ತದನುಗುಣವಾಗಿ ವಿಷಯಗಳಿಗೆ, ಅವುಗಳ ಪ್ರಾಮುಖ್ಯಾನುಸಾರ, ಪುಟಮಿತಿಗಳನ್ನು ನಿಗದಿಮಾಡಬೇಕು. ಇಂಗ್ಲಿಷಿನಲ್ಲಿ ಪ್ರಕಟವಾಗಿರುವ ವಿವಿಧ ವಿಶ್ವಕೋಶಗಳನ್ನು ಅವಲೋಕಿಸಿ ಈ ಕೆಲಸಮಾಡುವುದು ಅಪೇಕ್ಷಣೀಯ. ವಿಷಯ ಪರಿಣತರು ಒಂದೆಡೆ ಹಲವು ಕಾಲ ಕುಳಿತು ಕಲೆತು ಚರ್ಚಿಸಿ ತೀರ್ಮಾನಕ್ಕೆ ಬಂದಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಈಗ ವಿಶ್ವಕೋಶದ ಅಂತರಂಗವನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ. ಈ ಆಕರಗ್ರಂಥದ ಉಪಯುಕ್ತತೆ ಹಾಗೂ ವಿಶ್ವಾಸಾರ್ಹತೆ ಇದರ ಅಂತರಂಗದ ಸತ್ವವನ್ನು ಅವಲಂಬಿಸಿವೆ: ವಿಶ್ವಕೋಶದ ಗುಣವನ್ನು ಅದರ ~~[illegible]~~ ಅಂತರಂಗದಲ್ಲಿ ತಾನೆ! ಅಂತರಂಗವನ್ನು ವ್ಯಾಖ್ಯಿಸುವಾಗ ಅನುಸರಿಸಬೇಕಾದ ಕ್ರಮವಿದು:

೧ ಪ್ರತಿಯೊಂದು ವಿಷಯಶೀರ್ಷಿಕೆಗೂ ಪ್ರತ್ಯೇಕ ಚೀಟಿ ಬರೆಯಬೇಕು. ಇದರಲ್ಲಿ ಶೀರ್ಷಿಕೆಯ ಹೆಸರು, ಇಂಗ್ಲಿಷ್ ಸಂವಾದಿ, ಇದು ಯಾವ ಉಪವಿಭಾಗಕ್ಕೆ ಸೇರಿದೆ ಎಂಬ ಮಾಹಿತಿ ಮತ್ತು ಇದಕ್ಕೆ ಮೀಸಲಾದ ಪುಟಸಂಖ್ಯೆ ಇಷ್ಟು ವಿವರಗಳು ಇರಬೇಕು. ಮೂರು ಯಾದೃಚ್ಛಿಕ ಉದಾಹರಣೆಗಳನ್ನು ಇಲ್ಲಿ ನೀಡಿದೆ:

ಭಾರತದ ಜನಸಂಖ್ಯೆ, India's population, ಅರ್ಥಶಾಸ್ತ್ರ, ೨
ಜಗದೀಶ ಚಂದ್ರಬೋಸ್, Jagadish Chandra Bose, ಸಸ್ಯವಿಜ್ಞಾನ, ೧
ವಿಕಿರಣಪಟುತ್ವ, radioactivity, ಭೌತವಿಜ್ಞಾನ, ೨

ಮುಖ್ಯವಾಗಿ ವಿಜ್ಞಾನ ಪದಗಳಿಗೆ ಇಂಗ್ಲಿಷ್ ಸಂವಾದಿಗಳನ್ನು ಬರೆಯುವುದು ಅತ್ಯಗತ್ಯ.

೨ ಹೀಗೆ ದೊರೆಯುವ ಸಾವಿರಾರು ಚೀಟಿಗಳನ್ನು ಕನ್ನಡ ವರ್ಣಮಾಲೆಯ ಕ್ರಮದಲ್ಲಿ ಅಳವಡಿಸಿ ಸಮಗ್ರ ಯಾದಿ ತಯಾರಿಸಬೇಕು. ಇದರ ಮೊದಲ ಕೆಲವು ನಮೂದುಗಳು ಹೀಗಿರುತ್ತವೆ:

| ಕ್ರಮಸಂಖ್ಯೆ | ವಿಷಯಶೀರ್ಷಿಕೆ | ಇಂಗ್ಲಿಷ್ ಸಂವಾದಿ | ಉಪವಿಭಾಗ | ಪುಟ |
|---|---|---|---|---|
| ೧ | ಅ | — | ವರ್ಣಮಾಲೆ | ೦.೫ |

| | | | | |
|---|---|---|---|---|
| ೨ | ಅಂಕಗಣಿತ | arithmetic | ಗಣಿತ | ೧ |
| ೩ | ಅಂಕನ ಮಾನಗಳು | scales of notation | ಗಣಿತ | ೧ |
| ೪ | ಅಂಕಪಾಶ ಮತ್ತು ವಿಕಲ್ಪ | permutation and combination | ಗಣಿತ | ೧ |
| ೫ | ಅಂಕಾರ | Ankara | ಭೂಗೋಳ | ೦.೫ |

೩ ಇದಾದ ಬಳಿಕ ಚೀಟಿಗಳನ್ನು ಉಪವಿಭಾಗಾನುಸಾರ ಜೋಡಿಸಿ ಅಳವಡಿಸಬೇಕು. ಇದರ ಒಂದು ಮಾದರಿ:

ಉಪವಿಭಾಗ: ಪ್ರಾಣಿವಿಜ್ಞಾನ

| ಕ್ರಮ ಸಂಖ್ಯೆ | ವಿಷಯಶೀರ್ಷಿಕೆ | ಇಂಗ್ಲಿಷ್ ಸಮಾನ | ಸಮಗ್ರಯಾದಿಯಲ್ಲಿ ಕ್ರಮಸಂಖ್ಯೆ | ಪುಟ |
|---|---|---|---|---|
| ೧ | ಅಂಕುಶಶಿರಾಗ | Acanthocephala | ೧೦ | ೦.೫ |
| ೨ | ಅಂಚಿ | deer | ೪೧ | ೦.೧ |
| ೩ | ಅಂಡ | egg | ೪೮ | ೦.೫ |

ಸಮಗ್ರವಾದ ಇತಿವೃತ್ತಾಂಶದ ವಿಹಂಗಮ ದೃಶ್ಯ ಕಾಣುತ್ತದೆ. ಉಪವಿಭಾಗವಾರಿ ಗಳಿಕೆಗಳು ವ್ಯತ್ಯಾಸದಲ್ಲಿ ವಿವಿಧ ಘಟಕಗಳ ಸ್ಥಾನ ಹಾಗೂ ಮುಂತಾದ ವಿವರಗಳನ್ನು ಸೂಚಿಸುತ್ತವೆ.

ಬಹಿರಂಗ-ಅಂತರಂಗ ವಿಧಾನಗಳು ಇತರನಾಗ ಸಿದ್ಧವಾದ ಬಳಿಕ ವಿಶ್ವಕೋಶದ ಮಾಹಿತಿ ಸಿದ್ಧಪಡಿಸುವ ಸಂಪಾದಕರ ನಿಜ ಕಾರ್ಯ ಆರಂಭವಾಗುತ್ತದೆ (ಮೇಲಿನ ವಿಧಾನಗಳ ತಯಾರಿಕೆಯ ಅವಧಿ ನಾಲ್ಕು ವರ್ಷ ಇರುತ್ತದೆ). ಮೇಲಿನ ಸಂಪಾದನೆಗೆ ಪ್ರಮುಖವಾಗಿ ನಡೆಯಬೇಕಾದ ಕೆಲಸಗಳು:

೧ ಉಪವಿಭಾಗಗಳ ಯಾದಿಗಳನ್ನು ಆಧರಿಸಿ ವಿಷಯ ಪರಿಣತರಿಗೆ ಲೇಖನ ಬರೆಯಲು ಕೋರಿಕೆ ಕಾಗದ ಕಳಿಸಬೇಕು. ಆಯಾ ಉಪವಿಭಾಗದ ಸಂಪಾದಕರು ಈ ಪರಿಣತರ ಆಯ್ಕೆ ಮಾಡುತ್ತಾರೆ.

೨ ಪರಿಣತರಿಂದ ಬಂದ ಲೇಖನಗಳು ಆಯಾ ಸಂಪಾದಕರನ್ನು ಸೇರುತ್ತವೆ. ಉತ್ತಮವಿದ್ದರೂ ಗಣಿಯಿಂದ ಎತ್ತಿದ ಅದಿರು ರಾಶಿಯಂತೆ ಕಚ್ಚಾ ವಸ್ತು. ಇದರಿಂದ ಲೋಹವನ್ನು ಬೇರ್ಪಡಿಸಿ ತೆಗೆಯುವುದು ಸಂಪಾದಕನ ಕೆಲಸ. ಅವನಲ್ಲಿ ನಾಲ್ಕು ಮುಖ್ಯ ಗುಣಗಳು ಮೈಗೂಡಿರಬೇಕು: ವಿಷಯಜ್ಞಾನ, ಸಾಹಿತ್ಯ ಪ್ರೌಢಿಮೆ, ವ್ಯಾಪಕ ವೈಜ್ಞಾನಿಕ ದೃಷ್ಟಿ, ಸತ್ಯಶೋಧನ ಶ್ರದ್ಧೆ. ಈತನು ನಿಷ್ಪಕ್ಷಪಾತಿಯಾಗಿರಬೇಕು, ತಜ್ಞ ವಿಷಯಗಳನ್ನು ಅರಿತಿರಬೇಕು. ಅಂತೆಯೇ ಅಂತರಂಗದ ~~ಪ್ರಾಮಾಣಿಕತೆ~~ ವಿಶ್ವಾಸಾರ್ಹತೆ ಮತ್ತು ಆಧುನಿಕತೆ ನಿಂತಿರುವುದು ಸಂಪಾದಕನ ಜಾಗೃತಿಯ ಮೇಲೆಯೇ.

೩ ಸಂಪಾದಿತ ಲೇಖನಗಳನ್ನು ಸಮಗ್ರ ಯಾದಿಯ ಅನುಸಾರ ಮುದ್ರಣಾಲಯಕ್ಕೆ ರವಾನಿಸಬೇಕು. ಅಂತಿಮ ಮುದ್ರಣದವರೆಗೆ ನಿಲುವು ತನಕವೂ ಸಂಪಾದನ ಕ್ರಿಯೆ ನಡೆಯುತ್ತಲೇ ಇರುತ್ತದೆ.

೪ ಚಿತ್ರಗಳು, ಆಕೃತಿಗಳು ನಾನಾ ಛಾಯಾಚಿತ್ರಗಳು ನಕಾಶೆ, ಕರಡು ತಿದ್ದುವುದು ಮುಂತಾದ ಉಪಸಂಪಾದನ ಕ್ರಿಯೆಗಳು ಸಂಪಾದನಕ್ರಿಯೆಗೆ

ಪೂರಕವಾಗಿ ಜೊತೆಯಲ್ಲೇ ನಡೆಯುತ್ತಾ ಬಂದವು.

ಇದಿಷ್ಟು ವಿಶ್ವಕೋಶದ ಸ್ಥೂಲ ರೂಪರೇಖೆ ಮತ್ತು ತಂತ್ರ. ಹಲವಾರು ಶಕ್ತಿ ಸಾಮರ್ಥ್ಯಗಳು ಹಾಗೂ ಉತ್ಸಾಹ ಪ್ರೇರಣೆಗಳ ಸಂಯುಕ್ತ ಫಲ ವಿಶ್ವಕೋಶ. ಇದನ್ನು ರೂಪಿಸುವ ವಿವಿಧ ಕ್ರಿಯೆಗಳ ಪೈಕಿ ಸಂಪಾದನ ಕ್ರಿಯೆ ಅತ್ಯಂತ ಗುರುತರವಾದದ್ದು ಮತ್ತು ನಿರ್ಣಾಯಕವಾದದ್ದು. ಎಂದೇ ಈ ಮುಂದಿನ ಅಭಿವ್ಯಕ್ತಿ "ವಿಶ್ವಕೋಶದ ಸಂಪಾದಕ ಯಾರೆಂದು ಹೇಳು, ಅದರ ಯೋಗ್ಯತೆ ಏನೆಂದು ನಾನು ಹೇಳುತ್ತೇನೆ." ಸಂಪಾದಕರ ಪ್ರತಿಭೆಗಳ ಬಿಂಬ ರೂಪವೇ ವಿಶ್ವಕೋಶ.

"ತಜ್ಞ ಲೇಖಕರು ಲೇಖನ ಬರೆಯುತ್ತಾರೆ, ಮುದ್ರಣಾಲಯ ಅದನ್ನು ಮುದ್ರಿಸುತ್ತದೆ. ಸಂಪಾದಕರಿಲ್ಲದಿದ್ದರೂ ಕರಡು ತಿದ್ದುವವರು, ವಿನ್ಯಾಸ ಗಮನಿಸುವವರು ಮುಂತಾದ ಯಾಂತ್ರಿಕ ಕ್ರಿಯೆಗಳನ್ನು ನಡೆಸಿದರಾಯಿತು. ಅಹೋ! ವಿಶ್ವಕೋಶದ ಸಂಪುಟಗಳು ಪ್ರಕಟವಾಗುತ್ತವೆ!" ಎಂದು ಅನೇಕ ಮಂದಿ ಸುಶಿಕ್ಷಿತರು ತಿಳಿದಿರುವಂತಿದೆ. ಇದು ಸಂಪೂರ್ಣ ತಪ್ಪು.

ಕನ್ನಡದಲ್ಲಿ ಮೊದಲ ಸಾಮಾನ್ಯಕ ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿ ಹದಿನೈದು ವರ್ಷಕಾಲ ಮೊದಲನೆಯ ಸಂಪುಟದಿಂದ ೧೩ನೆಯ ಸಂಪುಟದ ವರೆಗೆ ಕೆಲಸಮಾಡಿರುವ ನಾನು ಕಂಡುಕೊಂಡಿರುವ ಸತ್ಯವಿದು: ಆಧುನಿಕ ವಿಜ್ಞಾನ ಪರಿಕಲ್ಪನೆಗಳನ್ನು ಕನ್ನಡ ತಿಳಿ ಸಹಜವಾಗಿ ಸಂವಹಿಸುವಂತೆ ಭಾಷೆಯನ್ನು ಸಜ್ಜುಗೊಳಿಸಬೇಕಾಗುತ್ತದೆ; ಹೊಸ ಪಠ್ಯಗದ್ಯವನ್ನು ಸೃಷ್ಟಿಸಬೇಕಾಗುತ್ತದೆ; ಪಾರಿಭಾಷಿಕ ಪದಗಳನ್ನು ಭಾಷಾಮರ್ಯಾದೆಗೂ ಅರ್ಥವ್ಯಾಪ್ತಿಗೂ ಭಂಗಬರದಂತೆ ಟಂಕಿಸಿ ಬಳಸಬೇಕಾಗುತ್ತದೆ; ಅಂತರಶಿಸ್ತು (ಉದಾ: ಭೌತ ವಿಜ್ಞಾನ-ಮನೋವಿಜ್ಞಾನ, ವೈದ್ಯವಿಜ್ಞಾನ-ಪ್ರಾಣಿವಿಜ್ಞಾನ ಇತ್ಯಾದಿ) ವ್ಯವಹಾರಗಳಲ್ಲಿ ಔಚಿತ್ಯ ಕಾಪಾಡುವಂತೆ ಎಚ್ಚರವಹಿಸಬೇಕಾಗುತ್ತದೆ; ವಿಜ್ಞಾನ ತಂತ್ರವಿದ್ಯಾ ಕ್ಷೇತ್ರಗಳಲ್ಲಿ ಸಂಭವಿಸುತ್ತಿರುವ ಅತ್ಯಾಧುನಿಕ ಶೋಧಗಳ ಬಗ್ಗೆ ಸದಾ ಎಚ್ಚರವಾಗಿದ್ದು ಸಾಧ್ಯವಾದ ಮಟ್ಟಿಗೂ ಅವನ್ನು ವಿಶ್ವಕೋಶದಲ್ಲಿ ಬಿಂಬಿಸಬೇಕಾಗುತ್ತದೆ. ಇದೊಂದು ಸೃಜನ ಸೃಷ್ಟಿ, ಸಂಶೋಧನ ಕ್ರಿಯೆ ಮತ್ತು ಅನುಪಮ ಉಲ್ಲಾಸದಾಯಕ ವೃತ್ತಿ. ಭಾವನೆಗಳ ಜೊತೆ ವಿಹರಿಸುವ ಆನಂದ ಇಲ್ಲಿ ದೊರೆಯುವ ಪ್ರತಿಫಲ.

ವೃತ್ತಿಗಂಡಾಂತರಗಳಿವೆಯೇ? ನನ್ನ ಅನುಭವದ ಉಗ್ರಾಣದಿಂದ ಕೆಲವು ನಾಲ್ಕು ನಿದರ್ಶನಗಳನ್ನು ಉಲ್ಲೇಖಿಸಿ ಇವನ್ನು ವಿವರಿಸುತ್ತೇನೆ.

೧ ಭೌತವಿಜ್ಞಾನದಲ್ಲಿ ಒಂದು ದೊಡ್ಡ ಹೆಸರು. ಹಿರಿಯರು ಅನುಭವಿ ಸಂಶೋಧಕ ಪ್ರಾಧ್ಯಾಪಕರು, ವಿಶ್ವಕೋಶದ ಭೌತವಿಜ್ಞಾನ ಉಪಸಮಿತಿಯ ಗೌರವ ಅಧ್ಯಕ್ಷರು. ವಯಸ್ಸು, ಜ್ಞಾನ, ಅನುಭವಗಳಲ್ಲಿ ನನಗೆ ಗುರುವಾಗಿದ್ದವರು:

ಲೇಖನ ಮತ್ತು ಕೆಲವು ಪುಟಗಳು, ಟಿಪ್ಪಣಿಯನ್ನ ತಂದ ಸಲಹೆಯನ್ನು, ವಿಶ್ವಕೋಶಕ್ಕೆ ಸಂದಾಯ ಸಲ್ಲದ ಎರಡನೆ. ಪ್ರಧಾನ ಸಂಪಾದಕರಿಗೆ ಈ ಸಂಗತಿ ತಿಳಿಸಿ ಅವರ ಸಲಹೆ ಮೇರೆಗೆ ಮನಸ್ಸಿಗಂಟಿದ್ದ ಭೌತವಿಜ್ಞಾನ ಪ್ರಾಧ್ಯಾಪಕರ ನೆರವು ಪಡೆದು ಆ ಲೇಖನವನ್ನು ಪುನಾರಚಿಸಿ ಅದಕ್ಕೆ ಸುಸಂಗತ ಸ್ಥಾನ ಪ್ರಕಟಿಸಿದ್ದಾಯಿತು.

ಆ ಸಂಪುಟದ ಪ್ರಕಟಣೆಯ ದಿನ. ಪೂರ್ವಭಾವಿಯಾಗಿ ನಡೆದ ಸಂಪಾದಕ ಮಂಡಳಿಯ ಸಭೆಗೆ ಅವರು ಬಂದಿದ್ದರು. ಸಂಪುಟದ ಪ್ರತಿಗಳನ್ನು ಸದಸ್ಯರಿಗೆ ಕೊಡಲಾಯಿತು. ನಾನು ಹಿಂದೆ ಮೂಲೆಯಲ್ಲಿ ಕುಳಿತು ಎಲ್ಲವನ್ನು ನೋಡುತ್ತಿದ್ದೆ. ನಿರೀಕ್ಷೆಯಂತೆ ಅವರು ನನ್ನ 'ವಿರೂಪಿತ' ಲೇಖನ ಓದಿದರು, ಕಿರಿಕಿರಿಯಾದರು, ಸಭೆಯಲ್ಲಿ ಅದರ ಬಗ್ಗೆ ಪ್ರಶ್ನೆ ಎತ್ತಿಯೇ ಎತ್ತಿದರು.

ಪ್ರಧಾನ ಸಂಪಾದಕರು ಬಹಳ ಜಾಣ್ಮೆಯಿಂದ, ಅವರ ನನ್ನ ಆಕ್ಷೇಪದ ನಿಲುವನ್ನು ಬಿಂಬಿಸ್ತು ಬಗ್ಗುರಿದರೆ, ಈ ಸನ್ನಿವೇಶವನ್ನು ನಿಭಾಯಿಸಿದರು. ಆ ಪ್ರಾಧ್ಯಾಪಕರಿಗೆ ವೈಯಕ್ತಿಕವಾಗಿ ನನ್ನ ಪರಿಚಯವಿದ್ದುದರಿಂದ ಕಷ್ಟವನ್ನು ಅವರಿಗೆ ನೇರವಾಗಿ ಹೇಳುವ ದುರ್ಭರ ಪ್ರಸಂಗ ಎದುರಾಗಲಿಲ್ಲ.

ಎರಡನೆಯದು ಅನುವಾದಕ್ಕೆ ಸಂಬಂಧಿಸಿದೆ. 'ಕಂಪ್ಯೂಟರ್' ಕುರಿತ ಇಂಗ್ಲಿಷ್ ಲೇಖನ ಸ್ವಲ್ಪ ತಡವಾಗಿ ಕೈಸೇರಿತು. ಅದನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಣಾಲಯಕ್ಕೆ ರವಾನಿಸಲು ನನಗೆ ಸಾಕಷ್ಟು ಕಾಲಾವಕಾಶವಿರಲಿಲ್ಲ. ಆ ವಿಷಯ ಚೆನ್ನಾಗಿ ತಿಳಿದ, ಹಿರಿಯ ನಿವೃತ್ತ ಪ್ರಾಧ್ಯಾಪಕರೊಬ್ಬರಿಗೆ ಈ ಕೆಲಸ ವಹಿಸಿದೆ. ಮೂರು ನಾಲ್ಕು ಪುಟಗಳ ಹಸ್ತಪ್ರತಿಯನ್ನು ಅವರು ಕೇವಲ ಎರಡು ವಾರಗಳ ಅವಧಿಯಲ್ಲಿ ನನಗೆ ಹಿಂತಿರುಗಿಸಿದರು.

"ಪ್ರಸಕ್ತ ಸಂಪುಟದ ಕೊನೆಯ ಲೇಖನವಾಗಿ ಇದು ಬರಬೇಕಾಗಿದೆ. ಈಗಲೇ ಸಾಕಷ್ಟು ವಿಳಂಬವಾಗಿದೆ. ಆದ್ದರಿಂದ ಇದನ್ನು ನೇರವಾಗಿ ಮುದ್ರಣಾಲಯಕ್ಕೆ ಕಳಿಸಿಬಿಡಿ. ಕರಡು ಪ್ರತಿ ಬಂದಾಗ ನೀವು ಪರಿಶೀಲಿಸಿದರೆ ಸಾಕಲ್ಲ. ಆ ಹಿರಿಯರು ಚೆನ್ನಾಗಿಯೇ ಅನುವಾದಿಸಿರುತ್ತಾರೆ" ಪ್ರಧಾನ ಸಂಪಾದಕರ ಸಲಹೆ.

ನನ್ನ ತಿಳುವಳಿಕೆಯನ್ನು ನಾನೇ ಹೊರತಕ್ಕದ್ದು ಎಂಬ ಕಾರಣದಿಂದ ಕಂತಿದ್ದ ನಾನು ಆ ಅನುವಾದಿತ ಲೇಖನದ ಮೇಲೆ ಒಮ್ಮೆ ಕಣ್ಣು ಹಾಯಿಸಿಯೇ ಹಾಯಿಸಿದೆ. ಆಗ ಎದುರಾದ ನುಡಿಮುತ್ತುಗಳಿಂದ ಚಕಿತನಾದೆ; ಇಂಗ್ಲಿಷ್ ಲೇಖನ ಸುಲಭವಾಗಿ ಅರ್ಥವಾಗುತ್ತಿದ್ದರೂ ಕನ್ನಡಾನುವಾದ ಅರ್ಥಾತೀತವಾಗಿದ್ದುದರಿಂದ ಗಾಬರಿಗೊಂಡೆ; ಇದನ್ನು ಹಾಗೆಯೇ ಮುದ್ರಣಾಲಯಕ್ಕೆ ರವಾನಿಸತಕ್ಕದ್ದಲ್ಲ ಎಂಬ ಖಚಿತ ತೀರ್ಮಾನ ಕೈಗೊಂಡೆ. ಅವು ಕೆಲವು ನುಡಿಮುತ್ತುಗಳು:

ಗಣಕಕ್ಕೆ ಉಪದೇಶ (instruction to computer)

ರಾಜ್ಯಪಾಲರು ಈ ಯಂತ್ರದಲ್ಲಿ ವಹಿಸುವ ಪಾತ್ರ (role played by the governor in this machine)

ಗಣಕದ ಗಡಸುಪಾತ್ರ, ಮತ್ತು ಮೃದು ಪಾತ್ರ (hardware and software of the computer)

ಮೂರನೆಯದು ನನ್ನ ಸಹೋದ್ಯೋಗಿಯೊಬ್ಬರಿಂದ ಸಂಪಾದಿತವಾಗಿ ಅಂತಿಮ ಪರಿಶೀಲನೆಗಾಗಿ ನನ್ನ ಕೈಸೇರಿದ ಲೇಖನ. ಶೀರ್ಷಿಕೆ 'ಗೆಲಿಲಿಯೋ ಗೆಲಿಲಿ.' ಇದರಲ್ಲಿದ್ದ ಒಂದು ವಾಕ್ಯ "ಈತ ಚರ್ಚ್ ಎಂಬಾತನೊಡನೆ ವಾದಿಸಿ...."

ಈ 'ಚರ್ಚ್' ಎಂಬ ವ್ಯಕ್ತಿ ಯಾರು ಎಂದು ನಾನವರನ್ನು ಪ್ರಶ್ನಿಸಿದೆ. ಸಮರ್ಪಕ ಉತ್ತರ ದೊರೆಯದ್ದರಿಂದ ಆಕರಗ್ರಂಥವನ್ನೇ ತರಿಸಿ ಪರಿಶೀಲಿಸಿದೆ. ಅಲ್ಲಿದ್ದ ವಾಕ್ಯ "He opposed Church's

intervention in ~~religious~~ scientific issues..."

ಇಲ್ಲಿ Church ಎಂದರೆ ಮತ, ಧರ್ಮ. ಇದೊಂದು ಪ್ರತೀಕ, ವ್ಯಕ್ತಿ ಅಲ್ಲ ಎಂದು ವಿವರಿಸಿದೆ. ಒಪ್ಪಿಗೆಯಾದಂತೆ ತೋರಲಿಲ್ಲ.

"ಹಾಗಾದರೆ Church ಪದದಲ್ಲಿ C ಕ್ಯಾಪಿಟಲ್ ಏಕೆ! Church's ಎನ್ನುವಲ್ಲಿ apostrophe s ಬಂದಿರುವುದು ವ್ಯಕ್ತಿವಾಚಕವಲ್ಲವೇ ?"

ಇಂಥ ಒಂದು ಸನ್ನಿವೇಶದಲ್ಲಿ ಸ್ಯಾಮ್ಯುಯಲ್ ಜಾನ್ಸನ್ ಹೇಳಿರುವಂತೆ "ವಾದವನ್ನೇನೋ ಜಯಿಸಬಲ್ಲೆ ಆದರೆ ಅವನನ್ನ ಸೋಲಿಸಲಾರೆ!"

ನಾವು ನೋಡುವುದು ಕೇವಲ ದೃಷ್ಟಿಗಾಗಿ ಮತ್ತು/ಅಥವಾ ಕೇಳಿಕೆಗಾಗಿ ವಿಜ್ಞಾನಕ್ಕೆ ಹೊಸಬ ಬರೆಯುವ ವಿದ್ಯಾರ್ಥಿ ಅಥವಾ ಹುಸಿ ಸಹ್ಯ ಹೊಸಕಂದ(?) ಒದಗುವ ಪ್ರಶ್ನೆಗಳಿವು(?). ಇವರು ಬಗೆಬಗೆಯ ಸಂದೇಹಗಳನ್ನು ವ್ಯಕ್ತಪಡಿಸಿ ಉತ್ತರಗಳನ್ನು ಬಯಸುತ್ತಾರೆ. ಇಲ್ಲೊಬ್ಬ ಸಂಪಾದಕನೊಬ್ಬನ ನಿಲುವು ಹೀಗೆ "ನಿಮ್ಮ ಹೊಸದ(?) ಹಾದಿಯಲ್ಲಿ ಈ ಎಲ್ಲ ಪ್ರಶ್ನೆಗಳನ್ನು ನೀವು ಕೇಳುತ್ತಿದ್ದರೆ ನಾನು ನಿಮ್ಮ ಬಳಿಗೆ ಬಂದು ನಿಮ್ಮಿಂದ ಬೆಕ್ಕಿನ(?) ತಿಳಿದುಕೊಂಡು ಹೊಸ ಪ್ರಶ್ನೆಗಳನ್ನು ನಿಮ್ಮ ಹೆಸರಲ್ಲಿ ಪ್ರಕಟಿಸಿ ನಿಮಗೆ ಸಂಭಾವನೆ ಕೊಡುತ್ತೇನೆ." ಇಲ್ಲವಾದರೆ ಆ ಸಂಪಾದಕ ಬರೆಯುವ ಉತ್ತರಗಳನ್ನು ಕೈಗೊಂಡಿಯಾಗಿ ತಾನು ಆಗುವುದರ ಜೊತೆಗೆ ವಿಜ್ಞಾನಿಯನ್ನು ಕೆಡಿಸಿಬಿಡುವುದು ಖರೆ. ಅಂತಿಮವಾಗಿ, ಸಂಪಾದಕನ ಎಚ್ಚರಿಕೆಯು ಬಲಕ(?) ಮಾನಕ ವಿಜ್ಞಾನಿ.

ಸಮಗ್ರವಾಗಿ ಕೆಲವು ಅನುಭವೋಕ್ತಿಗಳು.

೧ ವಿಜ್ಞಾನಿಯನ್ನು 'ನಾವು' ಕಲಿಯುತ್ತಿರುವುದಲ್ಲ, ಅದು ನಮ್ಮನ್ನು ಮಾಧ್ಯಮವಾಗಿ ಬಳಸಿಕೊಂಡು ಆ ಕೆಲಸವನ್ನು ನಮ್ಮಿಂದ ಮಾಡಿಸುತ್ತದೆ.

೨ ಬಡಿತ(?) ಬೇರೆ ಹೊಸಕರ್ತೃಗಳು ಮಾತ್ರ ವಿಜ್ಞಾನಿ ಅಲ್ಲ. ಆದರೆ ಇವರಲ್ಲಿ ಪ್ರಕಟವಾಗುವುದು ಅವರ ವೈಯಕ್ತಿಕ ಶೈಲಿಗಳು — ವಿಜ್ಞಾನಿಯ ಶೈಲಿ ಮಾತ್ರ.

೩ ವಿಜ್ಞಾನಿಯೊಡನೆ ಸಂಪ್ರದಾಯಸ್ಥಿಕೆ(?) ನಿರಂತರ ಮಾತ್ರ. ಇದರಲ್ಲಿ ಎಲ್ಲರೂ ಭಾಗಿಗಳು. ಮೇಲುಕೀಳು ಇಲ್ಲ, ಹಿಂಬಾಲಕರೂ ಇಲ್ಲ.

೪ ಈ ಜ್ಞಾನಕ್ಷೇತ್ರದಲ್ಲಿ ಯಾವ ಅಂತವನ್ನೂ — ಅದು ಎಷ್ಟೇ ಸ್ಪಷ್ಟವೆಂದೆನ್ನಿಸಿದರೂ — ಕಡೆಯದೆಂದು ಕೊಳ್ಳುವುದು: ಸತ್ಯವನ್ನು ಯಾವ ಪ್ರಾಮಾಣಿಕರು ಅವರ ಸ್ವರೂಪ ಕೊಂಡಿಲ್ಲ!

೫ ಸಮಾಜದಲ್ಲಿಯೂ ಪ್ರಕಟ ಜ್ಞಾನ, ಭಾಷೆಯ ಪರಿಮಾಣ ಮತ್ತು ವಿಜ್ಞಾನಿಯ ಸುಗಮ ಹೊಂದಾಣಿಕೆ ಮತ್ತು ಪರಸ್ಪರ ನಿಕಟಸಂಬಂಧಗಳು: ಒಂದರಿಂದ ಇನ್ನೊಂದು. ಅಲ್ಲಿಂದ ಜನ ದೊಡ್ಡವಾಗಿ ಬಾಳ್ವೆ ಭಾಷೆಯನ್ನ ಸಮೃದ್ಧವಾಗಿ ಬೆಳೆಸಿದಾಗ ಮಾತ್ರ

ವಿಜ್ಞಾನಿಗಳ ಸಮಾಲೋಚನಾರಂಗವಾಗಿ ನೆಲೆನಿಂತಿದೆ, ಅನ್ಯತ್ರ ಅಲ್ಲ.

೬ ಜ್ಞಾನಮೀಮಾಂಸೆ. ಸಮ್ಯಗ್ದರ್ಶನ ಸಾಧನೆ ವಿಧಾನ ಸಂಸ್ಕಾರ ಭಯ ವಿಸ್ಮಯ ವಿನಯ ಪೂರ್ವಕವಾಗಿ ನಡೆಯುತ್ತಿರುವ ಸಾಗರದಲ್ಲಿ ಇದು ಮನನ್ನು ನಾಡಿನವರು.

೭ ವಿಜ್ಞಾನಿಗಳ ಮಾಧ್ಯಮ ಇಂಗ್ಲಿಷ್ ಭಾಷೆ. ಯಾವ ಭಾಷೆ ವಿಜ್ಞಾನವನ್ನು ರೂಪಿಸುತ್ತದೆ, ಮುಂದೆ ವಿಜ್ಞಾನವೇ ಭಾಷೆಯನ್ನು ಪುನಾರೂಪಿಸುತ್ತದೆ.

ಜಿ. ಟಿ. ನಾರಾಯಣರಾವ್

೧೧. ೧೦. ೧೯೯೦

ದೂರವಾಣಿ ೨೫೭೭೫೯
ಜಿ. ಟಿ. ನಾರಾಯಣರಾವ್
೮ ಅಡ್ಡ,
ಶಾಮಣ್ಣ ಆಸ್ಪತ್ರೆ ರಸ್ತೆ,
ಕುವೆಂಪುನಗರ
ಮೈಸೂರು ೫೭೦೦೨೩

# ಎತ್ತಣ ಪೂಜಾರಿ ಎತ್ತಣ ಮಿಲಿಟರಿ!

ಮಡಿಕೇರಿಯ ಅಗ್ರಹಾರದ ಪಾವನ ಪ್ರಶಾಂತತೆಯಲ್ಲಿ ಓದಿ ಬೆಳೆದ ಹಾರುವ ಹೈದ ನಾನು (ಜನನ ೧೯೨೬, ಎಸ್‌ಎಸ್‌ಎಲ್‌ಸಿ ೧೯೪೩). ಹದಿನಲ್ಲ ದಡ್ಡನಲ್ಲ, ಆಟದಿಂದ ಬಲು ದೂರ, ಊಟ ಓದಲ್ಲಾದರೋ ಸದಾ ಮುಂದೆ. ಅಳುಕು, ಅಂಜಿಕೆಗಳೇ ಪ್ರಧಾನ ಸ್ವರಗಳು. ಸಹಪಾಠಿಗಳೊಡನೆ ಅಥವಾ ಬಂಧು ಬಾಂಧವರ ಜೊತೆ ಬೆರೆತದ್ದು ತೀರ ವಿರಳ. ೧೯೪೭ರಲ್ಲಿ ಗಣಿತ ಎಂಎ ಪದವೀಧರನಾಗಿ ಕಾಲೇಜ್ ಉಪನ್ಯಾಸಕ ವೃತ್ತಿ ಹಿಡಿದೆ.

ವಿದ್ಯಾರ್ಥಿ ಸೇನಾ ಶಿಕ್ಷಣ ವ್ಯವಸ್ಥೆಯಾದ ಎನ್‌ಸಿಸಿಯನ್ನು (ನ್ಯಾಶನಲ್ ಕ್ಯಾಡೆಟ್ ಕೋರ್) ಭಾರತ ಸರ್ಕಾರ ೧೯೪೮ರಲ್ಲಿ ಜಾರಿಗೆ ತಂದಿತು. ೧೯೫೦ರ ವೇಳೆಗೆ, ನಾನಿದ್ದ ಮಂಗಳೂರು ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿಯೂ, ಅದರ ಒಂದು ಘಟಕ ಸ್ಥಾಪಿಸಲು ಪೂರ್ವ ಸಿದ್ಧತೆಗಳು ನಡೆದಿದ್ದುವು. ಇದರಲ್ಲಿ ಅಧಿಕಾರಿಯಾಗಿ ವಿದ್ಯಾರ್ಥಿಗಳಿಗೆ ಎನ್‌ಸಿಸಿ ಶಿಕ್ಷಣ ನೀಡಲು ಯುವ ಉಪನ್ಯಾಸಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಕಾಲೇಜ್ ವರಿಷ್ಠರ ಸಂಪಾತ ದೃಷ್ಟಿ ಬಿದ್ದದ್ದು ನನ್ನ ಓರಗೆಯ ತರುಣರ ಮೇಲೆ.

ಅಂದಿನ ನನ್ನ ಪರಿಭಾಷೆಯಲ್ಲಿ ಮಿಲಿಟರಿ ಎಂದರೆ ಸೇನಾ ಶಿಕ್ಷಣ, ಮಾಂಸ ಭಕ್ಷಣ ಮತ್ತು ಯುದ್ಧೋನ್ಮಾದ! ಆದ್ದರಿಂದ ಇದು ನನಗೆ ಸರ್ವಥಾ ಅಪಥ್ಯ ಮತ್ತು ಅಸ್ವೀಕಾರ್ಯ. ಹಾಗಾಗಿ ನಾನು ಎನ್‌ಸಿಸಿ ಅಧಿಕಾರಿ ಹುದ್ದೆಗೆ ಅರ್ಜಿ ಗುಜರಾಯಿಸುವ ಉಸಾಬರಿಗೇ ಹೋಗಲಿಲ್ಲ. ಆದರೆ ತತ್ಪೂರ್ವ ಅದೇ ಕಾಲೇಜಿನಲ್ಲಿ ನನಗೆ ಗುರುಗಳಾಗಿದ್ದ (೧೯೪೩-೪೭) ಈಗ ನನ್ನ ಹಿರಿಯ ಸಹೋದ್ಯೋಗಿಗಳಾಗಿರುವ (೧೯೫೦) ಕೆ. ಎ. ಕೃಷ್ಣಮೂರ್ತಿ, ಎಸ್. ನಾರಾಯಣ ಹೊಳ್ಳ, ಜೊತೆಗೆ ಸಹೋದ್ಯೋಗಿ ಮಿತ್ರ ಬಿ. ವಿ. ಕೆದಿಲಾಯ ಎಂಬ ತ್ರಿಮೂರ್ತಿಗಳು ಜಂಟಿಯಾಗಿ "ಪಿತೂರಿ" ಹೂಡಿ, ಈ ಉತ್ತರ ಕುಮಾರನನ್ನು ರಣರಂಗಕ್ಕೆ ತಳ್ಳುವ ಅರ್ಜುನರಾದರು — ಅರ್ಜಿ ಸಲ್ಲಿಸಿದೆ, ಅರ್ಥಾತ್ ಆತ್ಮಹತ್ಯೆಗೆ ಸ್ವಹಸ್ತ ಪರವಾನಗಿ ನೀಡಿದೆ.

ಅಳಿವು ಅರಿಯದ, ಮನವು ತಿಳಿಯದ, ಬಣ್ಣ ಕಾಣದ ಮಹಾ ಗರ್ತಕ್ಕೆ ಧುಮುಕಿಯೇ ಬಿಟ್ಟಿದ್ದೆ. ಇನ್ನು ಈಸದೇ ಈಸಿ ಜೈಸದೇ ಗತಿಯುಂಟೇ? ತರುವಾಯದ ದಿನಗಳಲ್ಲಿ ನನ್ನ ನಚಿಕೇತತ್ವ ಪ್ರಕಟವಾದ ಪರಿ, ಮತ್ತು ಇದಕ್ಕೆ ಕಾರಣರಾದ ಆ ಹಿರಿಯರ ಅಂತಃಕರಣ ನೆನೆಯುವಾಗ, ಬೇಂದ್ರೆಯವರ ದರ್ಶನ ಧ್ವನಿಗೆ ಶರಣಾಗುತ್ತೇನೆ, "ಶಾಂತಿ ರಸವೇ ಪ್ರೀತಿಯಿಂದಾ ಮೈದೋರಿತಣ್ಣಾ, ಇದು ಬರಿ— ಬೆಳಗಲ್ಲೋ ಅಣ್ಣಾ!"

ಮುಂದಿನ ದೃಶ್ಯ ಸಂಪೂರ್ಣ ಸೇನಾ ಶಿಕ್ಷಣ ವಸಾಹತು: ಮದ್ರಾಸ್ ರೆಜಿಮೆಂಟಲ್ ಸೆಂಟರ್ (ಎಂಆರ್‌ಸಿ), ವೆಲ್ಲಿಂಗ್ಟನ್, ಊಟಿ. ದುರ್ಗಮ ಅಭೇದ್ಯ ಗಿರಿ ಕಂದರಗಳ ನಡುವಿನ ಒಂದು ಸ್ವಯಂಪೂರ್ಣ ವ್ಯವಸ್ಥಾಪನೆ ಇದು. ವಿವಿಧ ಮೈದಾನಗಳಲ್ಲಿ ಸೈನಿಕರಿಗೆ ಡ್ರಿಲ್,

ರೈಫಲ್, ಲೈಟ್ ಮಶೀನ್‌ಗನ್, ಸಮರತಂತ್ರ, ಅಣಕು ಕಾಳಗ, ರಾತ್ರಿ ಗಸ್ತು, ಮುಂತಾದ ಕವಾಯತು ಬಗೆಗಳನ್ನು ಕಲಿಯುವ ಕರ್ಮಾಗಾರ.

ಸುತ್ತಲೂ ಹಸಿರು. ಮಡಿಕೇರಿಯವನಾದ ನನಗೆ ಇದು ತವರುಮನೆಯ ವಿಸ್ತರಣೆ. ಎಲ್ಲರೂ ಹಸಿರು ಸಮವಸ್ತ್ರಧಾರಿಗಳೇ. ಆ ಸಾವಿರಾರು ಶಿಸ್ತಿನ ಸಿಪಾಯಿಗಳ ಮಂದಿ ನಡುವೆ ನಾವು ಕೆಲವರು (ನನ್ನಂತೆ ಎನ್‌ಸಿಸಿ ಶಿಕ್ಷಣ ಪಡೆಯಲು ಆಯ್ಕೆಯಾದವರು) ಒಂದು ವಿಚಿತ್ರ ಮಂದೆ! ಹೌದು— ಅಂದು ನಮಗೆ ಸರಿಯಾಗಿ ನಿಲ್ಲಲು ಅಥವಾ ನಡೆಯಲು ಕೂಡ ಗೊತ್ತಿರಲಿಲ್ಲ. ಆದರೆ ಮಾತು? ಅದೊಂದೇ ನಮ್ಮ ಬಂಡವಾಳ.

ನಾವು ಎಂಆರ್‌ಸಿಗೆ ದಾಖಲಾದ ಆ ಸಂಜೆ ಪೂರ್ತಿ ನಿರ್ವಿಣ್ಣನಾದೆ, ನಿರ್ವರ್ಣನಾದೆ, ನಿರ್ಭಾವಿಯೂ ಆದೆ. ಯಾರೂ ಪರಿಚಿತರಿಲ್ಲ. ಬದುಕು, ಆಸ್ತಿ, ಕಾಂತಾರಗಳಲ್ಲಿ ನಾನವರ ಮುಂದೆ ಹುಲ್ಲುಗುಗ್ಗು. ಭೋಜನ ಮಂದಿರದಲ್ಲಿ (ಮೆಸ್) ಅನ್ನ ಮೊಸರಿನ ಹೊರತು ಬೇರೆಲ್ಲವೂ ನನಗೆ ವರ್ಜ್ಯ — ಹುಲಿಗಳ ನಡುವಿನ ಹುಲ್ಲೆ ನಾನಾಗಿದ್ದೆ. ಹಾಗಾದರೆ ನಾಳೆ? ಎಂಥೆಂಥ ಅಪಾಯಗಳು ಈ ಹುಲ್ಲೆಯನ್ನು ನುಂಗಲು ಕಾದಿವೆಯೋ!

ಸೇನಾ ಶಿಕ್ಷಣಾರಂಭದ ಪ್ರಥಮ ಪ್ರಾತಃಕಾಲ. ಬೆಟ್ಟಗಳ ನಡುವಿನ ಬೋಗುಣಿಯಂತಿದ್ದ ಆಟದ ಬಯಲಿನಲ್ಲಿ ೬ ಗಂಟೆಗೆ ಗಡಿಬಿಡಿಯಿಂದ ಬಂದು ಜಮಾಯಿಸಿದೆವು — ಸ್ವ ಇಚ್ಛೆಯಿಂದ ಖಂಡಿತ ಅಲ್ಲ. ಆ ಸಿಪಾಯಿ ಅಂತಕನ ದೂತರಿಗೆ ಕಿಂಚಿತ್ತೂ ದಯವಿರಲಿಲ್ಲವಾಗಿದ್ದರಿಂದ ಇದು ಅನಿವಾರ್ಯವಾಗಿತ್ತು. ಯಜ್ಞಪಶುವಿಗೆ ಮರಣ ಸ್ವಾತಂತ್ರ್ಯ ಉಂಟೇ?

ಬದುಕು? ಬನಿಯನ್, ಖಾಕಿ ಚಡ್ಡಿ, ಕಾಲುಗಳಿಗೆ ಕ್ಯಾನ್ವಾಸ್ ಶೂಗಳು. ಖಾಲಿ ಹೊಟ್ಟೆ, ಬೋಳು ಮಂಡೆ. ನಮ್ಮ ತ್ರಿಕ ಕೊಟ್ಟವರು ಬಯಲು ಸೀಮೆಯ 'ಆಲಯ'ದೊಳಗಿನ ಬೆಚ್ಚನೆಯ ಹಟ್ಟಿಯಲ್ಲಿ ಬೆಳೆದವರು. 'ಬಯಲ'ನ ಈ ಪಾಠವನ್ನು ಸಹಿಸಲಾಗದೇ ನಡುಗುತ್ತಿದ್ದರು, ನಿಂತಲ್ಲೇ ತಕಪಕ ಕುಣಿಯುತ್ತಿದ್ದರು. ಶುದ್ಧ ಮಲೆನಾಡಿಗನಾದ ನನಗೆ ಮಾತ್ರ ತವರಿಗೆ ಮರಳಿದ ಸುಖಾನುಭವ.

ಗಂಟೆ ೬-೧೫ಕ್ಕೆ ಸರಿಯಾಗಿ ಕರೆ ಬಂದಿತು fall in (ಸಾಲಾಗಿ ನಿಲ್ಲಿ) ಆಜ್ಞೆ ಗುಡುಗಿದರು. ಏನು ಮಾಡಬೇಕೆಂಬುದು ತಿಳಿಯದೇ ಎಲ್ಲರೂ ನಿಂತಲ್ಲೇ ಮರಗಟ್ಟಿದೆವು — ಸಂತೆಯ ಗೊಂದಲದ ಸ್ತಂಭಿತ ರೂಪದಂತಿತ್ತು ನಮ್ಮ ಯದ್ವಾತದ್ವಾ ವಿನ್ಯಾಸ. ನಮ್ಮನ್ನು ಆರ್ಮಿಯ ವ್ಯವಸ್ಥಿತ ತುಕಡಿಗಳಲ್ಲಿ ಅಳವಡಿಸಲು ಆ ಶಿಕ್ಷಕರು ಸಾಕಷ್ಟು ಸೆಣಸಾಡಬೇಕಾಯಿತು. ಏಕೆಂದರೆ ನಾವು ಬುದ್ಧಿಜೀವಿಗಳು!

ತುಕಡಿಗಳೇನೋ ತಯಾರಾದುವು. ಪ್ರಧಾನ ಶಿಕ್ಷಕ "ಸಾವಧಾನ್" ಅಪ್ಪಣೆ ಗರ್ಜಿಸಿ, ತತ್‌ಕ್ಷಣ ಅರ್ಧಸುತ್ತು ನಿಂತಲ್ಲೇ ತಿರುಗಿ (ಕ್ವಿಕ್ ಮಾರ್ಚ್), ದೂರದಲ್ಲಿ ನಿಂತಿದ್ದ ಮೇಲಧಿಕಾರಿಗೆ ವರದಿ ಒಪ್ಪಿಸಲು ಸರಿಯಾಗಿ ನಡೆದು ಹೋದ. ಇತ್ತ ಅದೇ ವೇಳೆ ನಾವು ಹಿಂದಾಡ ತೊಡಗಿದೆವು, ಗುಸಪಿಸ ಗೋಣಾಗಾಟ ಆಕಳಿಕೆ ಆರಂಭವಾದುವು. ಏಕೆಂದರೆ ನಾವು ವಿಮರ್ಶಕರು!

ಮೇಲಧಿಕಾರಿ ಆ ಕ್ಷಣವೇ ಹೇಳಿದ, "ಎಲ್ಲರೂ ಬಯಲಿನ ಬಲ ಕೊನೆಯಲ್ಲಿರುವ ಮೂತ್ರಿಗೆ (urinal) ಮೂರು ಗೋಲ್ ಚಕ್ಕರ್ ಹೊಡೆದು ಸ್ವಸ್ಥಾನಗಳಿಗೆ ಮರಳಿ ತಕ್ಷಣವೇ." ಅಂದ ಹಾಗೆ ಮೂತ್ರಿ, ಕಟ್ಟಡ ಎಲ್ಲಿದೆ, ಅದರ ಇರವಿನ ಘೋರಂಪು ಎಲ್ಲಿಯೂ ತಪ್ಪುತ್ತಿಲ್ಲ! ಜಾಗ ನೋಡದರೆ ಹಾಗ ಹೊಡೆವುದು ನನ್ನ ಪ್ರವೃತ್ತಿ. ಎಂದೇ ಒಡನೆ ಮೂತ್ರ ಚಲೋ ಶಿಕ್ಷೆಯನ್ನು ಮನಸಾ ಶಿರಸಾ ಪಾದಸಾ ವಹಿಸಿ ಪೂರೈಸಿದೆ. ಪ್ರಶ್ನಿಸುತ್ತ ಹಿಂದೆ ನಿಂತಿದ್ದವರು ಎರಡು ಸಲ ಮೂತ್ರ ಪ್ರದಕ್ಷಿಣೆ ಮಾಡಬೇಕಾಯಿತು. ಏಕೆಂದರೆ ಇವರು "ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ" ಗೋತ್ರದವರು.

ಮೊದಲ ಆ ಒಂದು ಗಂಟೆ ಕಡು ಬಿರುಸಿನ ವ್ಯಾಯಾಮ. ಮುಂದೆ ಹಸಿವಿನಿಂದ ಕಂಗೆಟ್ಟು ಮೆಸ್ಸಿಗೆ ಧಾವಿಸಿದರೆ ಅಪ್ಪಟ ಹುಲ್ಲು-ತಿನಿಸಾದ ನನಗೆ ದೊರೆತದ್ದೇನು! ಬ್ರೆಡ್ಡಿನ ಎರಡು ತುಣುಕುಗಳು ಮತ್ತು ಶಾಕ ಮಾತ್ರ. ಹುಲ್ಲ-ಭಕ್ಷಕನಾಗಿ ಬೀಗುತ್ತಿದ್ದ ಅಧಿಕಾರಿಯೊಬ್ಬ ಆ ಕಡೆ ಭಾಷಣ ಹೊಡೆಯುತ್ತಿದ್ದುದು ಕಿವಿಗೆ ಬೀಳದಿರಲಿಲ್ಲ, "ಆರ್ಮಿಯಲ್ಲಿ ಬ್ರೇಕ್ ಫಾಸ್ಟ್, ಲಂಚ್ ಫಾಸ್ಟ್."

ಸೇನಾಶಿಕ್ಷಣ ಅತ್ಯಂತ ಕಠಿಣವಾಗಿತ್ತು. ನಮ್ಮ ವೈಯಕ್ತಿಕ ಆಸೆ, ಆಮಿಷ, ಅಭಿಪ್ರಾಯಗಳು ಸಮುದ್ರದ ಭೋರ್ಗರೆತದಲ್ಲಿ ಅಳಿದು ಹೋದುವು. ಆ ಮೂರು ತಿಂಗಳ ವನವಾಸ ಮುಗಿಯುವಾಗ ನಾವು ಹೊಸ ಲೋಕ ಕಂಡೆವು, ಹೊಸಬರೇ ಆದೆವು. ನಿಜ, ಬೆಂಕಿಯಲ್ಲಿ ಬೆಂದ ಹೊರತು ಬೆಟ್ಟ ಪುತ್ಥಳಿ ಆಗದು. ಆ ಅವಧಿಯ ಕುರಿತಂತೆ ಇಂದಿಗೂ (೨೦೦೨) ನನ್ನ ನೆನಪಿನಲ್ಲಿರುವುದು ಎರಡು ಹೃದಯಸಂವಾದಗಳು. ಮೊದಲನೆಯದು ನಮ್ಮ ಟ್ರೈನಿಂಗ್ ಸುಬೇದಾರ್ ಅಬ್ದುಲ್ ಖಾದರರ ಆರಂಭ ಸ್ವಾಗತ:

"ಮಿತ್ರರೇ! ನೀವು ವಿದ್ಯೆ ಹಾಗೂ ಸಂಸ್ಕೃತಿ ರಂಗಗಳಲ್ಲಿ ಉನ್ನತ ಸ್ತರ ಏರಿದವರು. ಮುಂದೆ ವಿದ್ಯಾರ್ಥಿಗಳನ್ನು ತರಬೇತು ಮಾಡಿ ಅವರನ್ನು ನಾಡಿನ ಯೋಗ್ಯ ಪ್ರಜೆಗಳು, ದಕ್ಷ ಸೇನಾಧಿಕಾರಿಗಳು ಮೊದಲಾಗಿ ಪರಿವರ್ತಿಸುವ ಪವಿತ್ರ ಹೊಣೆ ಹೊತ್ತು ಆ ದಾರಿಯಲ್ಲಿ ತಕ್ಕಷ್ಟು ಅನುಭವಗಳಿಸಲು ಇಲ್ಲಿಗೆ ಬಂದವರು. ನಿಮ್ಮಂಥವರೊಡನೆ ಒಡನಾಡುವುದು — ನಾವು ನಿಮಗೆ ಏನು ಕಲಿಸುತ್ತೇವೋ ಬಿಡುತ್ತೇವೋ ಅದು ಬೇರೆ ವಿಚಾರ — ನಮಗಂತೂ ಬಲು ಸಂತೋಷದ ಅನುಭವ.

"ನಾವು ಹೇಳಿಕೊಡುವ ಪಾಠ ಯಾವುದೇ ಇರಲಿ, ಮೊದಲು ಅದರಲ್ಲಿ ನಾವು ಸಾಕಷ್ಟು ಎತ್ತರ ಏರಬೇಕು. ಆಗ ಮಾತ್ರ ತಗ್ಗಿನಲ್ಲಿರುವವರನ್ನು ಮೇಲಕ್ಕೆತ್ತಿ ಕೊಳ್ಳುವುದು ನಮಗೆ ಸಾಧ್ಯವಾಗುತ್ತದೆ. ನಾವು ಕೆಳಗೆ ನಿಂತು ಅವರನ್ನು ಮೇಲೆ ತಳ್ಳುವವರಾಗಬಾರದು, ಬದಲು ಮೇಲೆ ನಿಂತು ಪ್ರೀತಿಯಿಂದ ಆಕರ್ಷಿಸುವವರಾಗಬೇಕು.

"ಇಲ್ಲಿಯ ಶಿಕ್ಷಣ ಕುರಿತು ನಿಮಗೆ ಯಾವ ಸಂದೇಹವೂ ಉಳಿದಿರಬಾರದು. ಇಲ್ಲಿ ಉಳಿದದ್ದು ತಿಲಮಾತ್ರವಾದರೆ ನಾಳೆ ವಿದ್ಯಾರ್ಥಿ ಪ್ರಪಂಚಕ್ಕೆ ನೀವು ಬೋಧಿಸುವಾಗ ಅದು ಪರ್ವತಗಾತ್ರ ತಳೆದೀತು. ಇಂಥ

ಸನ್ನಿವೇಶ ದೇಶಕ್ಕೆ ಅಹಿತಕರ. ಅದ್ದರಿಂದ ಪ್ರಶ್ನೆ ಕೇಳಿ. ಗೊತ್ತಿದ್ದರೆ ಹೇಳೋಣ. ಗೊತ್ತಿಲ್ಲದಿದ್ದರೆ ಓದಿ ಅಥವಾ ಇತರರಿಂದ ಕೇಳಿ ತಿಳಿದು ನಿಮಗೆ ತಿಳಿಸೋಣ. ನಾವು ಈ ಪ್ರಪಂಚದಲ್ಲಿ ಸಹಯಾತ್ರಿಕರು ಎಂಬುದು ಸದಾ ನಿಮ್ಮ ನೆನಪಿನಲ್ಲಿರಲಿ."

ಎರಡನೆಯದು ನಮ್ಮ ಶಿಕ್ಷಣಾಂತ್ಯದಲ್ಲಿ ಎಂಆರ್‌ಸಿ ಮುಖ್ಯಸ್ಥ ಕರ್ನಲ್ ಬಿ. ಕೆ. ಸೋಮಯ್ಯನವರು ಹರಸಿದ ಶುಭವಿದಾಯ:

"ಸ್ನೇಹಿತರೇ! ನೀವಿಲ್ಲಿ ಮೂರು ತಿಂಗಳ ಪರ್ಯಂತ ಮಿಲಿಟರಿ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿ ಕೃತಾರ್ಥಭಾವದೀಪ್ತರಾಗಿದ್ದೀರಿ. ನಿಮ್ಮ ಶಿಕ್ಷಣದ ಮೊದಲ ಹಂತ ಮಾತ್ರ ಇಂದು ಮುಗಿದಿದೆ ಎಂದು ನೆನಪಿನಲ್ಲಿರಲಿ. ನೀವು ಕಲಿತದ್ದರಲ್ಲಿ ಕಾಳು ಎಷ್ಟು ಜಳ್ಳು ಎಷ್ಟು ಎಂದು ಒರೆಹಚ್ಚುವ ಪರೀಕ್ಷೆ ನಡೆವುದು, ನಿಮ್ಮ ನಿಮ್ಮ ಪಾಳೆಯಗಳಲ್ಲಿ, ಎದ್ದು ನಿಲ್ಲಲಿ ಇಲ್ಲಿ ನೀವು ಅತ್ಯುತ್ತಮ ಆಫೀಸರ್-ಕ್ಯಾಡೆಟ್ ಆಗಿ ತೇರ್ಗಡೆ ಹೊಂದಿರಬಹುದು. ಆದರೆ ಅಲ್ಲಿ ಅದು ಇನ್ನಷ್ಟು ಪ್ರಖರವಾಗಿ ಪ್ರಕಟಗೊಳ್ಳದಿದ್ದರೆ ನಿಮ್ಮ ಈ ತಿಳಿವಳಿಕೆ ನಿಷ್ಪ್ರಯೋಜಕವಾಗುವುದು. ಆದ್ದರಿಂದ ಮುಂಬರುವ ದಿನಗಳಲ್ಲಿ ಪ್ರತಿಯೊಬ್ಬನ ಲಕ್ಷ್ಯವು ಸದಾ ಪ್ರಾಯೋಗಿಕ ಸಾಫಲ್ಯ ಗಳಿಸುವುದರತ್ತ ಹರಿಯಬೇಕು.

"ನಮ್ಮ ಪವಿತ್ರ ರಾಷ್ಟ್ರದ ಸಮಷ್ಟಿ ಚೈತನ್ಯದ ಒಂದು ಭವ್ಯ ಪ್ರತೀಕ ಮಿಲಿಟರಿ. ಇದರ ಒಂದು ಪ್ರಧಾನಾಂಗ ಎಂಆರ್‌ಸಿ. ಇಲ್ಲಿಯ ಪರೇಡ್ ಗ್ರೌಂಡಿನಲ್ಲಿ ತರಬೇತು ಪಡೆದು ಹೋದ ಪ್ರತಿಯೊಬ್ಬ ಯೋಧನಿಗೂ ಇದು ತಾಯ್ನೆಲ. ಇಲ್ಲಿ ಕಳತೆಗೆ ನೆಲೆಯಿಲ್ಲ. ನೀವು ಒಬ್ಬೊಬ್ಬನೂ ಎಂಆರ್‌ಸಿಯ ರಾಯಭಾರಿಗಳು. ಆದ್ದರಿಂದ ನಿಮ್ಮ ಸಕಲ ವರ್ತನೆಗಳಲ್ಲಿಯೂ — ಎನ್‌ಸಿಸಿ ಆಗಿರಲಿ, ಶಿಕ್ಷಣಕ್ಷೇತ್ರವಾಗಿರಲಿ, ವ್ಯವಹಾರಪ್ರಪಂಚವಾಗಿರಲಿ — ಎಂಆರ್‌ಸಿಯ, ಅಂದರೆ ಮಿಲಿಟರಿಯ, ಆದ್ದರಿಂದ ರಾಷ್ಟ್ರದ ಘನತೆ ಗೌರವಗಳನ್ನು ಕಾಪಾಡಿಕೊಂಡು ಬರಬೇಕಾದದ್ದು ಪ್ರತಿಯೊಬ್ಬನ ವೈಯಕ್ತಿಕ ಹೊಣೆ.

"ಪ್ರಾಥಮಿಕವಾಗಿ ನೀವು ವಿದ್ಯಾರ್ಥಿಗಳ ಸಹಜ ಚಾಲ್ತಿಕ ನಾಯಕರು. ಎನ್‌ಸಿಸಿ ಅಧಿಕಾರಿಗಳಾಗಿ ಸುಶಿಕ್ಷಿತ ಭಾವೀನಾಯಕರೂ ಆಗಿರುವಿರಿ. ಹೀಗೆ ದ್ವಿವಿಧ ಹೊಣೆ ಹೊತ್ತಿರುವ ನಿಮ್ಮ ಲಕ್ಷ್ಯದಲ್ಲಿ ಈ ಮುಂದಿನ ಮಾತುಗಳು ಯಾವಾಗಲೂ ದೀಪ್ತಿಸುತ್ತಿರಲಿ. ಅತಿ ವರಿಷ್ಠ ಸೇನಾನಾಯಕರೊಬ್ಬರ ನುಡಿಗಳಿವು, 'ನಿಮ್ಮ ರಾಷ್ಟ್ರದ ಹಿತಾಸಕ್ತಿ ಸದಾ ಪ್ರಥಮ ಸ್ಥಾನ ಪಡೆಯತಕ್ಕದ್ದು, ನಿಮ್ಮ ಯೋಧರ ಸೌಖ್ಯ ಮತ್ತು ಉತ್ಕರ್ಷ ಮತ್ತೆ ಬರತಕ್ಕದ್ದು, ಇನ್ನು ನಿಮ್ಮ ವೈಯಕ್ತಿಕ ಸೌಕರ್ಯ ಮತ್ತು ಪ್ರಗತಿ ಯಾವಾಗಲೂ ಕೊನೆಯ ಸ್ಥಾನದಲ್ಲಿರತಕ್ಕದ್ದು.' ನಿಮಗೆ ಮಂಗಳವಾಗಲಿ. ಎಂಆರ್‌ಸಿ ಸದಾ ನಿಮ್ಮ ಬೆಂಬಲಕ್ಕಿದ್ದು ನಿಮ್ಮ ಪ್ರಗತಿಯಲ್ಲಿ ಸಂತೋಷಗೊಳ್ಳುತ್ತದೆ."

ಎಂಆರ್‌ಸಿ ಎಂಬ ಉಡಾವಣಾತಡಿಯಿಂದ (launching pad) ಜೀವನಾಕಾಶಕ್ಕೆ ಜಿಗಿದ ನಾನು ಕಂಡುಕೊಂಡಿರುವ ತಥ್ಯಗಳಿವು:

ಹಾಂಗಾ! ಪಥ ದತ್ತವಾಗಿಲ್ಲ. ನಿನಗಿದು
ದೂರಗಮಿಸಲು ಬೇಕು. ಗುರಿ ನಭಗೆ ನಿರುವಿರೆ
ಬಾರಿ ಬಾರಿಗು ಪುಟಿಸುವ ಕಂಟಕಗಳನು ನಿ-
ವಾರಿಸುತ ಸಾಗುವುದು ಬಲು ಸುಲಭ ಅತ್ರಿಸಾನು॥
ಸಂಕಲ್ಪ-ನಿರ್ವಹಣೆ, ಬ್ರಹ್ಮಗಿರಿ-ಕಾವೇರಿ
ಕಂಕರತೆ-ಕಾಳತ್ವ ಸಂತುಲಿತೆಯಲ್ಲಿರಲು
ಪಂಕದಿಂ ಚಿಗುರುವುದು ಸೌಗಂಧ್ಯ, ಜಡತಾ ತ್ರಿ-
ಶಂಕುತ್ವ ಕ್ರತುಶಕ್ತಿಯಾಗುವುದು ಅತ್ರಿಸಾನು॥
ಕಾರ್ಯಮಂಥನದಲ್ಲಿ ಗರಳಬರೆ ಕೊರಳಿನಲಿ
ಧೈರ್ಯದಿಂ ಧರಿಸುತಾ ಶಿವನಾಗು, ಸುಧೆಯೊಸರೆ
ಸ್ಥೈರ್ಯದಿಂ ಹಂಚು ಮೋಹಿನಿಯಂತೆ ಮನುಕುಲಕೆ
ಆರ್ಯತ್ವವಿದು ಕಣಾ ಬದುಕಿನಲಿ ಅತ್ರಿಸಾನು॥

ಆಸಕ್ತರು "ಎಣಿಸುವ ದಿನಗಳು," "ಸವಾಲನ್ನು ಎದುರಿಸುವ ಛಲ" ಮತ್ತು ನನ್ನ ವಿಜ್ಞಾನ ಕೃತಿಗಳನ್ನು ಪಡೆಯಬಹುದು: ಅತ್ರಿ ಬುಕ್ ಸೆಂಟರ್, ೪ ಶರಾವತಿ ಕಟ್ಟಡ, ಬಲ್ಮಠ, ಮಂಗಳೂರು ೫೭೫೦೦೧; ದೂರವಾಣಿ: ೦೮೨೪ ೪೨೫೧೭೮೧, ೪೯೨೩೯೭; e-mail: athreebook@sify.com

೨೦ ಜೂನ್ ೨೦೦೨ ಜಿ.ಟಿ. ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ
ಮೈಸೂರು ೫೭೦೦೦೯
ದೂರವಾಣಿ: ೦೮೨೧ ೫೪೪೩೭೫೯

# ಯಾರು ಹಿತವರು ನಿನಗೆ ಈ ನಾಲ್ವರೊಳಗೆ?

ಈ ನಾಲ್ವರು ಮಾನವಕೃತ ಚಿಂತನ ಪ್ರಕಾರಗಳು ಮತ್ತು ಜೀವನ ಧೋರಣೆಗಳು. "ಬದುಕು ಜಟಕಾ ಬಂಡಿ" ಯ ಗಾಲಿಗಳವು. ವ್ಯಕ್ತಿ ಈ ಬಂಡಿಯ "ಸಾಹೇಬ." ಗಾಲಿಗಳ ಹೆಸರು: ಮಾನವೀಯತೆ (humanism), ನೈತಿಕತೆ (ethics), ವೈಚಾರಿಕತೆ (rationalism) ಮತ್ತು ವೈಜ್ಞಾನಿಕತೆ (scientism). ಇವು ಏಕರೂಪ-ಸಮತೋಲಯ ಮೇಳನದಲ್ಲಿರುವಾಗ ಬಾಳಬಂಡಿ ಸುಗಮಪಥಗಾಮಿಯಾಗಿರುತ್ತದೆ, ಮತ್ತು ಸವಾರ ಸಂತೃಪ್ತನಾಗಿರುತ್ತಾನೆ. ಇಲ್ಲದಾಗ ಬಂಡಿ ಹಳ್ಳದಪ್ಪುತ್ತದೆ.

## ಮಾನವೀಯತೆ

ಸುಸಂಸ್ಕೃತ ವ್ಯಕ್ತಿಯ ಸಹಜಗುಣವಿದು: ಸಮಸ್ತ ಜೀವಿಗಳ ಬಗ್ಗೆ ಕರುಣೆ ಇದರ ಮುಖ್ಯ ಲಕ್ಷಣ. ಮಾನವೀಯತೆಯ ಪ್ರಕಟಿತ ರೂಪ ದಯೆ – "ದಯೆಯೇ ಧರ್ಮದ ಮೂಲವಯ್ಯಾ." ಧರ್ಮ ಎಂದರೆ ಸಭ್ಯರು ತಮ್ಮ ಅಂತರಂಗ ಬಹಿರಂಗಗಳಲ್ಲಿ ಪಾಲಿಸುವ ಶಿಸ್ತು. ವ್ಯಕ್ತಿಯ ನಡವಳಿಕೆಯನ್ನು ಇದು ವಿಧಿಸುತ್ತದೆ, "ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ." ಇದರ ವ್ಯಾಖ್ಯಾನ: ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ." ಇಲ್ಲಿ 'ಕೂಡಲ ಸಂಗಮದೇವ' ಮನುಕುಲವನ್ನು ಪ್ರತಿನಿಧಿಸುತ್ತದೆ. 'ಸತ್ಯಂವದ ಧರ್ಮಂಚರ' ಸೂಕ್ತಿಯ ಮಥಿತಾರ್ಥವೂ ಇದೇ: ಸತ್ಯವನ್ನು ನುಡಿ, ಧರ್ಮದಲ್ಲಿ ನಡೆ.

ಗಂಗಾತಟಾಕದಲ್ಲೊಬ್ಬ ಬೌದ್ಧ ಭಿಕ್ಷು ಅಡ್ಡಾಡುತ್ತಿದ್ದ. ಪ್ರವಾಹದಲ್ಲೊಂದು ಚೇಳು ಕೊಚ್ಚಿ ಹೋಗುತ್ತಿತ್ತು. ದಯಾಮೂರ್ತಿ ಭಿಕ್ಷು ಒಡನೆ ನೀರಿಗಿಳಿದು ಅದನ್ನೆತ್ತಿ ದಡದ ಮೇಲೆ ಬಿಟ್ಟ. ಆದರೆ ಚೇಳು ಮಾತ್ರ ಅಷ್ಟರಲ್ಲೇ ಆತನ ಅಂಗೈಯನ್ನು ಕುಟುಕಿತ್ತು. ಕೆಲವೇ ನಿಮಿಷಗಳಲ್ಲಿ ಚೇಳು ಮತ್ತೆ ನೀರಿಗೆ ಕೆಡೆಯಿತು. ಕೂಡಲೇ ಭಿಕ್ಷು ಅದನ್ನೆತ್ತಿ ದಡಹಾಯಿಸಿದ, ಜೊತೆಗೇ ಕುಟುಕು ಪ್ರಸಾದವನ್ನೂ ಪಡೆದ! ಪುನಃ ಪುನಃ ಈ ಸರಣಿಯ ಪುನರಾವರ್ತನೆ ಆಗುತ್ತಿದ್ದುದನ್ನು ಗಮನಿಸಿದ ದಾರಿಹೋಕನೊಬ್ಬ ಪ್ರಶ್ನಿಸಿದ, "ಅಯ್ಯಾ ಭಿಕ್ಷು! ಒಮ್ಮೆ ಈ ಕೃತಘ್ನ ಪ್ರಾಣಿಯನ್ನು ಕಾಪಾಡಿ ಕುಟುಕಿಸಿಕೊಂಡಿರುವ ನೀನು ಮತ್ತೆ ಅದೇ ಹುಚ್ಚತನವನ್ನೇಕೆ ಪ್ರದರ್ಶಿಸುತ್ತಿರುವೆ?"

ಭಿಕ್ಷು ಉದ್ಗರಿಸಿದ ಪೂರ್ತಿ ನಿರ್ಯೋಚನೆಯಿಂದ, "ಎತ್ತುವುದು ನನ್ನ ಧರ್ಮ, ಕುತ್ತುವುದು ಅದರ ಧರ್ಮ!"

ಮಾನವಧರ್ಮ ಪ್ರಾಣಿಧರ್ಮಕ್ಕಿಂತ ಬೇರೆ ಆಗಬೇಕೇಕೆ? ಪ್ರಾಣಿವರ್ತನೆ ಅದರ ಸ್ವಭಾವಜನ್ಯವಾದದ್ದು, ಯೋಚನೆಯಿಂದ ಪ್ರಕಟವಾಗುವುದಲ್ಲ. ಆಯಾ ಪ್ರಾಣಿಯಲ್ಲಿ ಆಯಾ ಸ್ವಭಾವವನ್ನು ನಿಸರ್ಗವೇ ಗರ್ಭಿಸಿಟ್ಟಿರುತ್ತದೆ. ಮನುಷ್ಯನಲ್ಲೂ ಈ ಗುಣವಿದ್ದೇ ಇದೆ. ಉದಾಹರಣೆಗೆ ಶಿಶು

ವರ್ತನೆ ಸ್ವಭಾವಸಿದ್ಧವಾದದ್ದು. ಶಿಶು ಬೆಳೆದು ಅಭಿವರ್ಧಿಸಿದಂತೆ ಅದಕ್ಕೆ ಇತರ ನಾಲ್ಕು ಸೌಕರ್ಯಗಳು ಒದಗಿ ಬರುವುದನ್ನು ಕಾಣುತ್ತೇವೆ: ಸ್ಮರಣೆ ಚಿಂತನೆ, ಮಾತು ಮತ್ತು ಕೃತಿ. ಎಂದೇ ನಿರ್ದಿಷ್ಟ ಸಂದಿಗ್ಧ ಸಂದರ್ಭದಲ್ಲಿ ವ್ಯಕ್ತಿ ಯೋಚಿಸಿ, ಅವಶ್ಯವಾದರೆ ಪೂರ್ವ ನಿದರ್ಶನಗಳನ್ನು ನೆನಪಿಸಿ ಕೊಂಡು, ಯುಕ್ತ ನಿರ್ಧಾರ ತಳೆದು ತದನುಸಾರ ವರ್ತಿಸಬಲ್ಲ. ಇಂಥ ವರ್ತನೆ ಮಾನವೀಯತೆಯಿಂದ ಆರ್ದ್ರೀಕೃತವಾದದ್ದು ದಯೆಯಾಗಿ ಪ್ರಕಟವಾಗಬೇಕು. ಭಿಕ್ಷುವಾಗಿದ್ದ ಈ ಕಲಿಸವನ್ನೇ. ಮನುಷ್ಯನ ಮೂಲವಿರುವುದೇ ದಯೆಯಲ್ಲಿ; ತಾಯಿ ಒಲವಿನಿಂದ ಧಾರೆ ಎರೆವ ದಯೆಯೇ ಮೈವತ್ತೆದು ಶಿಶುವಾಗುವುದಲ್ಲವೇ?

## ನೈತಿಕತೆ

ಸಮಾಜಜೀವಿಯಾದ ವ್ಯಕ್ತಿಯು ಅಂತರಂಗಿಕ ಚಿಂತನೆ ಮತ್ತು ಬಾಹಿರಂಗಿಕ ವರ್ತನೆ ಜನವಿರೋಧಿಯಾಗದೆ ಜನೋಪಕಾರಿಯಾಗುವಂತೆ ಆತನ ನಡೆನುಡಿ ಬಗೆಗಳನ್ನು ಪ್ರಭಾವಿಸಿ ನಿಯಂತ್ರಿಸುವ ಗುಣವಿದು. ಜೀವನ ನಾಣ್ಯದ ಎರಡು ಮಗ್ಗುಲುಗಳು ಮಾನವೀಯತೆ ಮತ್ತು ನೈತಿಕತೆ — ಸರಳವಾಗಿ ಪ್ರೀತಿ ಮತ್ತು ನೀತಿ. ಪ್ರೀತಿಯು ಸೆಲೆ ಹೃದಯ, ನೀತಿಯು ನೆಲೆ ಮಿದುಳು. ಜೀವನನಾಣ್ಯಕ್ಕೆ ಪ್ರೀತಿ ಚಲಾವಣೆಯನ್ನು ನೀತಿ ಮೌಲ್ಯವನ್ನು ಒದಗಿಸುತ್ತವೆ. ಇವು ಒಂದಕ್ಕೊಂದು ಪೂರಕ ಪೋಷಕವಾಗಿರುವಾಗ ಬದುಕು ಸುಗಮವಾಗಿರುವುದು

ಪ್ರೀತಿಯೊಂದೇ ಇದ್ದರೆ ಬಾಳು ಚುಕ್ಕಾಣಿ ಇರದ ದೋಣಿ ಆಗುತ್ತದೆ — ಗೊತ್ತುಗುರಿ ಇಲ್ಲದ ಅಲೆತ. ನೀತಿಯೊಂದೇ ಇದ್ದರೆ ದೋಣಿ ವಿಧಿನಿಷೇಧಗಳ ಮರಳಿನಲ್ಲಿ ಹೂತುಹೋಗುತ್ತದೆ — ಅಲ್ಲಾಡಲಾಗದ ಸಂಸ್ಥಿತಿ. ಪ್ರೀತಿ-ಆರ್ದ್ರೀಕೃತ ನೀತಿ, ನೀತಿ-ನಿಯಂತ್ರಿತ ಪ್ರೀತಿ — ಇದು ಸಂತೃಪ್ತ ಜೀವನದ ಸೂತ್ರ, 'ದೋಣಿ ಸಾಗಲಿ ಮುಂದೆ ಹೋಗಲಿ' ವ್ಯಕ್ತಿ ನಿರ್ವಹಿಸಬೇಕಾದ ಪಾತ್ರ.

ಇದೊಂದು ಹಳೆಯ ಕಥೆ. ಆದರೆ ಇದು ಬಿತ್ತರಿಸುವ ಜೀವನಮೌಲ್ಯ ಸದಾ ಪ್ರಸ್ತುತ. ವ್ಯಭಿಚಾರಿಣಿಯನ್ನು ಕಲ್ಲು ಹೊಡೆದು ಸಾಯಿಸಬೇಕೆಂಬುದು ಆ ಜನಾಂಗದವರ ನೀತಿ. ಹಾಗಾದರೆ ಮಾನವೀಯತೆ? ಅಪರಾಧದ ಮೂಲ ಶೋಧಿಸದೇ ನೀತಿಯನ್ನು ಮರುಕರಹಿತವಾಗಿ ಚಲಾಯಿಸುವುದೇ? ಈಗ ಮುಂದಿನ ಎರಡು ಚೌಪದಿಗಳನ್ನು ಓದಿ:

“ಹಾದರವ ಮಾಡಿದಾಕೆಗೆ ಮರಣ ದಂಡನೆಯು
ಶಾಸ್ತ್ರ — ಬಿಡಿ ಹೊಡೆ ಕಲ್ಲು!” ಕೇಳ್ದ ಕಿರಿಸ್ತ:
“ಹಾದರವಿದೂರ ಬಿಡಲಿ ಮೊದಲ ಹೊಡೆಗೆಯು!”
ಕೆಡೆದು ಬಿದ್ದುವು ಕಲ್ಲುಗಳು ನೆಲಕೆ ಅತ್ರಿಸೂನು॥

“ಕಾಣು ಧರ್ಮದ ಮೂಲ ದಯೆಯೊಳ್” ಎಂದಿತು ಬಸವ-
ವಾಣಿ; ಆಚರಣೆಯಾವು? ಭೈರವನ ತಾಂಡವವು
ಗೋಣ ಕತ್ತರಿಸುತಿದೆ ಸೋದರರ; ಬೆಳ್ಳಿ
ಪ್ರಾಣತನ — ಕರಗುವುದು ಹೃದಯಕ್ಕೆ ಅತ್ರಿಸೂನು॥

ನೀತಿರಹಿತ ಪ್ರೀತಿಗೆ ಪ್ರತೀಕ ಧೃತರಾಷ್ಟ್ರ, ಪ್ರೀತಿಶೂನ್ಯ ನೀತಿಗೆ ಪ್ರತೀಕ ಅಹಲ್ಯೆಗೆ ಶಾಪವಿತ್ತ ಗೌತಮ ಋಷಿ. ಉಭಯ ಸಂದರ್ಭಗಳಲ್ಲಿಯೂ ಜೀವನ ನೌಕೆಗಳು ಸ್ಫೋಟಿಸಿದುವು.

ವೈಜ್ಞಾನಿಕತೆ

"ಜನರು ವಿಚಾರವಂತರಾಗದಿದ್ದರೆ ಕುರುಡು ನಂಬಿಕೆಗಳ superstitions) ದಾಸರಾಗಿ ಬದುಕು ಬರಡಾಗುವುದು ಖರೆ" — ಇಂಥ ಮಾತುಗಳನ್ನು ಪದೇ ಪದೇ ಕೇಳುತ್ತಿರುತ್ತೇವೆ. ವೈಜ್ಞಾನಿಕತೆ, ಕುರುಡು ನಂಬಿಕೆ, ವಿವಿಕ್ತ ಚಿಂತನೆ (ಅಂದರೆ ರಾಗಭಾವವಿದೂರರಾಗಿ ಸಮಸ್ಯೆಯ ಪರಿಶೀಲನೆ) ಮುಂತಾದ ಪದಗಳನ್ನು ಸಲೀಸಾಗಿ ಬಳಸುವವರಿಗೆ ಈ ಪದಗಳ ಉಚಿತ ವ್ಯಾಖ್ಯೆ ಮತ್ತು ವ್ಯಾಪ್ತಿ ಏನು ಎಂಬ ಪ್ರಶ್ನೆ ಹಾಕಿದರೆ ನಮಗೆ ದೊರೆಯುವುದು ಅಸಂಖ್ಯ ಅಸಂಬದ್ಧ ನಿದರ್ಶನಗಳು ಮತ್ತು ಕಂಠತ್ರಾಣ ಪ್ರದರ್ಶನ!

ಹೀಗೇಕೆ? ನಮ್ಮ ಮಾತಿಗೆ ಅನುಭವದ ಬೆಂಬಲವಿಲ್ಲ. ಅನುಭವಕ್ಕೆ ಕಾರಣದ ನಂಟು ಇಲ್ಲ. ಇನ್ನು ಕಾರಣ ಅಥವಾ ಮೂಲವೇ? ಇದನ್ನು ಸಾಧ್ಯವಾಗುವಷ್ಟು ಮುಂದಕ್ಕೆ ತಳ್ಳಿ ಅಥವಾ ವಿಸ್ತರಿಸಿ, ಬದುಕಿನ ಎಲ್ಲ ಸುಖ ಸೌಕರ್ಯ ಸವಲತ್ತುಗಳನ್ನು ಗಳಿಸಿ ಆರಾಮವಾಗಿರುವುದರಲ್ಲೇ ನೆಮ್ಮದಿ ತಳೆಯುತ್ತೇವೆ. ವಾಸ್ತವದಲ್ಲಿ, ಇಂಥ ಹಗಲುಗನಸುಗಳನ್ನು ಕಾಣುತ್ತ ಅವುಗಳಿಗೆ ವೈಜ್ಞಾನಿಕತೆಯ (?) ಲೇಪನ ಹೊದಿಸುವವರು ಜೀವನದ ನಿಜಸಂತೋಷವಂಚಿತರಾಗಿರುತ್ತಾರೆ. ಏಕೆಂದರೆ ನಿಸರ್ಗದಲ್ಲಿ ಬಿಟ್ಟಿ ಕೂಳಿಲ್ಲ. ಈ ವಿಶ್ವನಿಯಮಕ್ಕೆ ಯಾರೂ — ಎಂಥ ಅಧಿಕಾರಾರೂಢರೇ ಆಗಲಿ ದೇವಮಾನವರೇ ಆಗಲಿ — ಅಪವಾದವಲ್ಲ. ಬಯಲಲ್ಲಿ ಇವ ನಮ್ಮವ ಇವ ಬೇರೆಯವ ಎಂಬ ತಾರತಮ್ಯ ನೀತಿ ಸಲ್ಲ.

ಆದ್ದರಿಂದ ಕ್ರಿಯಾಸಾಧನೆಗಳಿಗೆ ಕಾರಣವೇ ಮೊದಲ ಬೀಜ ಮತ್ತು ಬೀಜ ಹಿಪ್ಪೆ. ನಮಗೆ ನಿಗದಿಯಾಗಿರುವ ಅಥವಾ ನಾವೇ ಆಯ್ದುಕೊಂಡಿರುವ ವೃತ್ತಿಯಲ್ಲಿ ಮಗ್ನರಾಗಿರುವಾಗ ನಮ್ಮೊಳಗೆ ಹಲವಾರು ಅನುಭವಗಳು ಜಮೆಯಾಗುತ್ತವೆ. ಜಗದಲ್ಲಿ ವೃತ್ತಿಗಳು ಎಷ್ಟೋ ಅನುಭವಗಳು ಅಷ್ಟೇ. ಇವೆಲ್ಲವುಗಳಿಗೂ ಸಾಮಾನ್ಯವಾಗಿರುವ ಒಂದು ಸೂತ್ರವಿದೆ: ಪ್ರತಿಯೊಂದು ಕಾರ್ಯದ ಹಿನ್ನೆಲೆಯಲ್ಲಿ ಒಂದಾದರೂ ಕಾರಣವಿದ್ದೇ ಇರುವುದು; ಅಂತೆಯೇ ಪ್ರತಿಯೊಂದು ಕಾರಣದ ಪರಿಣಾಮವಾಗಿ ಒಂದಾದರೂ ಕಾರ್ಯ ಜರಗಿಯೇ ಜರಗುವುದು.

ನಿತ್ಯಜೀವನದ ಎರಡು ಸರಳ ಉದಾಹರಣೆಗಳು. ಮಗು ಅಳುತ್ತದೆ. ತಾಯಿ ಹಾಲೂಡುತ್ತಾಳೆ. ಈಗ ಮಗು ನಗುತ್ತದೆ. ಇಲ್ಲಿ ಮಗುವಿನ ಅಳು ಕಾರಣ, ತಾಯಿ ಹಾಲೂಡುವುದು ಕಾರ್ಯ; ಮುಂದೆ ತಾಯಿ ಹಾಲೂಡುವುದು ಕಾರಣ, ಮಗು ನಗುವುದು ಕಾರ್ಯ. ಮರದಲ್ಲಿ ಕಳಿತ ಹಣ್ಣು ನೇಲುತ್ತಿದೆ. ಇದ್ದಕ್ಕಿದ್ದಂತೆ ತೊಟ್ಟು ತುಂಡಾಗುತ್ತದೆ. ಹಣ್ಣು ಕೆಳಕ್ಕೆ ಕೆಡೆಯುತ್ತದೆ. ಇಲ್ಲಿ ಕೆಡೆತ ಕಾರ್ಯ, ತೊಟ್ಟು ತುಂಡಾಗುವುದು ಕಾರಣ. ಮುಂಜಾನೆ ಆಗಿದೆ. ಕತ್ತಲೆ ಮಾಯ. ಇದು ಕಾರ್ಯ. ಇದರ

ಇನ್ನೊಂದು ಕಾರಣವೆಂದರೆ ಸಾಯಲೊಲ್ಲದೆಯು.

ವಿಶ್ವವ್ಯಾಪಾರಗಳೆಲ್ಲವೂ ಕಾರ್ಯ-ಕಾರಣ ಶೃಂಖಲದಿಂದ ಬಂಧಿತವಾಗಿವೆ. ಯಾವುದೇ ಒಂದು ತಿಳಿದಿರುವಾಗ ಇನ್ನೊಂದರ ಅನುಗತನ ಮುನ್ನ ಮತಿಗೊಂದು ಸವಾಲು. ಇದಕ್ಕೆ ಜವಾಬು ಹುಡುಕುವ ಹಾದಿಯಲ್ಲಿ ನಾಗರಿಕತೆ ಒಂದು ಸೂತ್ರ ಕಂಡುಕೊಂಡಿದೆ: ವಿಶ್ವದಲ್ಲಿ ಕಾರ್ಯರಹಿತ ಕಾರಣ ಅಥವಾ ಕಾರಣರಹಿತ ಕಾರ್ಯ ಇಲ್ಲ. ಜೀವನದ ಪ್ರತಿಯೊಂದು ವಿದ್ಯಮಾನವನ್ನು ಕಾರ್ಯ-ಕಾರಣ ಪಾತಳಿಯಲ್ಲಿ ಅರ್ಥವಿಸುವುದು ಸಾಧ್ಯವಿದೆಯೆಂದು ಅಂಗೀಕರಿಸಿ ತದನುಸಾರ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಮನೋಧರ್ಮವೇ ವೈಚಾರಿಕತೆ.

ಪವಾಡಗಳು ಘಟಿಸುತ್ತವೆ, ಭವಿಷ್ಯವನ್ನು ಕಣಿನುಡಿಯಬಹುದು, ಶೂನ್ಯದಿಂದ ವಸ್ತು ಸೃಷ್ಟಿ ಸಾಧ್ಯ, ವಾಯುಲಘಿಮಾ (levitation) ಸಾಧನೀಯ ಮುಂತಾದ ನಂಬಿಕೆಗಳು ಪೂರ್ತಿ ಅವೈಚಾರಿಕ. ಏಕೆಂದರೆ ನಿಸರ್ಗದ ಆಧಾರಶ್ರುತಿಯಾದ ಕಾರ್ಯ-ಕಾರಣ ಸಂಬಂಧವನ್ನು ಇವು ಉಲ್ಲಂಘಿಸುತ್ತವೆ. ತಿಳಿಯದ ವಿದ್ಯಮಾನವನ್ನು ತಿಳಿಯಲು ಪ್ರಾಮಾಣಿಕ ಪ್ರಯತ್ನ ಹೂಡುವುದು ವೈಚಾರಿಕತೆಯ ಲಕ್ಷಣ, ಪವಾಡಕ್ಕೆ ಶರಣು ಹೋಗುವುದು ಕುರುಡು ನಂಬಿಕೆಯ ಆದ್ದರಿಂದ ಬುದ್ಧಿಮಾಂದ್ಯದ ಚಿಹ್ನೆ:

ಮರದ ಬಂಡೆಗಳೂ ವಿಶ್ವದಲಿ ನೂರಾರು
ಸರಭಾಗದ ಶಿಖರ ಸೃಷ್ಟಿಯಲ್ಲಿಲ್ಲವೇ!
ದಾರಿಕಡೆಯಲಿ ಹಿಡಿಯುತುವಾಕ ದಿಬ್ಬದಿಬ
ಬಾಂಬಾಂಗಿ ಹೊಸತ ಕಾಣುವನು ಅತ್ರಿಸೂನು

ವೈಜ್ಞಾನಿಕತೆ

ಮಾನವಮತಿ ನಿಸರ್ಗದ ಜೊತೆ ಕಾರ್ಯ-ಕಾರಣ ಪಾತಳಿಯಲ್ಲಿ ವೀಕ್ಷಣೆ ಮತ್ತು ಪ್ರಯೋಗಸಹಿತ ವರ್ತಿಸುವಾಗ ಘನಿಸುವ ಅನುಭವ ಮತ್ತು ಅರಿವು ವೈಜ್ಞಾನಿಕತೆ (ವೈಜ್ಞಾನಿಕ ಮನೋಧರ್ಮ scientific temper). ನಿಸರ್ಗದ ಅನಂತ ವೈಭವ, ಅಸಂಖ್ಯ ವಿನ್ಯಾಸ ಮತ್ತು ಪ್ರಶಾಂತ ಗತಿಶೀಲತೆ ಮಾನವನ ಕುತೂಹಲಕ್ಕೆ ಸದಾ ಉತ್ತೇಜಕಗಳು, ಮತ್ತು ಸವಾಲುಗಳು ಕೂಡ. ಕುತೂಹಲಿಯ ಎದುರು ಎದ್ದು ನಿಲ್ಲುವ ಪ್ರಶ್ನೆಗಳಿಗೆ ಕೊನೆಯೇ ಇಲ್ಲ: ಜನನ-ಮರಣ ಚಕ್ರ ಇದೇ ರೀತಿಯಲ್ಲಿ ಸದಾ ಉರುಳುತ್ತಿರುವುದೇಕೆ? ಇದಕ್ಕೆ ಸದೃಶವಾದ ಪರಿಕಾಲಿಕತ್ವವೇ ಅನೇಕ ನೈಸರ್ಗಿಕ ವಿದ್ಯಮಾನಗಳಲ್ಲಿ ಪ್ರಕಟವಾಗುವುದರ ಕಾರಣವೇನು? ಮರದಲ್ಲಿ ಹಣ್ಣಾದ ಎಲೆ ಬಾನಿಗೇಕೆ ನೆಗೆಯುವುದಿಲ್ಲ?

ನಮ್ಮ ಸಾಧಾರಣ ಅನುಭವ ಬಗೆಹರಿಸಲಾರದ ಇಂಥ ಸರಳ ಪ್ರಶ್ನೆಗಳಿಗೆ ಭಗವಂತನ ಇಚ್ಛೆ, ನಿಸರ್ಗ ನಿಯಮ ಅಥವಾ ಅಥಕ ಪ್ರಸಂಗವೆಂಬ ಹಾರಿಕೆ ವಿವರಣೆ ನೀಡುವವರು ವಸ್ತುತಃ ಪಲಾಯನವಾದಿಗಳು. ಭಗವಂತನೇ ಇರಬಹುದು, ಆತ ನನಗೊಂದು ಮಿದುಳು ಪ್ರದಾನಿಸಿದ್ದಾನೆ, ಇದರ ಸದುಪಯೋಗದಿಂದ ನಾನೇಕೆ ಆತನ ಮನದ ಒಳನೋಟ ಗಳಿಸಲು ಪ್ರಯತ್ನಿಸಬಾರದು? ಹೀಗೆ ಯೋಚಿಸಿ ಜ್ಞೇಯ ನಿಷ್ಠವಾಗಿ (objectively) ನಿಸರ್ಗನಿಯಮಾನ್ವೇಷಣೆಗೆ ತೊಡಗು

ವಿವರ: ವಿಜ್ಞಾನಿಗಳು — ವಿಶ್ವ ಕುರಿತ ವಿಶೇಷ, ವಿಶಿಷ್ಟ ಮತ್ತು ಸಮಗ್ರ ಜ್ಞಾನಶೋಧಕರು ಮತ್ತು ಪ್ರತಿಪಾದಕರು.

ವಿಜ್ಞಾನ ಮಂದಿರದ ಮಣ್ಣು, ಮರಳು ಮತ್ತು ಸುಣ್ಣ ಮೂರು ಆಧ್ಯುಕ್ತಿಗಳು (axioms) — ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಒಪ್ಪುವ ಮತ್ತು ಎಂದೂ ಯಾರಿಂದಲೂ ಅಪಾಧುವೆಂದು ರುಜುವಾತಿಸಲಾಗದ ಸ್ವತಸ್ಸಿದ್ಧ ತಥ್ಯಗಳು (Selfevident truths):

೧. ವಿಶ್ವದಲ್ಲಿ ಕ್ರಮವಿದೆ.

೨. ಈ ಕ್ರಮವನ್ನು ಮಾನವಮತಿ ಗ್ರಹಿಸಿ ಅರ್ಥವಿಸಿ ಕಾರ್ಯಕಾರಣ ಪಾತಳಿಯಲ್ಲಿ ವ್ಯಾಖ್ಯಾನಿಸಬಲ್ಲುದು.

೩. "ಭಗವಂತ ಎಂದೂ ದಾಳ ಒಗೆಯುವುದಿಲ್ಲ."

ವಿಶ್ವದಲ್ಲಿ ಕ್ರಮ (order) ಇರುವುದರಿಂದ ಅನ್ವೇಷಣೆಗೆ ಬೆಲೆ ಮಾರ್ಗ ಒದಗುತ್ತದೆ, ಮತ್ತು ಇಂಥ ಅನ್ವೇಷಣೆ ಫಲಪ್ರದವಾಗುತ್ತದೆ. ಮಾನವಮತಿ ಈ ಕ್ರಮವನ್ನು ಗ್ರಹಿಸಿ ಅರ್ಥವಿಸಿದಾಗ ವಿಜ್ಞಾನ (science) ಜನಿಸುತ್ತದೆ, ಮತ್ತು ಪಾರಂಪರಿಕವಾಗಿ ಇದು ತರುವಾಯದ ಪೀಳಿಗೆಗಳಿಗೆ ಲಭ್ಯವಾಗುತ್ತದೆ. ಮೂರನೆಯ ಆಧ್ಯುಕ್ತಿ ಆಲ್ಬರ್ಟ್ ಐನ್‌ಸ್ಟೈನ್ (೧೮೭೯-೧೯೫೫) ಅವರ ಪ್ರಸಿದ್ಧ ಸೂಕ್ತಿ. ಇದರ ಧ್ವನ್ಯರ್ಥ: ನಿಸರ್ಗವೆಂದೂ ಪಕ್ಷಪಾತಿ ಅಲ್ಲ, ಮಾನವನ ಜೊತೆ ಕಪಟ ದ್ಯೂತ ಆಡುವುದಿಲ್ಲ. ಅಂದ ಮೇಲೆ ಮಾನವನಿಂದ ನಿಸರ್ಗಾನ್ವೇಷಣೆ ಎಂಬ ವಿಜ್ಞಾನ ಕ್ರಿಯೆಯಲ್ಲಿ ನಿಸರ್ಗವೇ ಅಂತಿಮ ನಿರ್ಣಾಯಕ.

ಈ ಅನ್ವೇಷಣೆಯಲ್ಲಿ — ಅಂದರೆ ವಿಜ್ಞಾನ ಪ್ರಕ್ರಿಯೆಗಳಲ್ಲಿ — ೬ ವಿವಿಧ ಸೋಪಾನಗಳನ್ನು ಗುರುತಿಸಬಹುದು: ಸಮಸ್ಯಾ ನಿರೂಪಣೆ, ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ, ವಾದರಚನೆ, ಪ್ರಾಯೋಗಿಕ ತಪಾಸಣೆ ಮತ್ತು ಸಿದ್ಧಾಂತ ಮಂಡನೆ. ದತ್ತ ಸಮಸ್ಯೆ ಕುರಿತಂತೆ ವಿಶ್ಲೇಷಿತ ಮಾಹಿತಿಗಳಿಂದ ಸ್ಥಾಪಿಸುವ ತಾತ್ಕಾಲಿಕ ಊಹೆಯೇ ವಾದ (hypothesis). ಪ್ರಾಯೋಗಿಕ ತಪಾಸಣೆಯಲ್ಲಿ ಉತ್ತೀರ್ಣವಾಗುವ ವಾದಕ್ಕೆ ಸಿದ್ಧಾಂತ (theory) ಎಂದು ಹೆಸರು.

ಯಾವುದೇ ಸಿದ್ಧಾಂತ ಅರಳಲು ಹಲವಾರು ತಲೆಮಾರುಗಳ ಕಾಲ ಆಸಕ್ತ ತಜ್ಞರು ಪರಿಶ್ರಮಿಸುತ್ತಲೇ ಇರಬೇಕು. ಪ್ರತಿಯೊಬ್ಬ ವಿಜ್ಞಾನ ವಿದ್ಯಾರ್ಥಿಗೂ ಖಾತ್ರಿ ತಿಳಿದಿರುವ ಒಂದು ತಥ್ಯವಿದೆ: ಸದ್ಯ ಸಿಂಧುವಾಗುವ ಯಾವುದೇ ಸಿದ್ಧಾಂತ ಶಾಶ್ವತ ಸತ್ಯವಾಗಿ ಉಳಿದಿರದು. ಎಂದೇ —

ಸಂದಿರುವ ಕೃತಿಯೊಳಿಲ್ಲವೆಂದಲ್ಲ
ಇಂದು ನಂಬಿದುದೆ ಮುಂದೆಂದುಮೆಂದಲ್ಲ
ಕುಂದು ತೋರ್ದಂದದನು ತಿದ್ದಿಕೊಳ್ಳೆ ಮನಸಿರಲು
ಇಂದಿರೆ ಮತವುಚಿತ ಮಂಕುತಿಮ್ಮ

ಮನಸ್ಸಿನ ಇಂಥ ಒಂದು ಪರಿಪಕ್ವ ಸ್ಥಿತಿಗೆ ವೈಜ್ಞಾನಿಕತೆ ಅಥವಾ ವೈಜ್ಞಾನಿಕ ಮನೋಧರ್ಮ ಎಂದು ಹೆಸರು. ನಮ್ಮ ನಂಬಿಕೆ, ವೃತ್ತಿ, ಆರ್ಥಿಕ ಸ್ಥಿತಿ, ವಯಸ್ಸು ಮುಂತಾದವು ಏನೇ ಇರಲಿ, ಬದುಕಿನ ಸಮಸ್ತ

ಕ್ರಿಯಾಕಲಾಪಗಳಲ್ಲಿಯೂ ವೈಜ್ಞಾನಿಕ ಮನೋಧರ್ಮ ತಳೆಯುವುದರಿಂದ ಬಾಳು ಹಸನಾಗುತ್ತದೆ, ಸಮಾಜ ಶ್ರೇಯೋಪಥದಲ್ಲಿ ಮುನ್ನಡೆಯುತ್ತದೆ.

ಸಮನ್ವಯ

ಮೇಲೆ ವಿವರಿಸಿರುವ ಚತುರ್ಗುಣಗಳು ಪರಸ್ಪರ ಮಧುರ ಮೇಳವನದಲ್ಲಿರಬೇಕು. ಬಹು ಪರಿಪೂರ್ಣ ಮಾನವನಲ್ಲಿ — ಉದಾಹರಣೆಗೆ ಬುದ್ಧ, ಬಸವಣ್ಣ, ಸ್ವಾಮಿ ವಿವೇಕಾನಂದ, ಐನ್‌ಸ್ಟೈನ್ ಮೊದಲಾದ ವ್ಯಕ್ತಿಗಳಲ್ಲಿ — ಇವೆಲ್ಲ ಗುಣಗಳು ಹದವಾಗಿ ಸಮ್ಮಿಳನಗೊಂಡಿರುವುವು:

ಬುದ್ಧನೆಂಬವನೇನು ಸಾಮಾನ್ಯ ಪುರುಷನೇ?
ಬುದ್ಧಿ ಸಂಸ್ಕಾರಕ್ಕೆ ಹೃದಯ ಸಂವೇದನೆಯು
ಬದ್ಧಗೊಂಡಾಗ ವ್ಯಕ್ತಿತ್ವ ಅವತರಿಸುವ ಪರಿ-
ಶುದ್ಧಾತ್ಮ ಪರಿಪಕ್ವ ನರತಿಲಕ ಅತ್ಯನೂನ

ಅತಿರೇಕ ಸ್ಥಿತಿ

ಈ ನಾಲ್ಕು ಗುಣಗಳ ಪೈಕಿ ಒಂದು ಅಥವಾ ಹೆಚ್ಚು ಉಳಿದವನ್ನು ಹತ್ತಿಕ್ಕಿ "ವಿಜೃಂಭಿಸುವುದು" ವಿರಳವಲ್ಲ. ಮಾನವೀಯತೆ ಅತಿರೇಕವಾದಾಗ ವ್ಯಕ್ತಿಯ ಅಸ್ತಿತ್ವ ಮತ್ತು ಅನನ್ಯತೆ ನಾಶವಾಗುತ್ತವೆ. ನೈತಿಕತೆ ಔಚಿತ್ಯದ ಪರಿಧಿದಾಟಿದಾಗ ವ್ಯಕ್ತಿ ಶಾಸ್ತ್ರಾಂಧನಾಗಿ ವರ್ತಮಾನ ಜೀವನವಿಮುಖ ಆಗುತ್ತಾನೆ. ವೈಚಾರಿಕತೆ ಉಗ್ರವಾದಾಗ ಅದು ಶುಷ್ಕ ತರ್ಕವಾಗಿ ವಿಕೃತಿಸುತ್ತದೆ. ವೈಜ್ಞಾನಿಕತೆ ತನ್ನದೇ ಸರ್ವಾಧಿಪತ್ಯ ಎಂದು ಮೆರೆಯುವಾಗ ಪ್ರಪಂಚ ಹಿಂಸ್ರ ಪಶುಗಳ ದಟ್ಟ ಕಾಡಾಗುತ್ತದೆ. ಇಂಥ ಒಂದೊಂದು ಮಾನಸಿಕ ವಿಕೃತಿಗೂ ಬುದ್ಧ್ಯಂಧತೆ ಅಥವಾ ಸಂಕ್ಷೇಪವಾಗಿ ಅಂಧತೆ (fanaticism) ಎಂದು ಹೆಸರು. ನೀತಿ: ಅತಿ ಸರ್ವತ್ರ ವರ್ಜಯೇತ್.

ಧರ್ಮ, ವಿಜ್ಞಾನ

ಬಾಳಬಂಡಿಗೆ ನೂಕುಬಲ ಒದಗಿಸುವ ಹಿಂಗಾಲುಗಳು ವೈಚಾರಿಕತೆ ಮತ್ತು ವೈಜ್ಞಾನಿಕತೆ — ಒಟ್ಟಾಗಿ ವಿಜ್ಞಾನ (science); ಗುರಿ ತೋರಿಸುವ ಮುಂಗಾಲುಗಳು ಮಾನವೀಯತೆ ಮತ್ತು ನೈತಿಕತೆ — ಒಟ್ಟಾಗಿ ಧರ್ಮ (religion). ಐನ್‌ಸ್ಟೈನರ ಸುಪ್ರಸಿದ್ಧ ಸೂಕ್ತಿ ಇವೆರಡರ ಅವಿನಾ ಸಂಬಂಧ ಸ್ಪಷ್ಟಪಡಿಸುತ್ತದೆ: ಧರ್ಮರಹಿತ ವಿಜ್ಞಾನ ಕುಂಟು (ಹೆಳವ), ವಿಜ್ಞಾನರಹಿತ ಧರ್ಮ ಕುರುಡು (ಅಂಧ). ಮೊದಲನೆಯ ಸಂದರ್ಭದಲ್ಲಿ ಗುರಿ ಎಟುಕದು, ಎರಡನೆಯದರಲ್ಲಿ ಹಾದಿ ಕಾಣದು. ಧರ್ಮ-ವಿಜ್ಞಾನ ಸಾಮರಸ್ಯವೇ ಅರ್ಥಪೂರ್ಣ ಗತಿಶೀಲ ಜೀವನದ ಮರ್ಮ.

2-1-2002
ಜಿ. ಟಿ. ನಾರಾಯಣ ರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ
ಮೈಸೂರು ೫೭೦೦೦೯
ದೂರವಾಣಿ ೦೮೨೧ ೫೪೨೭೯

ಜಿ.ಟಿ. ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತಿಪುರಂ ಮೈಸೂರು ೫೭೦೦೦೯
ದೂರವಾಣಿ ೦೮೨೧ ೫೪೨೨೫೯

# ಅಲ್ಲದೆ ನಮ್ಮ ಮನೆ

## ಇದು ನಮ್ಮ ಕಾಲೇಜು

ಮಡಿಕೇರಿ ಸರಕಾರೀ ಕಾಲೇಜನ್ನು (ಸ್ಥಾಪನೆ ೧೯೪೯) ನೆನೆಯುವಾಗ ನನ್ನ ಮನದಲ್ಲಿ ಅನುರಣಿಸುವ ಪುರಂದರವಾಣಿ, "ಅಲ್ಲದೆ ನಮ್ಮ ಮನೆ, ಇಲ್ಲಿ ಬಂದೆ ಇದು ಸುಮ್ಮನೆ." ನಾನು ಮಡಿಕೇರಿಕಾರ. ಜನನ ೧೯೨೬. ವೃತ್ತಿಜೀವನದ (೧೯೪೭-೮೬) ಅತ್ಯಂತ ಫಲಪ್ರದ ಅವಧಿಯನ್ನು (೧೯೫೭-೬೭) ಈ ಕಾಲೇಜಿನಲ್ಲಿ ಅಧ್ಯಯನ-ಅಧ್ಯಾಪನ-ಪ್ರಯೋಗಮಗ್ನನಾಗಿದ್ದು, ಸದಾ ಹೊಸ ಚಿಗುರುಗಳ ಜೊತೆ ಅಂತರವರ್ತಿಸುತ್ತ ಜ್ಞಾನ ಹಾಗೂ ಅನುಭವ ದಿಗಂತವನ್ನು ವಿಸ್ತರಿಸಿಕೊಂಡಿದ್ದೇನೆ. "ಇದು ಅಗಸ್ತ್ಯನ ತಪದ ಮಣೆ ಕಾವೇರಿ ತಾಯ ತವರ್ಮನೆ" ಅಲ್ಲವೇ? ಕನಸು ಕಂಡಿದ್ದೇನೆ, ಅದು ನನಸಾದ ಸುಖ ಉಂಡಿದ್ದೇನೆ. ಇಂದು (೨೦೦೨) ನಾನು ಏನಾಗಿದ್ದೇನೆ ಅದರ ಬೀಜ ಮೊಳೆತು ಸಸಿಯಾದದ್ದು ಅಂದು. ಬೇಂದ್ರೆಯವರ ಮಾತುಗಳಲ್ಲಿ—

ನಾಳೆ ಎಂಬುವದು ನಿನ್ನಿನ ಮನಸು
ಮುಂದೆ ಎಂಬುವದು ಇಂದಿನ ಕನಸು.
ಭೂತದಿಂದಲೇ ಭಾವವು ಬಂತು
ಭಾವವಿಲ್ಲದೇ ಉದ್ಭವವೆಂತು?

ನಮ್ಮ ಕಾಲೇಜಿನ ಬಗ್ಗೆ "ಎನ್‌ಸಿಸಿ ದಿನಗಳು" ಪುಸ್ತಕದಲ್ಲಿ ಬರೆದಿದ್ದೇನೆ (೧೯೭೨, ೯೬), "ಊರ ಹೊರಗಿನ ಎತ್ತರ ದಿಬ್ಬದ ಮೇಲಣ ಭವ್ಯ ಸೌಧ ನಮ್ಮ ಕಾಲೇಜು. ಹಸುರು ಕತ್ತಲಿನ ನಡುವಿನ ದೀಪಸ್ತಂಭ ನಮ್ಮ ಕಾಲೇಜು. ತಿಳಿನೀಲ ಆಗಸದ ಪರದೆಯ ಮೇಲೆ ಕಲಂಚಿಸಿರುವ ಚಿತ್ರಕಲೆ ನಮ್ಮ ಕಾಲೇಜು. ದಿನ ದಿನ ಅದರೆಡೆಗೆ ನಡೆದು ಹೋಗುವಾಗ ನಮ್ಮ ಕಾಲುಗಳಿಗೆ ಅಧಿಕ ವೇಗೋತ್ಕರ್ಷ ನೀಡುತ್ತಿದ್ದುದು ಅದರ ಆಕರ್ಷಣಾ ಬಲ. ಅದರ ಆಶ್ರಯದಲ್ಲಿದ್ದುದರಿಂದ ನಮಗೆ ಸ್ಥಾನ, ಮಾನ, ಗೌರವ. ನಮ್ಮ ವಿವಿಧ ಅನ್ವೇಷಣೆಗಳಿಗೂ ಅದೊಂದು ಅನುಕೂಲ ಪ್ರಯೋಗಮಂದಿರ. ಮಾನವ ಗತಿವಿಜ್ಞಾನದ ನಿಯಮಗಳನ್ನು ಅಲ್ಲಿ ಕಲಿತು ಪ್ರಯೋಗಿಸಿದಂತೆ ಬೇರೆಲ್ಲಿಯೂ ನನಗೆ ಮಾಡಲಾಗಲಿಲ್ಲ."

ಇಸವಿ ೧೯೫೭. ಅಲ್ಲಿಯ ತನಕ ಸ್ನಾತಕಪೂರ್ವ ಕಾಲೇಜಾಗಿದ್ದು ಪಟ್ಟಣದ ಸೆಂಟ್ರಲ್ ಹೈಸ್ಕೂಲ್ ಆವರಣದಲ್ಲಿ ಕ್ರಿಯಾಶೀಲವಾಗಿದ್ದ ನಮ್ಮ ಕಾಲೇಜು ಆಗ ಸ್ನಾತಕ ಅಂತಸ್ತಿಗೆ ಬಡ್ತಿ ಪಡೆದು ಪೇಟೆಯಿಂದ ದೂರದಲ್ಲಿರುವ ಗಾಳಿಬೀಡಿನ ದಿಬ್ಬದ ಮೇಲಿನ ಸ್ವಂತ ಸೌಧದಲ್ಲಿ ಪ್ರತಿಷ್ಠಾಪಿತವಾಯಿತು. ನಿಸರ್ಗದ ರುದ್ರ ಬಲಗಳೂ ಯುವಕ ಯುವತಿಯರ ಭವ್ಯ ಆಸಕ್ತಿಗಳೂ ಶಿಕ್ಷಕವೃಂದದ ಜ್ಞಾನಬದ್ಧ ಉಲ್ಲಾಸ ಉತ್ಸಾಹಗಳೂ ಅಲ್ಲಿ ಪರಿಭವಿಸಿದುವು, ನೂತನ ಪರಿಸರ ಮತ್ತು ಪರಿವೇಷ ಅರಳಿ ಬೆಳಗಿದುವು — "ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿವುದೇ? ...... ಇಲ್ಲಿಲ್ಲವುಳಿವುದೇ!" (ಮಂಜೇಶ್ವರ)

## ಮನೆಯ ಗೂಡು ಹೊಕ್ಕ ಮನ

ಆ ವೇಳೆಗಾಗಲೇ ನಾನು ೬ ವರ್ಷ ಮದ್ರಾಸು ಮತ್ತು ಮಂಗಳೂರು ಕಾಲೇಜುಗಳಲ್ಲಿ ಗಣಿತೋಪನ್ಯಾಸಕನಾಗಿ ಸೇವೆ ಸಲ್ಲಿಸಿ ತಕ್ಕಷ್ಟು ಅನುಭವ ಗಳಿಸಿದ್ದೆ. ಅದೇ ಹಿಂದಿನ ವರ್ಷ (೧೯೫೧-೫೭) ಎನ್‌ಸಿಸಿ

ಅಧಿಕಾರಿಯಾಗಿಯೂ ಕೆಲಸ ಮಾಡಿದ್ದು. ಹೊಸದಾಗಿ ನೇಮಕಗೊಂಡಿದ್ದ ನನ್ನ ಸಹಶಿಕ್ಷಕರೆಲ್ಲರೂ ಮೂವತ್ತರ ಆಸುಪಾಸಿನವರು. ಪ್ರಾಂಶುಪಾಲ ಕೆ.ಪಿ. ಅಚ್ಯುತನ್ ಪಿಳ್ಳೈಯವರು ಧೀಮಂತ, ಗುಣವಂತ ಮತ್ತು ಆದರ್ಶಪ್ರಾಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಂತೂ ಅಭಿಮಾನ ಹುಮ್ಮಸ್ಸಿನ ಬುಗ್ಗೆಗಳು. ನಾನೋ? "ತಂಗಾಂ ಲಂಘನ ಮಾಡೀ ಗಿರಿ!"

ಆ ಸರಸ್ವತೀ ಮಂದಿರದಲ್ಲಿ ನಾನಿದ್ದ ೧೧ ವರ್ಷ (೧೯೫೨-೬೨) ನನ್ನ ಜನ್ಮದತ್ತ ಉತ್ಸಾಹ ಮೂರು ಪ್ರಮುಖ ಮತ್ತು ಪೂರಕ ಕಾಲಗಳಲ್ಲಿ ಪ್ರವಹಿಸಿ ಭವಿಷ್ಯ ಜೀವನಕ್ಕೆ ಭದ್ರ ಬುನಾದಿ ಹಾಕಿತು. ಅವಕಾಶಗಳು ವ್ಯಕ್ತಿಯ ಇಚ್ಛಾನುಸಾರ ಬರುವುದಿಲ್ಲ. ಆದರೆ ಬಂದವನ್ನು ಆತ ವಿನಯದಿಂದ (ಸ್ವಹಿತಕ್ಕೂ) ಸಮಾಜೋನ್ನತಿಗಾಗಿ ಸದ್ವಿನಿಯೋಗಿಸಬೇಕು. ಇದೊಂದೇ ಆತನ ವ್ಯಕ್ತಿತ್ವವನ್ನು ಉದ್ದೀಪಿಸುವ ಮತ್ತು ಭವಿಷ್ಯಪಥವನ್ನು ನಿರ್ಧರಿಸುವ ವಿಧಾನ.

ಬದುಕು ಜಟಕಾಬಂಡಿಯುರುಳಾಟ ನಯವಲ್ಲ
ಎದುರಾದ ತೊಡಕುಗಳನದಟಿನಿಂ ಪರಿಹರಿಸು
ಸದಸದ್ವಿವೇಕವನು ಕಳೆದುಕೊಳ್ಳದೆ ಸಾಗಿ
ನದಿ ಹರಿವನನುಸರಿಸಿ ಬಾಳಲೋ ಅತ್ರಿಸೂನು

<u>ಪಾಠ ಪ್ರವಚನಗಳು</u>

ಮೊದಲನೆಯ ಹಾಗೆ ಸ್ನಾತಕಪೂರ್ವ ಮತ್ತು ಸ್ನಾತಕ ತರಗತಿಗಳಿಗೆ ವಿವಿಧ ಗಣಿತ ವಿಭಾಗಗಳ ಬೋಧನೆ. ವೃತ್ತಿ ಜೀವನಾರಂಭದಲ್ಲೇ (೧೯೪೨) ನಾನು ವಿಧಿಸಿಕೊಂಡಿದ್ದ ಒಂದು ಶಿಸ್ತು, "ನಿನಗೆ ನಿನ್ನ ಉತ್ಕೃಷ್ಟ ಗುರು ಏನಾಗಿದ್ದರೋ ಅವರಿಗಿಂತ ಉತ್ತಮ ಗುರು ನೀನು ನಿನ್ನ ಶಿಷ್ಯರಿಗಾಗಬೇಕು." ಈ ದಿಶೆಯಲ್ಲಿ ನಾನು ಗಣಿತ ಪಾಠವನ್ನು ಪಠ್ಯಪಟ್ಟಿಯ ಅಥವಾ ಪಾಠ ಪುಸ್ತಕದ ಇಕ್ಕಟ್ಟು ವಲಯಕ್ಕೆ ಸೀಮಿತಗೊಳಿಸದೇ ಮತ್ತೂ ಮುಂದಕ್ಕೆ ಹೋಗಿ ಗಣಿತೇತಿಹಾಸ, ಪರಿಕಲ್ಪನೆಗಳ ಕಾಲಾನುಗುಣ್ಯ ವಿಕಾಸ, ಗಣಿತವಿದರ ಜೀವನ ಚರಿತ್ರೆ ಮುಂತಾದ ಉದ್ಬೋಧಕ ವಿಷಯಗಳಿಗೂ ವಿಸ್ತರಿಸುತ್ತಿದ್ದೆ. ಶಿಕ್ಷಣ ಮಾಧ್ಯಮ ಇಂಗ್ಲಿಷ್. ಆದರೆ ಕನ್ನಡದಲ್ಲಿ ಸಾರ ವಿವರಿಸಿ ಬಳಿಕ ಇಂಗ್ಲಿಷಿನಲ್ಲಿ ಪಾಠ ಮಾಡುತ್ತಿದ್ದುದು ನನ್ನ ಕ್ರಮ. ಹೀಗಾಗಿ ಗಣಿತದ ಆಕರ ಗ್ರಂಥಗಳ ಜೊತೆಗೆ ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯ ಎರಡನ್ನೂ ಅಭ್ಯಸಿಸಿದೆ. ನಮ್ಮ ಕಾಲೇಜಿನ ಗ್ರಂಥಾಲಯ ಅಂದು ಯುವ ವಿಶ್ವವಿದ್ಯಾಲಯವನ್ನೂ ಕರುಬುವಂತೆ ಸದಾ ಸರ್ವ ಸನ್ನದ್ಧವಾಗಿತ್ತು. ಗ್ರಂಥಪಾಲ್ ಎಚ್. ಟಿ. ಲಕ್ಷ್ಮಯ್ಯನವರ ಸಹನೆ, ಶ್ರದ್ಧೆ ಮತ್ತು ಆಸಕ್ತಿ ವೈಶಾಲ್ಯ ಅಸೀಮವಾದದ್ದು. ಉನ್ನತ ಗಣಿತ ಸಂಶೋಧನೆಯತ್ತ ನನ್ನ ಒಲವು ಹರಿಯಲಿಲ್ಲ.

ಅಂದಿನ ಯುವ ಪ್ರತಿಭೆಗಳು ತರಗತಿಗಳಲ್ಲಿ ಎತ್ತಿದ ಹಲವಾರು ಮೂಲಭೂತ ಸಂದೇಹಗಳು ನನಗೆ ಹೊಸ ಹಾದಿ ತೋರಿಸಿವೆ. ಮಾದರಿ ಪ್ರಶ್ನೆಗಳು: "ಖುದ್ದು ಬಾನಿನಲ್ಲೇ ನಕ್ಷತ್ರ ಚಿತ್ರಗಳನ್ನು ತೋರಿಸಿ ವಿವರಿಸಬಲ್ಲಿರಾ?" "ವಾರದಲ್ಲಿ ೭ ದಿವಸಗಳೇ ಏಕೆ?" "0÷0 ಏಕೆ ೧ ಅಲ್ಲ?" "ವಿಜ್ಞಾನ ಧರ್ಮಾಧೀನವಾಗಿರಬೇಕೇ ಅಥವಾ ಧರ್ಮ ವಿಜ್ಞಾನಾಧೀನವಾಗಿರಬೇಕೇ?" "ಧೂಮಕೇತು ಮತ್ತು ಗ್ರಹಗ

ವಿಪತ್ತುನಾಟಕಗಳೇ?" "Scientific temper ಎಂದರೇನು?" ತರುವಾಯದ ವರ್ಷಗಳಲ್ಲಿ ನಾನು ಬರೆದ ಲೇಖನಗಳಿಗೂ ಪುಸ್ತಕಗಳಿಗೂ ಬೀಜಾವಾಪನೆಯಾದದ್ದು ಅಂದು, ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಂದ ಎನ್ನಲು ನನಗೆ ಹೆಮ್ಮೆಯಾಗುತ್ತದೆ.

ಎನ್‌ಸಿಸಿ ಕಮಾಂಡು

ಮೊದಲ ವರ್ಷ ಪ್ರಾಂಶುಪಾಲರು ಕಾಲೇಜಿನ ಸಮಾಜಸೇವಾ ಘಟಕ ನಿರ್ವಹಣೆಯ ಹೊಣೆಯನ್ನು ನನಗೆ ವಹಿಸಿದರು. ವಿದ್ಯಾರ್ಥಿ ಸ್ವಯಂಸೇವಕರನ್ನು ಮುಂದಿಟ್ಟುಕೊಂಡು ಹರಿಜನಕೇರಿಯಲ್ಲಿ (ಸಿದ್ದಾಪುರ ರಸ್ತೆ, ಬಳಿ) ವಯಸ್ಕ ಶಿಕ್ಷಣ, ಶುಚಿತ್ವ-ನೈರ್ಮಲ್ಯ ಕುರಿತು ಪ್ರಾಯೋಗಿಕ ತರಗತಿಗಳು, ಗ್ರಾಮ ವಿದ್ಯುದೀಕರಣ, ಮಕ್ಕಳನ್ನು ಶಾಲೆಗೆ ದಾಖಲಿಸುವುದು ಮುಂತಾದ ರಚನಾತ್ಮಕ ಕಾರ್ಯಗಳನ್ನು ಮಾಡಿದೆವು. ಆ ಕಾಲೇಜು ವರ್ಷ (೧೯೭೩-೭೪) ಮುಗಿಯುವ ವೇಳೆಗೆ ನಮ್ಮ ಕಾಲೇಜಿಗೆ ಸೀನಿಯರ್ ಡಿವಿಶನ್ ಎನ್‌ಸಿಸಿ ಮಂಜೂರಾಯಿತು. ಕೊಡಗಿನ ಎಲ್ಲ ಪ್ರೌಢಶಾಲೆಗಳಲ್ಲಿಯೂ ಆ ಮೊದಲೇ ಜೂನಿಯರ್ ಡಿವಿಶನ್ ಘಟಕಗಳಿದ್ದುವು. ಇವೆಲ್ಲವನ್ನು ಕೇಂದ್ರ ಸರ್ಕಾರ ಸಮಾವೇಶಗೊಳಿಸಿ ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿಯನ್ನು ಸ್ಥಾಪಿಸಿತು (೧೯೭೪). ನಮ್ಮ ಕಾಲೇಜನ್ನು ಸೇರುವ ಮೊದಲೇ ನಾನು ಎನ್‌ಸಿಸಿ ಶಿಕ್ಷಣ ಪಡೆದಿದ್ದುದರಿಂದ ಈ ಕಂಪೆನಿಯಲ್ಲಿ ಹಿರಿಯ ಎನ್‌ಸಿಸಿ ಅಧಿಕಾರಿಯಾಗಿ ನೇಮಕಗೊಂಡೆ. ಎನ್‌ಸಿಸಿ ಅಧಿಕಾರಿಯಾಗಿ ಒಟ್ಟು ೧೨ ವರ್ಷ (೧೯೭೭-೮೯) ಕೆಲಸಮಾಡಿದ್ದೆ. ಈ ಹಿಂದೆ ಉಲ್ಲೇಖಿಸಿದ "ಎನ್‌ಸಿಸಿ ದಿನಗಳು" ಪುಸ್ತಕದಲ್ಲಿ ಆ ಅನುಭವಗಳ ಸಾಹಿತ್ಯಕ ನಿರೂಪಣೆ ಇದೆ.

ಸಹಕಾರ ಸಂಘ

ಮೂರನೆಯ ಶಾಖೆ ಕಾಲೇಜ್ ಸಹಕಾರ ಸಂಘದ ಸ್ಥಾಪನೆ. ಕಾಲೇಜೊಂದು ಏಕಾಂತ ದ್ವೀಪ, ಪೇಟೆಗೂ ಇದಕ್ಕೂ ನಡುವೆ ಕೆಲವು ಖಾಸಗಿ ಮನೆಗಳು ಬಿಟ್ಟರೆ ಬಹುತೇಕ ನಿರ್ಜನ, "ನೀಂ ನಡೆದು ನೋಡು ಕೊಡಗಿನ ಚೆಲುವಂ" ಒಂದೇ ಸಂಚಾರ ಸೌಕರ್ಯ! ಹಾಗಾದರೆ ವಿದ್ಯಾರ್ಥಿಗಳಿಗೆ ಅಗತ್ಯವಾದ ಪಠ್ಯಪುಸ್ತಕಗಳನ್ನು ಲೇಖನ ಸಾಮಗ್ರಿಗಳನ್ನು ಕಾಲೇಜಿನಲ್ಲೇ ಒದಗಿಸುವ ಬಗೆ ಏನು? ಅದು ಕಾಲೇಜಿನ ಹೊಣೆ ಅಲ್ಲವೇ?

ವಿದ್ಯಾರ್ಥಿಗಳ ಸಹಕಾರ ಸಂಘ ಸ್ಥಾಪನೆಯೇ ಯುಕ್ತ ಪರಿಹಾರ ಎಂದು ಪ್ರಾಂಶುಪಾಲರು ನಿರ್ಧರಿಸಿದರು. ಅದೇ ಫೆಬ್ರವರಿಯಲ್ಲಿ (೧೯೭೪) ನೋಂದಾಯಿತವಾದ "ಕೂರ್ಗ್ ಗವರ್ನ್‌ಮೆಂಟ್ ಕಾಲೇಜ್ ಕೋಆಪರೇಟಿವ್ ಸ್ಟೋರ್ಸ್ ಲಿಮಿಟೆಡ್" ಸಂಸ್ಥೆಗೆ ಪ್ರಾಂಶುಪಾಲರು ಪದನಿಮಿತ್ತ ಅಧ್ಯಕ್ಷರು, ಅವರು ನನ್ನನ್ನು ಗೌರವ ಕಾರ್ಯದರ್ಶಿಯಾಗಿ ನಾಮಕರಣ ಮಾಡಿದರು. ಅಂದಿನ ನನ್ನ ಮನಃಸ್ಥಿತಿ ಏನು? ಮನ ಉಂಟು, ಮಾರ್ಗ ತಿಳಿದಿಲ್ಲ; ಉತ್ಸಾಹ ಉಂಟು, ಬಂಡವಾಳವಿಲ್ಲ; ಆರ್ಜವ ಉಂಟು, ವ್ಯಾಪಾರ ಕೌಶಲ ಗೊತ್ತಿಲ್ಲ!

ಮುಂದಿನ ೯ ವರ್ಷ — ಅಂದರೆ ೧೯೮೨ರಲ್ಲಿ ವರ್ಗವಾಗಿ ಹೋಗುವ ವರೆಗೆ — ನಾನು ಗಳಿಸಿದ ಜೀವನಾನುಭವ ಅಪಾರ.

"ಸವಾಲನ್ನು ಎದುರಿಸುವ ಛಲ" ಎನ್ನುವ ಪುಸ್ತಕದಲ್ಲಿ ನಿರೂಪಿಸಿದ್ದೇನೆ ([illegible], 2000). ಇಂದಿನ (2010) ಅನುಕೂಲ ಮುಂಚಿಕೆಯುಳ್ಳ ನಡೆದು ಬಂದ ದಾರಿಯನ್ನು ನಿರಪೇಕ್ಷವಾಗಿ ಸಿಂಹಾವಲೋಕಿಸಿದರೆ ಮೂಡುವ ಭಾವ:

ದಾರಿಗಾ! ಪಥ ದತ್ತವಾಗಿಲ್ಲ! ನೀನಡೆದು
ತೋರು ನವ ವೃಕ್ಷಗಳನೆಲ್ಲೆಯೂ ತುಂಗದಿರು
ಯಾರಿಗೂ ಬಾಗದಿರು ಬದ್ಧನಾಗಿರು ಮಾತಕೆ
ಹಾರಲಾಗದ ಕಮರಿಯೇ ಇರದು ಅತ್ರಿಸೂನು

ಪುಣ್ಯ ಪುರುಷನ ಹಠಾತ್ ನಿರ್ಗಮನ

ಪ್ರಾಂಶುಪಾಲ ಕೆ.ಪಿ. ಅಚ್ಯುತನ್ ಪಿಳ್ಳೈ ವಿದ್ವತ್ತು, ಮಾನವೀಯತೆ, ಮತ್ತು ದಕ್ಷತೆ ಸಂಗಳಿಸಿ ವ್ಯಕ್ತಿತ್ವ ಸಭ್ಯ ಸುಸಂಸ್ಕೃತ ವ್ಯಕ್ತಿತ್ವದವರು, "ಮನ್ನಿಸ ಮನದಲಿ ಹೊನ್ನಿನ ಬೆಳೆಯುವ ಅಪೂರ್ವ ತೇಜದ ಮಾಂತ್ರಿಕ." ವಿದ್ಯಾರ್ಥಿಗಳ ಶೈಕ್ಷಣಿಕ, ದೈಹಿಕ ಮತ್ತು ನೈತಿಕ ಅಭ್ಯುದಯಕ್ಕೆ ಅವರದ್ದು ಒಂದೊಂದು ಹೆಜ್ಜೆಯೂ ಸಿಂಹನಡೆಯೇ. ಕ್ರೀಡೆ, ಸಮಾಜಸೇವೆ, ಸಹಕಾರ ಸಂಘ, ದುಡಿ-ಗಳಿಸು ಯೋಜನೆ, ಎನ್‌ಸಿಸಿ ದಳ, ವಿದ್ಯಾರ್ಥಿ ಸಂಘ ಎಲ್ಲವೂ ಅವರ ಕಲ್ಪನೆಯ ಶಿಶುಗಳು. ಕಾಲೇಜಿಗೆ ಅಸ್ಮಿತೆ (pride in self) ಮತ್ತು ಅನನ್ಯತೆ ಒದಗಿಸುವ ಧ್ಯೇಯವಾಗಿ ಪ್ರತಿ ಮುಂಜಾನೆ, ತರಗತಿ ಆರಂಭವಾಗುವ ಮೊದಲು, ವಾತ್ಸಲ್ಯಪ್ರಧಾನ ಸಾಮೂಹಿಕ ಪ್ರಾರ್ಥನೆ ಏರ್ಪಡಿಸಿದರು. ಆ ಸಾಲುಗಳ ಒಂದು ಮಾದರಿ:

ಓಂ ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಮೃತಂಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ

"Where the mind is without fear and the head is held high; ........ This is my prayer to thee my lord — Strike, strike at the root of penury in my heart..... to thy will with love (36, 37)." (Gitanjali)

ಮಾರಕ್ಕಮ್ಮ ಅವರು ನೀಡುತ್ತಿದ್ದ ನೀತಿಪ್ರಧಾನ ಉಪನ್ಯಾಸಗಳು ಉದ್ದೀಪಕಗಳೂ ಉದ್ಬೋಧಕಗಳೂ ಆಗಿದ್ದುವು. ನಡೆನುಡಿ ಬಗೆಗಳಲ್ಲಿ ಅವರು ಮಂಕುತಿಮ್ಮ-ನಿಗೆ ಬರೆದ ಜೀವಂತ ಭಾಷ್ಯವಾಗಿದ್ದರು:

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಡನೊಂದಾಗು ಮಂಕುತಿಮ್ಮ

ಮಹಾಕಾವ್ಯದಿಂದ ತೊಡಗಿ ಕಿರುಕಥನದ ವರೆಗೆ ಮಂಥರೆ, ಶಕುನಿ ಅಥವಾ ಕ್ಯಾಶಿಯಸ್ ಸದೃಶ ಪಾತ್ರಗಳಿಲ್ಲದಿದ್ದರೆ ವೃತ್ತಿಯ ಪಾವಿತ್ರ್ಯ ಪ್ರಕಟವಾಗುವುದು ಹೇಗೆ! ಮೇಲೆ ಉಲ್ಲೇಖಿಸಿರುವ ಮಂಕುತಿಮ್ಮ ವಾಗಿಯೂ ನಿಷೇಧ ರೂಪಿಗಳವರು. ನಮ್ಮ ಕಾಲೇಜಾದರೂ ಅಪವಾದ

ಆಗಿರಲಿಲ್ಲ.

೧೯೫೨, ಪ್ರಾಯಶಃ ಆಗಸ್ಟ್ ಕೊನೆ. ಸ್ನಾತಕ ಕಾಲೇಜಿನ ಪ್ರಥಮ ಶೈಕ್ಷಣಿಕ ವರ್ಷ. ಸ್ವಂತ ಗೃಹದಲ್ಲಿ ನವ ಹರ್ಷ. ಹೊರಗೆ ಮುಸಲ ವರ್ಷ. ಅಂಥ ಒಂದು ಸಂಜೆ ಕಾಲೇಜು ವಿದ್ಯಾರ್ಥಿ ಸಂಘದ ಉದ್ಘಾಟನೆ. ಕೊಡಗು ರಾಜ್ಯದ (ಅಂದು ಕೊಡಗು ಪ್ರತ್ಯೇಕ ರಾಜ್ಯವಾಗಿತ್ತು) ವಿದ್ಯಾಮಂತ್ರಿ ಮುಖ್ಯ ಅತಿಥಿ. ಕಾಲೇಜಿನ ಸರ್ವಾಂಗ ಸುಂದರ ಅಭಿವೃದ್ಧಿಗೆ ಅಹರ್ನಿಶಿ ಶ್ರಮಿಸಿದ ಈ ಮಹಾಶಯ ತನ್ನ ಶಿಲ್ಪದ ಜೀವಂತ ರೂಪವನ್ನು ನೋಡಿ ಹರ್ಷಿಸಲು ಬರುವ ಶಿಲ್ಪಿಯಂತಿದ್ದರು.

ಸಂಜೆ ೪ ಗಂಟೆ. ತರಗತಿಗಳು ಮುಗಿದು ಎಲ್ಲರೂ ಸಭಾಭವನದಲ್ಲಿ ಸೇರಬೇಕಾಗಿತ್ತು. ಗಂಟೆ ಬಾರಿಸಿತು. ಜೇನುಗೂಡಿನಲ್ಲಿ ವಿದ್ಯುತ್ಸಂಚಾರವಾಯಿತು. ಮಂತ್ರಿ ಯಾವುದೇ ಕ್ಷಣ ಪ್ರತ್ಯಕ್ಷರಾಗಬಹುದು. ಪ್ರಾಂಶುಪಾಲರ ಹಿರಿತನದಲ್ಲಿ ನಾವೆಲ್ಲರೂ ಹೊರಗೆ ಕಾದು ನಿಂತೆವು. ದೂರದಲ್ಲಿ ಸುತ್ತ ಬಳಸಿ ಏರಿ ಬರುತ್ತಿದ್ದ ಸರ್ಪಿಲ ಮಾರ್ಗದತ್ತ ನೋಟ ಬೀರಿದೆವು. ಅಗೋ! ಆ ತಿರುಗಾಸನ್ನು ದಾಟಿ ಮಂತ್ರಿಯವರ ಕಾರ್ ಬಂದಿತು. ಆದರೆ ಅಲ್ಲೇ ತುಸುಕಾಲ ನಿಂತಿತು?

ಇತ್ತ ಕಾಲೇಜ್ ವಿದ್ಯಾರ್ಥಿಗಳ ಒಂದು ದಂಡು ಸಭೆಗೆ ಹಾಜರಾಗದೆ ಪ್ರವಾಹರೂಪದಲ್ಲಿ ಪೇಟೆಯತ್ತ ದೌಡಾಯಿಸುತ್ತಿರುವುದು ನಮಗೆ ಕಂಡಿತು. ಎಂಥ ಪ್ರಮಾದ, ಕಾಲೇಜ್ ಬಿಂಬಕ್ಕೆ ಕಳಂಕ ಎಂದು ಬಡಬಡಿಸುತ್ತಿದ್ದಾಗಲೇ ಕಾರ್ ಚಲಿಸಿತು, ಮರುಕ್ಷಣ ನಮ್ಮೆದುರು ಬಂದು ನಿಂತಿತು. ಪ್ರಾಂಶುಪಾಲರೂ ಅವರ ಜೊತೆ ನಾವೆಲ್ಲರೂ ಮಂತ್ರಿಯವರನ್ನು ಆದರದಿಂದ ಸ್ವಾಗತಿಸಿದೆವು.

ಆದರೆ ಮಂತ್ರಿ ರುದ್ರಾವತಾರ ತಳೆದಿದ್ದರು, ನಮಗೆಲ್ಲರಿಗೂ ಅನ್ವಯಿಸುವಂತೆ ಪ್ರಾಂಶುಪಾಲರಿಗೆ ಇಂಗ್ಲಿಷಿನಲ್ಲಿ ಸಹಸ್ರನಾಮಾರ್ಚನೆ ಮಾಡಿದರು. ಸಾರ, "ಇಂಥ ಬಾಲಿಶ್ಯ ಹೀನ ಅಸಭ್ಯ ವಿದ್ಯಾರ್ಥಿಗಳ ಶಿಕ್ಷಣರಂಗ ಈ ಕಾಲೇಜ್ ಎಂದಾದರೆ, ನೀವು ಇಂಥ ಮರ್ಯಾದೆಗೆಟ್ಟ ಅಯೋಗ್ಯರ ಗುರುಗಳೆಂದಾದರೆ ಇದು ವಿದ್ಯಾಮಂದಿರವಲ್ಲ, ಕಸಾಯಿಖಾನೆ?

ಪ್ರಾಂಶುಪಾಲರು ಅತ್ಯಂತ ಸಹನೆ ಸಂಯಮ ಸಹಿತ ಮಂತ್ರಿಯವರಿಗೆ ಸಮಾಧಾನ ಮಾತು ಹೇಳಿ, ವಿನಯಪೂರ್ವಕವಾಗಿ, "ಒಳಗೆ ಬನ್ನಿ, ಉದ್ಘಾಟಿಸಿ — ಹೆಚ್ಚಿನ ವಿದ್ಯಾರ್ಥಿಗಳೂ ನಾವೆಲ್ಲರೂ ಕಾದಿದ್ದೇವೆ. ನಮ್ಮ ಆತಿಥ್ಯ ಸ್ವೀಕರಿಸಿ" ಎಂದು ಬೇಡಿಕೊಂಡರು.

"ಇಲ್ಲಿ ನೀವಿರುವ ತನಕ ಈ ಕಾಲೇಜಿನೊಳಗೆ ಕಾಲಿಡಲಾರೆ" ಎಂದು ಧಿಕ್ಕರಿಸಿ ಹೊರಟೇ ಹೋದರು.

ಕ್ಷಣಿಕ ಉದ್ವೇಗವೇ? ಮಂಥರೆ ತಂತ್ರದ ಮೊದಲ ಸಾಲೆಯೋ!

ಸಭೆಯಂತೂ ಪರಮಾಸ್ತಾಯಿತು. ವೈಸೂಂನ ಇಂದ್ರಭವನದಿಂದಲೇ ತರಿಸಿದ್ದ ತಿಂಡಿತೀರ್ಥ? ಯಾಂತ್ರಿಕವಾಗಿ ಉಪಾಹಾರ ಕೊಠಡಿಯಲ್ಲಿ ಪ್ರಾಂಶುಪಾಲರ ಸುತ್ತ ಆಸೀನರಾದೆವು. ಕವಳ ಮೆಲ್ಲುತ್ತಿದ್ದಂತೆ ಕಳವಳ ಮುರಿದು ಮಾತು ಹೊಮ್ಮಿತು. ಬಿಸಿನೆತ್ತರಿನ ತರುಣ ಶಿಕ್ಷಕರು ಮಂತ್ರಿ ವರ್ತನೆಯನ್ನು ಮನಸ್ವೀ ಖಂಡಿಸಿದರು. ಸಾರಾಂಶ: "ವಿದ್ಯಾರ್ಥಿಗಳು

ಸಭೆಗೆ ಹಾಜರಾಗದೇ ಹೋದದ್ದು, ಮಂತ್ರಿ ಕಾರಿಗೆ ಮುತ್ತಿಗೆ ಹಾಕಿ, ಅವರೂ ಧನಿ ಅಸಭ್ಯವಾಗಿ ನಡೆದುಕೊಂಡದ್ದು ಎಲ್ಲವೂ ಘೋರ ಅಪರಾಧ. ಆದರೆ ಮಂತ್ರಿಯವರ ಹೀನ ವರ್ತನೆ ಮಾತ್ರ ಅಕ್ಷಮ್ಯ – ಅಧಿಕಾರದ ಅಮಲು."

ಪ್ರಾಂಶುಪಾಲರು ಗಂಭೀರ ಮಾನವ. ಆದರೆ ಮಾತು ವೈಯುಕ್ತಿಕ ನಿಂದನೆಯ ಕಡೆಗೆ ಜಾರುತ್ತಿದ್ದುದನ್ನು ಗಮನಿಸಿ ಸಂಭಾಷಣೆಗೆ ಮುಕ್ತಾಯ ಹಾಡಿದರು, "ವಿದ್ಯಾರ್ಥಿಗಳಿಗೆ ನಾವು ತಿಳಿಯಹೇಳಬಹುದು, ಆದರೆ ಅಂಕುಶ ಹಾಕಿ ಹಿಡಿದಿಡುವುದು ತಪ್ಪು. ಅಲ್ಲದೇ ಸಾರ್ವಜನಿಕ ಮನ್ನಣೆಯನ್ನು ಒಬ್ಬಾತ ಸೇವೆಯಿಂದ ಗಳಿಸಬೇಕೇ ಹೊರತು ಆದೇಶದಿಂದ ವಿಧಿಸುವುದಲ್ಲ." ಮಂಥರೆಯ ಅನುಪಸ್ಥಿತಿಯಲ್ಲಿ ಇದು ನಡೆದುವಲ್ಲ.

ಅದೇ ರಾತ್ರಿ ನನ್ನ ಮನೆಗೆ ನಾಗರಿಕ ಪೋಷಾಕಿನಲ್ಲಿದ್ದ ಒಬ್ಬ ಪೋಲೀಸ್ ಅಧಿಕಾರಿ ಬಂದ. ಆತ ನನಗೆ ಪರಿಚಿತ. ಆದರೂ ಅವೇಳೆ, ಅಸ್ಥಳ! ಮಂತ್ರಿ ಮರಳಿದ ಬಳಿಕ ಏನು ನಡೆಯಿತು, ಯಾರು ಯಾರು ಅಲ್ಲಿಯೂ ಪ್ರಾಂಶುಪಾಲರು ಏನು ಮಾತಾಡಿದರು ಮುಂತಾದ ವಿವರಗಳನ್ನು ಆತ ನನ್ನಿಂದ ತಿಳಿಯ ಬಯಸಿದ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಣತಿ ಮೇರೆಗೆ ತಾನು ಬಂದಿರುವುದಾಗಿಯೂ ಹೇಳಿದ.

ನಾನೆಂದೆ, "ಅದು ಕಾಲೇಜಿನ ಆಂತರಿಕ ವಿಚಾರಗಳಿಗೆ ಸಂಬಂಧಿಸಿದ್ದು. ಪ್ರಾಂಶುಪಾಲರ ಲಿಖಿತ ಆದೇಶ ಬಂದ ಹೊರತು ನಾನು ಏನೂ ಹೇಳಲಾರೆ."

"ನೀವು ನಮ್ಮವರಾಗಿ, ನಮ್ಮ ತಿಮ್ಮಪ್ಪಯ್ಯನವರ ಮಗನಾಗಿ, ಸರ್ಕಾರದ ಜೊತೆ ಸಹಕರಿಸುತ್ತಿಲ್ಲ!"

"ಹೌದು! ನಾನು ನಿಮ್ಮವನೇ. ಎಲ್ಲರವನೂ ಹೌದು. ಆದ್ದರಿಂದ ಈಗ ಯಾವ ಮಾಡಿ ನಮ್ಮ ಜೊತೆ. ಇನ್ನು ನಮ್ಮ ತಂದೆಯವರ, ಅಂತೆಯೇ ನನ್ನ, ಸುನಾಮ ಏನುಂಟೋ ಅದು ಚಾಡಿಛಿದ್ರಗಳ ಮತ್ತು ಪಿಸುಗುನುಡಿಗಳ ಮೇಲೆ ನಿಂತಿಲ್ಲ."

ಅವನು ಯಾವ ಮಾತಾಡದೇ ಮುನಿಸಿನಿಂದ ಹೊರಟ, ಆ ವೇಳೆ ನುಡಿ ಚಬಕು ಲಗಾಯಿಸಿದ, "ಸತ್ಯಶೋಧನೆಯಲ್ಲಿ ನೀವು ಸಹಕರಿಸುತ್ತಿಲ್ಲ ಎಂದು ಮುಖ್ಯ ಕಾರ್ಯದರ್ಶಿಯವರಿಗೆ ದೂರು ಸಲ್ಲಿಸುತ್ತೇನೆ."

ಈ ಪ್ರಹಸನವನ್ನು ಮೂಕ ಪ್ರೇಕ್ಷಕರಾಗಿ ಗಮನಿಸಿದ ತಂದೆ ನನ್ನತ್ತ ಅನುಮೋದನೆಯ ಮಂದಹಾಸ ಸೂಸಿದರು. ನಿಜ, "ಸತ್ಯ ಮಂತ್ರ ಸಂಗವಿರಲು ತೀರ್ಥವೇತಕೆ?"

ಕಾಲೇಜ್ ಶಿಕ್ಷಣ ವಲಯದೊಳಗಿನ ರಾಜಕೀಯ ನನ್ನ ಅರಿವಿಗೆ ಬಂದಿತ್ತು. ಪ್ರಸ್ತುತ ಪ್ರಾಂಶುಪಾಲರ ಪದಚ್ಯುತಿಗೈದು ತಾನು ಸಿಂಹಾಸನಾರೂಢನಾಗಲು ಮಂಥರೆ ಸರ್ಕಾರೀ ವಲಯದಲ್ಲಿ ಹೂಡಿದ್ದ ಪಿತೂರಿಯೂ ನನಗೆ ಗೊತ್ತಿತ್ತು. ಲಿಲ್ಲಿಪುಟ್ಟನ (ಪುಟ್ಟರಾಜ್ಯ) ನಡವಳಿಕೆಯೇ ಹಾಗೆ. ಮಾರನೇ ದಿನ ಕಾಲೇಜಿನಲ್ಲಿ ಮಂತ್ರಿ ವಿರುದ್ಧ ವಿದ್ಯಾರ್ಥಿ ಮುಷ್ಕರ. ಇದನ್ನು ಪ್ರಾಂಶುಪಾಲರೇ ಮಾಡಿಸಿದ್ದೆಂಬುದು ಅರಮನೆ ಪಿಸುನುಡಿ.

ಕೆಲವು ತಿಂಗಳುಗಳುರುಳಿದುವು. ಕಾಲೇಜಿನ ಪ್ರಥಮ ವಾರ್ಷಿಕೋತ್ಸವ. ಕರೆಯೋಲೆ ಹಂಚುವ ಹೊಣೆಗಾರಿಯನ್ನು ಪ್ರಾಂಶುಪಾಲರು ಸ್ಥಳೀಯನಾದ ನನಗೆ ವಹಿಸಿದ್ದರು, ಮತ್ತು ವಿತರಣೆಯಲ್ಲಿ ಧಾರಾಳ

ಆಗಿರಬೇಕೆಂದು ಆದೇಶಿಸಿದ್ದರು ಕೂಡ. ಅಲ್ಲೇಪುಟ್ಟನಲ್ಲಿ ಕಚೇರಿಗಳ ಪ್ರತಿಯೊಂದು ಮೇಜೂ ಕುರ್ಚಿಯೂ ಕಾರಣಕರ್ತೃಗಳದ್ದು ಎಂದು ನನಗೆ ಚೆನ್ನಾಗಿ ಗೊತ್ತಿತ್ತು. ಸರ್ಕಾರದಿಂದ ವಿಳಾಸಿಗಳ ಅಧಿಕೃತ ಯಾದಿ ತರಿಸಿ, ವಿದ್ಯಾರ್ಥಿಸ್ವಯಂಸೇವಕರ ಸಹಿತ ನಾನೇ ಅವರ ಕುರ್ಚಿಗಳಿಗೆ ತೆರಳಿ ಆಮಂತ್ರಣವಿತ್ತು, ಮದುವೆಗೆ ಕರೆಯುವಂತೆ ಆಹ್ವಾನಿಸಿದೆ.

ಉತ್ಸವ ಅತ್ಯಂತ ಆತ್ಮೀಯವಾಗಿ ಶಿಸ್ತಿನಿಂದ ನೆರವೇರಿತು, ನಮ್ಮ ಅಸ್ಮಿತೆ ವರ್ಧಿಸಿತು, ಪ್ರಾಂಶುಪಾಲರಿಗೆ ಅಭಿನಂದನೆಗಳ ಮಹಾಪೂರ. ಆದರೆ ಮಂಥರೆಯ ದರ್ಬಾರಿನಲ್ಲಿ ಶ್ಮಶಾನ ಮೌನ, ಪಿತೂರಿಗೆ ಹೊಸ ರೂಪ.

ತಿಂಗಳೆರಡು ಉರುಳಿದುವು. ಬಂತು ಮಾರ್ಚ್ (೧೯೮೪) — Beware the ides of March. ಪರೀಕ್ಷೆಗಳು ಮುಗಿದುವು. ಬೇಸಗೆ ರಜೆಯಲ್ಲಿ ವಿದ್ಯಾರ್ಥಿಗಳೂ ಪರ ಊರಿನ ಅಧ್ಯಾಪಕರೂ ಮನೆಗಳಿಗೆ ಮರಳಿದರು. ಅಷ್ಟರಲ್ಲಿ ಕಾಲೇಜಿಗೆ ಬರಸಿಡಿಲು ಬಡಿಯಿತು: ಪ್ರಾಂಶುಪಾಲರ ವಿಫಲ ಮತ್ತು ಶಿಥಿಲ ಆಡಳಿತೆ ಕುರಿತು ತಪಾಸಣೆ ನಡೆಸಲು ಉಚ್ಚ ವಿಚಾರಣಾಯೋಗದ ನೇಮನ. ಅಲ್ಲೇಪುಟ್ಟನ ಬಾಬಸಿಯಲ್ಲಿ ಚಂಡಮಾರುತ! ಮಂಥರೆಯ ಬೆಂತರ?

ಗಲ್ಲುಗಂಬಕ್ಕೆ ಏರಲು ನನಗೂ ಪ್ರತ್ಯೇಕ ಆದೇಶ ಬಂತು. ಅಧ್ಯಕ್ಷರು ನೇರ ಬಾಣ ಹೂಡಿದರು, "ಕರೆಯೋಲೆ ವಿತರಣೆ ಸಂದರ್ಭದಲ್ಲಿ ಕೆಲವು ಗಣ್ಯರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಕೈಬಿಡಲಾಗಿದೆ ಎಂಬ ಆರೋಪಣೆಗೆ ನಿಮ್ಮ ಸಮಜಾಯಿಷಿ ಏನು?"

"ಹಸಿ ಹುಸಿ ಬರಿ ಸುಳ್ಳು."

"ಸಾಬೀತು ಪಡಿಸಬಲ್ಲಿರಾ?"

ಸರ್ಕಾರದಿಂದ ಅಧಿಕೃತವಾಗಿ ಪಡೆದಿದ್ದ ಯಾದಿಯ ಜೊತೆಗೆ ನಾನೇ ತಯಾರಿಸಿದ್ದ ಪಟ್ಟಿಯನ್ನು ಅವರ ಮುಂದಿಟ್ಟೆ. ಅವರು ಮೂವರು ಸರ್ಕಾರೀ ನೌಕರರ ಹೆಸರು ಉಲ್ಲೇಖಿಸಿ, "ಇವರ ಹೆಸರುಗಳು ಯಾದಿಯಲ್ಲಿದ್ದರೂ ಇವರಿಗೆ ಕರೆಯೋಲೆ ತಲುಪದಿರಲು ಕಾರಣವೇನು? ಕೊಡಬಾರದೆಂದು ಪ್ರಾಂಶುಪಾಲರ ಆದೇಶವಿತ್ತಲ್ಲವೇ?" ಎಂದು ಕೇಳಿದರು; ಅಥವಾ ಸುಳ್ಳು ಪ್ರಮಾಣ ಒದಗಿಸಲು ಸೂಚನೆ ನೀಡಿದರು. ಅವರೆಲ್ಲರೂ ಮಂಥರೆಯ ಸಂಬಂಧಿಕರಾಗಿದ್ದುದು ಆಕಸ್ಮಿಕವಾಗಿರಬಹುದೇ!

"ವಿದ್ಯಾರ್ಥಿಗಳ ಜೊತೆ ಖುದ್ದು ನಾನೇ ಅವರ ಕಚೇರಿ ಮೇಜುಗಳಿಗೆ ಹೋಗಿ ಅಲ್ಲಿಟ್ಟು ಬಂದಿದ್ದೇನೆ. ಆಗ ಅವರು ತಮ್ಮ ಕುರ್ಚಿಗಳಲ್ಲಿರಲಿಲ್ಲ."

"ಈ ಆಯೋಗದ ಜೊತೆ ನೀವು ಸಹಕರಿಸುತ್ತಿಲ್ಲವೆಂದು ನಾನು ಸರ್ಕಾರಕ್ಕೆ ದೂರು ಸಲ್ಲಿಸಿದರೆ ನಿಮಗೇನಾದೀತು ಗೊತ್ತೇ!"

"ಅನಾಯಾಸವಾಗಿ ಹರಿಶ್ಚಂದ್ರನಾಗುತ್ತೇನೆ!"

ಇಂಥದೇ ನಕಲಿ ಸನ್ನಿವೇಶಗಳಿಗೆ ಇತರ ನಿಷ್ಠರನ್ನೂ ಈಡು ಮಾಡಲಾಗಿತ್ತು. ಇತ್ತ ಮಂಥರೆಯ ಕುತಂತ್ರ ಯಂತ್ರದಲ್ಲಿ ಕಂತೆ ಕಂತೆ ಸುಳ್ಳುಗಳು ಭರದಿಂದ ತಯಾರಾಗಿ ಆಯೋಗದ

ಮುಂದೆ ಪ್ರದರ್ಶಿತವಾದುವು: ಫಲಿತಾಂಶ!

ಆ ಬೇಸಗೆಯ ಕೊನೆಯಲ್ಲಿ ಗುಡುಗುಮಿಂಚುಗಳ ಗಾನ್ಯದಿಂದ ಮಾನ ಕಾರ್ಗಾಲದ ಆಗಮನವನ್ನು ಧ್ವನಿಸುತ್ತಿದ್ದಾಗ ಅಚ್ಯುತನ್ ಪಿಳ್ಳೆಯವರಿಗೆ ಸರ್ಕಾರದಿಂದ ತತ್‌ಕ್ಷಣ marching order ಜಾರಿ ಮಾಡಲ್ಪಟ್ಟಿತು. ಅಂತಹ (ಮಂಥರೆಯ) ದೂತರಿಗೆ ಕಿಂಚಿತ್ತು ದಯವಿಲ್ಲ.

ಅದೇ ಸಂಜೆ ಸಂಸಾರ ಸಮೇತ ಅಚ್ಯುತನ್ ಪಿಳ್ಳೆಯವರು ಮಡಿಕೇರಿ ತೊರೆದಾಗ ಅವರಿಗೆ ಕೈಬೀಸಿ ವಿದಾಯ ಹೇಳಿದ ನಮ್ಮ ಮನಗಳಲ್ಲಿ ಮೂಡಿದ ಭಾವ, "ಪುರದ ಪುಣ್ಯಂ ಪುರುಷ ರೂಪಿಂದೆ ಪೋದಪುದು." ಕಡೆಂಗೋಡ್ಲು ಬರೆದಿರುವಂತೆ, "ಕಣ್ಗಳ ಯುಂಬೆ! ಕಣ್ಣುಗಳುಂಬೆ! ನಡುಗಡಲನು ಹರಿಯಾಳ್ವವೊ!"

ಮಂಥರೆಗೆ ಮಾತ್ರ ಸಿಂಹಾಸನ ಲಭಿಸಲಿಲ್ಲ — ವೃತ್ತಿ ಜ್ಯೇಷ್ಠತೆಯಲ್ಲಿ ಇನ್ನೂ ಹಲವು ಹಿರಿಯರಿದ್ದರು.

## ಕಾಲೇಜಿನ ನೈತಿಕ ಪ್ರಜ್ಞೆ ಬಾಳಿಗ

ನಮ್ಮ ಕಾಲೇಜಿನಲ್ಲಿ ೧೯೫೪ರಿಂದ ಮುಂದೆ ನಾನಲ್ಲಿದ್ದಷ್ಟು ಕಾಲವೂ ನನಗೆ ಭೌತವಿಜ್ಞಾನ ಪ್ರಾಧ್ಯಾಪಕ ಮತ್ತು ಎನ್‌ಸಿಸಿ ಅಧಿಕಾರಿ ಬಿ. ಜನಾರ್ದನ ಬಾಳಿಗರ ಸಾಹಚರ್ಯ ಲಾಭವಾಗಿದೆ. ಇದು ನನ್ನ ಜೀವನದ ಒಂದು ಉಜ್ವಲ ಅಧ್ಯಾಯ. "ಎನ್‌ಸಿಸಿ ದಿನಗಳು" ಪುಸ್ತಕದಲ್ಲಿ ಇವರ ಬಗ್ಗೆ ಬರೆದಿದ್ದೇನೆ. ಈಗ, ಆಲ್ಬರ್ಟ್ ಐನ್‌ಸ್ಟೈನ್‌ರವರು (೧೮೭೯-೧೯೫೫) ಮ್ಯಾಕ್ಸ್ ಪ್ಲಾಂಕ್ (೧೮೫೮-೧೯೪೭) ಕುರಿತು ೧೯೧೮ರಲ್ಲಿ ಪ್ಲಾಂಕರ ಷಷ್ಟ್ಯಬ್ದ ಪೂರ್ತಿ ವೇಳೆ ಸಲ್ಲಿಸಿದ ನುಡಿನಮನವನ್ನು ಉಲ್ಲೇಖಿಸಬಯಸುತ್ತೇನೆ, "ವಿಜ್ಞಾನ ದೇವಾಲಯ ಹಲವು ಪ್ರಾಕಾರಗಳಿಂದ ಸಂಯೋಜಿತವಾಗಿರುವ ಸಂಕೀರ್ಣ ರಚನೆ. ಇದರ ನಿವಾಸಿಗಳ ಸ್ವಭಾವಗಳು ವಿವಿಧವಾಗಿರುವುವೊಂದೇ ಅಲ್ಲ, ಇವರು ದೇವಾಲಯದೊಳಗೆ ಉತ್ಪಾದಿಸುವ ಪ್ರಭಾವಗಳೂ ಕೂಡ ಹಾಗೆಯೇ. ಇವರ ಪೈಕಿ ಹೆಚ್ಚಿನ ಪ್ರತಿಯೊಬ್ಬನೂ ತನ್ನ ಬುದ್ಧಿಸಾಮರ್ಥ್ಯದ ಉತ್ಕೃಷ್ಟತೆ ಬಗ್ಗೆ ಸಂತೃಪ್ತಿ ತಳೆದವನಾಗಿದ್ದು, ವಿಜ್ಞಾನ ಕಾರ್ಯಕಲಾಪಗಳಲ್ಲಿ ಉದ್ಯುಕ್ತನಾಗಿರುವವನು. ತನ್ನ ಜೀವನದ ಪ್ರಬಲ ಚಟುವಟಿಕೆಗಳು ಹೊರಹೊಮ್ಮಲು ಅವಕಾಶ ಒದಗಿಸಿ ಬಾಳಹಂಬಲಗಳನ್ನು ಈಡೇರಿಸಿಕೊಳ್ಳಲು ಚೆನ್ನಾಗಿ ಒಗ್ಗುವ ಕ್ರೀಡೆಯಾಗಿ ಈತ ವಿಜ್ಞಾನವನ್ನು ಕಂಡುಕೊಂಡಿದ್ದಾನೆ. ಉಪಯುಕ್ತ ಸಿದ್ಧಿಗಳನ್ನು ಗಳಿಸುವುದರತ್ತ ಮಾತ್ರ ತಮ್ಮ ಮಿದುಳ ಸಾಮಗ್ರಿಯನ್ನು ವ್ಯಯಿಸುವ ಹಲಮಂದಿಯೂ ಇದ್ದಾರೆ. ಈಗ ದೇವದೂತನೊಬ್ಬ ಧರೆಗಿಳಿದು ಬಂದು ಇವೆರಡು ವರ್ಗಗಳಿಗೂ ಸೇರಿದ ಎಲ್ಲರನ್ನೂ ದೇವಾಲಯದಿಂದ ಉಚ್ಚಾಟಿಸುವುದಾದ ಪಕ್ಷದಲ್ಲಿ, ಗಮನಾರ್ಹ ಮಂದಿ ತೊಲಗಿ ಹೋಗುತ್ತಾರೆ. ಹಾಗಿದ್ದರೂ ದೇವಾಲಯದ ಒಳಗೆ ಈಗಿನ ಮತ್ತು ಹಿಂದಿನ ಕೆಲವೊಂದು ಮಂದಿ ಉಳಿದೇ ಇರುತ್ತಾರೆ. ಈ ವಿರಳರ ಸಾಲಿನಲ್ಲಿ ನಾವು ನಮ್ಮ ಪ್ಲಾಂಕರನ್ನು ಎಣಿಸುತ್ತೇವೆ ಎಂದೇ ಇವರಿಗೆ ನಮ್ಮ ತುಂಬು ಹೃದಯದ ಅಭಿವಂದನೆ, ಪ್ರೀತಿ ಸಲ್ಲುತ್ತವೆ." ನಮ್ಮ ಕಾಲೇಜಿನಲ್ಲಿ ಬಾಳಿಗರು ಹೀಗಿದ್ದರು.

## ಕಟ್ಟುವೆವು ನಾವು

ಅಂದು ನಮ್ಮ ಕಾಲೇಜಿನ ದಿವ್ಯ ಮಂತ್ರ, ಗೋಪಾಲಕೃಷ್ಣ ಅಡಿಗರ —

ಕಟ್ಟುವೆವು ನಾವು ಹೊಸ ನಾಡೊಂದನು, — ರಸದ
ಬೀಡೊಂದನು
ಹೊಸನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಾಸುಳುವ ಮುನ್ನ,
ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು!

ನಮ್ಮ ಕಾಲೇಜು ಶಿಕ್ಷಣ ಮತ್ತು ಶಿಕ್ಷಣೇತರ ರಂಗಗಳಲ್ಲಿ ಸಾಧಿಸಿದ ವಿಕ್ರಮಗಳು ಜಗಜ್ಜಾಹೀರಾದುವು. ಕಾಲೇಜನ್ನು ಸಂದರ್ಶಿಸಿದ ವರಕವಿ ಕುವೆಂಪು, ಜಂಗಮ ವಿಶ್ವಕೋಶ ಶಿವರಾಮ ಕಾರಂತ, ಕನ್ನಡದ ಆಸ್ತಿ, ಮಾಸ್ತಿ ಮೊದಲಾದ ಹಿರಿಯ ಚಿಂತನಶೀಲರು ಒಕ್ಕೊರಲಿನಿಂದ ನೀಡಿದ ಪ್ರಶಂಸೆ: "ಪ್ರಾಚೀನ ಗುರುಕುಲವನ್ನೂ ಆಧುನಿಕ ಶಿಕ್ಷಣಕ್ರಮವನ್ನೂ ಅರ್ಥಪೂರ್ಣವಾಗಿ ಸಂಶ್ಲೇಷಿಸಿರುವ ಜೀವಂತ ಸೃಜನಶೀಲ ವ್ಯವಸ್ಥೆ ಇದು."

೧೯೬೯ರ ಬೇಸಗೆ ರಜೆಯಲ್ಲಿ ನಮ್ಮ ಎನ್‌ಸಿಸಿ ಘಟಕವು ಭಾಗಮಂಡಲದಿಂದ ತಲಕಾವೇರಿಗೆ ಹೋಗುವ ಬಸ್ ರಸ್ತೆಯನ್ನು ಎಂಜಿನಿಯರುಗಳ ಯೋಜನೆ ಮತ್ತು ನಿರ್ದೇಶನ ಪ್ರಕಾರ ಕಟ್ಟಿತು. ಅದೇ ಸುಮಾರಿಗೆ ಕಾಲೇಜಿನ ಸಮಾಜಸೇವಾಘಟಕವು ಕೋಡಿಬೆಂಗರ್ ಮೈದಾನದಲ್ಲಿ ಹೊಸ ರಸ್ತೆಯನ್ನು ಕಡಿದು ಈಗಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ನಾಂದಿ ಹಾಡಿತು. ಗೌಳಿಕೇರಿಯ ಕೊಳಗೇರಿಯನ್ನು ಶುಚಿಗೊಳಿಸಿ ಅಲ್ಲಿಯ ಬಡ ಜನರ ಗುಡಿಸಲುಗಳಿಗೆ ಬೆಳಕು ಬೀರಿತು.

ಸಮರ್ಥ, ಸಾಧಾರಣ, ಅದಕ್ಷ ಅಥವಾ ವಿದ್ಯಾರ್ಥಿ ದ್ವೇಷಿ ಉಪಾಧ್ಯಾಯ ಇರಬಹುದು, ಆದರೆ ಕುವಿದ್ಯಾರ್ಥಿ ಜನಿಸಲೇ ಇಲ್ಲ ಎಂಬುದು ನಮ್ಮ ಅನುಭವ.

## ಬದುಕು ಕಲಿಸಿದ ಪಾಠ

೭೭ರ ಗಡಿಯಲ್ಲಿರುವ ಮತ್ತು ಮೈಸೂರು ನಿವಾಸಿಯಾಗಿರುವ ನನಗೆ ಇಂದು 'ನಮ್ಮ ಕಾಲೇಜು' ಒಂದು ಸವಿನೆನಪು, ಅಮೂರ್ತ ವಾತ್ಸಲ್ಯ. "ಶೀಲಂ ಸರ್ವಸ್ಯ ಭೂಷಣಂ" ಇದರ ಧ್ಯೇಯ ವಾಕ್ಯ. ಪಂಚ ಶೀಲಗಳ ಮೇಲೆ ಇದು ನಿಂತಿದೆ: ನೈತಿಕತೆ, ಸಂಸ್ಕೃತಿ, ಉತ್ಕೃಷ್ಟತೆ, ಪಾರದರ್ಶಕತೆ, ಮತ್ತು ಉತ್ತರದಾಯಿತ್ವ. ಇವನ್ನು ಅನುಷ್ಠಾನಿಸುತ್ತಿರುವ ವ್ಯಕ್ತಿ ಸದಾ ಪ್ರಸ್ತುತನಾಗಿರುತ್ತಾನೆ. ಇಂಥವರ ಆಡುಂಬೊಲ ನಮ್ಮ ಕಾಲೇಜಾಗಿರಲಿ!

ಜನರ ಉನ್ನತಿಯಲ್ಲಿ ಕಾಣು ನಿನ್ನುತ್ಕರ್ಷ
ಮನವನನುಗೊಳಿಸಿಕೋ ಸಮಷ್ಟಿ ಹಿತಸಾಧನೆಗೆ
ತನು ಮನ ನುಡಿಗಳಲಿ ಸದಾ ಶುದ್ಧನಾಗಿರು ಪ್ರ-
ಜ್ಞತೆ ತೋರಿ, ನಿನ್ನ ಬಾಳೇ ಸ್ವರ್ಗ ಅತ್ರಸಾನು

೨೦-೮-೨೦೧೧ ಜಿ. ಟಿ. ನಾರಾಯಣರಾವ್

# ಅಂಬಿಕಾತನಯದತ್ತ, ವಿಜ್ಞಾನ, ನಾನು

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಜೀವಿತಾವಧಿ ೩೧ ಜನವರಿ ೧೮೯೬ರಿಂದ ೨೬ ಅಕ್ಟೋಬರ್ ೧೯೮೧ರ ತನಕ. ಸಮಕಾಲೀನ ವ್ಯಕ್ತಿ-ಬೇಂದ್ರೆ ತಮ್ಮ ಕಾವ್ಯಕೃತಿಯಿಂದ ಸಾರ್ವಕಾಲಿಕ ರಸಋಷಿ ಅಂಬಿಕಾತನಯದತ್ತರಾಗಿ ಉತ್ತಾರಗೊಂಡಿದ್ದಾರೆ. ಎಂದೇ ಪ್ರಸಕ್ತ ಲೇಖನದಲ್ಲಿ ಬೇಂದ್ರೆ ಪದವನ್ನು ಒಂದು ಪ್ರತೀಕವಾಗಿ ಬಳಸಿದ್ದೇನೆ.

ಮಾನವಮತಿ ನಿಸರ್ಗದ ಜೊತೆ ಕಾರ್ಯಕಾರಣಾತ್ಮಕತೆಯಲ್ಲಿ ಅಂತರವರ್ತಿಸಿದಾಗ ವಿಜ್ಞಾನ ಮೈದಳೆಯುತ್ತದೆ. ಇದು ಪೂರ್ತಿ ಜ್ಞೇಯನಿಷ್ಠ (objective). ವೈಜ್ಞಾನಿಕ ಸಿದ್ಧಾಂತವೊಂದರ ನಿಕಷ, ಅಂತಿಮವಾಗಿ, ನಿಸರ್ಗ ಎಂದರ್ಥ — ಯಾವ ಗ್ರಂಥ ಅಲ್ಲ, ಸಂತನಂತೂ ಖಂಡಿತ ಅಲ್ಲ. ಎಂದೇ ವಿಜ್ಞಾನದ ವಿಕಾಸಕ್ಕೆ ವ್ಯಕ್ತಿ ನಿಮಿತ್ತ ಮಾತ್ರ.

ಆಧುನಿಕ ವಿಜ್ಞಾನದ ಯಾವುದೇ ಪ್ರಕಾರದ ಬಗೆಗೆ ಕನ್ನಡದಲ್ಲಿ ಬರೆಯುವ, ಅಂದರೆ ಕನ್ನಡದಲ್ಲಿ ವಿಜ್ಞಾನ ವಾಙ್ಮಯ ರಚಿಸುವ, ಒಬ್ಬ ಲೇಖಕ ಇಲ್ಲಿಯ 'ನಾನು.'

ಕನ್ನಡದಲ್ಲಿ ವಿಜ್ಞಾನಕೃತಿ ರಚಿಸುವಾಗ ನನಗೆ ಎದುರಾಗುವ ಸವಾಲು ವಿಷಯದ್ದಲ್ಲ. ಅದು ಸಾಪೇಕ್ಷತಾ ಸಿದ್ಧಾಂತ, ನಕ್ಷತ್ರ ಜೀವನವೃತ್ತಾಂತ ಅಥವಾ ಗಣಿತಪ್ರಮೇಯ ಯಾವುದೇ ಇರಬಹುದು. ಈ ಎಲ್ಲ ಪ್ರಕಾರಗಳ ಬಗ್ಗೆ ಇಂಗ್ಲಿಷಿನಲ್ಲಿ ಆಕರಗ್ರಂಥಗಳು, ಪರಾಮರ್ಶನ ಪ್ರಬಂಧಗಳು ಮುಂತಾದವು ಯಥೇಚ್ಛ ಲಭ್ಯ, ಇರುವುದರಿಂದ ಪರಿಕಲ್ಪನೆಗಳ ಸಂಪೂರ್ಣ ಸಾಂಗೀಕರಣ (assimilation) ಕಷ್ಟ ಅಲ್ಲ. ನಿಜವಾದ ಸವಾಲು: ಈ ಸಾಂಗೀಕೃತ ಪರಿಕಲ್ಪನೆಗಳನ್ನು ಕನ್ನಡದಲ್ಲಿ ಪುನಸ್ಸೃಷ್ಟಿಸುವುದು ಹೇಗೆ?

ಸಮರ್ಥ ಲೇಖನವೊಂದರ ಪ್ರಮುಖ ಆವಶ್ಯಕತೆಗಳು ಮೂರು: ಪರಿಕಲ್ಪನೆಯಲ್ಲಿ ಸ್ಪಷ್ಟತೆ, ನಿರೂಪಣೆಯಲ್ಲಿ ಸುಂದರತೆ ಮತ್ತು ಸಮಗ್ರವಾಗಿ ಪುಟಿಯುತ್ತಿರುವ ಉಲ್ಲಾಸ — ಲೇಖಕನ ಮನೋಮೂಸೆಯ ಅಭಿರೂಪವೇ ಲೇಖನ. ಈ ಮೂರೂ ಗುಣಗಳು ಲೇಖಕನಲ್ಲಿ ಮೇಳೈಸಿರದಿದ್ದರೆ ಆತನ ಕೃತಿ ವಿಕೃತಿ ಆಗಿರುತ್ತದೆ: ಧೃತರಾಷ್ಟ್ರ-ಪ್ರಜೆಗಳಿಗೆ ಕುಪ್ರಾಚಾರ್ಯ ಚಕ್ರವರ್ತಿ ಆದಾಗ ಆ ರಾಷ್ಟ್ರದ 'ಪ್ರಗತಿ'ಯಂತೆ.

ಇಂಗ್ಲಿಷಿನಲ್ಲಿಯೂ ಒಂದು ಉತ್ಕೃಷ್ಟ ವಿಜ್ಞಾನಗ್ರಂಥ, ಸಾಹಿತ್ಯ ದೃಷ್ಟಿಯಿಂದಲೂ ಒಂದು ಉತ್ತಮ ಕೃತಿ ಆಗಿರುವುದು. ಅಲ್ಲಿ ವಿಜ್ಞಾನದ ಪರಿಕಲ್ಪನೆಗಳು ಭಾಷೆಗೆ ಹೊಸ ಆಯಾಮ ನೀಡುತ್ತವೆ, ಭಾಷೆಯ ನಮ್ಯತೆ ವಿಜ್ಞಾನದ ಕಠಿಣ ಪರಿಕಲ್ಪನೆಗಳಿಗೆ ಮಾರ್ದವತೆ ಪೂಸುತ್ತದೆ. ಲೇಖಕನ ಉಲ್ಲಾಸ ಸರ್ವತ್ರ ಸುಂದರತೆಯನ್ನು ಸೂಸುತ್ತದೆ.

ಕನ್ನಡದಲ್ಲಿಯೂ ಬಲ್ಲ ಪ್ರಜ್ಞಾವಂತ ವಿಜ್ಞಾನಿಗಳೂ ಈ ಎಲ್ಲ ಗುಣಗಳನ್ನು ತಮ್ಮ ಕೃತಿಯಲ್ಲಿ ಯುಕ್ತವಾಗಿ ಮೇಳೈಸಲು ಪ್ರಯತ್ನಿಸಿದ್ದಾರೆ. ವಾಸ್ತವವಾಗಿ ಇಂಗ್ಲಿಷ್ ವಿಜ್ಞಾನ-ಲೇಖಕನಿಗಿಂತ ಕನ್ನಡದವನ ಸಮಸ್ಯೆ ಗುರುತರವಾದುದು. ಭಾಷಾಸಮಸ್ಯೆ ಅವನಿಗಿಲ್ಲ — ಸಂಶೋಧನೆ, ಅಧ್ಯಯನ, ಅನುಭವ ಮತ್ತು ಸಂವಹನ ಎಲ್ಲವೂ ಆತನ ಮಾತೃಭಾಷೆ ಇಂಗ್ಲಿಷಿನಲ್ಲಿಯೇ ಜರುಗುತ್ತವೆ. ಕನ್ನಡ ವಿಜ್ಞಾನ-ಲೇಖಕನ ಸಂದರ್ಭ ತೀರ ಅಸ್ವಾಭಾವಿಕ: ಮೂಲ ಸೆಲೆ ಇಂಗ್ಲಿಷನ್ನು ಕನ್ನಡದ ನಾಲಗೆಯಲ್ಲಿ ಹರಿಯಗೊಡಬೇಕು. ಒಂದು ಉದಾಹರಣೆ: ಸೂರ್ಯನ ಸುತ್ತ ಭೂಮಿ 'ಸುತ್ತು'ತ್ತಿರುವಾಗಲೇ ತನ್ನ ಸುತ್ತ ಕೂಡ 'ಸುತ್ತು'ತ್ತಿರುವುದು. ಇಂಗ್ಲಿಷ್ ಭಾಷೆಯಲ್ಲಿ ಈ ವಿಭಿನ್ನ ವಿದ್ಯಮಾನಗಳಿಗೆ Revolution ಮತ್ತು rotation ಪದಗಳು ಶತಮಾನಗಳ ಬಳಕೆಯಿಂದ ಅಂಕಿತನಾಮಗಳೇ ಆಗಿವೆ. ಕನ್ನಡದಲ್ಲಿ? ನಾವು ಯುಕ್ತ ಪದಗಳನ್ನು ಆಯ್ದು, ಖಚಿತ ಅರ್ಥ ತುಂಬಿ, ಜನರಿಗೆ ತಂದು ಸುಲಭಗೊಳಿಸಬೇಕಾಗುತ್ತದೆ. ಈ ಪದಗಳು ಅನುಕ್ರಮವಾಗಿ 'ಪರಿಭ್ರಮಣೆ' ಮತ್ತು 'ಆವರ್ತನೆ.'

— ೨ —

ಕನ್ನಡವನ್ನು ಈ ತೆರನಾಗಿ ಬಳಸುವಲ್ಲಿ ವಿಜ್ಞಾನಿಗಳಿಗೆ ಅಕ್ಷಯ ಪಾತ್ರೆಯಂತೆ ಒದಗಿಬರುವವರು ನಮ್ಮ ಶ್ರೇಷ್ಠ ಕವಿಗಳು — ಪ್ರಾಚೀನರು ಮತ್ತು ಅರ್ವಾಚೀನರು. ಪ್ರಸಕ್ತ ಲೇಖನ ಬೇಂದ್ರೆಯವರನ್ನು ಕುರಿತುದಾದ್ದರಿಂದ ಅವರ ಕಾವ್ಯಸಿಂಧುವಿನಿಂದ ಕೆಲವು ಬಿಂದುಗಳನ್ನಿಲ್ಲಿ ಉಲ್ಲೇಖಿಸುತ್ತೇನೆ.

'ಕಾಲ' ಎಂದರೆ ಘಟನೆಗಳ ನಡುವಿನ 'ಅವಧಿ.' ನಿನ್ನೆಯ ಸೂರ್ಯೋದಯ ಒಂದು ಘಟನೆ, ಇಂದಿನದು ಇನ್ನೊಂದು. ಇವೆರಡರ ನಡುವಿನ ಅವಧಿಗೆ ದಿವಸ ಎಂದು ಹೆಸರು. ಇದು ಕಾಲದ ಒಂದು ಮಾನಕ. ಈ ಪರಿಕಲ್ಪನೆಯನ್ನು ವಿಸ್ತರಿಸುತ್ತ ಭೌತವಿಶ್ವಕ್ಕೂ ಅದರ ಅಸಂಖ್ಯ ವಿದ್ಯಮಾನಗಳಿಗೂ ವ್ಯಾಖ್ಯಾನ ಬರೆಯುವ ಬೇಂದ್ರೆ, ಮೊದಲು ನೋಡಿ:

ಇರುಳಿರುಳಳಿದು ದಿನದಿನ ಬೆಳಗಿ
ಸುತ್ತುಮುತ್ತಲು ಮೇಲಕೆ ಕೆಳಗೆ
ಗಾವುದಗಾವುದ ಗಾವುದ ಮುಂದೆ
ಎವೆ ತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ!

ಇಲ್ಲಿ ಇನ್ನೂ ಒಂದು ರೇಖು ಉಂಟು. ನಮ್ಮ ಅಸ್ತಿತ್ವ ದೇಶ (space), ಕಾಲ ಮತ್ತು ಚಲನೆ ಎಂಬ ಮೂರು ಅವಿನಾ ಘಟಕಗಳಿಂದ ನೇಯಲ್ಪಟ್ಟಿದೆ. ಒಂದಿಲ್ಲದಿದ್ದರೆ ಉಳಿದೆರಡಕ್ಕೆ ಅರ್ಥ ಇಲ್ಲ. 'ದೇಶ' ಇಲ್ಲವಾದರೆ ನಮ್ಮ ನೆಲೆ ಎಲ್ಲಿ! 'ಕಾಲ' ಇಲ್ಲವಾದರೆ ವ್ಯಕ್ತ ಯಾವ ಕ್ರಿಯೆ. 'ಚಲನೆ'ಯೇ ವಿಶ್ವದ ನಿಯಮ: ನಮ್ಮ ನೆಲೆಯ ಸುತ್ತ ನಾವು, ಸೂರ್ಯನ ಸುತ್ತ ಭೂಮಿ, ಆಕಾಶಗಂಗೆಯ

ಸುತ್ತ ಸಾಗರ — ಹೀಗೆ ಬೆಳೆಯುತ್ತದೆ ಈ ಹನುಮಂತ ಲಾಂಗೂಲ. ಈಗ ಮಗುದೊಮ್ಮೆ ಓದಿ "ಗಾವುದ ಗಾವುದ ಗಾವುದ ಮುಂದೆ ಎದೆ ತೆರೆದಿಕ್ಕುವ ಹೊತ್ತಿನ ಒಳಗೆ" ಬೇಂದ್ರೆ-ವಿಜ್ಞಾನ ಸ್ವಾರಸ್ಯ ಅರಿಯಲು ಮತ್ತು ಸವಿಯಲು.

ಚಲನೆ ಎಂದರೆ. ಸಪ್ತರ್ಷಿಮಂಡಲ ಉತ್ತರಾಕಾಶದಲ್ಲಿರುವ ಒಂದು ಪ್ರಮುಖ ನಕ್ಷತ್ರಪುಂಜ. ಯುಗಗಳ ನಿರಂತರ ಪೂರ್ವ-ಪಶ್ಚಿಮ ದಿಶಾವರ್ತನೆಯನ್ನು ವಿವಿಧ ನಕ್ಷತ್ರಪುಂಜಗಳ ಭ್ರಮಣ ವಿನ್ಯಾಸಗಳನ್ನು ನೋಡಿ ಆನಂದಿಸಿ ಬೆರಗಾಗುವ ಯಾರಿಗಾದರೂ ಈ ಮುಂದಿನ ಬೇಂದ್ರೆ-ಉದ್ಗಾರದ ಸರಳತೆ, ಸುಂದರತೆ ಮತ್ತು ಉಲ್ಲಾಸ ಮನವರಿಕೆ ಆಗದಿರದು:

ಸಪ್ತಋಷಿಗಳೆಳೆತ್ತು ತಿರುಗುತಿವೆ ಹಾಕಿ ಧ್ರುವದ ಗಾಗಾ
ಮೇರು ದಂಡದಾ ಇಪ್ಪತ್ತನ್ನು ಹಂಚುತ್ತ ಠಾವೊ ಬಾಗಾ
ವಿವಿಧವಾಗಿ ಸಂಚರಿಸಿ ತಾಯಿಯಾಯಿತ ಪ್ರತ್ಯೇಕ ತಾನಾ
ಕರೆಯುತಿಹುದು ಸ್ವರಮೇಳ ಆಗಿ ಗ್ರಹಗೋಲ ವಿಶ್ವಗಾನಾ

ನಕ್ಷತ್ರ ಸೌಂದರ್ಯಾನುಭವ ಹುಟ್ಟಿಸುವ ಈ ಪಂಕ್ತಿಗಳು ಕೇವಲ ಶಬ್ದ ಅಥವಾ ನಾದಚಮತ್ಕಾರ ಎಂದೆನ್ನಿಸಿದರೆ (ಇಂಥ ವಿಮರ್ಶೆ ಕೇಳಿದ್ದೇನೆ) "ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ" ಎಂದು ಬೇಂದ್ರೆ, ಪುರಂದರ ದಾಸರ ಜೊತೆ ಹಾಡಬಹುದು!

ಬೆಳಕು-ಕಾವು, ದ್ರವ್ಯರಾಶಿ-ಗುರುತ್ವಾಕರ್ಷಣೆ, ಅಯಸ್ಕಾಂತ-ವಿದ್ಯುತ್ ಮುಂತಾದವು ನಿಸರ್ಗದಲ್ಲಿಯ ಅವಿನಾಸಂಬಂಧಗಳು. ಈ 'ಶುದ್ಧ' ವಿಜ್ಞಾನ ಪರಿಕಲ್ಪನೆಗಳನ್ನು ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ಬಿತ್ತರಿಸುವಾಗ ಬೇಂದ್ರೆ, ಹೀಗೆ ಪ್ರಸ್ತುತಗೊಳಿಸುತ್ತಾರೆ ನೋಡಿ:

ಸೂಜಿಗಲ್ಲು ತಿರುಗತಿತ್ತೋ ಹೊಳ್ಳಮ್ಯಾಗ
ಸೂಜಿಯೊಂದು ತೇಲತಿತ್ತೋ ಹೊಳ್ಳಿಯಾಗ

ಆಧುನಿಕ ರಸಾಯನವಿಜ್ಞಾನದ ಮೂಲ ಸೆಲೆಯನ್ನು ಪ್ರಾಚೀನರ ರಸವಿದ್ಯೆಯಲ್ಲಿ ಕಾಣುತ್ತೇವೆ. 'ಕೀಳು'ಲೋಹವಾದ ಸೀಸವನ್ನು 'ಮೇಲು' ಲೋಹವಾದ ಚಿನ್ನವಾಗಿ ಪರಿವರ್ತಿಸುವ (transmute) ಪ್ರಯತ್ನವಿದು. ರಾಘವಾಂಕನ "ಪರುಷವಂಗಗಾದ ಕಬ್ಬುನದ ಕರೆಹಂ" ಸಾಲಿನಲ್ಲಿ ಅಥವಾ ಸಮುದ್ರಮಥನದಿಂದ ಅಮೃತ ಪಡೆಯುವ ಕಲ್ಪನೆಯಲ್ಲಿ ಈ ಹಂಬಲ ಅಭಿವ್ಯಕ್ತವಾಗಿದೆ. ಬೇಂದ್ರೆಯವರ ಪ್ರತಿಭಾ ಮೂಸೆಯಲ್ಲಿ:

ಪರಸುಗಲ್ಲಾಗಿ ಬಾ, ಕಬ್ಬಿಣವನ್ನು
ಬಂಗಾರ ಮಾಡುವೆನು ಸೋಂಕಿ ತಾಗಿ
ಕರಗಿಸುತ ಎರಕವನು ಹೊಯ್ದು ಚಂದ-
ಕಿನ್ನು ಬಳಗಾವ ಬೆಂಕಿಯಾಗಿ

ಖ್ಯಾತ ವಿಜ್ಞಾನಿ ನೊಬೆಲ್ ಪ್ರಶಸ್ತಿ ವಿಜೇತ ಎಸ್. ಚಂದ್ರಶೇಖರ್ (೧೯೧೦-೯೫) ಇವರ ಅಧ್ಯಯನಕೊಠಡಿಯಲ್ಲಿ ಒಂದು ಆಧುನಿಕ ಚಿತ್ರಪಟವಿದೆ: ಅಮೂರ್ತ ಕಲೆ. ಅಜ್ಞಾತ ಭೂತದಲ್ಲಿ ನಿಂತು ಅವ್ಯಕ್ತ ಭವಿಷ್ಯಕ್ಕೆ ಆಂತು ನೋಟದ ವರ್ತಮಾನದಲ್ಲಿ ಪ್ರಕಟವಾಗು

ತ್ತಿರುವ ಏಣಿ. ಇದರಲ್ಲಿ ಮೇಲ್ಮೆ ಏರಲು ಪ್ರಯತ್ನಿಸುತ್ತಿರುವ ಒಬ್ಬ ವ್ಯಕ್ತಿ. ಏಣಿಗೆ ಎದುರಾಗಿ ಇದರ ಕನ್ನಡಿ ಪ್ರತಿಬಿಂಬದಂಥ ನೆರಳುಗಳು ಇವೆ. ನೆರಳುಗಳೆಯಲ್ಲಿಯೂ ನೆರಳು-ವ್ಯಕ್ತಿ ತನ್ನ ಕೆಳಗಿನ ಪಾವಟಿಗೆಯಲ್ಲಿ ನಿಂತು ಮೇಲ್ಮೆ ಕಾಲಿಡಲು ಹವಣಿಸುತ್ತಿದ್ದಾನೆ. ಈ ಅಮೂರ್ತ ಕಲೆಗೆ ಚಂದ್ರಶೇಖರ್ ವ್ಯಾಖ್ಯಾನ ನೀಡಿದ್ದಾರೆ: "ಅಭೀಪ್ಸೆಗಳನ್ನು ಸಾಧಿಸುವ ದಿಶೆಯಲ್ಲಿ ವ್ಯಕ್ತಿ ಪ್ರಯತ್ನಶೀಲನಾಗಿರುವಾಗ ಆತನ ಅಂತರಂಗ ತುಡಿತಗಳು ಗೋಚರವಾಗುವುವು. ಏಣಿ ಏರುತ್ತಿರುವ ವ್ಯಕ್ತಿ ಆರೋಹಿ ಪ್ರಯತ್ನಿಸಿರುವವನು ನಿಜ. ಆದರೆ ಆತನಿಗೆ ಕಾಣುವ ಸಮಗ್ರ ರಚನೆಯು (=ಏಣಿಯ) ಕೇವಲ ಸ್ಥೂಲರೇಖೆಗಳು — ಇವನ್ನು ಬಿಡಬೇಕೆಂಬುದು ಆತನ ಅಭಿಲಾಷೆ — ಪ್ರಾಗ್ವಾಗಿ ಅಗಮ್ಯ. ಏಣಿಯು ತುತ್ತತುದಿ ತಲುಪಿದಾಗಲೂ ಇದು ನಿಜ, ಏಕೆಂದರೆ ಇಂಥ ಒಂದು ನೆಲೆಯೇ ಇಲ್ಲ ಏಣಿಯಲ್ಲಿ! ವ್ಯಕ್ತಿಗೆ ತನ್ನ ಧ್ಯೇಯಗಳ ಸಾಧನೆ ಎಂದೆಂದೂ ಕೈಗೂಡದೆಂಬ ಅರಿವನ್ನು ಆತನ ನೆರಳು — ಇದು ಇನ್ನೂ ಕೆಳಗಿನ ಹಂತದಲ್ಲಿದೆ ಎಂಬುದನ್ನು ಗಮನಿಸಬೇಕು — ಮತ್ತೆ ಮತ್ತೆ ಎತ್ತಿ ತೋರಿಸುತ್ತದೆ."

ಚಂದ್ರಶೇಖರ್ ಸಾನ್ನಿಧ್ಯದಲ್ಲಿ ಈ ಅಮೂರ್ತ ಕಲೆ ನೋಡುತ್ತಿದ್ದಾಗ ಮತ್ತು ಅವರ ವಿವರಣೆ ಆಲಿಸುತ್ತಿದ್ದಾಗ "ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ!" ಆ ವಿಲಾಸವಿದು:

ಸೋಲುವುದೇತಕೆ ನೆಲೆಗೆ ಗೆಳೆಯಾ?
ಏಣಿಗೆ ಇದೆ, ಹಿಡಿ ಅದರೆಳೆಯಾ
ಹಂತಕೆ ಹಂತಕೆ ಬೇರೆ ತೋಚಿದೆ
ಅಲ್ಲಲ್ಲಿಗೆ ನವಕಾಶವಿದೆ
ನೂರಿಗೆ ಊರದೆ, ಸಾವಿರಕೇರದೆ
ಅಲಕ್ಷ್ಯವಿರುವುದು ಯಾವ ಎಡೆ!

ಉತ್ತಮ ಕಾವ್ಯದ ಒಂದು ಪ್ರಮುಖ ಲಕ್ಷಣ: ಅದು ಸದಾ ಪ್ರಸ್ತುತವಾಗಿರುತ್ತದೆ; ಎಷ್ಟರಮಟ್ಟಿಗೆ ಎನ್ನುವುದಕ್ಕೆ ಉತ್ತರ "ಅವರವರ ದರುಶನಕೆ, ಅವರವರ ಭಾಗ್ಯಕ್ಕೆ."

- 2 -

ಇಂಥ ನಿದರ್ಶನಗಳನ್ನು ಎಲ್ಲ ಸೃಜನಶೀಲ ಕಲಾಕೃತಿಗಳಲ್ಲಿಯೂ ಗುರುತಿಸಬಹುದು — ಅರಿಯುವ ಕುತೂಹಲವಿದ್ದರೆ. ಹೀಗೇಕೆ? ಕವಿಯೂ ಮೂಲತಃ ಒಬ್ಬ ಮನುಷ್ಯ. ಸರ್ವವಿದ್ಯಾಪಾರಂಗತನಾಗಿರಲಾರ. ಅಂದ ಮೇಲೆ ಆತನ ಸ್ಫೂರ್ತಿಮೂಲ ಉದ್ಗಾರಗಳು ವಿಜ್ಞಾನದಂಥ 'ಶುಷ್ಕ' ಮತ್ತು 'ರಸಶೂನ್ಯ' ಕ್ಷೇತ್ರದಲ್ಲಿ ಸಾಧುವಾಗುವುದು ಹೇಗೆ? ಮೂಲದಲ್ಲಿ ಇರದ ಮತ್ತು ಉದ್ದೇಶಿತವೂ ಆಗಿರದ ಧ್ವನಿಯನ್ನು ಓದುಗ ತನ್ನ ಕಲ್ಪನಾನುಸಾರ ಹುಡುಕುವುದಾಗಲಾರದೇ! ನನ್ನ ವಿಜ್ಞಾನ ಕೃತಿಗಳನ್ನು ಮರೆತುಬಿಡಿ, ಬೆಳ್ಳಾವೆ ವೆಂಕಟನಾರಾಯಣಪ್ಪ, ಆರ್. ಎಲ್. ನರಸಿಂಹಯ್ಯ, ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಮೊದಲಾದ ಗತ ಮಹಾಲೇಖಕರ (ಈ ಪೀಳಿಗೆಯ ಲೇಖಕರು ಕನ್ನಡದಲ್ಲಿ ವಿಜ್ಞಾನ ವಾಙ್ಮಯ ರಚಿಸುವಾಗ ಕಾವ್ಯದಿಂದ ಏಕೇ ಸ್ಫೂರ್ತಿ

ಹುದಿದ್ದರೆಯೂ ಅವರ ವಿಜ್ಞಾನಕೃತಿಗಳಲ್ಲಿ ಪ್ರಕಟವಾಗುತ್ತವೆ) ಪ್ರಕೃತಿಯ ವಿಜ್ಞಾನ ವಾಙ್ಮಯದ ಬಗೆಗೆ ಕೂಡ, ತಜ್ಞ ವಿಮರ್ಶಕರು ಈ ತರಹದ ಸಂದೇಹಗಳನ್ನೂ ಆಕ್ಷೇಪಣೆಗಳನ್ನೂ ಎತ್ತುವುದುಂಟು. "ನಕ್ಷತ್ರ ದರ್ಶನ" (೧೯೪೪) ಗ್ರಂಥದಲ್ಲಿ ನರಸಿಂಹಯ್ಯನವರು "ವರ್ಣವರ್ಣ ನಕ್ಷತ್ರಗಳು" ಅಧ್ಯಾಯವನ್ನು ಆರಂಭಿಸುವುದು ಬೇಂದ್ರೆಯವರಿಂದಲೇ:

ಶ್ರಾವಣಾ ಬಂತು ಕಾಡಿಗೆ ಬಂತು ನಾಡಿಗೆ
ಬಂತು ಬೀಡಿಗೆ ಶ್ರಾವಣಾ ಬಂತು
ಕಡಲಿಗೆ ಬಂತು ಶ್ರಾವಣಾ ಕುಣಿದ್ಹಾಂಗ ರಾವಣಾ
ಕುಣಿದಾವ ಗಾಳಿ ಭೈರವನ ಹಾಂಗ ತಾಳಿ

ಬೇರೆ ಬೇರೆ ಸಂದರ್ಭಗಳಲ್ಲಿ ಈ ಮೂಲಭೂತ ಪ್ರಶ್ನೆಯನ್ನು ನಾನು — ಕಾವ್ಯ-ವಿಜ್ಞಾನ ಪ್ರತಿಮಾ ಸಾಮ್ಯವನ್ನು — ಡಿವಿಜಿ, ಕುವೆಂಪು, ಬೇಂದ್ರೆ ಮತ್ತು ಅಡಿಗರ ಜೊತೆಯಲ್ಲಿ ಮುಖ್ಯ ಚಂದ್ರಶೇಖರರ ಬಳಿಯಲ್ಲಿ ಪ್ರಸ್ತಾಪಿಸಿ ಚರ್ಚಿಸಿದ್ದುಂಟು. ಪ್ರಶ್ನೆಯ ಸಾರ: "ಕವಿಯಾದ ನೀವು ಬಹು ಪ್ರಜ್ಞಾವಾಚಕನಾಗಿ ವಿಜ್ಞಾನದ ಈ ಪರಿಕಲ್ಪನೆಗಳನ್ನು ನಿಮ್ಮ ಸಾಮಾನ್ಯ ಅಧ್ಯಯನದ ಮೂಲಕ ಮೊದಲು ಪರಿಗ್ರಹಿಸಿ ಬಳಿಕ ನಿಮ್ಮ ಪ್ರತಿಭಾ ಮೂಸೆಯಲ್ಲಿ ಈ ತೆರನಾಗಿ ಎರಕಹೊಯ್ಯುವುದಾದರೆ ಬಹುದೇ!"

ಡಿವಿಜಿಯವರ ಉತ್ತರ ಈ ಎಲ್ಲ ಮಹಾಕವಿಗಳ ಅಭಿಪ್ರಾಯಗಳನ್ನು ಸಂಕ್ಷಿಪ್ತರೂಪದಲ್ಲಿ ನಿರೂಪಿಸುತ್ತದೆ: "ನಾನು ಆಧುನಿಕ ಅಥವಾ ಪ್ರಾಚೀನ ವಿಜ್ಞಾನ ಓದಿದವನಲ್ಲ. ನಿಮ್ಮ ಈ ಅಯಾಚಿತ ಮತ್ತು ಅನಿರೀಕ್ಷಿತ ವಿವರಣೆ ಮತ್ತು ಪ್ರಶ್ನೆ ನನಗೆ ಒಂದು ಅಂಶವನ್ನು ಸ್ಪಷ್ಟಪಡಿಸಿದೆ: ನಾನು ತಪ್ಪು ಹಾದಿ ತುಳಿದಿಲ್ಲ. ಜ್ಞಾನಮೇರುವಿಗೆ ಮಾರ್ಗ ಹಲವು. ವಿಜ್ಞಾನಿ, ಕವಿ, ದಾರ್ಶನಿಕ, ಕಲಾವಿದ ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವಕ್ಕೆ ಒಪ್ಪುವ ದಾರಿ ಅರಸಿ, ಅವಶ್ಯವಾದರೆ ಹೊಸದಾರಿ ಕಡಿದು, ಅದರ ನೇರ ಮೇಲೆ ಮೇಲೆ ಸಾಗುತ್ತಾನೆ, ಮತ್ತು ಹಾಗೆ ಆರೋಹಿಸುತ್ತಿರುವಾಗ ತಾನು ಕಂಡ ಕಿಂಚಿನ್ಮಾತ್ರ ವಿಶ್ವಸತ್ಯವನ್ನು ಯಥಾಮತಿ ಯಥಾಶಕ್ತಿ ತನ್ನ ಮಾಧ್ಯಮದಲ್ಲಿ ಅಭಿವ್ಯಕ್ತಿಸುತ್ತಾನೆ. ಹೀಗೆ, ಯಾವುದೋ ಎತ್ತರದಿಂದ ಕವಿ ಕಂಡ ಹರವು ಮತ್ತು ವಿಜ್ಞಾನಿ ಕಂಡ ಹರವು ಇವೆರಡರಲ್ಲೂ ಸಾಮಾನ್ಯವಾದ ಒಂದಂಶ ಪ್ರದೇಶವಿರುವುದು ಶಕ್ಯ. ಎಂದೇ ಒಬ್ಬನ ವರ್ಣನೆಯಲ್ಲಿ ಇನ್ನೊಬ್ಬ ತನ್ನ ಭಾವನೆಯ ಹೊಳಹು ಗುರುತಿಸಿದರೆ ಅರ್ಥವೇನು? ಅವರ ನಡೆ ಗುರಿ ತಪ್ಪಿಲ್ಲ ಎಂದು!"

ಚಂದ್ರಶೇಖರರ ಜೊತೆಗಿನ ಮಾತುಕತೆಯಲ್ಲಿ ಅವರು ಈ ವಿವರಣೆಯನ್ನು ಪೂರ್ತಿ ಅನುಮೋದಿಸುತ್ತ, ಶೇಕ್ಸ್ಪಿಯರ್-ಸಾಲುಗಳನ್ನು ಉದಾಹರಿಸಿದರು: "There are more things in heaven and earth, Horatio, than are dreamt of in your philosophy." (*Hamlet* 1-5).

ವಿಜ್ಞಾನಿ — ನಿಸರ್ಗದಿಂದ ಸತ್ಯ ~~ಇಳಿಸು~~ ಬಟ್ಟಿ ಇಳಿಸುವ

ಪ್ರಯೋಗ ಚತುರ; ಕವಿ — ಜೀವನದಿಂದ ಮಾಲ್ಯ ಸೃಜಿಸಿ ಸಾಮಾನ್ಯರೆಡೆ ಸೂಸುವ ಕಲ್ಪವೃಕ್ಷ: ಮನುಕುಲಕ್ಕೆ ಗಮ್ಯ ತೋರುವಾತ ಕವಿ; ಗಮನವನ್ನು ಸಾಧ್ಯವಾಗಿಸುವಾತ ವಿಜ್ಞಾನಿ. ಬೇಂದ್ರೆ ಹಾಗೆ "ಕವಿತೆ ಜನನ ಮರಣ ಮಾರ್ಗ ಸಮರಸವೆ ಜೀವನ," ಅಥವಾ ಡಿವಿಜಿ-ಸೂತ್ರ, "ಮತಿ ವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ ಜನವು ಜನಜೀವನಕೆ" ಸದಾ ಪ್ರಸ್ತುತ.

ಈ ಸಂದರ್ಭದಲ್ಲಿ ಇನ್ನೊಂದು ಮಾತು ಸೇರಿಸಬೇಕು. ಬೇಂದ್ರೆಯವರ ಸಂಖ್ಯಾವಿಚಾರಗಳು ಆ ಮಹಾಸ್ಪಂದನಶೀಲ ಕವಿಮತಿಯ ಕುತೂಹಲಕಾರಿ ಅನ್ವೇಷಣೆಗಳೆಂದು ಪರಿಗಣಿಸಬೇಕೇ ವಿನಾ ವಿಜ್ಞಾನದ ದೃಢ ಪ್ರಯೋಗ-ವಿಶ್ಲೇಷಣೆ ನಿಕಷದಲ್ಲಿ ಉತ್ತೀರ್ಣವಾದ ವಿಜ್ಞಾನ ರಹಸ್ಯಗಳೆಂದಲ್ಲ: "ಬಲ್ಲ ಬಲ್ಲವರಲ್ಲ."

ವಿಜ್ಞಾನ ಪಥಿಕರೂ ಸಾಹಿತ್ಯ ಸಂಗೀತಾರಾಧಕರೂ ಆದ ಚಂದ್ರಶೇಖರ್ ತಾವು ಕಂಡ ಸತ್ಯ ಕುರಿತಂತೆ ಅರ್ಥಪೂರ್ಣವಾಗಿ ಬರೆದಿದ್ದಾರೆ:

> The simple is the seal of the true
> Beauty is the splendor of truth
> ಋತದ ರಾಜಮುದ್ರೆ, ಸರಳತೆ
> ಸತ್ಯದ ಕಾಂತಿಯೇ ಸೌಂದರ್ಯ
>
> (ಕನ್ನಡಾನುವಾದ: ಜಿ. ಎನ್. ಚಕ್ರವರ್ತಿ)

ಬೇಂದ್ರೆ ಕಾವ್ಯ ಓದುವಾಗ ಪ್ರತಿಸಲವೂ ಮನದೊಳಗೆ ಮಿಡಿಯುವ ಭಾವ ಇದೇ: ಸತ್ಯದ ಕಾಂತಿಯೇ ಸೌಂದರ್ಯ.

೨೭-೧೦-೧೯೯೭ ಜಿ. ಟಿ. ನಾರಾಯಣರಾವ್

ಮನೆ ನಂಬರ್ ೩೪೨೭/೧೮
೮ 'ಅತ್ರಿ', ಕಾವೇರಿ ಅಸ್ತ್ರ ರಸ್ತೆ,
ಸರಸ್ವತೀಪುರ
ಮೈಸೂರು ೫೭೦೦೦೯

ಜಿ. ಟಿ. ನಾರಾಯಣ ರಾವ್

# ಅಂಗಾರಕಮಾತ್ರಯಾಮ್ಯಹಂ

"ಖಗೋಳವಿಜ್ಞಾನದ ರಹಸ್ಯಗಳನ್ನು ಭೇದಿಸಲು ಮಂಗಳ ಮಾತ್ರ ನೆರವಾಗುತ್ತದೆ. ಅದು ಇಲ್ಲವಾಗಿದ್ದರೆ ಅವು ಸದಾ ಅಭೇದ್ಯವಾಗಿಯೇ ಉಳಿದಿರುತ್ತಿದ್ದುವು" ಎಂದು ಬರೆದಿದ್ದಾನೆ ಗ್ರಹಚಲನೆನಿಯಮಗಳನ್ನು ಆವಿಷ್ಕರಿಸಿದ ಯೋಹನ್ ಕೆಪ್ಲರ್ (1571-1630).

ಸೌರವ್ಯೂಹದ ನಾಲ್ಕನೆಯ ಗ್ರಹ, ಬರಿಗಣ್ಣಿಗೆ ಮಂದ ಕಂದು ಬಣ್ಣದ ಚುಕ್ಕಿ ಮಾತ್ರ, ಆಕಾಶದ ಅಸಂಖ್ಯ ಮಿನುಗುಗಳ ನಡುವೆ ತೀರ ಸಾಧಾರಣ ಅಸ್ತಿತ್ವ — ಇದು ಮಂಗಳ. ಕುಜ ಮತ್ತು ಅಂಗಾರಕ ಪರ್ಯಾಯನಾಮಗಳು.

ಭೂರಾಶಿಯನ್ನು ಗಾತ್ರವನ್ನು 1 ಎಂದಿಟ್ಟುಕೊಂಡರೆ ಮಂಗಳದ ರಾಶಿ 0.108, ಗಾತ್ರ 0.15. ಸೂರ್ಯನಿಗೆ ಈ ಬೆಲೆಗಳು 3,24,000 ಮತ್ತು 13,25,525. ಸೂರ್ಯ-ಭೂಮಿ ಸರಾಸರಿ ಅಂತರ (=14,96,00,000 ಕಿಮೀ) 1. ಎಂದು ಭಾವಿಸಿದರೆ ಸೂರ್ಯ-ಮಂಗಳ ಸರಾಸರಿ ಅಂತರ 1.54. ಬುಧ, ಶುಕ್ರ, ಗುರು ಮತ್ತು ಶನಿ ಕುರಿತಂತೆ ಈ ಅಂತರ 0.387, 0.723, 5.203 ಮತ್ತು 9.539.

ಭೂಮಿಯ ಸರಾಸರಿ ಕಕ್ಷಾವೇಗ (ಸೂರ್ಯನ ಸುತ್ತ ಗಮಿಸುವ ದರ) ಸೆಕೆಂಡಿಗೆ 29.8 ಕಿಮೀ, ಮಂಗಳದ್ದು 24.1. ಹೀಗೆ, ಭೂಮಿ ಜೊತೆ ಹೋಲಿಸುವಾಗ ಮಂಗಳ ಎರಡು ತೆರನಾದ ಪ್ರತಿಕೂಲಗಳನ್ನು ಎದುರಿಸಬೇಕಾಗಿದೆ: ದೀರ್ಘತರ ಕಕ್ಷೆ, ಕಡಿಮೆ ವೇಗ. ಎಂದೇ ಮಂಗಳದ ವರ್ಷ (ಸೂರ್ಯನ ಸುತ್ತ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ) 1.881 ಭೂವರ್ಷಗಳು.

ಯಾವುದೋ ಒಂದು ಅನುಕೂಲ ಮುಹೂರ್ತದಲ್ಲಿ ಭೂಮಿ ಮತ್ತು ಮಂಗಳ ಸೂರ್ಯನ ಒಂದೇ ಮಗ್ಗುಲಲ್ಲಿ ಒಂದೇ ರೇಖೆ ಮೇಲಿಂದ ಒಮ್ಮೆಗೇ ತಮ್ಮ ಓಟ ತೊಡಗಿದುವೆಂದು ಭಾವಿಸೋಣ. ಭೂಮಿ ಪ್ರತಿ ಸುತ್ತು ಮುಗಿಸುವಾಗಲೂ ಮಂಗಳ ಒಂದಿಷ್ಟು ಹಿಂದೆ ಬಿದ್ದಿರುತ್ತದೆ. ಈ ಅಂತರ ಜಾಸ್ತಿ ಜಾಸ್ತಿ ಆಗಿ ಮುಂದೊಂದು ದಿವಸ ಭೂಮಿ ಮಂಗಳವನ್ನು ಹಿಂದಿನಿಂದ ಬಂದು ಸಂಧಿಸುತ್ತದೆ. ಇದರ ಅರ್ಥ ಮಂಗಳ ರಾಶಿಚಕ್ರದ (ಭೂಮಿಯಿಂದ ಕಾಣುವಂತೆ ಸೂರ್ಯ, ಚಂದ್ರ, ಮತ್ತು ಗ್ರಹಗಳು ಖಗೋಳದಲ್ಲಿ ಸಂಚರಿಸುವ ಪಥಗಳ ಸಮುಚ್ಚಯ) ಮೇಲೆ ಎಲ್ಲಿ ಬೇಕಾದರೂ ಪ್ರಕಟವಾಗಬಹುದು ಎಂದು — ಈ ನೆಲೆ ಸೂರ್ಯಾವಲಂಬಿ ಅಲ್ಲ. ಬುಧ ಮತ್ತು ಶುಕ್ರ ಗ್ರಹಗಳ ಸ್ಥಾನಗಳು ಸೂರ್ಯನನ್ನು ಅವಲಂಬಿಸಿವೆ. ಇತ್ತ ಗುರು ಮತ್ತು ಶನಿ ಕೂಡ ಮಂಗಳದಂತೆ ವರ್ತಿಸುವುವಾದರೂ ಇವುಗಳ ವರ್ಷಗಳು ದೀರ್ಘತರವಾಗಿರುವುದರಿಂದ (ಗುರು 11.86 ಭೂವರ್ಷ, ಶನಿ 29.46 ಭೂವರ್ಷ) ವೀಕ್ಷಣೆಗೆ ಇವು ಮಂಗಳದಷ್ಟು ಅನುಕೂಲ ಗ್ರಹಗಳಲ್ಲ.

ಮಂಗಳದ ಈ ಸಹಜ ಸೌಕರ್ಯ ನಿಸರ್ಗ ಖಗೋಳವಿಜ್ಞಾನಿಗೆ ಪ್ರದಾನಿಸಿರುವ ವರ. ಈ ವೈಶಿಷ್ಟ್ಯ ಪ್ರಾಚೀನ ಕಾಲದಿಂದಲೂ ವಿಜ್ಞಾನಿಗಳನ್ನು ಮೂರ್ಖರನ್ನು ಸಮವಾಗಿಯೇ ಆಕರ್ಷಿಸಿದೆ. ವಿಜ್ಞಾನಿಗಳು ತಮಗೆ ತಿಳಿದ ರೀತಿಯಲ್ಲಿ ಮಾಹಿತಿಗಳನ್ನು ಕಲೆಹಾಕಿ ಕಾಲದಿಂದ

(2) ಕಾಲಕ್ಕೆ
(ಅವನ್ನು ಪರಿಷ್ಕರಿಸಿ ಮಂಗಳದ ಪಾತಕ ತಯಾರಿಸಿದರು. ಇದು ಕೆಪ್ಲರನಿಗೆ ಸಿದ್ಧ ಕೋಷ್ಟಕವಾಗಿ ಒದಗಿದುದರಿಂದ ಅವನು ಗ್ರಹಚಲನ ನಿಯಮಗಳನ್ನು ಆವಿಷ್ಕರಿಸುವುದು ಸುಲಭಸಾಧ್ಯವಾಯಿತು. ಪುರಾಣಾದರೋ ಮಂಗಳದಲ್ಲಿ ದೌರ್ಬಲ್ಯದ ಆಕರ ಗುರುತಿಸಿ ಮಾನವನ ಆಗುಹೋಗುಗಳ ಮೇಲೆ ಅದರ ಪ್ರಭಾವವನ್ನು ಮುನ್ನುಡಿದರು. ಪರಂಪರಾಗತವಾಗಿ ಬಂದಿರುವ ಈ ಮೂಢ ನಂಬಿಕೆಗೆ ಪ್ರತ್ಯಕ್ಷ ನಿದರ್ಶನ ಇಂದು ಎಂದಿಗಿಂತ ಹೆಚ್ಚಾಗಿ ವಿಜೃಂಭಿಸುತ್ತಿರುವ ಫಲಜ್ಯೋತಿಷ್ಯ. ವಾಸ್ತವವಾಗಿ ದುಷ್ಟ ಅಥವಾ ಶಿಷ್ಟ ಗ್ರಹ ಎಂಬ ಭಾವನೆಯೇ ಅಬದ್ಧ.

1970ರ ದಶಕದಲ್ಲಿ ವೈಕಿಂಗ್ ನೌಕೆಗಳು ಮಂಗಳದ ಮೇಲಿಳಿದು ಅಲ್ಲಿಯ ಸ್ಥಿತಿಗತಿ ಕುರಿತು ಭೂಮಿಗೆ ಮಾಹಿತಿ ಬಿತ್ತರಿಸಿವೆ: ಕಲ್ಲು ಬಂಡೆಗಳು ~~[illegible]~~ ಮತ್ತು ಮಣ್ಣು ಹೆಂಟೆಗಳು ಚೆಲ್ಲಾಬಿಟ್ಟ ಬಿರಿದುಹೋಗಿರುವ ಬಂಜರು ನೆಲ; ನೀರಿಲ್ಲ, ಹಸಿರಿಲ್ಲ, ಜೀವಿಗಳ ಹೇಳಹೆಸರಿಲ್ಲ. ಕಂದು ಧೂಳು ಅಲ್ಲಿಯ ವಾಯುಮಂಡಲದಲ್ಲಿ ಹರಡಿಹೋಗಿ ವಾಯುಮಂಡಲಕ್ಕೆ ಆ ಬಣ್ಣ ಲೇಪಿಸಿದೆ.

ಮಂಗಳವನ್ನು ಪರಿಭ್ರಮಿಸುತ್ತಿರುವ ಎರಡು ಉಪಗ್ರಹಗಳಿವೆ. ಇವು ಪತ್ತೆ ಆದದ್ದು 1877ರಲ್ಲಿ.

ಸೌರವ್ಯೂಹದ ಮಹಾದಂಡಯಾತ್ರೆಗೆ ಮುಂದೊಂದು ದಿನ ಹೊರಡಲಿರುವ ಮಾನವಸಹಿತ ಆಕಾಶನೌಕೆಗೆ ಮಂಗಳದಂಗಳ ಮೊದಲ ತಂಗುದಾಣ. ಪ್ರಾಕೃತಿಕ ಸ್ವಭಾವದಲ್ಲಿ ಭೂಮಿಯ ಕಿರಿ ಅವಳಿಯಂತಿರುವ ಇಲ್ಲಿ ಕೃತಕ ವಸಾಹತನ್ನು ನಿರ್ಮಿಸಿ ಅದರಲ್ಲಿ ವಾಸಿಸುವುದು ಮಾನವನಿಗೆ ~~ಸುಲಭಸಾಧ್ಯವಾದೀತು~~. ಕೈಗೂಡೀತು

[illegible]
7-7-87

ದೂರವಾಣಿ 25759
ಜಿ ಟಿ ನಾರಾಯಣರಾವ್
6 ತ್ರಿ ಎಂಟನೆಯ ಅಡ್ಡರಸ್ತೆ
ಕುವೆಂಪುನಗರ
ಮೈಸೂರು 570023

ಜಿ. ಟಿ. ನಾರಾಯಣ ರಾವ್.

# ಅಂಗಾರಕ ಮಾಶ್ರಯಾಮ್ಯಹಂ

"ಖಗೋಳ ವಿಜ್ಞಾನದ ರಹಸ್ಯಗಳನ್ನು ಭೇದಿಸಲು ಮಂಗಳ ಮಾತ್ರ ನೆರವಾಗುತ್ತದೆ. ಅದು ಇಲ್ಲವಾಗಿದ್ದರೆ ಅವು ಸದಾ ಅಭೇದ್ಯವಾಗಿಯೇ ಉಳಿದಿರುತ್ತಿದ್ದವು" ಎಂದು ಬರೆದಿದ್ದಾನೆ ಗ್ರಹಚಲನ ನಿಯಮಗಳನ್ನು ಆವಿಷ್ಕರಿಸಿದ ಯೋಹನ್ ಕೆಪ್ಲರ್ (1571–1630).

ಸೌರವ್ಯೂಹದ ನಾಲ್ಕನೆಯ ಗ್ರಹ, ಬರಿಗಣ್ಣಿಗೆ ಮಂದ ಕೆಂದು ಬಣ್ಣದ ಚುಕ್ಕಿಮಾತ್ರ, ಆಕಾಶದ ಅಸಂಖ್ಯ ಮಿನುಗುಗಳ ನಡುವೆ ತೀರ ಸಾಧಾರಣ ಅಸ್ತಿತ್ವ— ಇದು ಮಂಗಳ. ಕುಜ ಮತ್ತು ಅಂಗಾರಕ ಪರ್ಯಾಯ ನಾಮಗಳು.

ಭೂ ರಾಶಿಯನ್ನೂ ಗಾತ್ರವನ್ನೂ 1 ಎಂದಿಟ್ಟುಕೊಂಡರೆ ಮಂಗಳದ ರಾಶಿ 0.108, ಗಾತ್ರ 0.15. ಸೂರ್ಯನಿಗೆ ಈ ಬೆಲೆಗಳು 3,24,000 ಮತ್ತು 13,25,525. ಸೂರ್ಯ–ಭೂಮಿ ಸರಾಸರಿ ಅಂತರ (=14,96,00,000 ಕಿಮೀ) 1 ಎಂದು ಭಾವಿಸಿದರೆ ಸೂರ್ಯ–ಮಂಗಳ ಸರಾಸರಿ ಅಂತರ 1.54. ಬುಧ, ಶುಕ್ರ, ಗುರು ಮತ್ತು ಶನಿ ಕುರಿತಂತೆ ಈ ಅಂತರ 0.387, 0.723, 5.203 ಮತ್ತು 9.539.

ಭೂಮಿಯ ಸರಾಸರಿ ಕಕ್ಷಾವೇಗ (ಸೂರ್ಯನ ಸುತ್ತ ಗಮಿಸುವ ದರ) ಸೆಕೆಂಡಿಗೆ 29.8 ಕಿಮೀ, ಮಂಗಳದ್ದು 24.1. ಹೀಗೆ, ಭೂಮಿ ಜೊತೆ ಹೋಲಿಸುವಾಗ ಮಂಗಳ ಎರಡು ತೆರನಾದ ಪ್ರತಿಕೂಲಗಳನ್ನು ಎದುರಿಸ ಬೇಕಾಗಿದೆ: ದೀರ್ಘತರ ಕಕ್ಷೆ, ಕಡಿಮೆ ವೇಗ. ಎಂದೇ ಮಂಗಳದ ವರ್ಷ (ಸೂರ್ಯನ ಸುತ್ತ ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ) 1.881 ಭೂವರ್ಷಗಳು.

ಯಾವುದೋ ಒಂದು ಅನುಕೂಲ ಮುಹೂರ್ತದಲ್ಲಿ ಭೂಮಿ ಮತ್ತು ಮಂಗಳ ಸೂರ್ಯನ ಒಂದೇ ಮಗ್ಗುಲಲ್ಲಿ ಒಂದೇ ಗೆರೆ ಮೇಲಿಂದ ಒಮ್ಮೆಗೇ ತಮ್ಮ ಓಟ ತೊಡಗಿದುವೆಂದು ಭಾವಿಸೋಣ. ಭೂಮಿ ಪ್ರತಿ ಸುತ್ತು ಮುಗಿಸುವಾಗಲೂ ಮಂಗಳ ಒಂದಿಷ್ಟು ಹಿಂದೆ ಬಿದ್ದಿರುತ್ತದೆ. ಈ ಅಂತರ ಜಾಸ್ತಿ ಜಾಸ್ತಿ ಆಗಿ ಮುಂದೊಂದು ದಿವಸ ಭೂಮಿ ಮಂಗಳವನ್ನು ಹಿಂದಿನಿಂದ ಬಂದು ಸಂಧಿಸುತ್ತದೆ. ಇದರ ಅರ್ಥ ಮಂಗಳ ರಾಶಿಚಕ್ರದ (ಭೂಮಿಯಿಂದ ಕಾಣುವಂತೆ ಸೂರ್ಯ, ಚಂದ್ರ ಮತ್ತು ಗ್ರಹಗಳು ಖಗೋಳದಲ್ಲಿ ರೇಖಿಸುವ ಪಥಗಳ ಸಮುಚ್ಚಯ) ಮೇಲೆ ಎಲ್ಲಿ ಬೇಕಾದರೂ ಪ್ರಕಟವಾಗಬಹುದು ಎಂದು — ಈ ನೆಲೆ ಸೂರ್ಯಾವಲಂಬಿ ಅಲ್ಲ. ಬುಧ ಮತ್ತು ಶುಕ್ರ ಗ್ರಹಗಳ ಸ್ಥಾನಗಳು ಸೂರ್ಯನನ್ನು ಅವಲಂಬಿಸಿವೆ. ಗುರು ಮತ್ತು ಶನಿ ಕೂಡ ಮಂಗಳದಂತೆ ವರ್ತಿಸುವುವಾದರೂ ಇವುಗಳ ವರ್ಷಗಳು ದೀರ್ಘತರವಾಗಿರುವುದರಿಂದ (ಗುರು 11.86 ಭೂವರ್ಷ, ಶನಿ 29.46 ಭೂವರ್ಷ) ವೀಕ್ಷಣೆಗೆ ಇವು ಮಂಗಳದಷ್ಟು ಅನುಕೂಲ ಗ್ರಹಗಳಲ್ಲ.

ಮಂಗಳದ ಈ ಸಹಜ ಸೌಕರ್ಯ ನಿಸರ್ಗ ಖಗೋಳ ವಿಜ್ಞಾನಿಗೆ ಪ್ರದಾನಿಸಿರುವ ವರ. ಈ ವೈಶಿಷ್ಟ್ಯ ಪ್ರಾಚೀನ ಕಾಲದಿಂದಲೂ ವಿಚಾರಿಗಳನ್ನೂ ಮೂಢರನ್ನೂ ಸಮವಾಗಿಯೇ ಆಕರ್ಷಿಸಿದೆ. ವಿಚಾರಗಳು

ತಮಗೆ ತಿಳಿದ ರೀತಿಯಲ್ಲಿ ಮಾಹಿತಿಗಳನ್ನು ಕಲೆಹಾಕಿ ಕಾಲದಿಂದ ಕಾಲಕ್ಕೆ ಅವನ್ನು ಪರಿಷ್ಕರಿಸಿ ಮಂಗಳನ ಜಾತಕ ತಯಾರಿಸಿದರು. ಇದು ಕೆಪ್ಲರನಿಗೆ ಸಿದ್ಧ ಕೋಷ್ಟಕವಾಗಿ ಒದಗಿದುದರಿಂದ ಅವನು ಗ್ರಹ ಚಲನ ನಿಯಮಗಳನ್ನು ಆವಿಷ್ಕರಿಸುವುದು ~~[illegible]~~ ಸಾಧ್ಯವಾಯಿತು. ಮೂರ್ಖರಾದರೋ ಮಂಗಳದಲ್ಲಿ ದೌಷ್ಟ್ಯದ ಆಗರ ಗುರುತಿಸಿ ಮಾನವನ ಆಗುಹೋಗುಗಳ ಮೇಲೆ ಅದರ ಪ್ರಭಾವವನ್ನು ಮುನ್ನುಡಿದರು. ಪರಂಪರಾಗತವಾಗಿ ಬಂದಿರುವ ಈ ಮೂಢ ನಂಬಿಕೆಗೆ ಪ್ರತ್ಯಕ್ಷ ನಿದರ್ಶನ ಇಂದು ಎಂದಿಗಿಂತ ಹೆಚ್ಚಾಗಿ ವಿಜೃಂಭಿಸುತ್ತಿರುವ ಫಲಜ್ಯೋತಿಷ್ಯ. ವಾಸ್ತವವಾಗಿ ದುಷ್ಟ ಅಥವಾ ಶಿಷ್ಟ ಗ್ರಹ ಎಂಬ ಭಾವನೆಯೇ ಅಬದ್ಧ.

1970ರ ದಶಕದಲ್ಲಿ ವೈಕಿಂಗ್ ನೌಕೆಗಳು ಮಂಗಳದ ಮೇಲಿಳಿದು ಅಲ್ಲಿಯ ಸ್ಥಿತಿಗತಿ ಕುರಿತು ಭೂಮಿಗೆ ಮಾಹಿತಿ ಬಿತ್ತರಿಸಿವೆ: ಕಲ್ಲುಬಂಡೆಗಳು ಮತ್ತು ಮಣ್ಣಿ ಹೆಂಟೆಗಳು ಬೇಕಾಬಿಟ್ಟಿ ಚದರಿ ಹೋಗಿರುವ ಬಂಜರು ನೆಲ; ನೀರಿಲ್ಲ, ಹಸುರಿಲ್ಲ, ಜೀವಿಗಳ ಹೇಳ ಹೆಸರಿಲ್ಲ. ಕೆಂದು ದೂಳು ಅಲ್ಲಿಯ ವಾಯು ಮಂಡಲದಲ್ಲಿ ಹರಡಿ ಹೋಗಿ ವಾಯು ಮಂಡಲಕ್ಕೆ ಆ ಬಣ್ಣ ಲೇಪಿಸಿದೆ.

ಮಂಗಳವನ್ನು ಪರಿಭ್ರಮಿಸುತ್ತಿರುವ ಎರಡು ಉಪಗ್ರಹಗಳಿವೆ. ~~ಇವು ಪತ್ತೆ ಆದದ್ದು~~ 1877ರಲ್ಲಿ ~~[illegible]~~ ಇವನ್ನು ಪತ್ತೆ ಮಾಡಲಾಯಿತು

ಸೌರವ್ಯೂಹದ ವ್ಯಾಸದಂಡಯಾತ್ರೆಗೆ ಮುಂದೊಂದು ದಿನ ಹೋಗಲಿರುವ ಮಾನವನಿಗೆ ಮಂಗಳ ಗ್ರಹ ಮೊದಲ ತಂಗುದಾಣ. ಪ್ರಾಕೃತಿಕ ಸ್ವಭಾವದಲ್ಲಿ ಭೂಮಿಯ ಕಿರಿ ಅವಳಿಯಂತಿರುವ ಇಲ್ಲಿ ಕೃತಕ ವಸಾಹತನ್ನು ನಿರ್ಮಿಸಿ ಅದರಲ್ಲಿ ವಾಸಿಸುವುದು ಮಾನವನಿಗೆ ಕೈಗೂಡೀತು.


ದೂರವಾಣಿ 25759
ಜಿ.ಟಿ. ನಾರಾಯಣ ರಾವ್
ಅತ್ರಿ ಎಂಟನೆಯ ಅಡ್ಡ ರಸ್ತೆ
ಕುವೆಂಪು ನಗರ
ಮೈಸೂರು 570023.

# ಶಿಕ್ಷಣಕ್ಷೇತ್ರದಲ್ಲಿ ಶ್ರೀಕ್ಷೇತ್ರದ ಪಾತ್ರ

## ಪೀಠಿಕೆ

ಧಾರವಾಡ, ಹುಬ್ಬಳ್ಳಿ, ಉಡುಪಿ, ಮಂಗಳೂರು, ಉಜಿರೆ ಮುಂತಾದ ಕೇಂದ್ರಗಳಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯ ವ್ಯವಸ್ಥಾಪನೆ (ಎಸ್‌ಡಿಎಮ್) ಶಿಕ್ಷಣರಂಗಕ್ಕೆ ಸಲ್ಲಿಸುತ್ತಿರುವ ಸೇವೆಯ ವ್ಯಾಪ್ತಿ ವೈವಿಧ್ಯಗಳನ್ನು ಪ್ರತ್ಯಕ್ಷ ನೋಡಿ ತಿಳಿದದ್ದಾಯಿತು. ಸ್ಥಳೀಯ ವಿದ್ಯಾರ್ಥಿ, ಅಧ್ಯಾಪಕ, ಶಿಕ್ಷಣ ತಜ್ಞರೆಲ್ಲರನ್ನೂ ಭೇಟಿಯಾಗಿ ವಿಚಾರವಿನಿಮಯ ಮಾಡಿದ್ದಾಯಿತು. ಸಾಕಷ್ಟು ಮುದ್ರಿತ ಮಾಹಿತಿಗಳನ್ನು ಸಂಗ್ರಹಿಸಿದ್ದಾಯಿತು. ಈ ಜ್ಞಾನಪರಿವ್ರಜ್ಯದ ಅಂತಿಮ ಘಟ್ಟದಲ್ಲಿ ಶ್ರೀಕ್ಷೇತ್ರದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಜೊತೆ ಖಾಸಗಿಯಾಗಿ ಚರ್ಚಿಸಿ ಅವರ ಅಭಿಪ್ರಾಯವನ್ನು ಅರಿತದ್ದಾಯಿತು. ಫಲಿತಾಂಶ: ಈ ಲೇಖನ — ಮಹತ್ತನ್ನು ತೀರ ಸೀಮಿತ ಕಾಲಾವಧಿಯಲ್ಲಿ ಪದಗಳೊಳಗೆ ಹಿಡಿದಿಡಲು ಮಾಡಿದ ಪ್ರಯತ್ನ.

ಇಂಥ ಒಂದು ಕೆಲಸ ನನ್ನಿಂದ ಆಗಬೇಕೆಂದು ಬಯಸಿ ನನಗೆ ಎಲ್ಲ ಸೌಕರ್ಯಗಳನ್ನೂ (ಕಾಲವೊಂದರ ಹೊರತಾಗಿ!) ಒದಗಿಸಿ ಉಪಕರಿಸಿದ ಪ್ರೊ ಎಸ್. ಪ್ರಭಾಕರ ಮತ್ತು ಪ್ರೊ ಎನ್. ವಜ್ರಕುಮಾರ್ ದ್ವಯರಿಗೂ ಇವರ ಎಲ್ಲ ಸಹೋದ್ಯೋಗಿಗಳಿಗೂ ಹಾರ್ದಿಕ ನಮನಗಳು: 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ.' ನನ್ನ ಪಾತ್ರ ಈ ಎರಡನೆಯದು. ಅಸಾಧ್ಯವನ್ನು ಸಾಧ್ಯವಾಗಿಸಬಲ್ಲ ಪ್ರಭಾವಶಾಲಿಗಳು ಮತ್ತು ವಜ್ರಸಂಕಲ್ಪರು ಪ್ರಭಾಕರ್ ಮತ್ತು ವಜ್ರಕುಮಾರ್. ಈ ಕರ್ಮವೀರರನ್ನು ಹೆಗ್ಗಡೆಯವರ ಎರಡು ಕಣ್ಣುಗಳೆಂದು ಜನ ವರ್ಣಿಸುವುದು ಔಚಿತ್ಯಪೂರ್ಣವಾಗಿದೆ.

## ದೃಷ್ಟಿದಿಗಂತ

ಪ್ರಶ್ನೆ: "ಧರ್ಮಸ್ಥಳದ ಸಂಪನ್ಮೂಲಗಳನ್ನು ಧಾರ್ಮಿಕಕಾರ್ಯಗಳಿಗೆ ಮಾತ್ರ ವಿನಿಯೋಗಿಸದೆ ಆಧುನಿಕ ಶಿಕ್ಷಣ, ಸಂಸ್ಕೃತಿಪ್ರಸಾರ, ಸ್ವೋದ್ಯೋಗ ತರಬೇತಿ ಮುಂತಾದ ಲೌಕಿಕ ಉದ್ದೇಶಗಳಿಗೆ ಕೂಡ ಹೂಡುತ್ತಿರುವಿರಿ. ಹಿನ್ನೆಲೆಯಲ್ಲಿರುವ ಪ್ರೇರಣೆ ಮತ್ತು ಗುರಿ ಏನು?"

ವೀರೇಂದ್ರ ಹೆಗ್ಗಡೆಯವರು: "ಮಾನವನ ಚಟುವಟಿಕೆಗಳನ್ನು ಧಾರ್ಮಿಕ ಮತ್ತು ಲೌಕಿಕ ಎಂಬ, ಪರಸ್ಪರಸಂಬಂಧವಿರದ, ಎರಡು ವರ್ಗಗಳಾಗಿ ವಿಭಾಗಿಸಿ ಆ ಪ್ರಕಾರ ಅಭ್ಯಸಿಸುವುದು ಭಾರತೀಯ ಸಂಪ್ರದಾಯವಲ್ಲ. ವ್ಯಕ್ತಿ ಧರ್ಮದ ಗಟ್ಟಿ ನೆಲದಲ್ಲಿ ನಿಂತು ಅರ್ಥ, ಕಾಮ ಮತ್ತು ಮೋಕ್ಷ ಎಂಬ ಉಳಿದ ಮೂರು ಪುರುಷಾರ್ಥಗಳನ್ನು ಸಾಧಿಸಬೇಕು. ಆಗ ಮಾತ್ರ ಆತನ ಜೀವನ ಸುಭದ್ರ ಮತ್ತು ಸುಖಮಯ ಆಗುವುದೆಂದು ನಮ್ಮ ಸಾಂಸ್ಕೃತಿಕ ಪರಂಪರೆ ಪ್ರತಿಪಾದಿಸುತ್ತದೆ.

ಆದ್ದರಿಂದ ನಮ್ಮ ಪ್ರತಿಯೊಂದು ಕಾರ್ಯವೂ ಧರ್ಮಾವಲಂಬಿಯಾಗಿರತಕ್ಕದ್ದು, ಎಂದೂ ಧರ್ಮವಿರೋಧಿಯಾಗತಕ್ಕದ್ದಲ್ಲ. ಈ ತಥ್ಯವನ್ನು ಗ್ರಹಿಸಿದ್ದಾದರೆ ಶ್ರೀಕ್ಷೇತ್ರದ ವತಿಯಿಂದ ನಡೆಯುತ್ತಿರುವ ಜನಕಲ್ಯಾಣ ಕಾರ್ಯಕ್ರಮಗಳೆಲ್ಲವೂ ಧರ್ಮದ ವಿವಿಧ ವಿಸ್ತರಣೆಗಳಾಗುತ್ತವೆಂದು ತಿಳಿಯುತ್ತದೆ."

'ದಯೆಯೇ ಧರ್ಮದ ಮೂಲ' ಎಂಬ ತತ್ತ್ವ ಜನಜೀವನದಲ್ಲಿ ಹಾಸುಹೊಕ್ಕಾಗಿರುವಂತೆ ಮಾಡಲು ಅಹರ್ನಿಶಿ ತ್ರಿಕರಣಪೂರ್ವಕ ಸೇವೆಸಲ್ಲಿಸುತ್ತಿರುವ ಹೆಗ್ಗಡೆಯವರು ಧಾರ್ಮಿಕವಲ್ಲದ ಲೌಕಿಕತೆ ವ್ಯಕ್ತಿಯನ್ನು ಶೂನ್ಯವಾದಿಯಾಗಿಸುವುದೆಂದೂ ಲೌಕಿಕವಲ್ಲದ ಧಾರ್ಮಿಕತೆ ಪಲಾಯನವಾದಿಯಾಗಿಸುವುದೆಂದೂ ಹೇಳುತ್ತಾರೆ.

ಅವರ ಪ್ರೇರಣೆಯ ಮೂಲವನ್ನೂ ನಡಿಗೆಯ ಗುರಿಯನ್ನೂ ಇಲ್ಲಿ ಕಾಣುತ್ತೇವೆ: ಧರ್ಮಾಧಾರಿತ ಲೌಕಿಕತೆ.

ಸಂಸ್ಕೃತಿ ಎಂದರೇನು? ಅದು ಆಯಾ ದೇಶದ ಅಂತಸ್ಸತ್ತ್ವ ಅಥವಾ ಆತ್ಮ. "ಆ ಸಂಸ್ಕೃತಿಯಲ್ಲಿ ಜೀವನ ಸಂದರ್ಭದ ಯುಕ್ತಾಯುಕ್ತ ವಿವೇಚನೆ ಒಂದು ಅಂಶ; ವಸ್ತುಗಳ ಮೌಲ್ಯ ತಾರತಮ್ಯಗಣನೆ ಇನ್ನೊಂದಂಶ; ಪರೇಂಗಿತ ಪರಿಜ್ಞಾನ ಮತ್ತೊಂದು ಅಂಶ; ಸರಸತಾಭಿರುಚಿ ಮತ್ತೊಂದು ಅಂಶ; ಧರ್ಮಚಿಂತನೆಯ ಜಾಗರೂಕತೆ ಮತ್ತೊಂದಂಶ: ಹೀಗೆ ನಾನಾ ವಿಜ್ಞಾನ ನಾನಾ ವಿವೇಕಗಳ ಸಮಾವೇಶದ ಫಲ ಸಂಸ್ಕೃತಿ."[n]

ಭಾರತೀಯ ಸಂಸ್ಕೃತಿಯ ತಾಯಿಬೇರು ಧರ್ಮ:

ತನಗೆಂದುಂ ಕೇಡಿಲ್ಲದು
ದನೆ ಬಯಸುವ ಮನುಜನಾವ ಜೀವಮುಮಂ ತ
ನ್ನನೆ ಬಗೆವ ತೆಱದೆ ಬಗೆವುದು
ಮುನಿ ವೇದವ್ಯಾಸಮತಮಿದತಿಶಯ ಧರ್ಮಂ

"ತನಗೆ ಎಂದೂ ಕೇಡಿಲ್ಲದುದನ್ನೇ ಬಯಸುವ ಮನುಷ್ಯ, ಇತರ ಜೀವರನ್ನೂ ತನ್ನನ್ನು ತಿಳಿಯುವಂತೆಯೇ ತಿಳಿಯಬೇಕು. ಮುನಿಗಳಾದ ವೇದವ್ಯಾಸರ ಮತವಾಗಿರುವ ಇದು ಅತಿಶಯವಾದ ಧರ್ಮ."

ಲೌಕಿಕತೆ ಎಂದರೆ ಲೋಕವ್ಯವಹಾರಜ್ಞಾನ— ಸಾಮಾಜಿಕ ಜೀವನದಲ್ಲಿ ವ್ಯಕ್ತಿ ವರ್ತಿಸುವ ಪರಿ, ಗಮಿಸುವ ಪಥ, ಮತ್ತು ತಳೆಯುವ ನಿಲುವು. ವ್ಯಕ್ತಿ-ವ್ಯಕ್ತಿ, ವ್ಯಕ್ತಿ-ಸಮಾಜ, ಸಮಾಜ-ವ್ಯಕ್ತಿ, ಸಮಾಜ-ಸಮಾಜ ಅಂತರಕ್ರಿಯೆಗಳ ಮೊತ್ತವಿದು. ಇಲ್ಲಿ ನೈತಿಕತೆ ಅತ್ಯಂತ ಮಹತ್ತ್ವದ ಪಾತ್ರ ವಹಿಸುತ್ತದೆ: ವ್ಯಕ್ತಿ ಅಂತರಂಗಿಕವಾಗಿ ತನ್ನ ಜೊತೆಯಲ್ಲೂ ಬಾಹಿರಂಗಿಕವಾಗಿ ಸಮಾಜ ಹಾಗೂ ಪರಿಸರದ ಜೊತೆಯಲ್ಲೂ ಧರ್ಮ ಒಪ್ಪುವಂತೆ ವರ್ತಿಸಬೇಕು. ಆಗ ಮಾತ್ರ ಸಮಾಜದ ಆರೋಗ್ಯ ಸುಸ್ಥಿತಿಯಲ್ಲಿರುವುದು, ಕಾರ್ಯಕಲಾಪಗಳು

ಸುಸೂತ್ರವಾಗಿ ಜರಗುವುವು: ಸರ್ವೇಜನಾಸ್ಸುಖಿನೋಭವಂತು. ಈ ಶಿಷ್ಟ ವರ್ತನಸಂಹಿತೆಯೇ ನೈತಿಕತೆ.

ಹೆಗ್ಗಡೆಯವರು ಹೇಳುತ್ತಾರೆ: "ಧರ್ಮಸ್ಥಳದಲ್ಲಿ ಹೆಸರೇ ಸೂಚಿಸುವಂತೆ ಧರ್ಮ ತೀರ ಸಹಜವಾಗಿ ನೆಲಸಿದೆ. ಇದರ ಅಂಗವಾಗಿ ಇಲ್ಲಿ ಶ್ರೀ ಮಂಜುನಾಥಸ್ವಾಮಿಗೆ ಮತ್ತು ಇತರ ಧರ್ಮದೇವತೆಗಳಿಗೆ ಪೂಜೆ ಮತ್ತು ಉತ್ಸವ ಸೇವೆ ಸಲ್ಲುತ್ತವೆ; ಭಕ್ತರಿಗೆ ಅಭಯಪ್ರದಾನ ಮತ್ತು ಹೊಯ್ಲು ಅಥವಾ ನ್ಯಾಯಪ್ರದಾನ, ಜನಸೇವಾರ್ಥ ಸಹಾಯಕೋರಿ ಬರುವವರಿಗೆ ಧನದಾನ, ಮತ್ತು ಸಮಸ್ತ ಯಾತ್ರಿಕರಿಗೆ ಅನ್ನದಾನ ಇಲ್ಲಿ ಸದಾ ನೆರವೇರುತ್ತಿರುವ ಪ್ರೀತಿಯ ಕರ್ತವ್ಯಗಳು. ಇವು ಪರಂಪರಾಗತವಾಗಿ ನಡೆದುಕೊಂಡುಬಂದು ಇವುಗಳ ಸುತ್ತ ಪಾವಿತ್ರ್ಯದ ಪರಿವೇಷ ಬೆಳಗಿಸಿವೆ. ಧರ್ಮದೇವತೆಗಳ ಪ್ರತಿನಿಧಿಯಾದ ಹೆಗ್ಗಡೆ ಆ ದೇವತೆಗಳ ಆಣತಿ ಮೇರೆಗೆ ಈ ಕರ್ತವ್ಯಗಳನ್ನು ನಿರ್ವಹಿಸಲು ಬದ್ಧನಾಗಿದ್ದಾನೆ. ಇಲ್ಲಿಯ ವ್ಯವಸ್ಥೆ ತದನುಗುಣವಾಗಿ ತಲೆಮಾರುಗಳಿಂದ ವಿಕಾಸಗೊಂಡಿದೆ."

ಶಿಕ್ಷಣ ಎಂದರೇನು?

ವ್ಯಕ್ತಿಗೆ ಸಾರ್ಥಕ ಜೀವನ ನಡೆಸಲು ಮೂರು ಪ್ರಮುಖ ಆವಶ್ಯಕತೆಗಳಿವೆ: ಆದಾಯ ತರುವ ಒಂದು ವೃತ್ತಿ, ವ್ಯವಹಾರ ಕುಶಲತೆ ಮತ್ತು ನೈತಿಕತೆ. ಶಿಕ್ಷಣದ ಪ್ರತ್ಯಕ್ಷ ಪ್ರಯೋಜನ ಮೊದಲನೆಯದು, ಅಪ್ರತ್ಯಕ್ಷ ಪ್ರಯೋಜನಗಳು ಉಳಿದೆರಡು.

ಬೃಹದ್ವಿಶ್ವದ ಅನಂತಾಲ್ಪ ಶಿಶು ಈ ಮಾನವ. ವಿಶ್ವಚೇತನ ಸದಾ ಸ್ಪಂದಿಸುತ್ತಿರುವುದು — ಗತಿಶೀಲತೆಯೇ ಜಗತ್ತಿನ ಧರ್ಮ. ಅಂದಮೇಲೆ ಮಾನವಮತಿ ವಿಶ್ವಚೇತನಕ್ಕೆ ಪ್ರತಿಸ್ಪಂದಿಸಬೇಕಾದದ್ದು ಅನಿವಾರ್ಯ. (ಇಲ್ಲವಾದರೆ ಬದುಕು ಹಳಿದಪ್ಪಿದ ಬಂಡಿ ಅಥವಾ ಗುರಿಕಳೆದ ಬಾಣ ಆಗುತ್ತದೆ.) ಉದಾಹರಣೆಗೆ, ೨೦ನೆಯ ಶತಮಾನದ ಕೊನೆಯ ದಶಕದಲ್ಲಿರುವ ನಾವು ಮಾನಸಿಕವಾಗಿ ಭೂತಕಾಲದಲ್ಲಿ ವಿಹರಿಸುತ್ತಿದ್ದರೆ ಏನಾದೀತು! ವಿಶ್ವಚೇತನಕ್ಕೆ ಯುಕ್ತವಾಗಿ ಪ್ರತಿಸ್ಪಂದಿಸಲು ಮಾನವಮತಿಗೆ ಚಾಲನೆ ಅಥವಾ ಪ್ರೇರಣೆ ಕೊಡುವುದು ಶಿಕ್ಷಣದ ಗುರಿ ಆಗಬೇಕು. ಅನ್ವೇಷಣೆ, ವೀಕ್ಷಣೆ, ಮಾಹಿತಿಸಂಗ್ರಹಣೆ, ವಿಶ್ಲೇಷಣೆ ಮತ್ತು ಸಂಶ್ಲೇಷಣೆ, ಚಿಂತನೆ, ಪ್ರಯೋಗ, ತೀರ್ಮಾನ ಎಲ್ಲವೂ ಶಿಕ್ಷಣದ ಘಟಕಗಳು. ಶಿಕ್ಷಣದಿಂದ ವಿಶ್ವದ ತಾರ್ಕಿಕ ವ್ಯಾಖ್ಯಾನ ಒದಗುತ್ತದೆ. ವಿಶ್ವ 'ನಿಚ್ಚಂ ಪೊಸತು' — ನವನವೋನ್ಮೇಷಶಾಲಿನಿ. ಆದ್ದರಿಂದ ಶಿಕ್ಷಣ ವಿಶ್ವದ ಜೊತೆ ಸಮಶ್ರುತಿಯಲ್ಲಿ ಅನುರಣಿಸುತ್ತಿರಬೇಕು, ಸಮಗತಿಯಲ್ಲಿ ಚಲಿಸುತ್ತಿರಬೇಕು, ಜೊತೆಯಲ್ಲೇ ಭವಿಷ್ಯದೃಷ್ಟಿಯನ್ನೂ ತಳೆದಿರಬೇಕು: 'ಮುಟ್ಟದೆ ದಿಙ್ಮಂಡಲಗಳ ಅಂಚ ಆಚೆಗೆ ಚಾಚದೆ

ತನ್ಮಯಾ ಬುಂಟ.'

ಸಫಲ ವೃತ್ತಿಜೀವನ ಸಾಗಿಸಲು ಅವಶ್ಯವಾಗುವ ಅರ್ಹತೆ, ಮತ್ತು ಸಮಗ್ರ ಜೀವನದೃಷ್ಟಿಗಳಿಸಲು ಬೇಕಾಗುವ ವಿದ್ಯೆ ಶಿಕ್ಷಣದಿಂದ ಒದಗಬೇಕು. ಸದಸದ್ವಿವೇಚನ ಶಕ್ತಿ, ನವನವಸಮಸ್ಯೆಗಳನ್ನು ಸ್ವೀಕರಿಸಿ ಅಭ್ಯಸಿಸಿ ಪರಿಹರಿಸಬಲ್ಲ ಸಾಮರ್ಥ್ಯ, ಸ್ವತಂಜ್ಞಾನ, ವೃತ್ತ್ಯೇತರ ವಿಷಯಗಳ ಬಗ್ಗೆ ಜೀವಂತ ಆಸಕ್ತಿ ಮುಂತಾದ ಅಮೂರ್ತ ಗುಣಗಳ ಮೊತ್ತವೇ ವಿದ್ಯೆ. ಯಾವುದೇ ದೇಶದ ನೈಜ ಆಸ್ತಿ ಮತ್ತು ತ್ರಾಣ ಎಂದರೆ ಅಲ್ಲಿಯ ವಿದ್ಯಾವಂತರ ಸಮುದಾಯ — ಕೋಟೆಕೊತ್ತಲಗಳಲ್ಲ, ಯಂತ್ರಸ್ಥಾವರಗಳಲ್ಲ, ಸೇನಾನಿವಹಗಳಲ್ಲ, ಅಣೆಕಟ್ಟು ಕಾಲುವೆಗಳಲ್ಲ, ಚಿನ್ನದ ಬೊಕ್ಕಸಗಳೂ ಅಲ್ಲ. ಏಕೆಂದರೆ ಧರ್ಮದ ಪಾತಳಿಯಲ್ಲಿ ಸಮರ್ಪಣಭಾವದಿಂದ ಸೇವೆಸಲ್ಲಿಸಬಲ್ಲ ವಿದ್ಯಾವಂತರು ಮರುಭೂಮಿಯ ಗೋಳಿನಲ್ಲಿ ನಂದನವನದ ನಗುವನ್ನು ಅರಳಿಸಬಲ್ಲರು:

ವಿದ್ಯೆಯೆ ಬಂಧುವಪ್ಪುದು ವಿದೇಶದಿ ವಿದ್ಯೆಯೆ ರಾಜಪೂಜ್ಯಮುಂ
ವಿದ್ಯೆಯದಿಲ್ಲದಿರ್ದ ಮನುಜಂ ಬಗೆಯಲ್ ಪಶುವಲ್ತೆ ಧಾತ್ರಿಯೊಳ್

“ವಿದ್ಯೆಯೇ ರೂಪ. ವಿದ್ಯೆಯೇ ಸುರಕ್ಷಿತ ಗುಪ್ತನಿಧಿ. ವಿದ್ಯೆಯೇ ಕೀರ್ತಿ ಮತ್ತು ಭೋಗಗಳನ್ನು ಉಂಟುಮಾಡುವುದು. ವಿದ್ಯೆಯೇ ಗುರುಗಳಿಗೆಲ್ಲ ಗುರು. ವಿದ್ಯೆಯೇ ಬಂಧು. ವಿದ್ಯೆಯೇ ವಿದೇಶದಲ್ಲಿ ರಾಜಪೂಜ್ಯವಾದದ್ದು. ವಿದ್ಯೆಯಿಲ್ಲದಿರುವ ಮನುಷ್ಯ ಲೋಕದಲ್ಲಿ ಪಶುವಲ್ಲವೇ?”[2]

ವಿದ್ಯೆಯಿಂದ ಜ್ಞಾನ ಅಥವಾ ಅರಿವು. ಅರಿವೇ ಬೆಳಕು. ವ್ಯಕ್ತಿಯನ್ನು ಕತ್ತಲೆಯಿಂದ ಬೆಳಕಿನತ್ತ ಒಯ್ಯುವ ದಾರಿದೀವಿಗೆ ಇದು: ‘ತಮಸೋಮಾ ಜ್ಯೋತಿರ್ಗಮಯಾ.’

ಜ್ಞಾನದ ಲಕ್ಷಣವಿದು (ಕೇನೋಪನಿಷತ್ತು):

ಯಸ್ಯಾಮತಂ ತಸ್ಯ ಮತಂ, ಮತಂ ಯಸ್ಯ ನವೇದಸಃ
ಅವಿಜ್ಞಾತಂ ವಿಜಾನತಾಂ, ವಿಜ್ಞಾತಮವಿಜಾನತಾಮ್

“ಯಾರು ತಮಗೆ ಇದು ತಿಳಿದಿಲ್ಲವೆಂದು ಭಾವಿಸುವರೋ ಅವರಿಗೆ ಇದು ತಿಳಿದಿರುವುದು. ತಮಗೆ ತಿಳಿದಿರುವುದೆಂದು ಯಾರ ಭಾವನೆಯೋ ಅವರಿಗೆ ಇದು ತಿಳಿದಿರುವುದಿಲ್ಲ. ಇದನ್ನು ಬಲ್ಲೆವು ಎನ್ನುವವರಿಗೆ ಇದು ತಿಳಿದಿರುವುದಿಲ್ಲ. ಇದನ್ನರಿಯೆವು ಅನ್ನುವವರಿಗೆ ಇದು ತಿಳಿದಿರುವುದು.” ಸರಳ ನುಡಿಗಳಲ್ಲಿ: “ತಿಳಿದಿದೆಯೆಂದು ತಿಳಿದಾತ ತಿಳಿದಾತನಲ್ಲ, ತಿಳಿದಿಲ್ಲವೆಂದು ತಿಳಿದಾತ ತಿಳಿದಾತ.”

ಆದ್ದರಿಂದ ಹೆಗ್ಗಡೆಯವರ ವಿವರಣೆಯ ಸಾರ ಮತ್ತು ನಿಲುವಿನ ಸೂತ್ರ: “ಧರ್ಮ, ನೀತಿ, ಶಿಕ್ಷಣ, ವಿದ್ಯೆ, ಜ್ಞಾನ, ವಿವೇಕ ಮುಂತಾದವು ಅತ್ಯಾವಶ್ಯಕ ಜೀವನಪೋಷಕ ರಸಧಾತುಗಳು — ಸ್ವಾದನೀಯ ಭಕ್ಷ್ಯದಲ್ಲಿಯ ವಿವಿಧ ಪರಿಕರಗಳಂತೆ. ಬಾಧಕ

ಅಧ್ಯಯನದ ಸಲುವಾಗಿ ಇವನ್ನು ಬೇರೆ ಬೇರೆ ಎಂದು ಪರಿಗಣಿಸಬಹುದು ಅಷ್ಟೆ. ಆದರೆ ವ್ಯಷ್ಟಿಯ ಈ ವಿಶ್ಲೇಷಣ ಅನ್ವೇಷಣೆಯಲ್ಲಿ ಸಮಷ್ಟಿಯ ಏಕತೆಯನ್ನು ಮರೆಯಬಾರದು. ಶ್ರೀಕ್ಷೇತ್ರ ಯಾವುದೇ ಬಗೆಯ ಜನಕಲ್ಯಾಣ ಅಥವಾ ಜೀವನೋತ್ಕರ್ಷಕ ಯೋಜನೆ, ಕಾರ್ಯಕ್ರಮ, ಚಟುವಟಿಕೆ ಮುಂತಾದವುಗಳಿಗೆ ಸಹೃದಯತೆಯಿಂದ ಸ್ಪಂದಿಸುವುದರ ಕಾರಣವನ್ನು ಇಲ್ಲಿ ಕಾಣಬಹುದು."

ಪ್ರಶ್ನೆ: "ವ್ಯಕ್ತಿ ಉದ್ಧಾರವಾದ ಹೊರತು ಸಮಾಜ ಪ್ರಗತಿ ಹೊಂದದು, ಮತ್ತು ಸಮಾಜ ಆರೋಗ್ಯಸ್ಥಿತಿಯಲ್ಲಿಲ್ಲದಾಗ ವ್ಯಕ್ತಿಯ ಏಳ್ಗೆ ಸಾಧ್ಯವಾಗದು ಎಂಬ ಈ ಉದಾತ್ತ ನೀತಿಯನ್ನು ಕಾರ್ಯಕ್ಕೆ ಇಳಿಸುವಲ್ಲಿ ಶಿಕ್ಷಣದ ಪಾತ್ರವೇನು?"

ಹೆಗ್ಗಡೆಯವರು: "ಎಲ್ಲವೂ! ಯಾವನೇ ಒಬ್ಬ ವ್ಯಕ್ತಿ ಅಸಂಖ್ಯ ಸಂಕೀರ್ಣ ಗುಣಗಳ ಅಖಂಡ ರೂಪ. ಆತ ಪರಿಪೂರ್ಣ ಮಾನವನಲ್ಲ, ಉದ್ಧಾರಾತೀತ ದಾನವನೂ ಅಲ್ಲ. ಅತ್ಯಂತ ಸಾತ್ವಿಕ ಸುಸಂಸ್ಕೃತ ವ್ಯಕ್ತಿಯ ಮನದಂತರಾಳದಲ್ಲಿ ದಾನವೀಯತೆಯ ಕಿಡಿ ಮರೆಸಿ ಕುಳಿತಿರುವುದುಂಟು; ಅತಿ ಘೋರ ಪಾತಕಿಯ ಹೃದಯದಂಚಿನಲ್ಲಿ ಮಾನವೀಯತೆಯ ಮಿಣುಕು ನಲುಗುತ್ತಿರುವುದುಂಟು. ಅಂದ ಮೇಲೆ ಶಿಕ್ಷಣ ಹೇಗಿರಬೇಕು? ಅದು ದಾನವೀಯತೆಯನ್ನು ದಮನಿಸಿ ಮಾನವೀಯತೆಯನ್ನು ಮೆರಗಿಸುವಂತಿರಬೇಕು. ಸಹಜವಾಗಿ, ಇಂಥ ಶಿಕ್ಷಣ ಪರಿಸರದಿಂದ ಪ್ರೇರಿತವಾಗಿರಬೇಕು, ಸಂಬಂಧಿಸಿದ ಸರ್ವರಿಗೂ ಇದರಲ್ಲಿ ಪೂರ್ಣಭಾಗಿಗಳಾಗುವುದು ಉಲ್ಲಾಸವೀಯಬೇಕು. ಅಧಿಕಾರದ ದರ್ಪ, ಧನದ ಆಮಿಷ, ಅಥವಾ ಕಡ್ಡಾಯದ ಒತ್ತಡ ಇವನ್ನು ಸಾಧಿಸವು — ನೀತಿಸಹಿತ ಪ್ರೀತಿ ಮಾತ್ರ ಸಾಧಿಸಬಲ್ಲುದು. ಈ ಬಗೆಯ ಶಿಕ್ಷಣ ವಿದ್ಯೆಯನ್ನೂ ಮುಂದೆ ಜ್ಞಾನವನ್ನೂ ಪ್ರವರ್ಧಿಸುತ್ತದೆ, ಆಗ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿ ಸಿದ್ಧಿಸುತ್ತದೆ. ಶ್ರೀಕ್ಷೇತ್ರದ ವತಿಯಿಂದ ನಡೆಯುತ್ತಿರುವ ಎಲ್ಲ ಶೈಕ್ಷಣಿಕ ಚಟುವಟಿಕೆಗಳ ಆಧಾರಸೂತ್ರವೇ ಇದು."

ಜಾನ್ ಹೆನ್ರಿ ನ್ಯೂಮನ್ ಬರೆದಿರುವಂತೆ

Lead, Kindly Light, amid the encircling gloom
Lead Thou me on!

"ಸುತ್ತಲೂ ಮುಸುಕಿರುವ ಮ್ಲಾನತೆಯ ಗುಹೆಯಲ್ಲಿ,
ಕೈಹಿಡಿದು ನಡೆಸೆನ್ನ ಮುಂದೆ, ಓ ಕರುಣಾ ದೀಪ್ತಿಯೇ!"

<u>ಆಡಳಿತಾಂಗ-ಶಿಕ್ಷಣಾಂಗ</u>

ಬುನಾದಿ ಭದ್ರ ಮತ್ತು ಸುವ್ಯಾಖ್ಯಿತವಾಗಿರಬೇಕು, ನಿರ್ವಹಣೆ ಜನಹಿತವನ್ನು ಲಕ್ಷ್ಯದಲ್ಲಿಟ್ಟುಕೊಂಡು ತತ್ಪರತೆಯಿಂದ ಕೂಡಿದ್ದು ಜ್ಞೇಯನಿಷ್ಠ (objective) ಆಗಿರಬೇಕು, ಆಗ (ಮತ್ತು ಆಗ ಮಾತ್ರ)

ಉದ್ದೇಶ ಸಿದ್ಧಿಸುತ್ತದೆ: ಅಂದರೆ ಗೋಪುರ ಸುಂದರವೂ ಪ್ರಯೋಜಕವೂ ಆಗುತ್ತದೆ. ಈ ಸಮಗ್ರ ದೃಷ್ಟಿ ತಳೆದಿರುವ ಹೆಗ್ಗಡೆಯವರು ತಮ್ಮ ನಿಲುವನ್ನು ವಿವರಿಸುವ ಪರಿ:

"ಇಲ್ಲಿ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವ ಪಠ್ಯಪಟ್ಟಿ ಒಂದೇ, ಪಾಠ ಪ್ರಯೋಗಗಳೂ ಪ್ರವಚನ ವ್ಯಾಖ್ಯಾನಗಳೂ ಒಂದೇ. ಆದರೂ ಒಂದೊಂದು ಕಾಲೇಜಿಗೂ ಒಂದೊಂದು ವೈಶಿಷ್ಟ್ಯವಿದೆ, ವ್ಯಕ್ತಿತ್ವವಿದೆ......"

"ಬೇರೆ ಬೇರೆ ಕಿತ್ತಳೆ ತೋಟಗಳು ಬೇರೆ ಬೇರೆ ರುಚಿ, ಬಣ್ಣ, ಪರಿಮಳ, ಗಾತ್ರ ಮುಂತಾದವುಗಳಿಂದ ಕೂಡಿದ ಹಣ್ಣುಗಳನ್ನು ಕೊಡುವಂತೆ — ಇವು ಯಾವುದೋ ಕಾರ್ಖಾನೆ ಉತ್ಪಾದಿಸುವ ಸಿದ್ಧ ವಸ್ತುಗಳಂತಲ್ಲ."

"ನಿಜ! ಶಿಕ್ಷಣ ಸಂಸ್ಥೆ ಎಂದರೇನು? ಅದು ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಅನಂತ ಮತ್ತು ಅವಿಭಾಜ್ಯ ರಸಪಾಕ. ಅಲ್ಲಿಯ ಪರಿಸರದ ಪ್ರಭಾವ ಅದರ ಮೇಲೆ ಇದ್ದೇ ಇದೆ. ಆ ಸಂಸ್ಥೆಯಲ್ಲಿ ನಡೆಯುವುದು ಪ್ರತಿಭಾನ್ವಿತ ಮತ್ತು ಸೃಜನಶೀಲ ಅಧ್ಯಾಪಕರಿಂದ ಆಸಕ್ತ ಮತ್ತು ಸೂಕ್ಷ್ಮಗ್ರಹಣಶೀಲ ವಿದ್ಯಾರ್ಥಿಗಳಿಗೆ ಜ್ಞಾನಪ್ರದಾನ. ಯಂತ್ರದಲ್ಲಾಗುವುದು ಬೇರೆಯೇ: ಸಿದ್ಧ ಸೂತ್ರಾನುಸಾರ ಘಟಕಗಳ ವಿತರಣೆ, ಜೋಡಣೆ, ಉತ್ಪಾದನೆ ಇತ್ಯಾದಿ. ಯಾವುದೇ ಶಿಕ್ಷಣ ಸಂಸ್ಥೆ ಒಂದು ಯಾಂತ್ರಿಕ ವ್ಯವಸ್ಥೆಯಲ್ಲ. ಅದು ಜೀವಂತ ವ್ಯಕ್ತಿಗಳ ಜೇನುಗೂಡು. ಎಂದೇ ಉಜಿರೆಯಲ್ಲಿಯ ನಮ್ಮ ಕಾಲೇಜಿನ ಪರಿಮುದ್ರೆ ಅಥವಾ ಛಾಪು ಧಾರವಾಡದಲ್ಲಿಯ ನಮ್ಮದೇ ಸದೃಶ ಕಾಲೇಜಿನದ್ದಕ್ಕಿಂತ ಬೇರೆಯೇ."

"ಸಾಧಾರಣವಾಗಿ ಚರ್ಚಾಕೂಟಗಳಲ್ಲಿ, ವರದಿ ಗ್ರಂಥಗಳಲ್ಲಿ ಇಲ್ಲವೇ ಅಧ್ಯಯನ ಪ್ರಬಂಧಗಳಲ್ಲಿ ಮಾತ್ರ ಸಾಧುವೆನ್ನಿಸುವ ಈ ಸೈದ್ಧಾಂತಿಕ ಸೂತ್ರಗಳನ್ನು ನೀವು ಪ್ರಯೋಗದ ವಾಸ್ತವ ರಂಗಕ್ಕೆ ಹೇಗೆ ವರ್ಗಾಯಿಸುವಿರಿ?"

"ಅನುಭವದಿಂದ ನಾವು ನಾಲ್ಕು ಮುಖ್ಯ ತತ್ತ್ವಗಳನ್ನು ಕಂಡುಕೊಂಡು ಅವನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತಂದಿದ್ದೇವೆ. ಅಲ್ಲದೇ ನೂತನ ಪ್ರಯೋಗ, ಸುಧಾರಣೆ, ಭಾವನೆ ಅಥವಾ ಸೂಚನೆ ಕುರಿತಂತೆ ಸದಾ ಮುಕ್ತ ಜಾಗೃತ ಮನಸ್ಸಿನವರಾಗಿದ್ದೇವೆ.

"ಮೊದಲನೆಯದು, ಪ್ರಾಂಶುಪಾಲರ ಮತ್ತು ಅಧ್ಯಾಪಕರ ಆಯ್ಕೆಯಲ್ಲಿ ಅರ್ಹತೆಯೊಂದನ್ನೇ ಪರಿಗಣಿಸುತ್ತೇವೆ. ಜಾತಿ, ಮತ, ಕುಲ, ಗೋತ್ರ ಮುಂತಾದ ಶಿಕ್ಷಣೇತರ ಕಾರಕಗಳಿಗೆ ಇಲ್ಲಿ ಪ್ರವೇಶವಿಲ್ಲ. ಅಧ್ಯಾಪಕರಲ್ಲಿ ತಮ್ಮ ವೃತ್ತಿ ಬಗ್ಗೆ ಅಭಿಮಾನ ಮೂಡಲು ಮತ್ತು ಅವರು ಸಂಪೂರ್ಣ ಸಮರ್ಪಣಾಭಾವದಿಂದ ಕರ್ತವ್ಯ ನಿರ್ವಹಿಸಲು ಇಲ್ಲಿ ಸಮೃದ್ಧ ಅವಕಾಶಗಳಿವೆ.

"ಎರಡನೆಯದು, ಸಂಸ್ಥೆಯ ಆಡಳಿತ ಮತ್ತು ಶೈಕ್ಷಣಿಕ ವಿಚಾರಗಳ

ಪ್ರಾಂಶುಪಾಲರಿಗೆ ಪೂರ್ಣ ಸ್ವಾತಂತ್ರ್ಯವಿದೆ. ಆಯಾ ಸಂಸ್ಥೆ ಕುರಿತಂತೆ ಆಯಾ ಪ್ರಾಂಶುಪಾಲರನ್ನು ಬಿಟ್ಟು ನಾವು — ಅಂದರೆ ವ್ಯವಸ್ಥಾಪಕನೆ — ಯಾವ ನಿರ್ಧಾರವನ್ನೂ ಕೈಗೊಳ್ಳುವುದಿಲ್ಲ. ಅವರಿಂದ ಮತ್ತು ಅವರ ಮೂಲಕ ಬರುವ ಎಲ್ಲ ಸಲಹೆ, ಸೂಚನೆ, ಬೇಡಿಕೆಗಳಿಗೂ ನಮ್ಮ ಕಡೆಯಿಂದ ಸಹೃದಯ ಸ್ವಾಗತವಿದೆ. ನಿಯತಕಾಲಿಕ ಚರ್ಚೆ, ಅಭಿಪ್ರಾಯ ವಿನಿಮಯ, ಸ್ಥಳ ಸಂದರ್ಶನ, ಪ್ರಾಂಶುಪಾಲರ ಸಮಕ್ಷಮ ವಿದ್ಯಾರ್ಥಿಗಳ ಭೇಟಿ ಮುಂತಾದವುಗಳ ಫಲವಾಗಿ ನಾವೆಲ್ಲರೂ ಸಹೃದಯ ಪರಿಸರದಲ್ಲಿ ಏಕ ಮನೋಭಾವದಿಂದ ವರ್ತಿಸುವುದು ಸಾಧ್ಯವಾಗಿದೆ."

"ವ್ಯವಸ್ಥಾಪನೆ ಶಿಕ್ಷಣಾಂಗದ ಚಟುವಟಿಕೆಗಳಲ್ಲಿ ಪ್ರವೇಶಿಸದಿರುವುದು ನಿಜಕ್ಕೂ ಆದರ್ಶ ಮುತ್ಸದ್ದಿತನ, ಉತ್ತಮ ವ್ಯವಹಾರನೀತಿ. ಯಾವುದೇ ಶೈಕ್ಷಣಿಕ ಸಂಸ್ಥೆಯ ಪರಿಸ್ಥಿತಿ ಹದಗೆಡುವುದು ಅಥವಾ ಅದರ ನೌಕರರಲ್ಲಿ ಪರಕೀಯ ಪ್ರಜ್ಞೆ ಮೂಡುವುದು ಆಡಳಿತಾಂಗ-ಶಿಕ್ಷಣಾಂಗ ಸಂಬಂಧದಲ್ಲಿ ಸಾಮರಸ್ಯ ತಪ್ಪಿದಾಗ ಎಂದು ನಮಗೆ ಚೆನ್ನಾಗಿ ತಿಳಿದಿದೆ."

"ವಿದ್ಯಾರ್ಥಿ ಆಗಲಿ, ಅಧ್ಯಾಪಕ ಆಗಲಿ ಪ್ರಾಂಶುಪಾಲರನ್ನು ಕಡೆಗಣಿಸಿ ಅಥವಾ ಅತ್ತಹಾಯ್ದು ನಮ್ಮಲ್ಲಿಗೆ ದೂರು ತರುವಂತಿಲ್ಲ. ಕಾಲೇಜಿನ ಸಮಸ್ಯೆ ಅಲ್ಲಿಯ ಚೌಕಟ್ಟಿನೊಳಗೇ ಪರಿಹಾರವಾಗತಕ್ಕದ್ದು."

"ಅಂದ ಮೇಲೆ, ಸ್ವತಂತ್ರ ಭಾರತದ ಘೋರ ಶಾಪಗಳಾದ ಕ್ಷುದ್ರ ರಾಜಕೀಯ, ಒಳಜಗಳ, ಮತೀಯ ಕಲಹ ಮುಂತಾದವು ನಿಮ್ಮ ಸಂಸ್ಥೆಗಳ ಒಳಗೆ ತಲೆ ಎತ್ತಲಾರವು. ಈ ಸ್ವಾಯತ್ತ ವ್ಯವಸ್ಥೆಗೆ ಹೊಂದಿಕೊಳ್ಳಲಾಗದವರು?"

"ಅವರಿಗೆ ನಿರ್ಗಮನ ದ್ವಾರ ಸದಾ ತೆರೆದೇ ಇದೆ. ಪರಂಪರಾಗತ ಜೀವನ ಮೌಲ್ಯಗಳಲ್ಲಿ ಶ್ರದ್ಧೆ ತಳೆದು ತದನುಗುಣವಾಗಿ ದುಡಿಯದಿದ್ದರೆ ನಾವು ಏನನ್ನೂ ಸಾಧಿಸಲಾರೆವು. ನಮ್ಮ ಎಲ್ಲ ಸಂಸ್ಥೆಗಳೂ ಜೀವಂತ ವ್ಯವಸ್ಥೆಗಳಾಗಿ ನಳನಳಿಸುತ್ತಿರಬೇಕೆಂಬುದು ನಮ್ಮ ಉದ್ದೇಶ."

"ಸಂತತ ಜಾಗರೂಕತೆಯೇ ಸ್ವಾತಂತ್ರ್ಯಕ್ಕಾಗಿ ನಾವು ಸಲ್ಲಿಸಬೇಕಾದ ತೆರ ಎಂಬ ಸೂಕ್ತಿಗೆ ಇದು ಇನ್ನೂ ಒಂದು ನಿದರ್ಶನ."

"ಮೂರನೆಯದು, ಅಧ್ಯಾಪಕರಿಗೆ ಆರ್ಥಿಕ ಭದ್ರತೆ. ಅವರಿಗೆ ನಿಯಮಾನುಸಾರ ಸಲ್ಲಬೇಕಾದ ಸಂಬಳ, ಬಡ್ತಿ, ಭತ್ಯ ಮೊದಲಾದ ಮೊಬಲಗುಗಳನ್ನು ಬ್ಯಾಂಕ್ ಚೆಕ್ ಮೂಲಕ ಸಕಾಲದಲ್ಲಿ ಪಾವತಿಸುವ ಏರ್ಪಾಡು. ಸಂಸ್ಥೆಯ ಸಮಸ್ತ ಆರ್ಥಿಕ ಮತ್ತು ಇತರ ವ್ಯವಹಾರಗಳಲ್ಲಿ ನಿಷ್ಠುರ ಪ್ರಾಮಾಣಿಕತೆಯನ್ನು ಪಾಲಿಸಲಾಗುತ್ತದೆ."

"ನಿಗದಿಸುವ ಮೊಬಲಗು ಒಂದು, ಪಾವತಿಸುವ ಮೊಬಲಗು ಇನ್ನೊಂದು, ರಶೀತಿ ಬರೆಯುವ ಮೊಬಲಗು ಬೇರೆಯೇ ಒಂದು ಎಂಬ 'ರೂಢಿ'ಯ (?) ಕಲ್ಪವೃಕ್ಷದ ತಾಯಿಬೇರಿಗೇ ಕೊಡಲಿ ಹೊಡೆತ!"

"ಸಂಸ್ಥೆಗೆ ಬರುವ ಆದಾಯದ ಎಲ್ಲ ಬಾಬುಗಳಿಗೂ ಆಗಾಗಲೇ

ಅಧಿಕೃತ ರಶೀತಿ ನೀಡಿ ಸಂಚಿತ ಹಣವನ್ನು ಅದೇ ಸಂಸ್ಥೆಯ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲು ಸಮರ್ಪಕ ವ್ಯವಸ್ಥೆ ಮಾಡಲಾಗಿದೆ.”

“ಅಭಿವರ್ಧಿಸುತ್ತಿರುವ ಒಂದು ಶೈಕ್ಷಣಿಕ ಸಂಸ್ಥೆಗೆ ಶುಲ್ಕ, ವಂತಿಗೆ ಮುಂತಾದ ಮಾಮೂಲೀ ವರಮಾನಗಳು ಖಂಡಿತವಾಗಿಯೂ ಸಾಕಾಗಲಾರವು. ಸಂಸ್ಥೆಯನ್ನು ವಿಸ್ತರಿಸಬೇಕಾದಾಗ, ವಿದ್ಯಾರ್ಥಿಗಳಿಗೆ ನೂತನ ಸೌಕರ್ಯಗಳನ್ನು ಒದಗಿಸಬೇಕಾದಾಗ, ಸರ್ಕಾರದಿಂದ ಯಾವುದೇ ನೆರವು ದೊರೆಯದಾಗಲೂ ಚಟುವಟಿಕೆಗಳನ್ನು ನಡೆಸಬೇಕಾದಾಗ, ಸಮರ್ಥ ಹಾಗೂ ಪ್ರತಿಭಾನ್ವಿತ ಅಧ್ಯಾಪಕರುಗಳಿಗೆ ಹೆಚ್ಚಿನ ಸಂಬಳ ಸೌಲಭ್ಯಗಳನ್ನು ನೀಡಬೇಕಾದಾಗ, ಇತ್ಯಾದಿ, ಆಡಳಿತಾಂಗ (ಅಂದರೆ ವ್ಯವಸ್ಥಾಪನೆ) ಆರ್ಥಿಕ ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡು ಅನ್ಯಮೂಲಗಳತ್ತ — ಅನೇಕ ಸಂದರ್ಭಗಳಲ್ಲಿ ಪ್ರಶ್ನಾರ್ಥಕ ಇಲ್ಲವೇ ವಾಮಮಾರ್ಗಗಳನ್ನು ಅನುಸರಿಸುತ್ತ — ದೃಷ್ಟಿ ಹರಿಸುವುದು ಇಂದು ಪ್ರಾಯಶಃ ಬಳಕೆಗೆ ಬಂದುಬಿಟ್ಟಿದೆ. ಈ ಸಮಸ್ಯೆಗಳನ್ನು — ಮುಖ್ಯವಾಗಿ ಆರ್ಥಿಕ ಕೊರತೆಯನ್ನು — ನೀವು ಹೇಗೆ ನೀಗುತ್ತೀರಿ?”

“ವಾಸ್ತವವಾಗಿ ಆರ್ಥಿಕ ಕೊರತೆ ಎಂದೂ ಒಂದು ಸಮಸ್ಯೆಯಾಗಿ ನಮ್ಮನ್ನು ಬಾಧಿಸಿದ್ದಿಲ್ಲ. ಯಾವುದೇ ವಿಸ್ತರಣ ಕಾರ್ಯವನ್ನು ನಾವು ಕೈಗೆತ್ತಿಕೊಳ್ಳುವ ಮೊದಲು ಆಳವಾಗಿ ಪರಿಶೀಲಿಸುವ ಕೆಲವು ಮುಖ್ಯ ಅಂಶಗಳಿವು: ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ತನ್ಮೂಲಕ ದೇಶಕ್ಕೆ ಒಳಿತಾಗುವುದೇ? ರಾಷ್ಟ್ರದ ಸಂಪನ್ಮೂಲ ವರ್ಧಿಸುವುದೇ? ನಮ್ಮ ಸಂಸ್ಥೆಯ ಉದ್ದೇಶದ ಪರಿಧಿಯೊಳಗೆ ಇದು ಬರುವುದೇ? ಇಪ್ಪತ್ತೊಂದನೆಯ ಶತಮಾನವನ್ನು ಸ್ವಾಗತಿಸುವಲ್ಲಿ ಇದು ಸಹಕಾರಿಯೇ? ಈ ಎಲ್ಲ ವಿವರಗಳನ್ನು ಆಯಾ ಸಂಸ್ಥೆಯ ಪ್ರಾಂಶುಪಾಲ ಮತ್ತು ಶಿಕ್ಷಕರ ಜೊತೆ ಕೂಲಂಕಷವಾಗಿ ಚರ್ಚಿಸಿ ಆರ್ಥಿಕ ಆವಶ್ಯಕತೆಗಳನ್ನೂ ಮಿತಿಗಳನ್ನೂ ನಿರ್ಧರಿಸಿ ಅವುಗಳ ಈಡೇರಿಕೆಗೆ ಪ್ರಯತ್ನಿಸುತ್ತೇವೆ. ನಡೆದು ಬಂದ ಹಾದಿ ಆಶಾದಾಯಕವಾಗಿದೆ, ಭರವಸೆ ಮೂಡಿಸುವಂತಿದೆ.”

“ಯಾವ ಸತ್ಕಾರ್ಯವೂ ಹಣದ ಅಭಾವದಿಂದ ನಿಂತದ್ದಿಲ್ಲ, ಗುಣದ ಅಭಾವದಿಂದ ಸೊರಗಿದ್ದಿದೆ, ನಿಂತುಹೋದದ್ದೂ ಇದೆ ಎಂಬುದೊಂದು ಅನುಭವೋಕ್ತಿ.”

“ಎಲ್ಲಿ ವ್ಯವಹಾರಗಳು ಸ್ಫಟಿಕ ನಿರ್ಮಲ ಪರಿಶುಭ್ರವೆಂದೂ ದೇಶಕಲ್ಯಾಣಕಾರಿಗಳೆಂದೂ ಜನರಿಗೆ ಮನವರಿಕೆಯಾಗುವುದೋ ಅಲ್ಲಿ ಹಣ ಸರಕು, ಸೇವೆ ಯಥೇಚ್ಛವಾಗಿ ಹರಿದು ಬರುತ್ತವೆಂಬುದು ನಮ್ಮ ಅನುಭವ. ನಮ್ಮ ಸಮಸ್ತ ಶೈಕ್ಷಣಿಕ ಕಾರ್ಯಕಲಾಪಗಳ ತಳದಲ್ಲಿ ಅನುರಣಿಸುತ್ತಿರುವ ಇನ್ನೊಂದು (ನಾಲ್ಕನೆಯ) ತತ್ತ್ವವಿದೆ: ಉದ್ದೇಶಸಿದ್ಧಿಗೆ ಅಧ್ಯಗಮನ — ವಿದ್ಯಾರ್ಥಿಗಳ ಪರೀಕ್ಷಾಫಲಿತಾಂಶ, ನೀತಿಸಂವರ್ಧನೆ ಮತ್ತು ಸಮಗ್ರ ವ್ಯಕ್ತಿತ್ವಾಭಿವರ್ಧನೆ ಕುರಿತಂತೆ

ನಮ್ಮ ಪ್ರತಿಯೊಂದು ಸಂಸ್ಥೆಯೂ ಅತ್ಯಧಿಕ ಕಾಳಜಿ ವಹಿಸುತ್ತದೆ."

"ಅಂದರೆ ವಿದ್ಯಾರ್ಥಿಗಳ ಕ್ಷೇಮಾಭ್ಯುದಯ ಪ್ರಥಮ ಲಕ್ಷ್ಯ, ಉಳಿದವು ಆನುಷಂಗಿಕ."

ಶಿಕ್ಷಣವ್ಯವಸ್ಥೆಯನ್ನು ಒಂದು ದ್ವಿಪಾದಿ ಎಂದು ಭಾವಿಸಬಹುದು. ಆಡಳಿತಾಂಗ (ವ್ಯವಸ್ಥಾಪನೆ) ಮತ್ತು ಶಿಕ್ಷಣಾಂಗ ಇದರ ಎರಡು ಕಾಲುಗಳು. ಇವೆರಡೂ ಸಮಶ್ರುತಿಯಲ್ಲಿ (ಅಂದರೆ ಪರಸ್ಪರ ಪೂರಕವಾಗಿ) ಮತ್ತು ಸಮಗತಿಯಲ್ಲಿ (ಅಂದರೆ ಲಯಮೈತ್ರಿಯಲ್ಲಿ) ಇರುವಾಗ ವ್ಯವಸ್ಥೆ ಸೃಜನಶೀಲವೂ ಪ್ರಗತಿಶೀಲವೂ ಆಗಿರುತ್ತದೆ — ಉತ್ತಮ ಸಂಗೀತದಂತೆ. ಯಾವ ಕಾಲು ಎಡವಿದರೂ ಕುಂಟಿದರೂ ವ್ಯವಸ್ಥೆ ಕುಂಠಿತವಾಗುತ್ತದೆ.

ದೇಶಾದ್ಯಂತ ಹೆಚ್ಚಿನ ಶಿಕ್ಷಣ ಸಂಸ್ಥೆಗಳು — ಅವು ಸರ್ಕಾರೀ ಕ್ಷೇತ್ರಗಳಲ್ಲಿರಲಿ, ಖಾಸಗೀ ವಲಯಗಳಲ್ಲಿರಲಿ, ಸ್ವಾಯತ್ತ ಸಂಘಟನೆಗಳೇ ಆಗಿರಲಿ — ಇಂದು ವರ್ತಿಸುತ್ತಿರುವ ರೀತಿ ಮತ್ತು ಸಾಗುತ್ತಿರುವ ಪರಿ ಗಮನಿಸಿದರೆ, ಮೈಸೂರು ವಿಶ್ವವಿದ್ಯಾನಿಲಯದ ಪದವೀಪ್ರದಾನ ಸಮಾರಂಭದಲ್ಲಿ, ೧೯೨೯, ಸಿ.ವಿ. ರಾಮನ್ ಆಡಿದ ನುಡಿ ನೆನಪಿಗೆ ಬರುತ್ತದೆ, ಮತ್ತು ವೇದನೆ ಉಂಟುಮಾಡುತ್ತದೆ:

"ಸಾಮಾನ್ಯ ಜ್ಞಾನವನ್ನು ಬೆಳಗೊಂಡಿದ್ದು ಬೌದ್ಧಿಕ ಮೌಲ್ಯಗಳನ್ನು ಅರಿಯುವುದು ಉನ್ನತ ಸಂಸ್ಕೃತಿಯ ಲಕ್ಷಣ. ಸುಸಂಸ್ಕೃತ ವ್ಯಕ್ತಿಗೆ ಅರ್ಥಹೀನ ತತ್ತ್ವ, ಗೊಡ್ಡು ಸಿದ್ಧಾಂತ ಮತ್ತು ಕುರುಡು ನಂಬಿಕೆಗಳಿಂದ ಏನೂ ಪ್ರಯೋಜನವಿಲ್ಲ. ದೇಶವನ್ನು ದುರ್ಬಲಗೊಳಿಸುವ ಮತೀಯ ವೈಷಮ್ಯ ಮತ್ತು ಜಾತೀಯ ಕಲಹಗಳನ್ನು ಪೋಷಿಸುವ ನೆಲೆ ವಿಶ್ವವಿದ್ಯಾಲಯವಾದರೆ ಅದು ಜ್ಞಾನದ ದೇಗುಲವಾಗುವುದರ ಬದಲು ಅಜ್ಞಾನದ ಪಿಶಾಚಿಗಳನ್ನು ಬೆಳೆಸುವ ಕೊಳಚೆಗುಂಡಿ ಆಗುವುದು. ವೈಯಕ್ತಿಕ ಯೋಗ್ಯತೆ, ಸಾಮರ್ಥ್ಯ, ಶೀಲ ಇವೇ ವಿಶ್ವವಿದ್ಯಾಲಯದಲ್ಲಿ ಜಯದೆಡೆಗೆ ರಹದಾರಿಯಾಗಬೇಕು. ವಿವಿಧ ಅಭಿಪ್ರಾಯಗಳ ಮತ್ತು ವಿಭಿನ್ನ ಭಾವನೆಗಳ ಸಮನ್ವಯ ಕ್ಷೇತ್ರ ವಿಶ್ವವಿದ್ಯಾಲಯವಾಗಬೇಕು. ಪರಸ್ಪರ ಸೌಹಾರ್ದ, ಸಹಿಷ್ಣುತೆ ಇಲ್ಲಿರಬೇಕು. ನಮ್ಮ ವಿಶ್ವವಿದ್ಯಾಲಯಗಳು ಇಂಥ ಉದಾತ್ತ ಧ್ಯೇಯಗಳಿಂದ ಪ್ರೇರಿತವಾದರೆ ದೇಶದ ಸಮಸ್ಯೆಗಳನ್ನು ಪರಿಹರಿಸಲು ಅವು ಬೇರೆ ಎಲ್ಲ ಸಂಸ್ಥೆಗಳಿಗಿಂತಲೂ ಅಧಿಕ ಸಮರ್ಥವಾಗಬಲ್ಲವು."

ನಮ್ಮ ನಾಡಿನ ಯುವಜನಾಂಗದ ಭವಿಷ್ಯ ಕುರಿತಂತೆ ಪ್ರಜ್ಞಾವಂತರಲ್ಲಿ ಆತಂಕ ಮೂಡುತ್ತದೆ. ವ್ಯಾಪಕವಾಗಿ ಹಬ್ಬಿರುವ — ಅಷ್ಟೇ ಅಲ್ಲ, ಹಬ್ಬುತ್ತಿರುವ ಕೂಡ — ಜಾತೀಯ ಕಲಹ, ಅನೈತಿಕತೆ, ಉಚ್ಛೃಂಖಲತೆಯ ಪತನ, ಮೌಲ್ಯಗಳ ವಿರೂಪಣ ಮುಂತಾದ ವೈರಸ್ ಬೇನೆಗಳ ಮೂಲವೇನು? ಆಡಳಿತಾಂಗ-ಶಿಕ್ಷಣಾಂಗ ನಡುವಿನ ಪರಸ್ಪರ ಪೂರಕ ಪೋಷಕತೆಯ ನಾಶ: ಶಿಕ್ಷಣಾಂಗವನ್ನು ಆಡಳಿತಾಂಗ ತನಗೆ

ನಿರಂತರ ಆದಾಯ ಒದಗಿಸುವ ಕಾಮಧೇನುವೆಂದು ಭಾವಿಸಿ ತತ್ಪ್ರಕಾರ ಅದನ್ನು (ಶಿಕ್ಷಣಾಂಗವನ್ನು) ಕಾನೂನುಬಾಹಿರವಾಗಿ ದುಡಿಸಿ ಹಿಂಡಿ ಹಿಂಸಿಸುವುದು; ಅಥವಾ, ಆಡಳಿತಾಂಗವನ್ನು ಶಿಕ್ಷಣಾಂಗ ತನಗೆ ಸದಾ ರಕ್ಷಣೆ ನೀಡುವ ಅಭಯಾಶ್ರಯವೆಂದು ಭಾವಿಸಿ ತತ್ಪ್ರಕಾರ ಅದನ್ನು (ಆಡಳಿತಾಂಗವನ್ನು) ಕಾನೂನುಬಾಹಿರವಾಗಿ ಬೇಡಿ ಕಾಡಿ ಪೀಡಿಸುವುದು. ಉಭಯ ದುಷ್ಟ ಸನ್ನಿವೇಶಗಳಲ್ಲಿಯೂ ಪ್ರಥಮ ಬಲಿ ಸಂಸ್ಥೆಯ ಉದ್ದೇಶ: ಶಿಕ್ಷಣ-ಪ್ರದಾನ ಮತ್ತು ವಿದ್ಯಾರ್ಥಿಕ್ಷೇಮಪಾಲನೆ. 'ಮೃತ್ಯು ಮುಸುಕಿರುವ ಮ್ಲಾನತೆಯ ಗುಹೆಯಲ್ಲಿ,' ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸಂಕ್ಷೇಪವಾಗಿ ಎಸ್‌ಡಿಎಮ್) ಅಂಕಿತ ಶಿಕ್ಷಣಸಂಸ್ಥೆಗಳನ್ನು ಸಂದರ್ಶಿಸುವುದು, ಅವುಗಳಲ್ಲಿಯ ಜೀವಸ್ಪಂದನ ಗುರುತಿಸುವುದು, ಪ್ರಾಂಶುಪಾಲ ಶಿಕ್ಷಕ ವಿದ್ಯಾರ್ಥಿ ಮೊದಲಾದ ಜೀವಂತ ಘಟಕಗಳ ಜೊತೆ ಸಂಭಾಷಿಸುವುದು — ಅರ್ಥಾತ್ ಅವುಗಳ ಸಮಗ್ರವ್ಯಕ್ತಿತ್ವದ ಬಗ್ಗೆ ಪ್ರತ್ಯಕ್ಷ ಅನುಭವ ಗಳಿಸುವುದು — ಅಪೂರ್ವ ರಸಾವಕಾಶ, ವಿರಳಾತಿವಿರಳ ಯೋಗ: ಮರಳ್ಗಾಡಿನ ಮರೀಚಿಕೆಗಳ ನಡುವೆ ಪುಷ್ಕರಿಣಿ ಎದುರಾದಂತೆ.

ಬಲ್ಲವರ ಒಡನಾಟ ಬೆಲ್ಲವನು ಸವಿದಂತೆ
ಅಲ್ಲದ ಜ್ಞಾನಿಯೊಡನಾಟ ಮೊಳಕೈಗೆ
ಕಲ್ಲು ಹೊಡೆದಂತೆ ಸರ್ವಜ್ಞ

## ಶೈಕ್ಷಣಿಕ ಸಂಸ್ಥೆಗಳು

ಶ್ರೀಕ್ಷೇತ್ರ ಸ್ವತಃ ಸ್ಥಾಪಿಸಿ ನಡೆಸುತ್ತಿರುವ, ಮತ್ತು ಅನ್ಯ ಸಂಸ್ಥೆಗಳನ್ನು ಅವುಗಳ ಕೋರಿಕೆ ಮೇರೆಗೆ ತನ್ನ ಆಡಳಿತದ ಪರಿಧಿಯೊಳಗೆ ಸಮಾಕಲಿಸಿಕೊಂಡು ನಿರ್ವಹಿಸುತ್ತಿರುವ ಶೈಕ್ಷಣಿಕ ಸಂಸ್ಥೆಗಳನ್ನು ಎರಡು ವಿಭಿನ್ನ ಕೋನಗಳಿಂದ ವರ್ಗೀಕರಿಸಬಹುದು: ವೈವಿಧ್ಯ, ನೆಲೆ.

ವೈವಿಧ್ಯ ಪ್ರಕಾರ ಇವು ವ್ಯಾಪಕ ವರ್ಗಗಳನ್ನು ಗುರುತಿಸುತ್ತವೆ:

೧ ಶಾಲೆಗಳು: ಶಿಶುವಿಹಾರದಿಂದ ಪ್ರೌಢಶಾಲೆಯ ವರೆಗೆ

೨ ಕಾಲೇಜುಗಳು: ಕಲೆ, ವಿಜ್ಞಾನ, ಮಾನವಿಕ, ವಾಣಿಜ್ಯ, ಆಡಳಿತ ಕಾನೂನು, ಗಣಕ ಇತ್ಯಾದಿ

೩ ತಂತ್ರವಿದ್ಯೆ (technology): ಐಟಿಐ, ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜ್

೪ ವೈದ್ಯಕೀಯ ಕಾಲೇಜುಗಳು: ಆಯುರ್ವೇದ, ಪ್ರಕೃತಿ ಹಾಗೂ ಯೋಗ ಚಿಕಿತ್ಸೆ, ದಂತವೈದ್ಯ

೫ ವೃತ್ತಿಪರ: ಸಿದ್ಧವನ ಗುರುಕುಲ, ರತ್ನಮಾನಸ, ಅರ್ಥಶಾಸ್ತ್ರ ಹಾಗೂ ಜನಸಂಖ್ಯಾ ಸಂಶೋಧನೆ, ಜ್ಞಾನದೀಪ, ಜ್ಞಾನವಿಕಾಸ, ಗ್ರಾಮಾಭಿವೃದ್ಧಿ, ಸ್ವೋದ್ಯೋಗ, ಮುಕ್ತ ವಿಶ್ವವಿದ್ಯಾಲಯ ಇತ್ಯಾದಿ.

ನೆಲೆಗಳ ಪ್ರಕಾರ ಇವುಗಳ ವಿತರಣೆ: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ, ಉಜಿರೆ, ಪುದುವೆಟ್ಟು, ಮೈಯಾಡಿ, ಬೆಳಾಲು, ತೆರಿಂಜೆ,

ವೇಣೂರು ಎಂಬ ಗ್ರಾಮಾಂತರ ಪ್ರದೇಶಗಳು, ಮತ್ತು ಉಡುಪಿ(ಕುತ್ಪಾಡಿ) ಮತ್ತು ಮಂಗಳೂರು ಎಂಬ ನಗರಗಳು. ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಗೆ ಮೈಸೂರು, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಲ್ಲಿಯೂ ಇವೆ. ನಿರಂತರ ನವದಿಗಂತಾನ್ವೇಷಣೆ — ಇದು ಎಸ್‌ಡಿಎಮ್ ಸಂಸ್ಥೆಗಳ ಬೀಜಮಂತ್ರ.

ಇಷ್ಟಕ್ಕೆ ಮುಗಿಯಲ್ಲ ಶಿಕ್ಷಣ ಕುರಿತಂತೆ ಶ್ರೀಕ್ಷೇತ್ರದ ಆಸಕ್ತಿ. ಸಹಾಯಧನ ಯಾಚಿಸಿ ಬಂದ ಶೈಕ್ಷಣಿಕ ಉದ್ದೇಶಗಳಿಗೆ ಉಚಿತ ನೆರವನ್ನು ನೀಡುವುದು ಮತ್ತು ಅದು ಸದ್ವಿನಿಯೋಗವಾಗಿದೆಯೋ ಎಂದು ಪರಿಶೀಲನೆ ನಡೆಸುವುದು ಈ ಆಸಕ್ತಿಯ ಇನ್ನೊಂದು ಮುಖ.

ಆಗ ಬಾ ಈಗ ಬಾ ಹೋಗಿ ಬಾ ಎನ್ನದೆ
ಹಾಗ ಮೊದಲಾಗಿ ಹಗಾವ ಕೊಡುವಾ ತ್ಯಾಗ
ವಾಗು ಕಂಡಯ್ಯ ಪರಮಾರ್ಥ

<u>ಮೂರು ಪ್ರತ್ಯಕ್ಷ ನಿದರ್ಶನಗಳು</u>

⊛ ಆತ ಬಿ.ಎ. ಪದವೀಧರ. ಇನ್ನೂ ಓದಬೇಕೆಂಬ ದಾಹ. ಅಣ್ಣನ ಮುಂದೆ ತನ್ನ ಆಕಾಂಕ್ಷೆಯನ್ನು ನಿವೇದಿಸುತ್ತಾನೆ: "ನಾನು ಉಡುಪಿಗೆ ಹೋಗಿ, ಕಾನೂನು ಕಾಲೇಜು ಸೇರಿ, ಓದಿ ವಕೀಲನಾಗುತ್ತೇನೆ. ಹಣಬೇಕು"

ಅಣ್ಣ ಒಪ್ಪುವುದಿಲ್ಲ. ಹಣ ಕೊಡಲು ನಿರಾಕರಿಸುತ್ತಾನೆ — ತುಸು ನಿಷ್ಠುರವಾಗಿಯೇ.

"ನಾನು ಧರ್ಮಸ್ಥಳದ ಹೆಗ್ಗಡೆಯವರ ಮುಂದೆ ನನ್ನ ಅಹವಾಲ ಮಂಡಿಸಿ ಅವರಿಂದ ಸಹಾಯಧನ ಪಡೆದು ಓದಿಯೇ ಓದುತ್ತೇನೆ, ವಕೀಲನಾಗಿಯೇ ಆಗುತ್ತೇನೆ." ದೂರದ ಶ್ರೀಕ್ಷೇತ್ರದ ಬಗ್ಗೆ ಹಳ್ಳಿಮೂಲೆಯ ಅನಾಮಧೇಯ ಬಾಲಕನ ಭರವಸೆ ಹಾಗಿತ್ತು — ಯಮಧರ್ಮನನ್ನು ಕುರಿತು ನಚಿಕೇತನಿದ್ದಂತೆ.

ಹಾದಿ ನಡೆದು ಕ್ಷೇತ್ರ ತಲುಪಿ ತರುಣ ಧನಿ ಅಂದಿನ ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆಯವರ ಸಮಕ್ಷಮ ತನ್ನ ಹೃದಯ ತೆರೆದಿದ್ದಾನೆ, ಅವರು ಬೊಗಸೆ ತುಂಬ ದಾನವಿತ್ತ ನಾಣ್ಯಗಳ ಮೊತ್ತವನ್ನು ಉಡಿಯಲ್ಲಿ ಭದ್ರವಾಗಿ ದಟ್ಟ ಕಟ್ಟಿ ನಡೆದು ಗುರಿ ತಲುಪಿದ್ದಾನೆ.

ಉಡುಪಿಯಲ್ಲಿ ಇಂದು ಪ್ರಸಿದ್ಧ ಹಿರಿಯ ವಕೀಲರಾಗಿರುವ ಬಿ. ಕೃಷ್ಣ ಭಟ್ಟರ ಆತ್ಮನಿವೇದನೆ ಇದು!

⊛ 'ಪಡುವಣ ಕಡಲಿನ ತೆಂಗಿನ ಮಡಲಿನ ಮರೆಯಲಿ' ಮಲಗಿದ್ದ ಹಳ್ಳಿಯದು. ಸಂಗೀತಾದಿ ಅಭಿಜಾತ ಕಲೆಗಳ ಗುರುಕುಲ ಪರಂಪರೆ, ಸರ್ಕಾರದಿಂದ ಸಹಾಯಧನ ಪಡೆದು ನಡೆಯುತ್ತಿದ್ದ ಕಿರಿಯ ಪ್ರಾಥಮಿಕ ಶಾಲೆ — ಇವೆರಡು ಆ ಕೃಷಿಮೂಲಕ್ಕೆ ಒದಗಿದ್ದ ಸಂಸ್ಕೃತಿಯ ಹಣತೆಗಳು.

ಜನಸಂಖ್ಯೆ ವರ್ಧಿಸಿತು. ಶಿಕ್ಷಣದ ಮಹತ್ವ ತಿಳಿಯಿತು. ಸ್ಥಳೀಯರ

ಮುಖಂತತ್ವದಲ್ಲಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥ ಶಾಲೆಯಾಗಿ ಕ್ರಮೇಣ ವಿಸ್ತರಿಸಲಾಯಿತು. ಆಡಳಿತ ಮಂಡಳಿಯ ಗೌರವಾಧ್ಯಕ್ಷತೆಗೆ ವೀರೇಂದ್ರ ಹೆಗ್ಗಡೆಯವರನ್ನು ಆಹ್ವಾನಿಸಿದಾಗ "ಬಡ ಕೆಲಸಗಳನ್ನು ನಿರ್ವಂಚನೆಯಿಂದ ನೀವು ಮಾಡುವುದಾದರೆ ನಿಮಗೆ ಶ್ರೀಕ್ಷೇತ್ರದ ಬೆಂಬಲವಿರುವುದು" ಎಂಬ ಭರವಸೆ ದೊರೆಯಿತು.

ಈ 'ಭರವಸೆ'ಯನ್ನು ಹೆಗ್ಗಡೆಯವರು ಈಡೇರಿಸುವ ಕ್ರಮ ಹೇಗೆ?

"ಹಲವು ವರ್ಷಗಳಿಂದ ಶಿಕ್ಷಣ ಕೈಂಕರ್ಯ ಸಲ್ಲಿಸುತ್ತ ಬಂದಿದ್ದೇವೆ. ಸರ್ಕಾರದ ಮನ್ನಣೆ ಪಡೆಯುವ ಸಲುವಾಗಿ ವ್ಯವಹರಿಸಿದ್ದಾಗಿದೆ. ಆದರೆ ಅದಿನ್ನೂ ದೊರೆತಿಲ್ಲ. ವಿದ್ಯಾರ್ಥಿಗಳ ಭವಿಷ್ಯ, ಅಧ್ಯಾಪಕರ ಸಂಬಳ, ಶಾಲೆಯ ಕಟ್ಟಡ ಎಲ್ಲವೂ ಮಸುಕು, ಅಭದ್ರ." ಇದು ಆಡಳಿತ ಮಂಡಳಿಯ ಎಂದೂ ಮುಗಿಯದ ಅಹವಾಲಿ.

ಪ್ರತಿಸಲವೂ ಹೆಗ್ಗಡೆಯವರಿಂದ ಧನದಾನ, ಸರಕು ವಿತರಣೆ, ತಾಂತ್ರಿಕ ಮಾರ್ಗದರ್ಶನ ಯಥೋಚಿತವಾಗಿ ಒದಗಿವೆ. ತಪಾಸಣೆಯೂ ನಡೆದಿದೆ. ಅವರ ಆಶಯವೇನು? ಶಾಲೆಯೆಂಬ 'ದೋಣಿ ಸಾಗಲಿ, ಮುಂದೆ ಹೋಗಲಿ, ದೂರ ತೀರವ ಸೇರಲಿ.' ಇದು ಕಾಂಚನವೆಂಬ ಹೆಸರಿನ ಹಳ್ಳಿಯ ಕತೆ.

⊛ ಬಡಬಗ್ಗರ ತಾಂಡ. ಕೂಲಿ, ಸಾಲ, ಕುಡಿತ, ಖಾಯಿಲೆ — ಮುಂದೇನೂ ತಿಳಿಯದ ಅನಾಥರು. ಹಸಿವು ಬೆಂಬಿಡದ ಸಂಗಾತಿ. ಹರಕೆ ಹಾತುಗಳು, ಕುರುಡು ನಂಬಿಕೆಗಳು, ಗಾಬರಿ ಹೆದರಿಕೆಗಳು ಸದಾ ಒಡನಾಡಿಗಳು. ನಿಸರ್ಗದ ಮಡಿಲಿನಲ್ಲಿ ಮತ್ತು ಸಮೃದ್ಧಿಯ ಕಡಲಿನಲ್ಲಿ ಇದ್ದೂ ಸರಿಯಾದ ತುತ್ತು ಕಾಣದ ಹತಭಾಗ್ಯರಿವರು. ಇವರೂ ಸ್ವೋದ್ಯೋಗಿಗಳು ನಿಜ — ಸರ್ಕಾರೀ ಕಡತಗಳಲ್ಲಿ. ಉದ್ಯೋಗರಾಹಿತ್ಯವೇ ಇದರ ಮುಖ್ಯ ಲಕ್ಷಣ. ಇವರು ಪರಾಜಿತರು. ಶೂನ್ಯ ವರ್ತಮಾನದಲ್ಲಿ ನವೆಯುತ್ತ, ಇಲ್ಲದ ಭವಿಷ್ಯವನ್ನು ನೋಡುತ್ತ ಸವೆದು ಹೋಗುತ್ತಿರುವ ಈ ಜನರಿಗೇನು ಮಾಡಬಹುದು?

ಶ್ರೀಕ್ಷೇತ್ರದ ಸ್ವೋದ್ಯೋಗ ಕೇಂದ್ರದ ಉತ್ಸಾಹೀ ಸೇವಾಪರಾಯಣರು ಇಂಥ ನೆಲೆಗಳನ್ನು ಗುರುತಿಸಿ ಆಯಾ ಸ್ಥಳದ ನೈಸರ್ಗಿಕ ಸಂಪನ್ಮೂಲಗಳನ್ನು ಜನರ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ಅವರಿಗೆ ಒಪ್ಪುವ ಪ್ರಾಯೋಗಿಕ ಯೋಜನೆಗಳನ್ನು ಸಿದ್ಧಗೊಳಿಸಿ ಕಾರ್ಯರೂಪಕ್ಕಿಳಿಸುತ್ತಾರೆ. ಫಲಿತಾಂಶ? ಆ ಹಿಂದಿನ ಬಡಬಗ್ಗರೇ ಈ ಇಂದಿನ ದುಡಿಮೆಗಾರರು, ಮಾರಾಟಗಾರರು ಮತ್ತು ಫಲಾನುಭವಿಗಳು.

## ಬಡತನ ಎಂದರೇನು?

ಈ ಪ್ರಶ್ನೆಗೆ ಹೆಗ್ಗಡೆಯವರು ನೀಡುವ ಉತ್ತರ: "ನಿಜವಾದ ಬಡತನವೆಂದರೆ ಹೃದಯಶೂನ್ಯತೆ, ಬುದ್ಧಿ ವಿಕಲ್ಪ. ಕ್ರೌರ್ಯ, ಮಾತ್ಸರ್ಯ, ನಿರಾಶೆ, ಕರ್ತವ್ಯಹೀನತೆ, ಅಜ್ಞಾನ ಮುಂತಾದವು ಅದರ ವಿವಿಧ

ಛಾಯೆಗಳು. ವಿದ್ಯೆಯ ಅಭಾವವೇ ದಾರಿದ್ರ್ಯ, ಹಣದ ಕೊರತೆ ಅಲ್ಲ. ಶಾಲಾ ಕಾಲೇಜುಗಳಲ್ಲಿ ದೊರೆಯುವ ಶಿಕ್ಷಣ ವಿದ್ಯಾರ್ಜನೆಗೆ ಸಿದ್ಧ ಹಾಗೂ ವ್ಯವಸ್ಥಿತ ಮಾರ್ಗ. ಆದರೆ ಮಾರ್ಗವೇ ಗುರಿಯಲ್ಲ. ಆದ್ದರಿಂದ ಸಾಂಪ್ರದಾಯಿಕ ಶಿಕ್ಷಣ ಪಡೆಯದೆಯೂ ಒಬ್ಬ ವಿದ್ಯಾವಂತನಾಗುವುದು ಸಾಧ್ಯ. ಶ್ರೀಕ್ಷೇತ್ರ ದತ್ತು ತೆಗೆದುಕೊಂಡಿರುವ ಗ್ರಾಮೀಣ ಜನತೆ ನೋಡಿ. ಅವರು ಅಕ್ಷರಿಗಳೋ ಅನಕ್ಷರಿಗಳೋ ಅದು ಗೌಣ. ಆದರೆ ಅವರು ವಿದ್ಯಾವಂತರು ಎಂಬುದು ಖಾತ್ರಿ — ಹಿಡಿದ ಕೆಲಸವನ್ನು ಶ್ರದ್ಧೆಯಿಂದ ಮಾಡಬಲ್ಲ ಕಸಬುದಾರರು, ಅದರಲ್ಲಿ ಸುಧಾರಣೆ ತರಬಲ್ಲ ಕುಶಲಿಗಳು, ಮತ್ತು ಕೆಲಸ ಕುರಿತಂತೆ ಅನುಕೂಲವಾದ ಹವೆ ಪಸರಿಸಬಲ್ಲ ಆಶಾವಾದಿಗಳು. ವಿದ್ಯಾವಂತರು ಇವರಲ್ಲದೇ ಬೇರಾರು?"

"ಗಾಂಧೀಜಿಯವರು ತಮ್ಮ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒತ್ತಿ ಹೇಳುತ್ತಿದ್ದುದು ಇವೇ ಸಂಗತಿಗಳನ್ನಲ್ಲವೇ?"

"ನಾವೆಲ್ಲರೂ ಅದೇ ಪೀಳಿಗೆಯವರು ತಾನೇ! ಒಂದು ಕೆಲಸ— ಅದರಲ್ಲಿ ನಿರತನಾದವನಿಗೆ ಲಾಭ ತರಬೇಕು, ಅದು ದೇಶದ ಒಂದು ಆವಶ್ಯಕತೆಯನ್ನು ಪೂರೈಸಬೇಕು, ಅದರಿಂದ ಆ ವ್ಯಕ್ತಿಗೆ ಗೌರವ ಒದಗಬೇಕು. ಈ ಸಮಗ್ರ ದೃಷ್ಟಿಯಿಂದ ನಮ್ಮ ಗ್ರಾಮಾಭಿವೃದ್ಧಿ ಯೋಜನೆಗಳು, ಸ್ವೋದ್ಯೋಗ ತರಬೇತಿಗಳು, ಶಿಕ್ಷಣ ಶಿಬಿರಗಳು ಎಲ್ಲವೂ ನಿರ್ವಹಿಸಲ್ಪಡುತ್ತವೆ."

"ರತ್ನಮಾನಸದ ಬಗ್ಗೆ?"

"ಇಂದು ಹಳ್ಳಿಯ ಕುಟುಂಬಗಳಲ್ಲಿ ಮಕ್ಕಳನ್ನು ಬಲು ನವುರಾಗಿ ಬೆಳೆಸುವುದು ಕಂಡುಬರುತ್ತದೆ: ಅವರು ಓದಿ, ಯಾವುದೋ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಿರ್ದಿಷ್ಟ ಚಾಕರಿ ಹಿಡಿಯಬೇಕೆಂಬುದು ಹೆತ್ತವರ ಆಶಯ. ಮಕ್ಕಳನ್ನು ಬೇಸಾಯ, ತೋಟಗಾರಿಕೆ ಮುಂತಾದ, ದೇಹಶ್ರಮ ಮತ್ತು ಸಹನೆ ಬೇಡುವ ಕೆಲಸಗಳಲ್ಲಿ ತೊಡಗಿಸುವುದರತ್ತ ಒಲವು ಕಂಡುಬರುತ್ತಿಲ್ಲ. ಈ ಹಂತದಲ್ಲಿ ಮಕ್ಕಳಿಗೆ ಏಕರೂಪದ ಶಿಕ್ಷಣ ಒದಗಿಸುವುದರ ಬದಲು ಅವರನ್ನು ದೈಹಿಕವಾಗಿಯೂ ಮಾನಸಿಕವಾಗಿಯೂ ಪ್ರೋತ್ಸಾಹಿಸುವಂಥ ಒಂದು ಪ್ರಯತ್ನ ಮಾಡಬೇಕೆಂದು ನಿರ್ಧರಿಸಿದೆವು: 'ಶಿಕ್ಷಣವೇ ಜೀವನ, ಜೀವನವೇ ಶಿಕ್ಷಣ' ಎಂಬ ಧ್ಯೇಯವಿಟ್ಟುಕೊಂಡು 'ರತ್ನಮಾನಸ'ದಲ್ಲಿ ಇದಕ್ಕೆ ರೂಪಕೊಡಲಾಯಿತು. ಈ ಪ್ರಯೋಗದಲ್ಲಿ ನಾವು ಕಂಡದ್ದು, ಸಾಧಾರಣವಾಗಿ, ಎಂಟನೆಯ ತರಗತಿ ಮಕ್ಕಳು ಕೃಷಿಯಲ್ಲಿ ಹೆಚ್ಚು ಆಸಕ್ತಿ ಬೆಳೆಸಿಕೊಂಡಿರುತ್ತಾರೆ. ಕೃಷಿ ಮತ್ತು ಹೈನುಗಾರಿಕೆಗಳಲ್ಲಿ ಭಾಗಿಗಳಾಗಲು ಸಾಕಷ್ಟು ಶಕ್ತಿಯೂ ಅವರಲ್ಲಿರುವುದು. ದೈಹಿಕ ಮತ್ತು ಮಾನಸಿಕ ಶಕ್ತಿಗಳನ್ನು ಏಕೀಭವಿಸಿ ಅವರು ದಿವಸಕ್ಕೆ ಕೆಲವೇ ಗಂಟೆ ಕಾಲ ಈ ಕೆಲಸ ಮಾಡಿದರೂ ಸಾಕು, ಅವರ ಆರ್ಥಿಕ ಸಂಪಾದನೆ ವಿಶೇಷವಾಗಿ ವರ್ಧಿಸುತ್ತದೆ. ಒಮ್ಮೆ ಈ ರುಚಿ ಸವಿದರೋ ಬಳಿಕ ಆ ವಿದ್ಯಾರ್ಥಿಗಳು ಇತರರ ನೌಕರಿ ಮಾಡುವುದಕ್ಕಿಂತ ಸ್ವತಂತ್ರವಾಗಿ

ಬಾಳುವುದೇ ಲೇಸೆಂದು ಕೃಷಿ ಕಾರ್ಯಗಳಿಂದ ಹೊಟ್ಟೆಯ ಹುಟ್ಟುವಳಿ ತೆಗೆಯಲು ಪ್ರಯತ್ನಿಸುತ್ತಾರೆ, ಸ್ವಾವಲಂಬಿಗಳಾಗುತ್ತಾರೆ. ಕ್ರಮೇಣ ಅವರಲ್ಲಿ ಕುತೂಹಲ ಮತ್ತು ಆತ್ಮ ವಿಶ್ವಾಸ ಕುದುರುತ್ತವೆ. 'ರತ್ನಮಾನಸ' ಒಂದು ವಿನೂತನ ಪ್ರಯೋಗ. ಇದರ ಫಲಿತಾಂಶ ಆಶಾದಾಯಕವಾಗಿದೆ. ನಮ್ಮ ಅನೇಕ ವಿದ್ಯಾರ್ಥಿಗಳು ಈಗ ಗ್ರಾಮೀಣ ಪ್ರದೇಶಗಳಲ್ಲಿ ಯಶಸ್ವಿ ಕೃಷಿಕರಾಗಿ ನೆಲಸಿದ್ದಾರೆ." "

"ವೃತ್ತಿಪರ ಶಿಕ್ಷಣ ಸಂಸ್ಥೆಗಳ, ಅಂತೆಯೇ ಪ್ರಕೃತಿ ಚಿಕಿತ್ಸಾ ಕಾಲೇಜಿನ, ಸ್ಥಾಪನೆಗೆ ಪ್ರೇರಣೆ ಏನು?"

"ಕೆಲವು ವರ್ಷಗಳ ಹಿಂದೆ ನಾನು ವಿದೇಶಕ್ಕೆ ಹೋಗಿದ್ದಾಗ ಅಲ್ಲಿಯ ಜನಜೀವನದ ಮೇಲೆ ಅತಿಯಾಂತ್ರೀಕರಣ ಮತ್ತು ಇದರಿಂದ ಒದಗಿರುವ ಅಪಾರ ಸೌಕರ್ಯಗಳು ಬೀರುವ ದುಷ್ಪರಿಣಾಮಗಳನ್ನು ಗಮನಿಸಿದೆ. ದೇಹಕ್ಕೆ ಶ್ರಮವಿಲ್ಲ. ಮನಕ್ಕೆ? ಸಮಾಧಿಯಿಲ್ಲ. ಯಾಂತ್ರಿಕ ಕೆಲಸ, ಸೂತ್ರಾಧಾರಿತ ಜೀವನ. ಫಲಿತಾಂಶ? ಮನೋದೈಹಿಕ ಅಸ್ವಾಸ್ಥ್ಯ. ಇದು ಮಾರಕ ಅಲ್ಲ, ಆದರೆ ಜಡ್ಡು ಹೌದು. ಇದರ ನಿವಾರಣೆಗೆ ಪ್ರಕೃತಿ ಚಿಕಿತ್ಸೆ ಉತ್ಕೃಷ್ಟ. ನಮ್ಮ ಈ ಪ್ರಕೃತಿ ಚಿಕಿತ್ಸಾ ಕಾಲೇಜಿನ ಪದವೀಧರರಿಗೆ ದೇಶ ವಿದೇಶಗಳಲ್ಲಿ ಸೇವೆ ಸಲ್ಲಿಸಲು ವಿಪುಳ ಅವಕಾಶಗಳಿವೆಯೆಂಬುದನ್ನು ಮನಗಂಡು ಈ ಸಂಸ್ಥೆಯನ್ನು ಪ್ರಾರಂಭಿಸಿದೆವು." "

೧೯೭೦ರ ದಶಕ. ಅಮೆರಿಕದ ಒಬ್ಬ ಯುವ ಉತ್ಸಾಹಿ ಪದವೀಧರ ನಮ್ಮ ಸಂಸ್ಥೆಗೆ ಬಂದ (ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು). ನಮ್ಮಿಬ್ಬರ ನಡುವೆ ವಿಶೇಷ ಆತ್ಮೀಯತೆ ವರ್ಧಿಷ್ಣು (ಇಬ್ಬರೂ ಖಗೋಳವಿಜ್ಞಾನದ ವಿದ್ಯಾರ್ಥಿಗಳಾಗಿದ್ದುದರ ಜೊತೆಗೆ ಐನ್‌ಸ್ಟೀನ್-ಆರಾಧಕರೂ ಆಗಿದ್ದುದು ಇದರ ಒಂದು ಮುಖ್ಯ ಕಾರಣ) ಬಿಚ್ಚುಮನಸ್ಸಿನ ಅಭಿಪ್ರಾಯ ವಿನಿಮಯ ನಡೆಯಿತು.

"ಭಾರತದ ವರ್ತಮಾನ ಪರಿಸ್ಥಿತಿ ನನ್ನಂಥ ೧೯೪೭-ಪೂರ್ವದ ಗಾಂಧೀಯುಗದ ಪದವೀಧರರಲ್ಲಿ ತೀವ್ರ ನಿರುತ್ಸಾಹ ನಿರಾಶೆ ಮೂಡಿಸುತ್ತದೆ. ಅಮೆರಿಕದಿಂದ ಮೊದಲ ಬಾರಿಗೆ ಭಾರತಕ್ಕೆ ಬಂದು ಸಾಕಷ್ಟು ಕಾಲ ನಮ್ಮ ಎಲ್ಲ ಸ್ತರಗಳ ಜನರೊಂದಿಗೆ ನಿಕಟವಾಗಿ ದೇಶದ ವಿವಿಧ ಭಾಗಗಳನ್ನು ನೋಡಿರುವ ನಿಮ್ಮ ಅಭಿಪ್ರಾಯವೇನು?"

ನನ್ನ ಈ ನೇರ ಪ್ರಶ್ನೆಗೆ ಆತನ ಪ್ರತಿಕ್ರಿಯೆ ಕೂಡ ಅಷ್ಟೇ ನೇರವಾಗಿತ್ತು:

"ನೀವು ಅನ್ಯಥಾ ಭಾವಿಸದಿದ್ದರೆ ಒಂದು ಮಾತು ಹೇಳುತ್ತೇನೆ: ನಿಜವಾದ ಭಾರತ ಅಥವಾ ಅಮೆರಿಕ ವೃತ್ತಪತ್ರಿಕೆಗಳಲ್ಲಿ ಅಥವಾ ಇತರ ಸಮೂಹ ಮಾಧ್ಯಮಗಳಲ್ಲಿ ಚಿತ್ರಿತವಾಗುವ ಆಯಾ ದೇಶ ಅಲ್ಲ. ಭೂತಕಾಲವನ್ನು ಅತಿಶಯವಾಗಿ ಉಜ್ಜ್ವಲಿಸುವುದೂ ವರ್ತಮಾನ ಕಾಲವನ್ನು ತೀವ್ರವಾಗಿ ಅಪಮೌಲ್ಯೀಕರಿಸುವುದೂ ಭಾರತೀಯ

ಮನೋವ್ಯಾಪಾರದ (psyche) ಪ್ರಮುಖ ರೀತಿ ಎಂದು ನನಗನ್ನಿಸುತ್ತದೆ. ನಿಮ್ಮ ದೇಶದಲ್ಲಿ ಹುದುಗಿರುವ ಅಸಂಖ್ಯ ಸುವರ್ಣಾವಕಾಶಗಳು, ನೂತನ ಅನ್ವೇಷಣಾ ಕ್ಷೇತ್ರಗಳು, ಸ್ಪರ್ಧಾರಾಹಿತ್ಯ ಮುಂತಾದವನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ, ಮತ್ಸರವೂ ಮೊಳೆಯುತ್ತದೆ — ನಮ್ಮಲ್ಲಿ ಇಂಥ ಯಾವ ಅವಕಾಶವೂ ಉಳಿದಿಲ್ಲವಲ್ಲ ಎಂಬ ಕಾರಣಕ್ಕಾಗಿ. ಆದರೆ ನೀವು ಮಾತ್ರ ಈ ಕುರಿತು ಏನೂ ಯೋಚಿಸಿರುವ ಹಾಗೆ ಕಾಣುವುದಿಲ್ಲ. ನನ್ನ ದೃಷ್ಟಿಯಲ್ಲಿ ನಿಮ್ಮ ಸ್ಥಿತಿ ಹೇಗಿದೆ ಗೊತ್ತೇ? ಹಾಲ್ಗಡಲಿನಲ್ಲಿ ತೇಲುತ್ತ ಹೊರಗಿನವರಿಂದ ಹಾಲನ್ನು ಬೇಡುವವರಂತೆ!"

'ಇಲ್ಲಿಲ್ಲದುಳಿದುದೇ? ಜೇನು ಸುರಿವ ಹಾಲು ಹರಿವ ದಿವ್ಯ ಭೂಮಿಗಿಳಿದುದೇ!' ಗೋವಿಂದ ಪೈಗಳ ಈ ವಾಣಿಗೆ ಬರೆದ ಭಾಷ್ಯಗಳಂತಿವೆ ಹೆಗ್ಗಡೆಯವರು ಪ್ರವರ್ತಿಸಿರುವ ಮತ್ತು ಪ್ರವರ್ತಿಸುತ್ತಿರುವ ಶೈಕ್ಷಣಿಕ ವಿಧಾನಗಳು ಮತ್ತು ಸುಧಾರಣೆಗಳು.

ಎಲ್ಲಿ ಮತ್ಸರವಳಿದು ಮೈತ್ರಿ ಮೂಡುವುದಲ್ಲಿ
ಮೂಡಿತೆಂದೇ ತಿಳಿಯೊ ಧರ್ಮಸ್ಥಳ
ಸುಲಿಗೆ ವಂಚನೆ ಹಿಂಸೆಗಳನಳಿದವನ ಮನವೆ
ಮಂಜುನಾಥನ ಮಂಚ, ಹೃದಯ ಕಮಲ![೬]

## ಶ್ರೀಕ್ಷೇತ್ರದಲ್ಲಿ ಶಿಕ್ಷಣಪರಂಪರೆ

'ಮಹಾಚೇತನ: ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಸಾಧನೆ ಸಿದ್ಧಿಗಳು — ಸಂಪುಟ ೧' ಎಂಬ ಗ್ರಂಥದ ಮುನ್ನುಡಿಯಲ್ಲಿ ವೀರೇಂದ್ರ ಹೆಗ್ಗಡೆಯವರು ಬರೆದಿದ್ದಾರೆ:

"ಧರ್ಮ-ಸಾಹಿತ್ಯದಂತೆ ಶಿಕ್ಷಣರಂಗವೂ ಅವರಿಗೆ ಬಲು ಅಪ್ಯಾಯಮಾನವಾದ, ಆದರಣೀಯವಾದ ಕ್ಷೇತ್ರ. ಮಲೆನಾಡಿನ ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಮನಗಂಡು, ತಾಲೂಕಿನ ಮೊತ್ತಮೊದಲ ಹೈಸ್ಕೂಲನ್ನು ಉಜಿರೆಯಲ್ಲಿ ಪ್ರಾರಂಭಿಸಿ, ೧೯೪೭ರಲ್ಲಿ ಈ ಹೈಸ್ಕೂಲಿಗಾಗಿ ಕೆಲವು ಎಕರೆ ಭೂಮಿಯನ್ನು ಹತ್ತುಸಾವಿರ ರೂಪಾಯಿಯನ್ನು ದಾನವಾಗಿತ್ತು ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಕಾರಣೀಭೂತರಾದರು. ಅಲ್ಲದೇ ಇಂದಿನ ವಿದ್ಯಾಭ್ಯಾಸ ಕ್ರಮದ ಕುರಿತೂ ಸುದೀರ್ಘ ಚಿಂತನೆ ನಡೆಸಿದರು. ನಮ್ಮ ಪ್ರಾಚೀನ ಗುರುಕುಲ ಪದ್ಧತಿಯಲ್ಲಿ ವಿದ್ಯಾಭ್ಯಾಸಮಾಡಿದ ವಿದ್ಯಾರ್ಥಿಗೆ ಚಾರಿತ್ರ್ಯಶುದ್ಧಿಯ ಅವಕಾಶ ಸಿಗುತ್ತದೆಂದು ಮನಗಂಡ ಅವರು ಕಲಾಶಿಕ್ಷಣದ ಜೊತೆಗೆ ಜೀವನಶಿಕ್ಷಣವೂ ದೊರೆಯಬೇಕೆಂದು ೧೯೪೦ರಲ್ಲಿ ಶ್ರೀ ಸಿದ್ಧವನ ಗುರುಕುಲವೆಂಬ ಆದರ್ಶ ಸಂಸ್ಥೆಯನ್ನು ಆರಂಭಿಸಿದರು. ಅಲ್ಲಿ ಕಲಾಶಿಕ್ಷಣದ ಜೊತೆಗೆ ರಾಮಾಯಣ, ಮಹಾಭಾರತ, ಭಗವದ್ಗೀತೆ ಮೊದಲಾದ ಆಧ್ಯಾತ್ಮಿಕ ಶಿಕ್ಷಣವನ್ನು ಹಾಗೂ ನಮ್ಮ ಪ್ರಾಚೀನ ಸಂಸ್ಕೃತಿ ಪರಂಪರೆಗಳ ಮಹಿಮೆಯನ್ನು ತಿಳಿಸಿಕೊಡುವಂಥ ಸೂಕ್ತ ಏರ್ಪಾಡನ್ನು ಮಾಡಿದರು."

ಮಂಜಯ್ಯ ಹೆಗ್ಗಡೆಯವರ ಅನಂತರ ಅವರ ತಮ್ಮ ರತ್ನವರ್ಮ

ಹೆಗ್ಗಡೆಯವರು (ವೀರೇಂದ್ರರ ತಂದೆ) ೧೯೫೫ರಲ್ಲಿ ಪಟ್ಟಾಭಿಷಿಕ್ತರಾದರು. ಅಣ್ಣನವರಿಂದ ಬಳುವಳಿಯಾಗಿ ಬಂದಿದ್ದ ಸಮಸ್ತ ಜನಹಿತ ಕಾರ್ಯಗಳ ಜೊತೆಗೆ ಶಿಕ್ಷಣಕ್ಕೆ ಸಂಬಂಧಿಸಿದವನ್ನು ಇವರು ಶ್ರದ್ಧೋತ್ಸಾಹಸಹಿತ ಮುಂದುವರಿಸಿದರು ಮತ್ತು ಅಭಿವರ್ಧಿಸಿದರು. ತಮ್ಮ ಚಿರಂಜೀವಿಗಳಿಗೆ ಆಧುನಿಕ ಶಿಕ್ಷಣ, ಮಿಗಿಲಾಗಿ ಪ್ರಗತಿಶೀಲ ದೃಷ್ಟಿ ಕೊಡಿಸುವ ಸಲುವಾಗಿ ಬೆಂಗಳೂರಿನಲ್ಲೊಂದು ಬಿಡಾರ ಹೂಡಿದರು.

ಉಜಿರೆ: ಹಾದಿಬದಿಯ ಅನಾಮಧೇಯ ಹಳ್ಳಿ. ಧರ್ಮಸ್ಥಳಕ್ಕೆ ದಾರಿಕವಲೊಡೆಯುವ ಸರ್ವಬಿಂದುವಿನಲ್ಲಿದೆಯೆಂಬ ಏಕೈಕ ಕಾರಣಕ್ಕಾಗಿ ಅದಕ್ಕೆ ಪ್ರಾಶಸ್ತ್ಯ — ಕೈಗಂಬದಂತೆ. ಸಾಧಾರಣ ಮಟ್ಟದ ಪಟ್ಟಣದ ಸೀಮಿತ ಸೌಕರ್ಯಗಳೂ ಇರದಿದ್ದ ಅಂದಿನ ಉಜಿರೆಯಲ್ಲಿ ಎಸ್‌ಡಿಎಮ್ ಕಾಲೇಜನ್ನು ಪ್ರಾರಂಭಿಸಿದ್ದು (೧೯೬೫) ರತ್ನವರ್ಮ ಹೆಗ್ಗಡೆಯವರ ದೂರದರ್ಶಿತ್ವಕ್ಕೆ ಒಂದು ನಿದರ್ಶನ. ಇಂದು (೧೯೯೨) ಅದು ಹೇಗಿದೆ? ಗ್ರಾಮೀಣ ಪರಿಸರದಲ್ಲಿ, ಸಾಂಸ್ಕೃತಿಕ ಮುನ್ನೆಲೆಯಲ್ಲಿ, ಚಿರಂತನ ಮೌಲ್ಯಗಳಲ್ಲಿ ಮತ್ತು ವರ್ತಮಾನ ಸೌಕರ್ಯಗಳಲ್ಲಿ ಕಂಗೊಳಿಸುತ್ತಿರುವ ಒಂದು ನಿವಾಸಿ ವಿಶ್ವವಿದ್ಯಾಲಯದಂತೆ, ಪ್ರಾಚೀನ ಪರಂಪರೆ ವರ್ತಮಾನ ಜೀವನವಾಗಿ ಭವಿಷ್ಯಮಾರ್ಗರೂಪಿಸುವ ಕಮ್ಮಟದಂತೆ.

ಈ ಕಾಲೇಜಿನ ಆರಂಭದಿಂದಲೂ ಇದರ ಪ್ರಾಂಶುಪಾಲರಾಗಿರುವ ಎಸ್. ಪ್ರಭಾಕರ್ ಬರೆದಿದ್ದಾರೆ: "೧೯೬೫ರುದ್ದಕ್ಕೂ ಭಾವ ರತ್ನವರ್ಮರು ಬೆಂಗಳೂರಿಗೆ ಬಂದಾಗಲೆಲ್ಲ ಉಜಿರೆಯಲ್ಲೊಂದು ಕಾಲೇಜು ಆರಂಭಿಸುವ ಬಗ್ಗೆ ಹೇಳುತ್ತಿದ್ದರು. ಅದರ ಆಗುಹೋಗುಗಳ ಬಗ್ಗೆಯೇ ಚರ್ಚೆನಡೆಯುತ್ತಿತ್ತು. ಬೆಂಗಳೂರಿನಲ್ಲಿದ್ದ ನನಗೆ ಉಜಿರೆಯಂಥ ಗ್ರಾಮೀಣ ಪ್ರದೇಶದಲ್ಲಿ ಕಾಲೇಜು ಎಂಬ ಆಶ್ಚರ್ಯ! ಆದರೆ ೧೯೬೫ರ ಫೆಬ್ರುವರಿ ಬಂದಾಗ ಅವರದನ್ನು ಸಾಕಾರಗೊಳಿಸಿಯೇಬಿಟ್ಟಿದ್ದರು. ಒಮ್ಮೆ ಬಂದವರೇ 'ನಾಡಿದ್ದು ಕಾಲೇಜಿನ ಬಗೆಗಿನ ಸಿದ್ಧತೆಗಳನ್ನು ನೋಡಲು ಮೈಸೂರು ವಿಶ್ವವಿದ್ಯಾನಿಲಯದ ಅಫಿಲಿಯೇಶನ್ ಕಮಿಶನ್ ಬರುತ್ತದೆ. ನೀನು ಬರಬೇಕು' ಅಂದರು. ಹೃದಯದ ಬಡಿತ ಜೋರಾಗಿದ್ದರೂ ಬೇರೇನೂ ಕೇಳಲು ಧೈರ್ಯವಿಲ್ಲದೆ ಒಪ್ಪಿದೆ. ಬೇಸಿಗೆ ರಜೆಯಲ್ಲೆಲ್ಲ ಹೊಸ ಕಾಲೇಜಿನ ತಯಾರಿಯ ಉತ್ಸಾಹದ ಕೆಲಸ. ಪ್ರಾಂಶುಪಾಲನಾಗಿ ಹೊಸ ಸಂಸ್ಥೆಯನ್ನಾರಂಭಿಸುವ ಹುರುಪು. ನಮ್ಮ ಕಾಲೇಜು ಹೀಗಿರಬೇಕು ಎನ್ನುವ ನಾನಾ ಕನಸುಗಳು."[2]

ಪ್ರಸಕ್ತ ವಿಷಯ ಕುರಿತಂತೆ ಅನುಗತವಾಗುವ ಅಂಶಗಳು ನಾಲ್ಕು:

* ಶ್ರೀಕ್ಷೇತ್ರದ ಧಾರ್ಮಿಕ ಪರಂಪರೆಯ ಜೊತೆಗೆ ಸಮಕಾಲೀನವಾಗಿ, ತುಸು ಮಂದ್ರಗತಿಯಲ್ಲಾದರೂ, ಶೈಕ್ಷಣಿಕ ಪರಂಪರೆಯೂ ಮುನ್ನಡೆಯುತ್ತಿತ್ತು.
* ದೇಶದಲ್ಲಿ ಸ್ವಾತಂತ್ರ್ಯಹೋರಾಟದ ರಂಗು ತಾರಕ್ಕೇರಿದಂತೆ, ನಾಡಿನ ಉದ್ದಗಲ ನವಚೇತನದ ವಿದ್ಯುತ್ಸಂಚಾರವಾದಂತೆ, ಹೊಸಹರವು

ಹೊಸ ಹಸಿರು, ಹೊಸ ಬೆಳಕು ಅನಾವರಣಗೊಂಡಂತೆ ಶ್ರೀಕ್ಷೇತ್ರದ ನಾಯಕರಾದರೂ ಜನರ ಆಶೋತ್ತರಗಳಿಗೆ ರಚನಾತ್ಮಕವಾಗಿ ಸ್ಪಂದಿಸಿದರು.

* ಪ್ರಾಮಾಣಿಕ ಧುರೀಣತ್ವ, ನಿಶ್ಚಿತ ಧೋರಣೆ, ಯೋಗ್ಯ ಸಂಘಟನೆ ಮತ್ತು ಋಜುನಿರ್ವಹಣೆ ಒಂದೆಡೆ ಒಮ್ಮೆಗೇ ಕೂಡಿದಾಗ ಯಾವ ಕಾರ್ಯವೂ ಅಸಾಧ್ಯವಲ್ಲ ಎಂಬ ಯಶೋಮಾರ್ಗದ ಸ್ಪಷ್ಟ ಕಲ್ಪನೆ ಮಂಜಯ್ಯ ಹೆಗ್ಗಡೆಯವರಿಗೂ ರತ್ನವರ್ಮ ಹೆಗ್ಗಡೆಯವರಿಗೂ ಇತ್ತು.

* ಸಾಮಾಜಿಕ ಬಲಗಳ (ಅಂದರೆ ಜನರ) ಜೊತೆ ನಡೆಸುವ ಪ್ರಯೋಗ ಭೌತಬಲಗಳ (ಅಂದರೆ ನಿಸರ್ಗದ) ಜೊತೆ ನಡೆಸುವ ಪ್ರಯೋಗಕ್ಕಿಂತ ಭಿನ್ನವಾದದ್ದು. ಮೊದಲನೆಯದರಲ್ಲಿ ಜ್ಞಾತೃನಿಷ್ಠತೆ (subjectivity) ಮತ್ತು ಅನಿಶ್ಚಿತತೆ ನಿಯಮಗಳು. ಎರಡನೆಯದರಲ್ಲಾದರೋ ಜ್ಞೇಯನಿಷ್ಠತೆ (objectivity) ಮತ್ತು ಮಾಪನಶೀಲತೆ ನಿಯಮಗಳು. ಹೀಗಿದ್ದರೂ ಒಂದನ್ನುಳಿದು ಇನ್ನೊಂದಿಲ್ಲ. ಸಭ್ಯ ಸುಸಂಸ್ಕೃತ ಪ್ರಗತಿಶೀಲ ಸಮಾಜದಲ್ಲಿ ಉಭಯಬಲಗಳೂ ಪರಸ್ಪರ ಪೂರಕ ಪೋಷಕಗಳಾಗಿ ವರ್ತಿಸಬೇಕು. ಹಿರಿಯ ಹೆಗ್ಗಡೆದ್ವಯರಿಗೂ ಈ ಅರಿವು ಇತ್ತೆಂದು ಅವರ ಕೃತಿಗಳಿಂದ ತಿಳಿಯುತ್ತದೆ.

ರತ್ನವರ್ಮ ಹೆಗ್ಗಡೆಯವರು ೧೨-೧೦-೧೯೬೮ರಂದು ವಿಧಿವಶರಾದರು. ಆಗ ಇನ್ನೂ ಇಪ್ಪತ್ತರ ಹರೆಯದಲ್ಲಿದ್ದ, ಕಾಲೇಜ್ ವಿದ್ಯಾರ್ಥಿ, ವೀರೇಂದ್ರರು ಹೆಗ್ಗಡೆಸ್ಥಾನಕ್ಕೆ ಪಟ್ಟಾಭಿಷಿಕ್ತರಾಗುವುದು ಅನಿವಾರ್ಯವಾಯಿತು. ಹೀಗೆ ಇವರು ಶ್ರೀಕ್ಷೇತ್ರದ ನೈಷ್ಠಿಕ ಪರಂಪರೆಯ ವರ್ತಮಾನನ್ಯಾಸಧಾರಿಯೂ ಆದರು. ಆ ಸನ್ನಿವೇಶವನ್ನು ಪ್ರಭಾಕರ್ ಚಿತ್ರಿಸಿದ್ದಾರೆ:

"ಶ್ರೀಕ್ಷೇತ್ರದ ಪರಂಪರೆಯನ್ನು ಬಲ್ಲ ನಾವೆಲ್ಲ ಒಂದು ನಿರ್ಧಾರಕ್ಕೆ ಬಂದೆವು. ಇಲ್ಲಿಯ ಹೆಗ್ಗಡೆಯವರಿಗೆ ಧರ್ಮದೇವತೆಗಳು ಅನೇಕ ವಿಷಯಗಳ ಬಗೆಗೆ, ಮುಖ್ಯವಾಗಿ ಶ್ರೀಕ್ಷೇತ್ರದ ಆಡಳಿತದ ಬಗೆಗೆ, ಆಣತಿ ನೀಡುವುದಿದೆ. ಇದು ಪ್ರತಿ ತಿಂಗಳೂ ಸಂಕ್ರಮಣದಂದು ನಡೆಯುತ್ತದೆ. ಅದರಲ್ಲಿ ಮುಖ್ಯವಾದದ್ದು ಹೀಗಿದೆ: 'ಯಾವುದೇ ವಿಷಯದಲ್ಲಿ ನಿನ್ನದೇ ನಿರ್ಧಾರ ತೆಗೆದುಕೋ. ಯಾರದೇ ಅಭಿಪ್ರಾಯಗಳನ್ನು ಬೇಕಾದರೂ ಕೇಳು. ಆದರೆ ನಿರ್ಧಾರ ಮಾತ್ರ ನಿನ್ನದೇ. ಅದಕ್ಕೆ ನೀನೇ ಹೊಣೆ.' ಆದ್ದರಿಂದ, ತಂದೆಯವರಿಂದ ಸಾಕಷ್ಟು ಮಾರ್ಗದರ್ಶನ ಮತ್ತು ತರಬೇತಿ ಪಡೆದ ಇವರಲ್ಲಿ ಅವಶ್ಯ ಕಂಡಾಗ ನಮ್ಮ ಅಭಿಪ್ರಾಯಗಳನ್ನು ಮಂಡಿಸುವುದು ಮಾತ್ರ: ಹಾಗೆ ಮಾಡಿ, ಹೀಗೆ ಮಾಡಿ ಎಂದೂ ಯಾರೂ ಒತ್ತಡ ಹೇರುವುದಿಲ್ಲ. ಕೊನೆಗೆ ಅವರೇನು ನಿರ್ಧಾರ ಕೈಗೊಂಡರೂ ಅದನ್ನು ಪಾಲಿಸುವುದು ನಮ್ಮ ಕರ್ತವ್ಯ. ನಮ್ಮ ಈ ಯೋಜನೆ ಅವರಿಗೆ ಸ್ವತಂತ್ರವಾಗಿ ಯೋಚಿಸಿ ಯುಕ್ತ ನಿರ್ಧಾರಗಳನ್ನು ಕೈಗೊಳ್ಳಲು ಸೂಕ್ತ ಅವಕಾಶ, ತರಬೇತಿ ನೀಡುವುದರಲ್ಲಿ ಸಂದೇಹವಿಲ್ಲ."[2]

ತರುವಾಯದ ದಿನಗಳಲ್ಲಿ ಕ್ಷೇತ್ರಕ್ಕೆ ಬಾಹುಬಲಿ ವಿಗ್ರಹದ ಸಾಗಣೆ ಮತ್ತು ಅಲ್ಲಿಯ ಉನ್ನತ ಶೃಂಗದಲ್ಲಿ ಅದರ ಸ್ಥಾಪನೆ ಎಸ್‌ಡಿಎಮ್-ಸಂಸ್ಥೆಗಳು ಸಾಧಿಸಿದ ಮತ್ತು

ಸಾಧಿಸಲಿರುವ ವಿಕ್ರಮಗಳ ಪ್ರತೀಕವೆಂದು ಉಭಯ ಸಾಹಸಗಳನ್ನು ಪರಿಶೀಲಿಸಿದವರ ಮನಗಳಲ್ಲಿ ಸ್ಫುರಿಸದಿರದು.

ಹೊಸಚಿಗುರು ಹಳೆಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ
ಜಸವು ಜನಜೀವನಕೆ ಮಂಕುತಿಮ್ಮ

೧೯ನೆಯ ಶತಮಾನದ ದಾರ್ಶನಿಕ-ಲೇಖಕ ಸ್ಯಾಮ್ಯುಯಲ್ ಸ್ಮೈಲ್ಸ್ ಬರೆದಿರುವ Character ಪುಸ್ತಕದ ಆರಂಭದ ಕೆಲವು ಸಾಲುಗಳಿವು:

“ಮಾನವನನ್ನು ಕ್ರಿಯೆಗೆ ಪ್ರೇರಿಸುವ ಅತ್ಯಂತ ಬಲಿಷ್ಠ ಪ್ರವರ್ತಕ ಬಲಗಳ ಪೈಕಿ ಶೀಲ ಒಂದು. ಅದು ಪರಮೋದಾತ್ತವಾಗಿ ಪ್ರಕಟವಾದಾಗ ವ್ಯಕ್ತಿಯನ್ನು ಉತ್ಕೃಷ್ಟ ಸ್ಥಿತಿಗೆ ಉತ್ತರಗೊಳಿಸಿ ಮಾನವಸ್ವಭಾವದ ಸರ್ವೋನ್ನತ ಮುಖಗಳನ್ನು ಬಿಂಬಿಸುತ್ತದೆ. ಜೀವನದ ಪ್ರತಿಯೊಂದು ಸ್ತರದಲ್ಲಿಯೂ ಋಜುಗುಣಸಂಪನ್ನ ವ್ಯಕ್ತಿಗಳು — ಉದ್ಯಮಶೀಲರು, ಆರ್ಜವಶಾಲಿಗಳು, ತತ್ತ್ವನಿಷ್ಠರು, ಪ್ರಾಮಾಣಿಕರು — ಜನತೆಯ ಸ್ವಯಂಪ್ರೇರಿತ ಗೌರವಕ್ಕೆ ಭಾಜನರಾಗುತ್ತಾರೆ. ಈ ವ್ಯಕ್ತಿಗಳನ್ನು ನಂಬುವುದು, ಇವರಲ್ಲಿ ಭರವಸೆ ಇಡುವುದು ಮತ್ತು ಇವರನ್ನು ಅನುಕರಿಸುವುದು ತೀರ ಸಹಜ. ಜಗದ್ವಂದ್ಯರಿವರು. ಪ್ರಪಂಚದಲ್ಲಿ ಶ್ರೇಷ್ಠವಾದದ್ದೆಲ್ಲವನ್ನೂ ಇವರು ಎತ್ತಿಹಿಡಿಯುತ್ತಾರೆ. ಎಂದೇ ಈ ಸಾರವಂತರ ಅನಸ್ತಿತ್ವದಲ್ಲಿ (ಅಂದರೆ, ಅವರು ಇಲ್ಲವಾದಾಗ) ಪ್ರಪಂಚ ಬಾಳಲು ಯೋಗ್ಯ ನೆಲೆಯಾಗಿ ಉಳಿಯುವುದಿಲ್ಲ. ಮಹಾಪ್ರತಿಭೆ ಸದಾ ಕಡ್ಡಾಯವಾಗಿ ಶ್ಲಾಘನೆ ಗಳಿಸಿಯೇ ಗಳಿಸುತ್ತದೆ. ಶೀಲವಾದರೋ ಪ್ರೀತಿಯ ಪಥದಲ್ಲಿ ಗಮಿಸಿ ಪರಮ ಗೌರವಭಾಜನವಾಗುತ್ತದೆ. ಮೊದಲನೆಯದು ಮಿದುಳ ಸಾಮರ್ಥ್ಯದುತ್ಪನ್ನ, ಎರಡನೆಯದು ಹೃದಯಸಾಮರ್ಥ್ಯದ ಫಲ. ದೀರ್ಘಾವಧಿ ಪರಿಶೀಲನೆಯಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ: ಜೀವನವನ್ನು ನಿಯಂತ್ರಿಸುವುದು ಹೃದಯ (ಮಿದುಳು ಅಲ್ಲ). ಸಮಾಜದ ಧೀಶಕ್ತಿಗೆ ಪ್ರತಿಭಾವಂತರು ಹೇಗೋ ಮನಸ್ಸಾಕ್ಷಿಗೆ ಶೀಲವಂತರು ಹಾಗೆ. ಮೊದಲನೆಯವರನ್ನು ಗೌರವಿಸುತ್ತೇವೆ, ಎರಡನೆಯವರನ್ನು ಅನುಸರಿಸುತ್ತೇವೆ.”

ಇಪ್ಪತ್ತರ ಹರೆಯದ ವೀರೇಂದ್ರ ಹೆಗ್ಗಡೆಯವರು, ಇತರ ಕರ್ತವ್ಯಗಳ ಜೊತೆಗೆ, ಭವ್ಯವಾದ ಒಂದು ಶೈಕ್ಷಣಿಕ ಪರಂಪರೆಯ 'ಅನನುಭವಿ' ಉತ್ತರಾಧಿಕಾರಿಯಾಗಿ ಗುರುತರ, ಅನೇಕ ಸಂದರ್ಭಗಳಲ್ಲಿ ಘೋರತರ ಹೊಣೆ, ಜವಾಬುದಾರಿಕೆ ವಹಿಸಿಕೊಂಡರು.

ಅವರೇ ಒಮ್ಮೆ ವಿವರಿಸಿದರು: “ಆದರೆ ಇಲ್ಲಿ ನಮಗೊಂದು ಅನುಕೂಲತೆ ಇದೆ: ಹೆಗ್ಗಡೆ ಸ್ಥಾನಕ್ಕೆ ಬರುವಾತನನ್ನು ಜನರು ನೇರವಾಗಿ ಮತ್ತು ಪ್ರಶ್ನಾತೀತವಾಗಿ ಒಪ್ಪಿಕೊಂಡು ಗೌರವಾದರಗಳಿಂದ ನಡೆಸಿಕೊಳ್ಳುತ್ತಾರೆ. ಆತನಲ್ಲಿ ತಮ್ಮ ಆಸೆ ಅಭೀಪ್ಸೆಗಳ ಮೂರ್ತರೂಪವನ್ನು ದುಗುಡ ದುಮ್ಮಾನಗಳ ಸಾಂತ್ವನಕಾರಿಯನ್ನೂ ಕಾಣುತ್ತಾರೆ. ಈ ನಿರ್ವ್ಯಾಜ ಮತ್ತು ಅನಿರ್ಬಂಧಿತ

ಅಂತಃಕರಣವೇ ನಮ್ಮ ನೈಜ ಸ್ಫೂರ್ತಿ. ಇತ್ತ ಇಲ್ಲಿಯ ಧರ್ಮದೇವತೆಗಳು ಸದಾ ನಮ್ಮ ಕೈ ಹಿಡಿದು ಸಂದಿಯಲ್ಲಿ ನಡೆಯಲು ಬೆಂಬಲೀಯುತ್ತವೆ."

ಪ್ರಶ್ನೆ: "ನೀವು ಧರ್ಮದೇವತೆಗಳು ಅಥವಾ ಮಂಜುನಾಥಸ್ವಾಮಿ ಎನ್ನುವಾಗ ನಾನು ಅದರಲ್ಲಿ ಒಂದು ಪ್ರತೀಕಾತ್ಮಕತೆಯನ್ನು (symbolism) ಕಾಣುತ್ತೇನೆ: ತ್ರಿಕರಣಶುದ್ಧ ನಿಸ್ವಾರ್ಥ ಸೇವಾಪರಾಯಣತೆಯಿಂದ ವ್ಯಕ್ತಿಗೆ ಒದಗುವ ಶೀಲವನ್ನು ನೈತಿಕ ಬಲವನ್ನು ಈ ಬೇರೆ ಬೇರೆ ಹೆಸರುಗಳು ಸೂಚಿಸುತ್ತವೆ. ಕನಕದಾಸರು ಹಾಡಿರುವಂತೆ 'ನಮ್ಮಮ್ಮ ಶಾರದೆ ಉಮಾಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ.' ಎಂದೇ ಒಬ್ಬ 'ಅರೆಬೆತ್ತಲ ಫಕೀರ' ನಿರಾಯುಧ ಗಾಂಧಿ, ಸಶಸ್ತ್ರ 'ಸರ್ವಾಂತರ್ಯಾಮಿ' ಬ್ರಿಟಿಷ್ ಚಕ್ರಾಧಿಪತ್ಯವನ್ನು ಅಹಿಂಸಾಮಾರ್ಗ-ಗಾಮಿಯಾಗಿ ಎದುರಿಸಿ ನಡುಗಿಸಿ ಕದಲಿಸಿ ತೊಲಗಿಸುವುದು ಸಾಧ್ಯವಾಯಿತು. ಗಾಂಧೀಜಿಯವರಿಗೆ ಎಪ್ಪತ್ತು ತುಂಬಿದಾಗ ಐನ್‌ಸ್ಟೈನ್ ಸಲ್ಲಿಸಿದ ನುಡಿಕಾಣ್ಕೆ: 'ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ.' ಅಂತಿಮವಾಗಿ ಜನತಾಸೇವೆಯೇ ಜನಾರ್ದನ ಸೇವೆಯಲ್ಲವೇ?"

ಧರ್ಮಸ್ಥಳದಿಂದ ಧಾರವಾಡಕ್ಕೆ

ಕನ್ನಡದಲ್ಲಿ ಒಂದು ವಕ್ರೋಕ್ತಿ ಇದೆ: 'ಗೆದಲ ಮನೆಯ ಮಾಡಿ ಸರ್ಪಂಗೆ ಇಂಬಾದಂತೆ.' ಅಂದರೆ 'ಹೆಡ್ಡರು ಮನೆ ಕಟ್ಟುತ್ತಾರೆ, ಜಾಣರು ಅದನ್ನ ಆಕ್ರಮಿಸುತ್ತಾರೆ.' ಇಂಥ ಅನ್ಯಾಯವನ್ನು ಸಜ್ಜನರು, ನ್ಯಾಯಭೀರುಗಳು ಮತ್ತು ಜನಹಿತಾಕಾಂಕ್ಷಿಗಳು ಹೇಗೆ ದಮನಿಸಬೇಕು ಮತ್ತು ದೇಶಕಲ್ಯಾಣವನ್ನು ಸಾಧಿಸಬೇಕು?

ಹುಕ್ಕೇರಿಕರ ರಾಮರಾಯರು ಗಾಂಧೀಯುಗದ ಸ್ವಾತಂತ್ರ್ಯ ಯೋಧ, ಆದರ್ಶವಾದಿ, ಚಲದಂಕಮಲ್ಲ, ದೇಶ ಕುರಿತಂತೆ ದೂರದೃಷ್ಟಿ ತಳೆದಿದ್ದ ಪಕ್ವ ಜೀವಿ. ಇಂದಲ್ಲ ನಾಳೆ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬರುವುದು ಖರೆ. ಆದರೆ ಅದು ಜನಜೀವನದಲ್ಲಿ ಸಾರ್ಥಕ್ಯ ಕಾಣಬೇಕಾದರೆ ಸುಶಿಕ್ಷಿತ ಸುಸಂಸ್ಕೃತ ಸಭ್ಯ ಯುವಜನ ಮುಂಬರುವುದು ಅಗತ್ಯವೆಂದು ಅವರು ಮನಗಂಡಿದ್ದರು. ಅವರ ಕನಸಿನ ಕೂಸಾಗಿ ಮತ್ತು ತ್ಯಾಗದ ಫಲವಾಗಿ (ಅಂದಿನ ಮುಂಬಯಿ ಪ್ರಾಂತದ) ಧಾರವಾಡದಲ್ಲಿ ಜನತಾ ಶಿಕ್ಷಣ ಸಮಿತಿ (ಜೆಎಸ್‌ಎಸ್) ಮೈದಳೆಯಿತು (೧೯೪೪).

ಜನತೆಯ ಆಶಯ ಮತ್ತು ಆವಶ್ಯಕತೆಗಳನ್ನು ಇದು ಮುಕ್ತಪರಿಸರದಲ್ಲಿ ಹಾಗೂ ಯುಕ್ತ ವೇಳೆಯಲ್ಲಿ ಸ್ಪರ್ಶಿಸಿದುದರಿಂದ, ಮತ್ತು ಇದರ ವ್ಯಕ್ತಿತ್ವವನ್ನು ಸೇವೆ, ಸ್ವಾರ್ಥರಾಹಿತ್ಯ ಮತ್ತು ಕಾರ್ಯತಾದಾತ್ಮ್ಯ ವ್ಯಾಖ್ಯಿಸಿದ್ದರಿಂದ ಜೆಎಸ್‌ಎಸ್ ಸಂಸ್ಥೆಗಳು ಅತಿಶೀಘ್ರವಾಗಿ ವರ್ಧಿಸಿದುವು. ಹೇಗೆ? "ದಾನಿಗಳನ್ನು ಗುರುತಿಸುವುದು ಅತಿ ಕಷ್ಟವೇನೂ ಅಲ್ಲ, ಆದರೆ ಅರ್ಹ ಪರಿಗ್ರಾಹಿಗಳನ್ನು ಪತ್ತೆ ಹಚ್ಚುವುದು ಕಡು ಕಠಿಣ" ಎಂಬ ಅನುಭವೋಕ್ತಿಗೆ ನಿದರ್ಶನವಾಗಿ. ಜೆಎಸ್‌ಎಸ್ ಈ ವಿರಳ ಅರ್ಹತೆ ಗಳಿಸಿತ್ತು. ಆದರೆ—

ಅಂದಿನ ಪಾಟಲೀಪುತ್ರವಾಗಲೀ ಇಂದಿನ ವಾರಾಣಸಿಯಾಗಲೀ ಅವುಗಳ ಸ್ಥಾಪಕ ಮಹಿಮಾನ್ವಿತರು ಅಂತರ್ಧಾನರಾಗಿ ಅವರ ಸಂಜೆಗೆಂಪು ಮಸುಳಿದಂತೆ, ಸಂಸ್ಥೆ ಬಹುದಿಶೆಗಳಲ್ಲಿ ಬಹುಮುಖವಾಗಿ ಟಿಸಿಲೊಡೆದು ಅಧಿಕ ಸಂಪನ್ಮೂಲಗಳು ಶೇಖರವಾಗಿ ಸಂಸ್ಥೆಯ ವ್ಯಾಪ್ತಿ ಮತ್ತು ಜನಪ್ರಿಯತೆ ಪ್ರವರ್ಧಿಸಿದಂತೆ, ಮೂಲಪುರುಷರ ಆದರ್ಶಗಳ ಔನ್ನತ್ಯ ಏರಲಾಗದ ಜಡಮತಿಗಳು, ಬಹುತೇಕ ಸಂದರ್ಭಗಳಲ್ಲಿ ಸ್ವಾರ್ಥದಾಹಿಗಳು ಕೂಡ, ಅಧಿಕಾರದ ಗದ್ದುಗೆಗಳಿಗೇರಿದಂತೆ, ಮತ್ತು "ನಾನು ಮೊದಲು, ಸಂಸ್ಥೆ ಬಳಿಕ" ಎಂಬ ಅನೀತಿ ಬುದ್ಬುದಿಸಿದಂತೆ ಮಾನವನಿರ್ಮಿತಗಳ ಸಾಮಾನ್ಯ ಭವಿಷ್ಯವೇನು? 'ಮಾರಿಗೌತಣವಾಯ್ತು ನಾಳಿನ ಭಾರತವು.' ವಿರಳ ಅಪವಾದಗಳು ಇದ್ದೇ ಇರುತ್ತವೆ.

ಜೆಎಸ್ಎಸ್ ಈ ವಿರಳ ಅಪವಾದಗಳ ಸಾಲಿಗೆ ಸೇರಿತಲ್ಲ.

ಆಸಕ್ತ ಚೈತನ್ಯಶೀಲ ವಿದ್ಯಾರ್ಥಿಗಳಿದ್ದಾರೆ. ಉತ್ಸಾಹದಿಂದ ಸೇವೆಸಲ್ಲಿಸಬಲ್ಲ ವಿದ್ವಾಂಸ ಅಧ್ಯಾಪಕವರ್ಗವಿದೆ. ಪ್ರಯೋಗಶಾಲೆಗಳು, ಗ್ರಂಥಭಂಡಾರಗಳು, ಉಪನ್ಯಾಸಮಂದಿರಗಳು, ಕ್ರೀಡಾಂಗಣಗಳು ಎಲ್ಲವೂ ಇವೆ. ಭವ್ಯ ಪರಂಪರೆ ಕೂಡ ಇದೆ. ಆದರೆ ಆರ್ಥಿಕ ಪಂಚಾಂಗ (ಆದಾಯ, ಸಂದಾಯ, ಲೆಕ್ಕಪತ್ರ, ತಪಾಸಣೆ, ನಿರ್ಧಾರಣೆ) ಕಂಪಿಸುತ್ತಿತ್ತು – ರಕ್ತಸಂಚಲನ ಮಂಡಲದಲ್ಲಿ ಕೊರೆಹಾಕಿದರೆ ದೇಹದ ಅವಸ್ಥೆ ಏನು? ೧೯೭೨ರ ಪರಿಸ್ಥಿತಿ ಇದು.

೧೯೮೭ರಲ್ಲಿ ವೀರೇಂದ್ರ ಹೆಗ್ಗಡೆಯವರು ಬರೆದರು:

"ಒಂದು ದಶಕದ ಹಿಂದೆ, ಚಾತುರ್ಮಾಸ್ಯದ ಸಂದರ್ಭದಲ್ಲಿ, ಪೂಜ್ಯ ಪೇಜಾವರಶ್ರೀಗಳವರ ಕರೆಯಂತೆ, ಅವರನ್ನು ಭೇಟಿಯಾಗಲು ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೋಗಿದ್ದೆ. ಧಾರವಾಡದ ಜನತಾ ಶಿಕ್ಷಣ ಸಮಿತಿಯ ಸದಸ್ಯರು ಶ್ರೀಕ್ಷೇತ್ರ ಧರ್ಮಸ್ಥಳದಿಂದ ಈ ಸಂಸ್ಥೆಗೆ ಬೆಂಬಲ ಸಿಗಬೇಕೆಂದು ಆಶಿಸಿದ್ದರು. ಶ್ರೀಸ್ವಾಮಿಯ ಪ್ರೇರಣೆಯಿಂದ, ಸಂಸ್ಥೆಯ ಸ್ಥಿತಿಗತಿ ವಿಮರ್ಶಿಸಿ, ವಿಚಾರಮಾಡೋಣವೆಂದು ತತ್‌ಕ್ಷಣವೇ ಅಭಿಪ್ರಾಯಕ್ಕೆ ಬಂದೆವು.

"ಹೊಸ ಸಂಸ್ಥೆಯನ್ನು ಸ್ಥಾಪಿಸುವ ಬದಲಾಗಿ, ನಾನಾಕಾರಣಗಳಿಂದ ಸಮಸ್ಯೆಗಳಿಗೆ ಒಳಗಾಗಿರುವ ವಿದ್ಯಾಸಂಸ್ಥೆಗಳಿಗೆ ಚೈತನ್ಯ ಕೊಡುವುದು ಕ್ಷೇತ್ರಗಳ ಕರ್ತವ್ಯವೆಂಬುದು ನಮ್ಮ ನಂಬಿಕೆ. ಸಾಮಾನ್ಯವಾಗಿ ವ್ಯವಹಾರಸ್ಥರು ಇಂಥ ನಷ್ಟಕ್ಕೊಳಗಾದ ವಿದ್ಯಾಸಂಸ್ಥೆಗಳಿಗೆ ಕೈಹಾಕುವುದಿಲ್ಲ. ದೈವಾನುಗ್ರಹ, ಗುರು ಆಶೀರ್ವಾದ, ಜನಬೆಂಬಲ ಎಲ್ಲವೂ ಬೇಕಾಗುತ್ತವೆ. ನಮಗೆ ಇವು ಮೂರೂ ದೊರೆತು ಈ ಸಂಸ್ಥೆ ಪೂಜ್ಯ ಪೇಜಾವರಶ್ರೀಗಳು ಅಧ್ಯಕ್ಷರಾಗಿಯೂ ನಾನು ಕಾರ್ಯಾಧ್ಯಕ್ಷನಾಗಿಯೂ ಇರುವ ಹೊಸ ಆಡಳಿತಕ್ಕೆ ೧೯೭೨ರಲ್ಲಿ ಒಳಪಟ್ಟಿತು.

"ಆರ್ಥಿಕ ಸಮಸ್ಯೆ ಪ್ರಧಾನವಾಗಿದ್ದು, ಅಧ್ಯಾಪಕರ ಅಸಮಾಧಾನ, ವಿದ್ಯಾರ್ಥಿಗಳ ರಕ್ಷಕರಿಗೆ ಸಂಸ್ಥೆಯ ಭವಿಷ್ಯತ್ತಿನ ಬಗ್ಗೆ ಅನುಮಾನ, ವಿದ್ಯಾರ್ಥಿ ಸಂಖ್ಯೆಯ ಕೊರತೆ — ಇವು ನಾವು ಮೊದಲು ಅರಿತುಕೊಂಡ ವಿಚಾರಗಳು ...."

ಜೆಎಸ್‌ಎಸ್ ಆಶ್ರಯದಲ್ಲಿ ಅಂದು (೧೯೭೨) ಇದ್ದ ಸಂಸ್ಥೆಗಳು:

೧ ಬನಶಂಕರಿ ಕಲಾ ಕಾಲೇಜ್ (೧೯೪೪)
೨ ಕೆ. ಎಚ್. ಕಬ್ಬೂರ್ ಎಂಜಿನಿಯರಿಂಗ್ ಸಂಸ್ಥೆ (೧೯೫೭)
೩ ಹನುಮಂತರಾವ್ ಕೌಜಲಗಿ ಸ್ಮಾರಕ ಗ್ರಾಮೀಣ ಕೈಗಾರಿಕಾ ಕೇಂದ್ರ (೧೯೫೭)
೪ ವೃತ್ತಿಪರ ಕರಕುಶಲ ಕೇಂದ್ರ (೧೯೫೭)
೫ ಪಂಚಾಯತ್ ರಾಜ್ ತರಬೇತಿ ಕೇಂದ್ರ
೬ ಶಾಂತಿಕುಮಾರ್ ಗುಬ್ಬಿ ವಿಜ್ಞಾನ ಕಾಲೇಜ್ (೧೯೬೬)
೭ ವೃತ್ತಿಶಿಕ್ಷಣ ತರಬೇತಿ ಕೇಂದ್ರ (೧೯೭೪)
೮ ಆರ್ಥಿಕ ಸಂಶೋಧನ ಸಂಸ್ಥೆ
೯ ಜನಸಂಖ್ಯಾ ಸಂಶೋಧನ ಕೇಂದ್ರ
೧೦ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ
೧೧ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ ಅಧ್ಯಯನ ಕೇಂದ್ರ
೧೨ ಜೆಎಸ್‌ಎಸ್ ಮುದ್ರಣಾಲಯ

ಇವಿಷ್ಟು ಧಾರವಾಡದಲ್ಲಿ ಒಂದೇ ಆವರಣದೊಳಗೆ ಇದ್ದುವು.

೧೩ ಸಕ್ರಿ ಕಾನೂನು ಕಾಲೇಜ್ (೧೯೫೭), ಹುಬ್ಬಳ್ಳಿ

ಹರಿಹರದಲ್ಲಿದ್ದ 'ಎಂಕೆಟಿಯವರ ಲಕ್ಷ್ಮಣರಾವ್ ಕಿರ್ಲೋಸ್ಕರ್ ಶಾಲೆ'ಯ ಮೇಲ್ವಿಚಾರಣೆಯನ್ನು ಜೆಎಸ್‌ಎಸ್ ನಿರ್ವಹಿಸುತ್ತಿತ್ತು.

ಜೆಎಸ್‌ಎಸ್ ಆಡಳಿತ ಏಕೆ ಹದಗೆಟ್ಟಿತು ಎಂಬ ವ್ಯಥೆ 'ಮರಣೋತ್ತರ ಪರೀಕ್ಷೆ' ಹೆಗ್ಗಡೆಯವರ ಲಕ್ಷ್ಯವಲ್ಲ. ಆ ಸಂಸ್ಥೆಗೆ ಕಾಯಕಲ್ಪ ನೀಡಲು ತಾವು ಅನುಸರಿಸಬೇಕಾದ ನೀತಿ ಒಂದೇ ಎಂದು ಅವರಿಗೆ ಸ್ಪಷ್ಟವಾಗಿತ್ತು: ಸಾಂಸ್ಥಿಕ ಹಿತವೊಂದನ್ನೇ ಲಕ್ಷ್ಯದಲ್ಲಿಟ್ಟುಕೊಂಡು, ನೈತಿಕ ಪಾತಳಿಯಲ್ಲಿ ವರ್ತಿಸುತ್ತ, ಕ್ಷಿಪ್ರವಾಗಿ ದೃಢ ಮತ್ತು ಖಚಿತ ನಿರ್ಧಾರದ ಘೋಷಣೆ ಹಾಗೂ ನಿರ್ವಹಣೆ. ಆಡಳಿತಾಂಗ ಏಕವ್ಯಕ್ತಿ, ಏಕಸಂಕಲ್ಪ, ಏಕವಾಗ ಮತ್ತು ಏಕಕ್ರಿಯ ಎಂಬಂತೆ ವರ್ತಿಸಬೇಕು. ಆಗ ಅತರ್ಕ್ಯತೆಗಾಗಲೀ (ಸಮಗ್ರ ವ್ಯವಸ್ಥೆ ಹಳಿದಪ್ಪುವುದು) ಅಪಸ್ವರಕ್ಕಾಗಲೀ (ಅಂತಃಕಲಹಗಳು) ಇನಿತೂ ಎಡೆ ಇರುವುದಿಲ್ಲ.

ಯೋಗ್ಯರನ್ನು ಆಯ್ದು ಬದ್ಧತೆ ಕಾರ್ಯದ ಹೊಣೆಯನ್ನು ಅವರಿಗೆ ವಹಿಸಿ ಪರಿಪೂರ್ಣ ನಿರ್ವಹಣಾಸ್ವಾತಂತ್ರ್ಯವನ್ನು ನೀಡುವುದು ಹೆಗ್ಗಡೆಯವರ ಹಿರಿಮೆ. ಗತಿಶೀಲ ವಿಕೇಂದ್ರೀಕರಣದಲ್ಲಿ ಅವರಿಗೆ ಅಪಾರ ಭರವಸೆ. ಯಾವುದೇ ಎಸ್‌ಡಿಎಮ್-ಸಂಸ್ಥೆ ಕುರಿತಂತೆ ಅವರು ಉದಾರ ಉನ್ನತ ಅಮೂರ್ತ ಶಕ್ತಿಯಂತೆ ಹಿನ್ನೆಲೆಯಲ್ಲಿರುತ್ತಾರೆ. ಅವರ ಸ್ಥಳೀಯ ಕಾರ್ಯಭಾರಿಯೇ ಆ ಸಂಸ್ಥೆಯ ಕಾರ್ಯನಿರ್ವಾಹಕ.

ಹೆಗ್ಗಡೆಯವರ ಅಪೇಕ್ಷೆ ಮೇರೆಗೆ ಜೆಎಸ್‌ಎಸ್‌ನ ಕಾರ್ಯದರ್ಶಿತ್ವದ ಹೊಣೆಹೊತ್ತು (೧೯೭೨) ಧಾರವಾಡಕ್ಷೇತ್ರದಲ್ಲಿ ಎಸ್‌ಡಿಎಮ್‌ನ ಪ್ರತಿನಿಧಿಯಾಗಿ ಸೇವೆಸಲ್ಲಿಸುತ್ತಿರುವ ಎನ್. ವಜ್ರಕುಮಾರರು ಹೇಳುತ್ತಾರೆ:

"ಕಾಲೇಜಿನ ವ್ಯಕ್ತಿತ್ವ ಅಥವಾ ಪ್ರತಿಬಿಂಬ (image) ಎಂದರೇನು? ಅಲ್ಲಿಯ ಸಮಸ್ತ ವ್ಯವಹಾರಗಳೂ ಚೊಕ್ಕವಾಗಿರತಕ್ಕದ್ದು, ಸಂಶಯಾತೀತವಾಗಿರತಕ್ಕದ್ದು. ಇಂಥಲ್ಲಿ ಮಾತ್ರ ಶಿಕ್ಷಕ-ವಿದ್ಯಾರ್ಥಿ ಸಂವಹನ ಕ್ರಿಯೆ ಮುಕ್ತ ಬೌದ್ಧಿಕ ವಾತಾವರಣದಲ್ಲಿ ನಿರಂತರವಾಗಿ ನಡೆಯುವುದು ಸಾಧ್ಯ. ಕಾಲೇಜ್ ಕಕ್ಷೆಯೊಳಗೆ ಬರುವವರೆಲ್ಲರ ಯೋಗಕ್ಷೇಮವೂ ಆಡಳಿತಾಂಗದ ನೇರ ಹೊಣೆಯಾಗಿರತಕ್ಕದ್ದು. ಎಲ್ಲಕ್ಕೂ ಮಿಗಿಲಾಗಿ ಕಾಲೇಜ್ ಸಿಬ್ಬಂದಿಗೆ ಸಂಬಳ ಭತ್ಯೆ ಮುಂತಾದವು ಬ್ಯಾಂಕ್ ಚೆಕ್ ಮೂಲಕ ತಿಂಗಳ ಮೊದಲ ದಿನವೇ ಸಂದಾಯವಾಗಬೇಕು. ಇವೆಲ್ಲ ರಚನಾತ್ಮಕ ಕ್ರಿಯೆಗಳ ಸಂಯುಕ್ತ ಫಲವಾಗಿ ಕಾಲೇಜಿನ ಬಿಂಬ ಉಜ್ಜ್ವಲಿಸುತ್ತದೆ, ಸಹಜವಾಗಿ ಜನಮನದೊಳಗೆ ಅದರ ಪ್ರತಿಬಿಂಬ ಕೂಡ."

ಪ್ರಶ್ನೆ: "ಶಿಕ್ಷಕರಲ್ಲಿ ಪ್ರಚಲಿತವಿದ್ದ ಅಶಿಸ್ತನ್ನು ನೀವು ಹೇಗೆ ತೊಡೆದು ಹಾಕಿದಿರಿ?"

"ಆರ್ಥಿಕ ಭದ್ರತೆ ಮತ್ತು ಸೇವಾ ಮರ್ಯಾದೆ ಒದಗಿದಾಗ ಅಶಿಸ್ತು ತಂತಾನೇ ಅಳಿದುಹೋಗುವುದು. ಇನ್ನು ಯಾವುದಕ್ಕೂ ಜಗ್ಗದ ಕಠಿಣಾತಿರುಳು ಉಳಿದಿದ್ದರೆ ಅಸ್ತ್ರ ಪ್ರಯೋಗ ಹೇಗೂ ಇದ್ದೇ ಇದೆಯಲ್ಲ. ಆದರೆ ಇದು ಕೊನೆಯ ಹಂತ. ಇದರ ಆವಶ್ಯಕತೆ ಎಂದೂ ಕಂಡುಬರಲ್ಲ."

"ಕಾರ್ಯಾಧ್ಯಕ್ಷರಾಗಿ ಹೆಗ್ಗಡೆಯವರ ಮತ್ತು ಕಾರ್ಯದರ್ಶಿಯಾಗಿ ನಿಮ್ಮ ನಡುವಿನ ವ್ಯಾವಹಾರಿಕ ಸಂಬಂಧವೇನು?"

"ಅವರು ನಿಯತಕಾಲಿಕವಾಗಿ ಇಲ್ಲಿಗೆ (ಧಾರವಾಡ) ಭೇಟಿ ಕೊಡುತ್ತಾರೆ. ನಮ್ಮಿಂದ ವರದಿಗಳು ಹೋಗುತ್ತಿರುತ್ತವೆ ಅವರಿಗೆ. ಅವಶ್ಯವಾದಾಗ ನಾನು ಕ್ಷೇತ್ರಕ್ಕೆ ಹೋಗಿ ಅವರನ್ನು ಕಾಣುತ್ತೇನೆ. ನಮ್ಮ ಎಲ್ಲ ಚಟುವಟಿಕೆಗಳನ್ನು ಅವರು ಬಿಡಿಬಿಡಿಯಾಗಿ ಗಮನಿಸಿ ತಮ್ಮ ಸಲಹೆ ಮತ್ತು ಅಭಿಪ್ರಾಯ ತಿಳಿಸುತ್ತಾರೆ. ಸಮಸ್ಯೆಗಳನ್ನೂ ಯೋಜನೆಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಯುಕ್ತ ಪರಿಹಾರ ಇಲ್ಲವೇ ಮಾರ್ಗ ಸೂಚಿಸುತ್ತಾರೆ. ತಾವೇ ಹಮ್ಮಿಕೊಂಡಿರುವ ಹಲವಾರು ನೂತನ ಕಾರ್ಯಕಲಾಪಗಳ ಬಗ್ಗೆ ಆಳವಾಗಿ ಚರ್ಚಿಸುತ್ತಾರೆ. ಇಂಥ ಎಲ್ಲ ಭೇಟಿ ಮತ್ತು ಚರ್ಚೆಗಳಲ್ಲಿ ಆಯಾ ಸಂಸ್ಥೆಯ ಮುಖ್ಯರಿಗೆ ಪ್ರಮುಖ ಸ್ಥಾನವಿದೆ. ಏಕೆಂದರೆ ವಾಸ್ತವವಾಗಿ ಎಲ್ಲ ಯೋಜನೆ ಯೋಚನೆ ಸೂಚನೆಗಳನ್ನು ಕಾರ್ಯಕ್ಕೆ ಇಳಿಸಬೇಕಾದವರು ಅವರು ತಾನೇ."

"ಅಧ್ಯಾಪಕರು, ವಿದ್ಯಾರ್ಥಿಗಳು, ಸಿಬ್ಬಂದಿ ಮೊದಲಾದವರು ಹೆಗ್ಗಡೆಯವರನ್ನು ನೋಡಿ ಮಾತಾಡಬಹುದೇ?"

"ಧಾರಾಳವಾಗಿ! ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು. ಆದರೆ ಚಾಡಿ ಛಿದ್ರಗಳಿಗೆ ದೂರು ಸಾರುಗಳಿಗೆ ಅವಕಾಶವಿಲ್ಲ. ನಿರ್ವಹಣೆ ಏನಿದ್ದರೂ ಆಯಾ ಸಂಸ್ಥೆಯ ವರಿಷ್ಠರ ಮೂಲಕ ಮಾತ್ರ."

ಇದೊಂದು ಗತಿಶೀಲ ಪ್ರಜಾಪ್ರಭುತ್ವಾತ್ಮಕ ವ್ಯವಸ್ಥೆ. ಹೆಗ್ಗಡೆಯವರು ಇದರ ಉದಾತ್ತ ಮತ್ತು ಉದಾರ ಮಹಾನಾಯಕ; ಕಾರ್ಯದರ್ಶಿ ಸ್ಥಳೀಯ

ನಾಯಕ, ಮತ್ತು ಸಂಸ್ಥೆಗೂ ಹೆಗ್ಗಡೆಯವರಿಗೂ ನಡುವಿನ ಸಂಪರ್ಕ ಸೇತು; ಆಯಾ ಸಂಸ್ಥೆಯ ಮುಖ್ಯರು ಅಲ್ಲಿಯ ಕಾರ್ಯನಿರ್ವಾಹಕರು.

೧೯೮೩ರಲ್ಲಿ ಜೆಎಸ್ಎಸ್ ಪ್ರಗತಿಯ ದಶಕವನ್ನು ಆಚರಿಸಿದಾಗ ಸಮಿತಿಯ ಗೌರವಾಧ್ಯಕ್ಷ ಪೂಜ್ಯ ಪೇಜಾವರ ಶ್ರೀಗಳವರು ನೀಡಿದ ಸಂದೇಶ ಅರ್ಥಗರ್ಭಿತವಾಗಿದೆ:

"ಆ ವರ್ಷ (೧೯೭೩) ಅಕ್ಟೋಬರ್ ೧೮ಕ್ಕೆ ಜನತಾ ಶಿಕ್ಷಣ ಸಮಿತಿಯ ಸದಸ್ಯರ ವಿನಂತಿಯ ಮೇರೆಗೆ ನಾನು ಅಧ್ಯಕ್ಷನಾಗಲು ಒಪ್ಪಿ, ಶ್ರೀ ವೀರೇಂದ್ರ ಹೆಗ್ಗಡೆಯವರು ಕಾರ್ಯಾಧ್ಯಕ್ಷರಾದರು. ಇಂದು ಹತ್ತು ವರ್ಷಗಳು ಗತಿಸಿವೆ; ಹತ್ತು ದಿನಗಳು ಮಾತ್ರ ಕಳೆದಿವೆ ಎಂಬಂತೆ ಭಾವನೆ ಆಗುತ್ತಿದೆ. ಶ್ರೀ ಹೆಗ್ಗಡೆಯವರ ಧನಸಹಾಯ ಮತ್ತು ಮಾರ್ಗದರ್ಶನವಿಲ್ಲದಿದ್ದರೆ ಇದೆಲ್ಲ ಹೇಗೆ ಸಾಧ್ಯವಾಗುತ್ತಿತ್ತು ಎಂದು ಯೋಚಿಸುವುದೂ ಕಷ್ಟ. ಈಗ ಜನತಾ ಶಿಕ್ಷಣ ಸಮಿತಿ ಅನೇಕ ಹೊಸ ಅಂಗ ಸಂಸ್ಥೆಗಳನ್ನು ಪಡೆದು ಸುದೃಢವಾಗಿ ಬೆಳೆಯುತ್ತಿದೆ. ನಾವು ಪ್ರತಿಬಾರಿ ಇಲ್ಲಿಗೆ ಬಂದು ಕಾರ್ಯಕರ್ತರನ್ನು ಸಿಬ್ಬಂದಿಯವರನ್ನು ಭೆಟ್ಟಿಯಾದಾಗ ತುಂಬ ಸಂತೋಷವಾಗುತ್ತದೆ. ನಮ್ಮ ಪ್ರೀತಿಪಾತ್ರರಾದ ಶ್ರೀ ವಜ್ರಕುಮಾರರ ನಾಯಕತ್ವದಲ್ಲಿ ಈ ಸಂಸ್ಥೆ ವರ್ಧಮಾನವಾಗಿದೆ." [೮]

ಜೆಎಸ್ಎಸ್ ಆಶ್ರಯದಲ್ಲಿ ಈಗ (೧೯೯೨) ಕಾರ್ಯಶೀಲವಾಗಿರುವ ಸಂಸ್ಥೆಗಳಿವು:

೧ ಬನಶಂಕರಿ ಕಲೆ, ವಾಣಿಜ್ಯ ಮತ್ತು ಶಾಂತಿ ಕುಮಾರ್ ಗುಬ್ಬಿ ವಿಜ್ಞಾನ ಕಾಲೇಜ
೨ ಕೆ. ಎಚ್. ಕಬ್ಬೂರ್ ಎಂಜಿನಿಯರಿಂಗ್ ಸಂಸ್ಥೆ
೩ ಹನುಮಂತರಾವ್ ಕೌಜಲಗಿ ಸ್ಮಾರಕ ಗ್ರಾಮೀಣ ಕೈಗಾರಿಕಾ ಹಾಗೂ ವೃತ್ತಿಪರ ಕರಕುಶಲ ಕೇಂದ್ರ
೪ ವೃತ್ತಿ ಶಿಕ್ಷಣ ತರಬೇತಿ ಕೇಂದ್ರ
೫ ಆರ್ಥಿಕ ಸಂಶೋಧನ ಸಂಸ್ಥೆ
೬ ಜನಸಂಖ್ಯಾ ಸಂಶೋಧನ ಕೇಂದ್ರ
೭ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ
೮ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ ಅಧ್ಯಯನ ಕೇಂದ್ರ
೯ ಜೆಎಸ್ಎಸ್ ಮುದ್ರಣಾಲಯ
೧೦ ಮಂಜುಶ್ರೀ ಶಿಶುವಿಹಾರ

ಇವಿಷ್ಟು ಧಾರವಾಡದಲ್ಲಿ, ಹಿಂದಿನ ಅದೇ ಆವರಣದೊಳಗೆ, ಆದರೆ ನಾಕಷ್ಟು ಹೊಸ ಕಟ್ಟಡಗಳನ್ನೂ ಸೌಕರ್ಯಗಳನ್ನು ಒಳಗೊಂಡು, ನಳನಳಿಸುತ್ತಿವೆ.

೧೧ ಸಕ್ರಿ ಕಾನೂನು ಕಾಲೇಜ್, ಹುಬ್ಬಳ್ಳಿ.

ಧಾರವಾಡದಲ್ಲಿಯ ಜೆಎಸ್ಎಸ್ ಸಂಸ್ಥೆಗಳು ಇರುವ ನೈಸರ್ಗಿಕ ತಪೋವನದ ಮೊದಲ ಹೆಸರು ಮೈಲಾರಲಿಂಗಗುಡ್ಡ. ಇದಕ್ಕೆ ವಿದ್ಯಾಗಿರಿ ಎಂಬ ಹೆಸರಿತ್ತು, ಇದರ ಅರ್ಥದ ಸಾರ್ಥಕ್ಯಕ್ಕೆ ಶ್ರಮಿಸಿದವರು

ಪಿಎಸ್ಎನ್-ಕನಸುಗಾರ ಹುಕ್ಕೇರಿಕರರೇ. ಈಗ ವಿದ್ಯಾಗಿರಿಯೊಂದು ಸ್ವಯಂಪೂರ್ಣ ಕಿರಿಪಟ್ಟಣ: ಇಲ್ಲಿ 'ಅಡವಿ ಮರಗಳಡಿಯಲ್ಲಿ ತಗ್ಗು ದಿನ್ನೆಗಳ ಹಾಸಿನಲ್ಲಿ ಹಸುರು ಹಚ್ಚಡದ ಬೀಸಿನಲ್ಲಿ' ಶಿಕ್ಷಣ ಸಂಸ್ಥೆಗಳು, ಕರ್ಮಶಾಲೆಗಳು, ಸಿಬ್ಬಂದಿ ವಸತಿಗಳು, ಹಾಸ್ಟೆಲ್ಲುಗಳು, ಕ್ರೀಡಾಂಗಣಗಳು ಮುಂತಾದ ಸೌಕರ್ಯಗಳು ಸಮೃದ್ಧವಾಗಿವೆ.

ಇದೊಂದು ಅಂತರಶಿಸ್ತು ಮುಕ್ತ ಜ್ಞಾನವಿನಿಮಯ ಕೇಂದ್ರ. ಇಲ್ಲಿ ಯಾವುದೇ ವಿಭಾಗದಲ್ಲಿ ಕಲಿಯುವ ವಿದ್ಯಾರ್ಥಿಯ ಮೇಲೆ ಇತರ ಎಲ್ಲ ವಿಭಾಗಗಳ ಪ್ರಭಾವಗಳು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಬಿದ್ದೇ ಬೀಳುತ್ತವೆ. ಹೇಗೆ? ಈ ಪರಿಸರದೊಳಗೆ ಸಾಕಷ್ಟು ಹೊತ್ತು ಅಡ್ಡಾಡಿ ಇಲ್ಲಿಯ 'ವಿಕಿರಣಪಟುಧಾತುಗಳ' (radio-active elements, ವಿದ್ಯಾರ್ಥಿಗಳು ಎಂದು ಧ್ವನಿ) ಜೊತೆ ವಿಚಾರವಿನಿಮಯಗೈದಾಗ ತಿಳಿಯುತ್ತದೆ.

ಒಬ್ಬ ವಿದ್ಯಾರ್ಥಿಗೆ ಹಾಕಿದ ಪ್ರಶ್ನೆ: "ಧಾರವಾಡದಲ್ಲಿ ಇಷ್ಟೊಂದು ಶಿಕ್ಷಣ ಸಂಸ್ಥೆಗಳಿದ್ದರೂ ನೀನೇಕೆ ಈ ಕಾಲೇಜನ್ನು ಇಷ್ಟಪಟ್ಟೆ?"

"ನಮ್ಮ ಹಿರಿಯರ ಕಾಲದಿಂದಲೂ ನಾವು ಈ ಸಂಸ್ಥೆಯ ಶಿಶುಗಳು. ಇಲ್ಲಿಯ ಆದರಣೀಯ ವ್ಯವಸ್ಥೆ ಮತ್ತು ಮುಕ್ತ ವ್ಯವಹಾರ ನಮಗೆ ಅತಿಪ್ರಿಯ. ಇದು ನಮ್ಮನೆ."

ಜೊತೆಯಲ್ಲೇ ನಿಂತಿದ್ದ ವಿದ್ಯಾರ್ಥಿರಸಿಕ ದನಿಗೂಡಿಸಿದ: "ವಿಶ್ವವೆಲ್ಲ ನಮ್ಮನೆ!"

ಇಲ್ಲಿಯ ಯಾವುದೇ ವಿಭಾಗದ ಒಳಹೊಕ್ಕರೂ ಸಾಕು — ಕಾಲ ಸರಿಯುವುದರ ಪರಿವೆ ಮರೆತೇ ಹೋಗುತ್ತದೆ. ವಿದ್ಯಾರ್ಥಿಗಳ ಅಧ್ಯಯನ ತನ್ಮಯತೆ, ಅಧ್ಯಾಪಕರ ಬೋಧನ ತತ್ಪರತೆ, ಯಂತ್ರ ತಂತ್ರ ಕ್ರಿಯೆಗಳ ಪ್ರತ್ಯಕ್ಷ ದರ್ಶನ ಪ್ರದರ್ಶನ, ಸೌಲಭ್ಯ ಸೌಕರ್ಯಗಳ ಉಪಯೋಗ ಮತ್ತು ಪ್ರಯೋಜನ — ಎಲ್ಲವೂ ಹಾಗಿವೆ. 'ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ!' ಮಾಡು, ನೋಡು, ಕಾಡು, ಯೋಚಿಸು, ಯೋಜಿಸು, ಪ್ರಯೋಗಿಸು, ತೀರ್ಮಾನಿಸು — ಈ ಸಹಜ ಧಾಟಿಯಲ್ಲಿ ಇಲ್ಲಿಯ ಒಂದೊಂದು ವಿಭಾಗವೂ ಕ್ರಿಯಾಶೀಲವಾಗಿದೆ.

ಇದಕ್ಕೆ ವಿರುದ್ಧವಾದ ಧಾಟಿ ಇದೆಯೇ!

ಯಾವುದೇ ಸಾರ್ವಜನಿಕ ಭೂರಿ ಶಿಕ್ಷಣ ಕಸಾಯಿಖಾನೆಗೆ — ಇದು ಖಾಸಗಿ ವಲಯದಲ್ಲಿರಬಹುದು, ಸರ್ಕಾರೀ ಆಡಳಿತದಲ್ಲಿರಬಹುದು — ಹೋಗಿ ಸ್ವಲ್ಪ ಹೊತ್ತು ಅಡ್ಡಾಡಿ ನೋಡಿ. ಇಲ್ಲವೇ ಹೊಸ ಮಳೆಗೆ ಹಸಿನೆಲದಿಂದ ಜಿಗಿದೇಳುವ ಮಳೆಹಾತೆಗಳಂತೆ ಎಲ್ಲೆಂದರಲ್ಲಿ ಎದ್ದಿರುವ ಟ್ಯೂಷನ್ ಅಂಗಡಿಗಳಲ್ಲಿಯ ಬೋಧನಕ್ರಮ ಗಮನಿಸಿ. ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳಿಸಿ ಯಶಃಸಂಪಾದನೆಗೆ ಅವಶ್ಯವಾಗುವ ಎಲ್ಲ ತಂತ್ರ ಚಮತ್ಕಾರಗಳಿಗೂ ಅಲ್ಲಿ ಆದ್ಯತೆ. ಅಲ್ಲಿಯ ಮೊದಲ ಬಲಿ ವಿದ್ಯೆ.

ಪ್ರಶ್ನೆ: "ಸುತ್ತಲೂ ಮುಷ್ಕರ, ಡೊಂಬಿ, ವಿನಾಶ ಕೃತ್ಯಗಳು ಮುಂತಾದ ಮೌಲ್ಯಹಂತಕಗಳು ಕರಾಳವಾಗಿ ಕವಿಯುತ್ತಿರುವಾಗ ನೀವು ಈ ದ್ವೀಪದಲ್ಲಿಯ

ಶಾಂತಿಯನ್ನು ಎಷ್ಟು ಕಾಲ ರಕ್ಷಿಸಬಲ್ಲಿರಿ?"

ವಜ್ರಕುಮಾರರು ಆತ್ಮವಿಶ್ವಾಸದಿಂದ ಹೇಳುತ್ತಾರೆ: "ನಾವು ಎಲ್ಲಿಯ ತನಕ ನಮ್ಮ ಕರ್ತವ್ಯಗಳನ್ನು ತ್ರಿಕರಣಪೂರ್ವಕವಾಗಿ ನಿರ್ವಹಿಸುತ್ತಿರುವೆವೋ ಮೌಲ್ಯಚ್ಯುತರಾಗದಿರುವೆವೋ ವಿದ್ಯಾರ್ಥಿಕ್ಷೇಮಚಿಂತನೆಯೊಂದನ್ನೇ ಲಕ್ಷ್ಯವಾಗಿಟ್ಟುಕೊಂಡು ತದನುಗುಣವಾಗಿ ವರ್ತಿಸುತ್ತಿರುವೆವೋ ಅಲ್ಲಿಯ ತನಕ ಸಂಸರ್ಗಮಾಲಿನ್ಯ ನಮಗೆ ತಟ್ಟದು ಎಂಬ ದೃಢ ಭರವಸೆ ನಮಗುಂಟು."

"ಇದು ಕೇವಲ ಭಾವುಕ ಉದ್ಗಾರವಲ್ಲ, ವಾಸ್ತವ ಅನುಭವ ಎನ್ನಲು ನಿದರ್ಶನ?"

"೧೯೭೩ರಿಂದೀಚೆಗೆ ನಾವು ನಡೆದು ಬಂದ ದಾರಿ ಸಾಲದೇ? ಹಾಗೆಂದು ನಾವು ಮೆತ್ತೆ ಆಸನದ ಮೇಲೆ ನಿರಾಳವಾಗಿ ಮಂಡಿಸಿದ್ದೇವೆಂದು ಅರ್ಥವಲ್ಲ. ಸಮಸ್ಯೆಗಳನ್ನು ಎದುರಿಸಿದ್ದೇವೆ, ಸಂಘರ್ಷಿಸಿದ್ದೇವೆ, ಹಳೆಯ ಸಂಸ್ಥೆಗಳಿಗೆ ಮುಖಮಾರ್ಜನ ನೀಡಿ ಬೆಳೆಸಿದ್ದೇವೆ, ಸಂದರ್ಭೋಚಿತವಾಗಿ ಹೊಸ ಸಂಸ್ಥೆಗಳನ್ನು ಕಟ್ಟಿದ್ದೇವೆ, ವಿದ್ಯಾರ್ಥಿಗಳ ಮತ್ತು ಪೋಷಕರ ವಿಶ್ವಾಸಗಳಿಸಿದ್ದೇವೆ. ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಯೊಳಗೆ ಮಾತ್ರವಲ್ಲ, ಹೊರಗಿನಿಂದ ಕೂಡ ನಮ್ಮ ವಿವಿಧ ಸಂಸ್ಥೆಗಳಿಗೆ ವಿದ್ಯಾರ್ಥಿಗಳು ಸ್ವಂತೇಚ್ಛೆಯಿಂದ ಬಂದು ದಾಖಲಾಗುತ್ತಾರೆ. ಏಕೆ?"

ಆತ ಉತ್ತರ ಪ್ರದೇಶದಿಂದ ಬಂದಿದ್ದ ವಿದ್ಯಾರ್ಥಿ. ಪ್ರಶ್ನೆ: "ಕೇವಲ ಪಾಲಿಟೆಕ್ನಿಕ್ ಶಿಕ್ಷಣ ಪಡೆಯಲು ನೀನೇಕೆ ಇಷ್ಟು ದೂರ ಬಂದೆ?"

"ನಮ್ಮ ಊರಿನವರು ಕೆಲವರು ಈ ಊರಿಗೆ ವ್ಯಾಪಾರವಹಿವಾಟುಗಳಿಗಾಗಿ ಬಂದಿದ್ದರು. ಇಲ್ಲಿಯ ವ್ಯವಸ್ಥೆ, ಶಿಸ್ತು, ನೈತಿಕ ಪ್ರಜ್ಞೆ ಮತ್ತು ಚಟುವಟಿಕೆ ಗಮನಿಸಿ ನನ್ನನ್ನು ಈ ಸಂಸ್ಥೆಗೆ ಸೇರಿಸಿರುವರು."

"ಇಲ್ಲಿಯ ವಾಸ್ತವ್ಯ ಮತ್ತು ಶಿಕ್ಷಣ ನಿನಗೆ ಹೇಗನ್ನಿಸಿವೆ?"

"ಮೊದಲ ಕೆಲವು ದಿನ ಆಹಾರ, ಪರಿಸರ, ಜನ, ನಡೆವಳಿಕೆ ಎಲ್ಲವೂ ಕಸಿವಿಸಿ ಉಂಟುಮಾಡಿದುವು. ಆದರೆ ಪಾಠ, ಪ್ರಯೋಗ, ಪ್ರವಚನ, ಚಿತ್ರಾ ಕಾರ್ಯಗಳಲ್ಲಿ ಮಗ್ನನಾದಂತೆ ಉಳಿದೆಲ್ಲ ತೊಂದರೆಗಳು ಹೇಳಹೆಸರಿಲ್ಲದಾದುವು."

"ಮನಸ್ಸೇ ಎಲ್ಲದಕ್ಕೂ ಮೂಲ: ಒಲ್ಲದ ಗಂಡಗೆ ಮೊಸರಲಿ ಕಲ್ಲು, ಒಗ್ಗಿದ ಗಂಡಗೆ ಕಲ್ಲಲಿ ಮೊಸರು!"

ವಜ್ರಕುಮಾರರು ಸಮಾರೋಪಿಸಿದರು: "ವಿದ್ಯಾರ್ಥಿ ಸಮಸ್ಯೆಯ ನೆಲೆಗಳು ಅಥವಾ 'ಪ್ರಕೃತಿ'ಗಳು ಮುಖ್ಯವಾಗಿ ನಾಲ್ಕು: ಹಾಸ್ಟೆಲ್, ತರಗತಿ, ವಿರಾಮವೇಳೆ ಮತ್ತು ಅಸಂತೃಪ್ತ ಅಧ್ಯಾಪಕವರ್ಗ. ನಮ್ಮ ಎಲ್ಲ ಸಂಸ್ಥೆಗಳಲ್ಲಿಯೂ ಸಾತ್ವಿಕ ಸಸ್ಯಾಹಾರವೊಂದೇ ಸಾಧು — ಕ್ಷೇತ್ರದಲ್ಲಿಯಂತೆ. ಧೂಮಪಾನದಿಂದ ತೊಡಗಿ ಎಲ್ಲ ಬಗೆಯ ಮಾದಕ ದ್ರವ್ಯಗಳೂ ವರ್ಜ್ಯ — ಅಸ್ಪೃಶ್ಯ. ಜಾತಿ, ಭಾಷೆ, ಊರು, ಆಚರಣೆ ಮುಂತಾದ ವಿಭಿನ್ನತೆಗಳ ಕಾರಣವಾಗಿ ಯಾವುದೇ ತಾರತಮ್ಯವಿಲ್ಲ. ಆಡಳಿತಾಂಗ - ಶಿಕ್ಷಣಾಂಗ ಸದಾ ಪೂರಕಪೋಷಕವಾಗಿ ಕೆಲಸವೆಸಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಘಾತಕ ವಿಚಾರಗಳ ಬಗ್ಗೆ

ಯೋಚಿಸಲು ಕೂಡ ಪುರಸೊತ್ತಿರುವುದಿಲ್ಲ. ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಮತ್ತು ಆಸಕ್ತ ವಿಷಯಗಳನ್ನು ಅಭ್ಯಸಿಸಲು ಇಲ್ಲಿ ವಿಪುಲ ಅವಕಾಶಗಳಿವೆ. ಇದೊಂದು ತೆರೆದ ಪುಸ್ತಕ, ಸ್ವಚ್ಛ ಪರಿಸರ. ಯಾವ ಪುಟವನ್ನು ಯಾರೂ ಎಂದೂ ಎಲ್ಲಿಯೂ ಓದಬಹುದು. ಅಂದ ಮೇಲೆ ಅಶಿಸ್ತು, ಗಲಭೆ, ಗೊಂದಲ ಹೇಗೆ ತಾನೇ ಇಲ್ಲಿಗೆ ಮೂಗು ತೂರಬಲ್ಲವು?”

ಮನೆತಪ್ಪಿದ ಮನಗೆಟ್ಟ ದಾರಿಗಾಣದ ಹೆಂಗಳೆಯರ ಗೋಳಿನ ಕತೆ ಎಂದೂ ಮುಗಿಯದ ಅಧ್ಯಾಯ. ಇಂಥವರ ಕಲ್ಯಾಣಾರ್ಥ ಇರುವ ‘ಆಪದ್ರಸ್ತ ಮಹಿಳೆಯರ ಪುನರ್ವಸತಿ ಕೇಂದ್ರ’ದ ಗೌರವ ಸದಸ್ಯೆಯಾಗಿ ಸಕ್ರಿಯ ಪಾತ್ರ ವಹಿಸಿದ ಸಾಹಿತಿ-ಸಮಾಜಕಾರ್ಯಕರ್ತೆ ಶಾಂತಾದೇವಿ ಮಾಳವಾಡರು ಬರೆದಿದ್ದಾರೆ: “ರಾಜ್ಯ ಮಟ್ಟದ ಹಲವಾರು ಸಮಿತಿಗಳಲ್ಲಿ ಕೆಲಸಮಾಡಿದ ನಾನು, ಇಲ್ಲಿ ನಡೆದ ಕೆಲಸದಲ್ಲಿ ಆತ್ಮೀಯತೆಯನ್ನು ಹೃದಯವಂತಿಕೆಯನ್ನು ಕಂಡೆ. ಆಪದ್ರಸ್ತ ಮಹಿಳೆಯರ ಪುನರ್ವಸತಿ ಕೇಂದ್ರಕ್ಕೆ ಗಂಡನನ್ನು ಕಳೆದುಕೊಂಡವರು, ಗಂಡನಿಂದ ಮತ್ತು ಸಮಾಜದಿಂದ ತಿರಸ್ಕೃತರಾದ ಮಹಿಳೆಯರು ಕನ್ನಡನಾಡಿನ ವಿವಿಧ ಭಾಗಗಳಿಂದ ಬಂದಿದ್ದರು. ವಯಸ್ಸು, ಜಾತಿ, ಸಂಸ್ಕಾರಗಳ ಅಂತರವಿದ್ದ ಮಹಿಳೆಯರು ಇಲ್ಲಿ ಬಂದೆಡೆ ಕೂಡಿ ಬಾಳುವುದು ಕಠಿಣವೆನಿಸಿತು. ಆದರೆ ಶ್ರೀ ವಸ್ತ್ರಕುಮಾರರ ಹಾಗೂ ಅವರ ಸಹಕಾರ್ಯಕರ್ತರ ಕುಶಲತೆ, ಪರಿಶ್ರಮದಿಂದ ಆಪದ್ರಸ್ತ ಮಹಿಳೆಯರು ಒಂದೇ ಮನೆಯವರಂತೆ ಬಾಳಿದರು. ಶಿಕ್ಷಣದ ಅವಧಿ ಮುಗಿದಾಗ ಪೂಜ್ಯ ವೀರೇಂದ್ರ ಹೆಗ್ಗಡೆಯವರ ಸಹಾಯಹಸ್ತ ಆ ನೊಂದ ಮಹಿಳೆಯರ ನೆರವಿಗೆ ಬಂದಿತು. ಅವರಿಗೆ ಹೊಲಿಗೆಯ ಯಂತ್ರಗಳೂ ದೊರೆತುವು. ಆ ಮಹಿಳೆಯರು ಸ್ವಾವಲಂಬಿಗಳಾಗಿ ಸ್ವಾಭಿಮಾನಿಗಳಾದರು. ಅಳುತ್ತ ಬಂದವರು ನಗುತ್ತ ಹೋದರು. ಶಿಕ್ಷಣದ ಅವಧಿಯಲ್ಲಿ ತವರು ಮನೆಯ ಸುಖವನ್ನು ಅನುಭವಿಸಿದೆವೆಂದು ಆಡಳಿತ ವರ್ಗದವರನ್ನು ಹೃದಯತುಂಬಿ ಹರಸಿದರು.”೮

ಗೋಪಾಲಕೃಷ್ಣ ಅಡಿಗರು ನುಡಿದಿರುವಂತೆ

ಅಳುವ ಕಡಲೊಳೂ ತೇಲಿ ಬರುತಲಿದೆ
ನಗೆಯ ಹಾಯಿ ದೋಣಿ
..................
ಆಸೆ ಬೂದಿ ತಳದಲ್ಲೂ ಕೆರಳುತಿವೆ
ಕಿಡಿಗಳೆನಿತೊ ಮಲ್ಗಿ
ಮುರಿದು ಬಿದ್ದ ಮನ ಮರದ ಕೊರಡೊಳೂ
ಹೂವು ಹೂವು ಅರಳಿ!

ಜೆಎಸ್‌ಎಸ್ ಸಂಸ್ಥೆಗಳು ೧೯೪೪ರಲ್ಲಿ ಮೈದಳೆದುವು ನಿಜ. ಆದರೆ ಇವು ಸ್ವಂತ ನಿವೇಶನಕ್ಕೆ ವರ್ಗವಾದದ್ದು ೧೯೪೯ರಲ್ಲಿ — ಹುಕ್ಕೇರಿಕರರ ದಿಟ್ಟತನಕ್ಕೆ ಇನ್ನೊಂದು ನಿದರ್ಶನ. ಮೊದಲು ಮೈಲಾರಲಿಂಗಗುತ್ತಿ ಈಗ ವಿದ್ಯಾಗಿರಿ: ಆದರೆ ಇದು ಅಂದಿನ ಧಾರವಾಡದ ನಾಗರಿಕತೆಯ ಸರಹದ್ದಿನ ಆಚೆಗಿನ ಮಸಾರದ

ಹೊರಗಿತ್ತು. ಬೆಟ್ಟದ ಕೊಡಿಯಿಂದ ಕಣಿವೆಯ ಕತ್ತಲೆಗೆ ಬೆಳಕು ಬೀರಿದ ಈ ಪ್ರಯತ್ನಕ್ಕೆ ಜನರಿಂದ ದೊರೆತ 'ಶಿಫಾರಸು' ಏನು ಗೊತ್ತೇ? "ಶ್ಮಶಾನ ದಾಟಿ ಊರಹೊರಗೆ ಕಾಲೇಜು ಕಟ್ಟಿದರೆ ಅಲ್ಲಿಗೆ ಅವಧೂತ ಕೂಡ ಕಾಲಿಡಲಾರ. ಇನ್ನು ಹಾಲುಗಲ್ಲದ ಹಸುಳೆ ಮಂದಿ ಹೋದಾವೇನೋ!"

ಅದೇ ಸುಮಾರಿಗೆ, ೧೯೪೭-೪೯, ದೂರದ ಉಡುಪಿಯಲ್ಲಿ ನಾಗರಿಕತೆಯ ಗಡಿಹೊರಗಿನ ಮೂರಕಲ್ಲು ಗುಡ್ಡೆಯಲ್ಲಿ ಇಂಥದೇ ಒಂದು ಕನಸು ನನಸಾಗುತ್ತಿತ್ತು: ಮಣಿಪಾಲದ ಮಾಂತ್ರಿಕ ಟಿ. ಮಾಧವ ಪೈಯವರು ತಮ್ಮ ಜಾದೂದಂಡ ಹಿಡಿದು ಆ ಹಾಳುಗರೆಯುತ್ತಿದ್ದ ಬೋಳು ಹರವಿನ ಇರುಕಲು ಕೊರಕಲುಗಳಲ್ಲಿ ಮತ್ತು ಕುರುಚಲು ಕರಟಲುಗಳಲ್ಲಿ ಅಡ್ಡಾಡುತ್ತ ಅಶ್ವಿನೀ ದೇವತೆಗಳ (ವೈದ್ಯಕೀಯ ಕಾಲೇಜ್) ಆಗಮನಕ್ಕಾಗಿ ಕಾತರಿಸುತ್ತಿದ್ದರು. ಮಣಿಪಾಲದ 'ಕಲ್ಲರಳಿ ಹೂವಾಗಿರುವುದೂ ಅದರ ಪರಿಮಳ 'ಜಗದಗಲ ಮುಗಿಲಗಲ ಮಿಗೆಯಗಲ' ಹಬ್ಬಿರುವುದೂ ಈಗ ಹಳೆಯ ಕತೆ.

ಪ್ರಶ್ನೆ: "ಶಿಕ್ಷಣಕ್ಷೇತ್ರದಲ್ಲಿ ನೀವು ಇಷ್ಟೊಂದು ಸಾಹಸವನ್ನು ವೈವಿಧ್ಯಮಯ ಪ್ರಯೋಗಗಳನ್ನು ಕೈಗೊಳ್ಳಲು ಪ್ರೇರಣೆ?"

ಹೆಗ್ಗಡೆಯವರು ಕೊಟ್ಟ ಉತ್ತರ: "ಶ್ರೀಕ್ಷೇತ್ರದ ಪರಂಪರೆ, ಜೊತೆಗೆ ಮಾಧವ ಪೈಯವರ ದಿಟ ಮತ್ತು ದಿಟ್ಟ ಹೆಜ್ಜೆಗಳು."

ಮಾಧವ ಪೈಗಳು ದೈತ್ಯ ದಾಪು ಇಡುತ್ತಿದ್ದ ದಿನಗಳಂದು ಹೆಗ್ಗಡೆಯವರು ಇನ್ನೂ ಶಾಲಾ ಕಾಲೇಜ್ ವಿದ್ಯಾರ್ಥಿದಶೆಯಲ್ಲಿದ್ದರು, ಆದ್ದರಿಂದ ದೃಢ ಸಂಕಲ್ಪಗಳು ಬೇರೂರುತ್ತಿದ್ದ ಪರ್ವಕಾಲದಲ್ಲಿದ್ದರು ಎಂಬುದನ್ನು ನೆನಪಿಸಿಕೊಳ್ಳೋಣ.

ಜೆಎಸ್‌ಎಸ್-ಎಸ್‌ಡಿಎಮ್ ಯುಗ್ಮನ ವಿದ್ಯಾಗಿರಿಗೆ ವಸಂತಋತುವನ್ನು ಆವಾಹಿಸಿತು.

"ಧರ್ಮಸ್ಥಳವನ್ನು ಧಾರವಾಡ ಹೇಗೆ ಅಂಗೀಕರಿಸಿತು? ಅಥವಾ ಒಪ್ಪಿಕೊಂಡಿತು?" ಕನ್ನಡದ ಹಿರಿಯ ಪ್ರಾಧ್ಯಾಪಕ-ವಿದ್ವಾಂಸ ಆರ್. ಸಿ. ಹಿರೇಮಠರನ್ನು (ಇವರು ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಕೂಡ) ಕೇಳಿದಾಗ, ೧೯೯೨, ಅವರಿತ್ತ ವಿವರಣೆ ಸರಳವೂ ಮಾರ್ಮಿಕವೂ ಆಗಿತ್ತು: "ಪೂಜ್ಯ ಶಿವರಾತ್ರೀಯವರ ಬಗ್ಗೆ ಈ ವಲಯದಲ್ಲಿ ಅಪಾರ ಗೌರವವಿದೆ. ಜೆಎಸ್‌ಎಸ್ ಸಂಸ್ಥೆಗಳನ್ನು ಹೇಗಾದರೂ ಪುನರುಜ್ಜೀವನಗೊಳಿಸಬೇಕು ಎಂಬುದು ಅವರ ದಿವ್ಯಸಂಕಲ್ಪ, ಮತ್ತು ಸ್ಥಳೀಯ ವಿದ್ಯಾಪಕ್ಷಪಾತಿಗಳೆಲ್ಲರ ದೃಢ ಆಶಯ. ಯುವ ಸಾಹಸಿ ಧರ್ಮಭೀರು ವೀರೇಂದ್ರ ಹೆಗ್ಗಡೆಯವರನ್ನು ಕುರಿತು ಪೂಜ್ಯಶ್ರೀಯವರಿಗೆ ಎಣೆಯಿಲ್ಲದ ಅಭಿಮಾನ ಮತ್ತು ಭರವಸೆ."

"ಹೀಗೆ ಪೂಜ್ಯಶ್ರೀಯವರು, ರಸಾಯನವಿಜ್ಞಾನದಲ್ಲಿ ಹೇಳುವಂತೆ, ಕ್ರಿಯಾವರ್ಧಕವಾಗಿ (catalytic agent) ಆಗಿ ವರ್ತಿಸಿದರು."

"ಹೆಗ್ಗಡೆಯವರು ಆಗ ಮನಸ್ಸು ಮಾಡದಿರುತ್ತಿದ್ದರೆ ಏನಾಗುತ್ತಿತ್ತೋ

ಹೇಳುವಾರೆ — ಉಳಿಸಲು ಆರೆ.”

ವಿದ್ಯಾಗಿರಿಯಿಂದ ಧವಳಗಿರಿಗೆ

ನೀಡದೊಳ್ ಬಳೆದು, ಕಾಡಿನಲಿ ಹಾರಾಡಿದಾ
ಗರುಡಶಿಶು, ಗರಿಬಲಿತಮೇಲಲ್ಪ ದೇಶಂಗಳಂ
ಚರಿಸಿ ತಣಿವುದೆ? ವಿಯದ್ವಿಸ್ತೀರ್ಣಮಂ ಬಯಸಿ
ಕೈಕೊಳ್ಳದಾಕಾಶ ಪರ್ಯಟನಮಂ

ಧಾರವಾಡ-ಹುಬ್ಬಳ್ಳಿ ರಾಜಮಾರ್ಗದ ಎಡಕ್ಕೆ ವಿದ್ಯಾಗಿರಿ. ಇದು ಜೆಎಸ್ಎಸ್-ಎಸ್‌ಡಿಎಮ್ ಸಂಸ್ಥೆಗಳ ಪ್ರಯೋಗರಂಗ, ಇನ್ನಷ್ಟು ಎತ್ತರಕ್ಕೂ ಬಿತ್ತರಕ್ಕೂ ನೆಗೆಯಲು ನೆರವಾಗುವ ಉಡಾವಣಾಕಟ್ಟೆ (launching pad): ತನು ಅವರದು, ಚೇತನ ಇವರದು.

ಅದೇ ರಾಜಮಾರ್ಗದ ಬಲಕ್ಕೆ ಎತ್ತೆತ್ತ ಹರಡಿಕೊಂಡಿರುವ ದಿಣ್ಣೆಗಳ ಸಾಲಿದೆ. ಇದು ಕೆಲವೇ ವರ್ಷಗಳ ಹಿಂದೆ ಕುರುಚಲು ಕಾಡಿನ ಗುಂಡಿಗುಳುಪುಗಳ ಯದ್ವಾತದ್ವಾ ಶ್ರೇಣಿಕೆಯಾಗಿತ್ತು; ಇಂದು ಎಸ್‌ಡಿಎಮ್ ಆಶೋತ್ತರಗಳ ನೆಲೆವೀಡಾಗಿದೆ. ಹೆಸರು ಧವಳಗಿರಿ. ಇಲ್ಲಿ 'ತನು ನಿನ್ನದು ಜೀವನ ನಿನ್ನದು.'[೧೦]

ವಿದ್ಯೆಯ ಅಂತಿಮ ಪ್ರಯೋಜನವೇನು? ಧವಳಚಾರಿತ್ರ್ಯ ಪೋಷಣೆ, ಮತ್ತು ಇದರ ಅಭಿವ್ಯಕ್ತಿಯಾದ ಪರಿಶುಭ್ರ ವರ್ತನೆ. ಧವಳಗಿರಿಯ ಆದರ್ಶವಿದು.

"ಅಶನ ಕೊಡಿ, ವಸನ ಕೊಡಿ, ನಿವೇಶನ ಕೊಡಿ" ಎಂದು ಬೇಡುವುದರಲ್ಲಿ ಅರ್ಥವಿದೆ: ಇವು ಜೀವನದ ಪ್ರಮುಖ ಆವಶ್ಯಕತೆಗಳು. "ಎಂಜಿನಿಯರಿಂಗ್ ಕಾಲೇಜ್ ಕೊಡಿ, ವೈದ್ಯಕೀಯ ಕಾಲೇಜ್ ಕೊಡಿ" ಎಂದು ಆಗ್ರಹಿಸಿ ಪೀಡಿಸಿದರೆ ಅರ್ಥವೇನೆಂದು ಇಂದು ವಿವರಿಸಬೇಕಾಗಿಲ್ಲ. ತಾತ್ತ್ವಿಕವಾಗಿ, ಈ 'ಆಧುನಿಕ ದೇವಾಲಯ'ಗಳ ನಿರ್ಮಾಣ ಮತ್ತು ನಿರ್ವಹಣೆ ಕುರಿತಂತೆ 'ಉಳ್ಳವರು' ಹಣ ಹರಿಸುತ್ತಾರೆ, ಸಂಘಟಕರು ಯುಕ್ತ ಸರಕು ಸೇವೆ ಪೂರೈಸುತ್ತಾರೆ. ಮೇಲುನೋಟಕ್ಕೆ ಕಾಣುವಂತೆ ಈ ವ್ಯವಹಾರದಲ್ಲಿ ತಪ್ಪೇನೂ ಇಲ್ಲ. ಆದರೆ ಈ ಭಸ್ಮಾಸುರಶಕ್ತಿ ಅವಿವೇಕಿಗಳ ಕೈಗೆ ಅನುಗ್ರಹೀತವಾದರೆ — ಈಗ ಬಹುತೇಕ ಆಗಿರುವುದು ಅದು ತಾನೇ!— ಪರಿಸ್ಥಿತಿ ಏನಾಗುತ್ತದೆ?

ವಿದ್ಯಾಗಿರಿ ಹೊಸ ಹಸುರಿನಿಂದ ಕಂಗೊಳಿಸಿದಂತೆ ಹೆಗ್ಗಡೆಯವರ ಚಿಂತನೆ ಈ ದಿಶೆಯಲ್ಲಿ — ತಂತ್ರವಿದ್ಯಾಶಾಲೆಗಳ (technology colleges) ಸ್ಥಾಪನೆ — ಹರಿಯಲು ಕಾರಣವಾದ ಪ್ರೇರಣೆಗಳು ಮೂರು: ಸಾಂಪ್ರದಾಯಿಕ ಶಿಕ್ಷಣಕ್ಷೇತ್ರದಲ್ಲಿ ಆತನಕ (೧೯೭೮-೭೯) ಗಳಿಸಿದ ಅನುಭವ, ಯಶಸ್ಸು ಮತ್ತು ಉತ್ಸಾಹ; ಧಾರವಾಡ ಪ್ರದೇಶದಲ್ಲಿ ತಂತ್ರವಿದ್ಯಾಶಾಲೆಗಳ ಆವಶ್ಯಕತೆ ಮತ್ತು ಉಪಯೋಗ; ತಂತ್ರವಿದ್ಯಾಶಾಲೆಗಳ ಸ್ಥಾಪನೆ ಮತ್ತು ನಿರ್ವಹಣೆಯೊಳಕ್ಕೆ ನುಸುಳಿ ಅಪಾರ ಹಾನಿಗೈಯುತ್ತಿದ್ದ ಜಂಗನ್ನು ನಿವಾರಿಸಲು

ತಮ್ಮ ಮಿತಿಯೊಳಗೆ ಹೀಗೆ ಒಂದು ಆದರ್ಶ ಸಂಸ್ಥೆ ಕಟ್ಟಬಹುದೆಂಬ ಸವಾಲು.

ಕರ್ನಾಟಕ ವಿಶ್ವವಿದ್ಯಾಲಯದ ಮನ್ನಣೆ ಪಡೆದ ಎಸ್‌ಡಿಎಮ್ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ೧೯೭೯ರಲ್ಲಿ ಪ್ರಾರಂಭವಾಯಿತು. ಮೊದಲ ತರಗತಿಗಳು ತೊಡಗಿದ್ದು ವಿದ್ಯಾಗಿರಿಯಲ್ಲಿ, ಕೆ. ಎಚ್. ಕಬ್ಬೂರ್ ಎಂಜಿನಿಯರಿಂಗ್ ಸಂಸ್ಥೆಯ ಆವರಣದಲ್ಲಿ.

ಧಾರವಾಡ-ಹುಬ್ಬಳ್ಳಿ ವಲಯದಲ್ಲಿ ಇಂಥ ಒಂದು ಪದವಿ ಶಿಕ್ಷಣ ಕಾಲೇಜಿನ ಸ್ಥಾಪನೆಗೆ ಬೇಕಾದ ಸಮಸ್ತ ಅಧೋರಚನೆಯು (infrastructure) ಲಭ್ಯವಿತ್ತೆಂಬುದು ಮುಖ್ಯ ಸಂಗತಿ: ಸಾಕಷ್ಟು ಯಂತ್ರಕರ್ಮಾಗಾರಗಳು, ಐಟಿಐ ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳು, ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಕಾಲೇಜ್ ಇತ್ಯಾದಿ. ಹೀಗೆ ವ್ಯಾಪಿಸಿದ್ದ ತಂತ್ರವಿದ್ಯಾತ್ಮಕ ಹವೆಯಲ್ಲಿ ಎಸ್‌ಡಿಎಮ್ ಎಂಜಿನಿಯರಿಂಗ್ ಕಾಲೇಜ್ ಮೈದಳೆದದ್ದು ಸಹಜ ಮತ್ತು ಸಕಾಲಿಕ ವಿದ್ಯಮಾನ.

ಈ ಕಾಲೇಜ್ ಹೇಗಿರಬೇಕು?

ಒಟ್ಟು ಸಂಕೀರ್ಣ ಸ್ಥಳೀಯ ವಿವೇಕದಿಂದ ಸಹಜವಾಗಿ ಉದ್ಭವಿಸಿ ವಿಕಸಿಸಿದಂತಿರಬೇಕು. ಇದರ ಕಟ್ಟಡಗಳು ದೇಶದ ಸಾಂಸ್ಕೃತಿಕ ಪರಂಪರೆಯನ್ನು ಪ್ರತೀಕಿಸುವಂತಿರಬೇಕು. ಪ್ರತಿಯೊಂದು ಕಟ್ಟಡದ ಒಳಗೆ ಅಂಗುಲ ಅಂಗುಲವೂ ಉಪಯುಕ್ತತೆ ಮತ್ತು ಸೌಂದರ್ಯ ಸಮ್ಮಿಳನಗೊಂಡು ನಳನಳಿಸುತ್ತಿರಬೇಕು. ಭವಿಷ್ಯದಲ್ಲಿ ವಿಸ್ತರಣೆಗೆ ಸಾಕಷ್ಟು ಸ್ಥಳಾವಕಾಶಗಳನ್ನು ಮೀಸಲಿಟ್ಟಿರಬೇಕು. ಪ್ರಾಚೀನ ಋಷಿಗಳ ದಿವ್ಯದರ್ಶನದಿಂದ ಆಧುನಿಕ ಪ್ರಾಧ್ಯಾಪಕೋತ್ತಮರು ಈ ಸುಂದರ ಮಂದಿರಗಳ ಒಳಗೆ ಮುಕ್ತ ಪರಿಸರದಲ್ಲಿ ಭಾವೀ ವಿಶ್ವೇಶ್ವರಯ್ಯಂದಿರನ್ನು ರೂಪುಗೊಳಿಸುವಂತಾಗಬೇಕು.

ಇಲ್ಲಿ ಪ್ರವೇಶಕ್ಕೆ, ಇಲ್ಲಿಯ ವಾಸ್ತವ್ಯಕ್ಕೆ ಮತ್ತು ಇಲ್ಲಿಂದ ಶೀಲವಂತ ಪದವೀಧರರಾಗಿ ನಿಷ್ಕ್ರಮಣಕ್ಕೆ ಅನುಷ್ಠಾನಿಸಬೇಕಾದ ಬೀಜಮಂತ್ರ ಒಂದೇ: ಉತ್ಕೃಷ್ಟತೆ (excellence).

ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿ ಪ್ಲೇಟೋ (ಕ್ರಿಪೂಸು ೪೨೭ - ಸು ೩೪೭) ಗಣಿತಶಾಸ್ತ್ರ ಪಾರಂಗತ ಕೂಡ. ತನ್ನ ಆಶ್ರಮದ ಪ್ರವೇಶದ್ವಾರದಲ್ಲಿ "Let no one ignorant of mathematics enter here" (ಗಣಿತಪಠಿ-ದವರಾರೂ ಇಲ್ಲಿ ಬಾರದಿರಲಿ) ಎಂದು ಫಲಕ ಬರೆಸಿಟ್ಟಿದ್ದ.

ಇದು (ಎಸ್‌ಡಿಎಮ್) ಆಗಬಾರದು ಇನ್ನು ಒಂದು ಮಾಮೂಲೀ ಎಂಜಿನಿಯರಿಂಗ್ ಕಾಲೇಜ್, ಬದಲು, ಆಗಬೇಕು ಒಂದು ಆದರ್ಶ ಸಂಸ್ಥೆ. ಇಲ್ಲಿ ಸರಕು, ಸೇವೆ, ಹಣ, ನೈಸರ್ಗಿಕ ಸಂಪನ್ಮೂಲಗಳು ಯಾವುವೂ ಪೋಲಾಗತಕ್ಕದ್ದಲ್ಲ, ಪರಿಸರವನ್ನು ವಿರೂಪಗೊಳಿಸತಕ್ಕದ್ದಲ್ಲ.

ಇದು (ಎಸ್‌ಡಿಎಮ್) ಆಗಬೇಕು ಅಖಿಲ ಭಾರತೀಯ ಸಂಸ್ಥೆ — ಜಾಗತಿಕ ಹೊರಗ ಎತ್ತರದಲ್ಲಿಯೂ. ಇದರಲ್ಲಿ ವ್ಯಾಸಂಗಿಸುತ್ತಿರುವ ವಿದ್ಯಾರ್ಥಿ ತಾನು ಸ್ವಂತ ವಿದ್ಯಾರ್ಜನೆ ಮಾಡುತ್ತಿರುವುದರ ಜೊತೆಗೆ ದೇಶ ಕಟ್ಟುವ ರಚನಾತ್ಮಕ ಕ್ರಿಯೆಯಲ್ಲಿಯೂ ಮಗ್ನನಾಗಿರುವೆನೆಂಬ ಪ್ರಜ್ಞಾವಂತನಾಗಿರಬೇಕು:

‘ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು.’

ವೀರೇಂದ್ರ ಹೆಗ್ಗಡೆಯವರ ಚಿಂತನೆ ಹರಿದದ್ದು ಹೀಗೆ.

ವರ್ತಮಾನ ಭಾರತದ ಪ್ರಚಲಿತ ಹವೆಯಲ್ಲಿ ಇದು ಕನಸುಗಾರನ ಭವ್ಯ ಕಲ್ಪನೆ, ಆಲಸಿಗನ ಕನಸು, ಅಥವಾ ಸುಂದರ ಪದಗಳ ಬಂಧುರ ಬಂಧನ ಎನ್ನುವಿರಾ?

೧೯೮೮-೮೯ರಲ್ಲಿ ಈ ಕನಸು ನನಸಾಯಿತು, ತಪಸ್ಸು ಸಿದ್ಧಿಸಿತು: ಎಂಜಿನಿಯರಿಂಗ್ ಕಾಲೇಜ್ ವಿದ್ಯಾಗಿರಿಯ ತಾತ್ಕಾಲಿಕ ಮಂಚಿಕೆಯಿಂದ ಧವಳಗಿರಿಯ ಶಾಶ್ವತ ಮಂದಿರಕ್ಕೆ ವರ್ಗಾವಣೆಗೊಂಡಿತು.

ಹೆಗ್ಗಡೆಯವರು ವಿವರಿಸುತ್ತಾರೆ: “ಈ ಉನ್ನತ ವೃತ್ತಿಪರ ಕಾಲೇಜುಗಳನ್ನು ಪ್ರಾರಂಭಿಸುವಾಗ ಮಾದರಿ ಸಂಸ್ಥೆಗಳನ್ನು ಕಟ್ಟಬೇಕೆಂಬುದೊಂದೇ ಉದ್ದೇಶ. ಧಾರವಾಡದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉತ್ತಮ ಶಿಲ್ಪ ವಿನ್ಯಾಸವನ್ನು ಅಳವಡಿಸಿದ್ದೇವೆ. ಎಂಜಿನಿಯರಿಂಗ್ ಶಿಕ್ಷಣಕ್ಕೆ ಮಾರ್ಗದರ್ಶನ ನೀಡುವ ಎಐಟಿಇಸಿ (All India Technological Education Commission) ಈ ಕಾಲೇಜಿನ ಕಟ್ಟಡಗಳ ವಿನ್ಯಾಸ, ಪೀಠೋಪಕರಣ, ಬೋಧನೋಪಕರಣ, ಪ್ರಯೋಗಾಲಯ ಮುಂತಾದವನ್ನು ಅತ್ಯುತ್ತಮವೆಂದು ಪ್ರಶಂಸಿಸಿದೆ. ಈ ಭಾಗದ ವಿಶ್ವವಿದ್ಯಾಲಯಗಳಿಗೆ ಸೇರ್ಪಡೆಯಾದ ೧೪ ಎಂಜಿನಿಯರಿಂಗ್ ಕಾಲೇಜುಗಳ ಪೈಕಿ ಪ್ರಥಮ ಶ್ರೇಣಿಯಲ್ಲಿರುವವುಗಳಲ್ಲಿ ನಮ್ಮದೂ ಒಂದೆಂದು ಹೆಸರು ಪಡೆದಿದೆ.” *

ಕಾಲೇಜಿನ ಪ್ರಾಂಶುಪಾಲ ಜಿ. ಪುರುಷೋತ್ತಮ ‘ಎನಗಿಂತ ಕಿರಿಯರಿಲ್ಲ’ ಎನ್ನುವಂತೆ ತಮ್ಮ ವಿದ್ವತ್ತು, ಅನುಭವ ಮತ್ತು ಧುರೀಣತ್ವಗಳನ್ನು ಸಂಸ್ಥೆಯ ಉತ್ಕರ್ಷೆಯೊಂದಿಗೆ ಸಮೀಕರಿಸಿಕೊಂಡಿರುವ ಸೇವಾಪರಾಯಣ. ಅಂತಾರಾಷ್ಟ್ರೀಯ ಖ್ಯಾತಿ ತೀರ ಲಘುವಾಗಿ ಇವರ ಹೆಗಲ ಮೇಲೆ ಕುಳಿತಿದೆ.

“ಎಂಜಿನಿಯರಿಂಗ್ ಕಾಲೇಜ್ ಎಂದರೆ ಗಲಭೆ ಗೊಂದಲಗಳ ಸಂತೆ, ಪ್ರತಿಯೊಬ್ಬನೂ ಇಲ್ಲಿ busy, ಬಿಸಿ ಕೂಡ, ಯಾರಿಗೆ ಯಾರೂ ಹೊಣೆಯಲ್ಲ ಎಂಬ ಪ್ರಚಲಿತ ಸಾಮಾನ್ಯ ಅನುಭವಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವಂತಿದೆಯಲ್ಲ ನಿಮ್ಮ ಈ ಕಾಲೇಜ್! ಇಲ್ಲಿ ಪಾಠ ಪ್ರವಚನ ನಡೆಯುತ್ತವೆ, ಪ್ರಯೋಗ ಪರೀಕ್ಷೆ ಕೂಡ! ಎಲ್ಲೆಲ್ಲಿಯೂ ಭಾವೀ ಎಂಜಿನಿಯರುಗಳು ಅಧ್ಯಯನನಿರತರಾಗಿದ್ದಾರೆ. ಏನು ವ್ಯವಸ್ಥೆ, ಶಿಸ್ತು, ಸಂಯಮ. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ನಾವೆಲ್ಲ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗಿನ ಮಧುರಸ್ಮೃತಿಗಳಿವು. ಈ ಪವಾಡವನ್ನು ನೀವು ಹೇಗೆ ಸಾಧಿಸಿದಿರಿ?”

ಪ್ರಾಂಶುಪಾಲರು ಮೃದುವಾಗಿ ಪಿಸುನುಡಿಯುತ್ತಾರೆ: “ಪವಾಡವೇನು ಬಂತು! ನಮ್ಮ ವಿದ್ಯಾರ್ಥಿಗಳೂ ಅಧ್ಯಾಪಕರೂ ಸೌಹಾರ್ದಪೂರಿತ ವಾತಾವರಣದಲ್ಲಿ ಸದಾ ಜ್ಞಾನಾನ್ವೇಷಣೆಯಲ್ಲಿ ಮಗ್ನರಾಗಿರುವರೆಂದರ್ಥ.”

ಇದೊಂದು ವಿವೃತ ಗ್ರಂಥ (open book). ವಿದ್ಯಾರ್ಥಿಗಳನ್ನು ಕುರಿತ ಎಲ್ಲ ದಾಖಲೆಗಳೂ ಗಣಕೀಕೃತವಾಗಿ ಸದಾ ಅವರಿಗೆ ಲಭ್ಯವಿರುತ್ತವೆ. ಪ್ರಾಂಶುಪಾಲ,

ಅಧ್ಯಾಪಕ, ಕ್ಷೇಮಪಾಲ ಮೊದಲಾದ ವಿದ್ಯಾರ್ಥಿ ಹಿತಚಿಂತಕರ ಪಾತ್ರ ಉದಾರ ಅಗ್ರಜನದೇ ಹೊರತು ಶಿಸ್ತಿನ ನಾಯಕನದಲ್ಲ. ಎಲ್ಲ ಅಧ್ಯಾಪಕರು ವಿದ್ವತ್ತು ಮತ್ತು ವಿನಯಯುಕ್ತರಾಗಿ ಕರ್ತವ್ಯ ನಿರ್ವಹಿಸುವರೋ ಎಲ್ಲಿ ಅವರು ವಿದ್ಯಾರ್ಥಿಗಳ ಹಿತ ಸದಾ ಮೊದಲು ಬಳಿಕ ತಮ್ಮದು ಎಂದು ಪ್ರಜ್ಞಾಪೂರ್ವಕವಾಗಿ ಅರಿತು ಹಾಗೆ ವರ್ತಿಸುವರೋ ಅಲ್ಲಿ ಅಶಿಸ್ತು ಪದಕ್ಕೆ ಅಸ್ತಿತ್ವವಿಲ್ಲ, ಅರ್ಥವೂ ಇಲ್ಲ.

"ನಿಜ: ಕೆಟ್ಟ ಅಧ್ಯಾಪಕರಿರಬಹುದು, ಆದರೆ ಕೆಟ್ಟ ವಿದ್ಯಾರ್ಥಿಗಳು ಇಲ್ಲವೇ ಇಲ್ಲ" ಎಂದರು ಪುರುಷೋತ್ತಮ.

ಹಲವಾರು ವಿದ್ಯಾರ್ಥಿಗಳನ್ನು ಖಾಸಗಿಯಾಗಿ (ಅಂದರೆ ಪ್ರಾಂಶುಪಾಲರಾಗಲೀ ಅಧ್ಯಾಪಕರಾಗಲೀ ಜೊತೆಯಲ್ಲಿರದೆ) ಭೇಟಿಮಾಡಿದ್ದಾಯಿತು: ಅದೊಂದು ಸಂಕ್ಷಿಪ್ತ ಭಾರತ. ಪಂಜಾಬ್, ನಾಗಾಲ್ಯಾಂಡಿನಿಂದ ಹಿಡಿದು ಕೇರಳದ ವರೆಗೆ — 'ಹುಬ್ಬಳ್ಳಿ ಯಾಂವಾ' ಕೂಡ ಈ ಗುಂಪಿನಲ್ಲಿದ್ದ.

ಪ್ರಶ್ನೆ: "ಹುಬ್ಬಳ್ಳಿಯಲ್ಲೇ ಎಂಜಿನಿಯರಿಂಗ್ ಕಾಲೇಜ್ ಇರುವಾಗ ಇಲ್ಲಿಗೇಕೆ ಬಂದೆ?"

"ಕಾಲೇಜಂದ್ರ ನೋಡ್ರೀ ಸಾಬ್ರ, ಹಿಂಗಿರಬೇಕ್ರೀ."

ಪಂಜಾಬಿನವನಾಗಲೀ ಕೇರಳದವನಾಗಲೀ ಸ್ವಯಂಸ್ಫೂರ್ತಿಯಿಂದ ಉದ್ಗರಿಸಿದ್ದು ಇದೇ ಭಾವನೆಯನ್ನು.

ಪ್ರಶ್ನೆ: "ಸರಿ — ನೀವೇನೇನೋ ನಿರೀಕ್ಷೆಗಳನ್ನಿಟ್ಟುಕೊಂಡು ಕಲ್ಪನೆಗಳನ್ನು ಕಟ್ಟಿಕೊಂಡು ಇಷ್ಟು ದೂರ ಬಂದಿರುವಿರಿ. ಇಲ್ಲಿಯ ವಾಸ್ತವ್ಯ ನಿಮಗೇನು ಅನುಭವ ಕೊಟ್ಟಿದೆ?"

"ಶೈಕ್ಷಣಿಕ ವಿಚಾರಗಳನ್ನು ಕುರಿತಂತೆ ನಮಗೆ ಪೂರ್ಣ ಸಮಾಧಾನವಿದೆ."

"ಇಲ್ಲದ್ದು?"

"ಹೇಳಬಹುದಾದರೆ ....."

"ಅವಶ್ಯ ಹೇಳಿ. ಮುಖ್ಯವಾಗಿ ಪ್ರಾಂಶುಪಾಲರಿಗೆ ಹೇಳಲೇಬೇಕು."

"ಮೂರು ಮುಖ್ಯ ಸಂಗತಿಗಳನ್ನು ತಿಳಿಸಬಯಸುತ್ತೇವೆ: ನಾವು ಆರಂಭದ ತರಗತಿಗಳನ್ನು ಸೇರಿದಾಗ ನಮಗೆ ದೊರೆತ ವೈಯಕ್ತಿಕ ಅವಧಾನ ಈಗ ನಮಗೆ ಸಿಕ್ಕುತ್ತಿಲ್ಲ ಅನ್ನಿಸುತ್ತದೆ. ಪ್ರತಿಯೊಂದು ಇಲಾಖೆಯ ಮುಖ್ಯರೂ ಪ್ರಾಂಶುಪಾಲರಷ್ಟೇ ವಿದ್ಯಾರ್ಥಿ ಕ್ಷೇಮಚಿಂತಕರಾಗಿರಬಹುದಲ್ಲ. ಮೂರನೆಯದಾಗಿ, ವ್ಯಾಯಾಮ, ಕ್ರೀಡೆ, ಲಲಿತಕಲೆಗಳು, ನಾಟಕ ಮುಂತಾದ ಶಿಕ್ಷಣೇತರ ಹವ್ಯಾಸಗಳಿಗೆ ಅಧಿಕ ಅವಕಾಶಗಳು ಒದಗಬೇಕು."

"ಇಲಾಖಾಮುಖ್ಯರಾಗಲೀ ಇತರರಾಗಲೀ ತಮ್ಮ ತಮ್ಮ ವಿಷಯಗಳಲ್ಲಿ....."

"ತುಂಬ ಪ್ರವೀಣರು. ಆದರೆ ಮಾನವೀಯತೆ?"

"ಸುಮಾರು ೧೫೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿರುವ ಕಿರುಭಾರತವಿದು. ಪ್ರಾಯಶಃ ವಿದೇಶೀ ವಿದ್ಯಾರ್ಥಿಗಳೂ ಇದ್ದಾರೆ. ಸುಮಾರು ೯೫ ಅಧ್ಯಾಪಕರು, ಅಷ್ಟೇಮಂದಿ ಅಧ್ಯಾಪಕೇತರ ಸಿಬ್ಬಂದಿ ಕೂಡ ಇಲ್ಲಿದ್ದಾರೆ. ಇಂಥ ಒಂದು ಜೀವಂತ ವ್ಯವಸ್ಥೆ ಬೆಳೆಯುತ್ತಿರುವಾಗ ಆರ್ಥಿಕ ಮುಗ್ಗಟ್ಟು, ಆಡಳಿತ ತೊಡಕು,

ವ್ಯಕ್ತಿಸ್ವಭಾವಗಳಲ್ಲಿಯ ಭಿನ್ನತೆಗಳು ಮುಂತಾದವು ತಲೆ ಎತ್ತುವುದು ವಿರಳವಲ್ಲ. ವ್ಯವಸ್ಥಾಪಕರು ಖಂಡಿತವಾಗಿಯೂ ಈ ಎಲ್ಲವನ್ನೂ — ಇಷ್ಟೇ ಅಲ್ಲ, ನಿಮ್ಮ ಅರಿವಿಗೆ ಬಂದಿರದ ಇನ್ನೂ ಹಲವಾರು ಸಿಕ್ಕುಗಳನ್ನು ಸಹ — ಬಿಡಿಸುವುದರಲ್ಲಿ ಆದ್ಯತೆ ಪ್ರಕಾರ ಲಕ್ಷ್ಯ ಹರಿಸಿಯೇ ಹರಿಸುತ್ತಾರೆ. ಈ ಕಾಲೇಜಿನ ವಿದ್ಯಾರ್ಥಿಗಳಾಗಿ ನಿಮ್ಮ ಬಗ್ಗೆ ಪ್ರತಿಕ್ರಿಯೆ ಏನು?"

"ಅಭಿಮಾನ ಮತ್ತು ಕೃತಜ್ಞತೆ."

ಪ್ರಾಂಶುಪಾಲ ಪುರುಷೋತ್ತಮರು ಕಾಲೇಜಿನ ಎಲ್ಲೆಡೆಗಳಿಗೂ ನಮ್ಮನ್ನು ಕೊಂಡೊಯ್ದು ವಿವರಿಸುತ್ತಾರೆ, ಅಧ್ಯಾಪಕರನ್ನು ಸಿಬ್ಬಂದಿ ವರ್ಗದವರನ್ನು ಆತ್ಮೀಯತೆಯಿಂದ ಪರಿಚಯಿಸುತ್ತಾರೆ, ಭವಿಷ್ಯದ ಯೋಜನೆಗಳನ್ನು ಕನಸು ಕಾಣುತ್ತಾರೆ.

ಪ್ರಶ್ನೆ: "ನಿಮ್ಮಂಥ ಶಿಕ್ಷಣವಿದರು, ಉದ್ಯಮ ಕುಶಲಿಗಳು ಮತ್ತು ಜನಾನುರಾಗಿಗಳು ಅಮೆರಿಕದ ಯಾವುದೇ ಮುಂಚೂಣಿ ತಂತ್ರವಿದ್ಯಾಲಯದಲ್ಲಿ ಭದ್ರನೆಲೆ ಪಡೆದು ಸುಖಸಮೃದ್ಧ ಜೀವನ ನಡೆಸಬಹುದಾದವರು ಈ ಕಾಲೇಜನ್ನು ವರಿಸಿ ಇದರ ಹಿರಿತನ ವಹಿಸಲು ಕಾರಣವೇನು? ಸಂದ ಈ ಏಳು ವರ್ಷಗಳಲ್ಲಿ ನಿಮ್ಮ ಅನುಭವ?"

ಸ್ವಪ್ನವಿಹಾರದಿಂದ ವಾಸ್ತವ ಲೋಕಕ್ಕೆ ಇಳಿದು ಅವರು ಹೇಳುತ್ತಾರೆ: "ತೀರ ಸರಳ: ಅವರು ಕರೆದರು, ನಾನು ಬಂದೆ. ಹೆಗ್ಗಡೆಯವರೂ ಅವರ ಸ್ಥಳೀಯ ಪ್ರತಿನಿಧಿ ಪದ್ಮಕುಮಾರರೂ ನನ್ನನ್ನು ಗೌರವಾದರಗಳಿಂದ ನಡೆಸಿಕೊಳ್ಳುತ್ತಿದ್ದಾರೆ, ನನ್ನಲ್ಲಿ ಪೂರ್ತಿ ಭರವಸೆ ಇಟ್ಟಿದ್ದಾರೆ. ಶೈಕ್ಷಣಿಕ ವಿಚಾರಗಳಲ್ಲಿ ನನಗೆ ಪೂರ್ಣ ಸ್ವಾತಂತ್ರ್ಯವಿದೆ, ಅವರ ಹಾರ್ದಿಕ ಬೆಂಬಲವಿದೆ. ಕಾಲೇಜಿಗೆ ಸಂಬಂಧಿಸಿದ ಸಮಸ್ತ ವಿವರಗಳನ್ನೂ ಅವರು ನಮ್ಮೆಲ್ಲರ ಜೊತೆ ಮುಕ್ತವಾಗಿ ಚರ್ಚಿಸುತ್ತಾರೆ. ಎಂದೂ ತಮ್ಮ ಅಭಿಪ್ರಾಯವನ್ನು ಇಲ್ಲವೇ ನಿರ್ಧಾರವನ್ನು ನಮ್ಮ ಮೇಲೆ ಹೇರುವುದಿಲ್ಲ. ಕಾಲೇಜಿನ ಸರ್ವಾಂಗ ಸುಂದರ ಅಭಿವೃದ್ಧಿ ಕುರಿತಂತೆ ನಾವು ಮಂಡಿಸುವ ಯೋಜನೆಗಳನ್ನು ಅವರು ಸಹಾನುಭೂತಿಯಿಂದ ಪರಾಮರ್ಶಿಸಿ ನಮ್ಮ ಜೊತೆ ವಿಚಾರವಿನಿಮಯ ನಡೆಸಿ ಯುಕ್ತವೆನಿಸಿದವನ್ನು ನಿರ್ವಹಿಸುತ್ತಾರೆ. ಧನಾಭಾವದಿಂದ ಯಾವ ಯೋಜನೆಯನ್ನೂ ನಿರಾಕರಿಸಿದ್ದಿಲ್ಲ, ನಿಧಾನಗೊಳಿಸಿದ್ದೂ ಇಲ್ಲ. ಇದು ನಮ್ಮ ನಾಡು, ನಮ್ಮ ಪರಿಸರ. ಇಲ್ಲಿ ಸೃಜನಶೀಲವಾಗಿ ಕ್ರಿಯೆ ನಿರ್ವಹಿಸುವುದರಲ್ಲಿ ಅಪೂರ್ವ ಆನಂದವಿದೆ. ಇನ್ನು ವೃತ್ತಿಗೌರವ? ಈಗಿರುವುದಕ್ಕಿಂತ ಹೆಚ್ಚಿನದು ಬೇರೆಲ್ಲಿ ತಾನೇ ದೊರೆತೀತು? ಇತರ ಆಮಿಷಗಳು? ವ್ಯಕ್ತಿಯ ಸಂಸ್ಕಾರ ಸಂಸ್ಕೃತಿಗಳಿಗೆ ಸಂಬಂಧಿಸಿದವು ಅವು — ಅವನ್ನು ಮೀರಿ ಕ್ರಿಯಾಸಿದ್ಧಿ ಗಳಿಸುವುದರಲ್ಲೇ ನಿಜವ್ಯಕ್ತಿತ್ವದ ತ್ರಾಣವಿದೆಯೆಂದು ಭಾವಿಸಿದ್ದೇನೆ."

ಯಂತ್ರನಿರ್ಮಾಪಕರ, ತಂತ್ರಕುಶಲಿಗಳ, ಗಣಕಪರಿಣತರ, ನವಭಾರತ ಯೋಜಕರ — ಅರ್ಥಾತ್ ಆಧುನಿಕ ವಿಶ್ವಕರ್ಮರ ಇಲ್ಲವೇ ಮಯರ — ವಿಹಾರಭೂಮಿ ಧವಳಗಿರಿ. ಭೌತ ಧವಳಗಿರಿಯ (ಹಿಮಾಲಯ) ಎತ್ತರಕ್ಕೆ ಮಿತಿ ಉಂಟು, ಆದರೆ ಬೌದ್ಧಿಕ ಧವಳಗಿರಿಯ ಎತ್ತರಗಳಿಗೆ ದೇಶಮಿತಿ ಉಂಟೇ? ಕಾಲಮಿತಿ ಉಂಟೇ? ಇದು ನಾಗರಿಕತೆಯ ನಿರಂತರ ಪ್ರವಾಹಕ್ಕೆ ಸಹಸ್ಪಂದಿಸುತ್ತಿರುವ ಲೋಕಗುರುಗಳ ಮನೋಮಂದಿರ.

ಧವಳಗಿರಿಯಿಂದ ಧವಳನಗರಕ್ಕೆ

ಹುಬ್ಬಳ್ಳಿ-ಧಾರವಾಡ ರಾಷ್ಟ್ರೀಯ ರಾಜಮಾರ್ಗ. ಹುಬ್ಬಳ್ಳಿಯ 'ನಾಗರಿಕ ಕಲ್ಮಷಗಳು ಅಳಿದು ನಿಸರ್ಗ ಮತ್ತೆ ವಿಜೃಂಭಿಸಿ ಪಯಣಗೈವೊಂದು ಹಾಡು ಎಂಬ ಭಾವ ಮಿನುಗುವಾಗ, ಆಗಸದಲ್ಲಿಯ ಧವಳ ಮೇಘಗಳು ತಮ್ಮ ವಿನ್ಯಾಸಗಳಿಂದಲೂ ಪ್ರಭಾವಳಿಗಳಿಂದಲೂ ಯಾತ್ರಿಕನ ಚಿತ್ತವನ್ನು ಅತ್ತ ಹರಿಸುವಾಗ, ಅಲ್ಲಿ ದೂರದಲ್ಲಿ ರಸ್ತೆಯ ಎಡಬದಿಯಲ್ಲಿ

"......... ..... ... ವನಲಕ್ಷ್ಮೀ ಕಾಂ
ತೆಯ ಕಾಂತಧವಳ ದಂತಾ
ಳಿಯವೊಲ್ ಸೊಗಯಿಸಿತು ಕುಂದ ಕುಟ್ಮಲ ನಿಕರಂ"

ಆಗ ಹೊತ್ತು ಹೇಗಿತ್ತು?

ಮುಗಿಲ ಮಾರಿಗೆ ರಾಗರತಿಯಾ ನಂಜ ಏರಿತ್ತ
— ಆಗ ಸಂಜೆಯಾಗಿತ್ತ;
ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೋ ಬಿದ್ದಿತ್ತ
ಗಾಳಿಗೆ ಮೇಲಕ್ಕೆದ್ದಿತ್ತ

ಬೇಂದ್ರೆಯವರು ನೆಲದ ಕಂಪನ್ನು ಮತ್ತು ಹಸಿರ ತಂಪನ್ನು ಜನಪದರ ನುಡಿಗಳಲ್ಲಿ ನಾದದ ಇಂಪಿಗೆ ಮೋಡಿನೆಯ್ದು ಕುಂಚಿಸಿದ ತವರಿಗೆ ('ಬಾರೊ ಸಾಧನಕೇರಿಗೆ ಮರಳಿ ನಿನ್ನೀ ಊರಿಗೆ') ಆಗ ನಾವು ಪಯಣಿಸುತ್ತಿದ್ದುದು ಧ್ವನಿಪೂರ್ಣವಾಗಿತ್ತು.

ಮುಗಿಲ ಕನಸಿನ ಚಿತ್ರ ನೆಲಕ್ಕಿಳಿದು ಘನಿಸಿದಂತಿತ್ತು ಆ ವಿಶ್ವಕರ್ಮ-ಇಂದ್ರಜಾಲ: ಎಸ್‌ಡಿಎಮ್ ವತಿಯಿಂದ ನಿರ್ಮಿತವಾದ ದಂತವೈದ್ಯಕೀಯ ಕಾಲೇಜ್. ಈ ನೆಲೆಯ ಹೆಸರು ಧವಳನಗರ: ಮೇಲೆ ಧವಳಗಿರಿ, ಕೆಳಗೆ ಧವಳನಗರ, ನಡುವೆ 'ಧವಳದಂತ' (ಧವಳದಂತ ಕೂಡ) ಕಾಲೇಜ್. ಮಹಾಸ್ವಪ್ನಿಗಳು ಮಾತ್ರ ಪ್ರಹಟ್ಟಿಗರಾಗಬಲ್ಲರು: 'ಅಕ್ಕ ಕೇಳವ್ವ, ಆನೊಂದು ಕನಸು ಕಂಡೆ!'

ಈ ನವೀನ ದೇವಾಲಯದ ಆಕರ್ಷಣಾವರಣವನ್ನು ನೀವು ಒಮ್ಮೆ ಪ್ರವೇಶಿಸಿದಿರೋ — ಇಲ್ಲ, ಅತ್ತ ಸುಳಿದರೆ ಅದೇ ನಿಮ್ಮನ್ನು ತನ್ನೆಡೆಗೆ ಬರಸೆಳೆಯುತ್ತದೆ — ಆ ಗಳಿಗೆ ನಿಮ್ಮ ಲಕ್ಷ್ಯವನ್ನು ಕಡ್ಡಾಯವಾಗಿ ತಡೆಹಿಡಿವ ಮುಖ್ಯ ಅಂಶಗಳಿವು: ಅಲ್ಲಿಯ ಸಾರ್ವತ್ರಿಕ ಸುಚಿತ್ವ, ಬೆಳ್ಪು, [illegible] ಮತ್ತು ಶಾಂತಿ; ಹೆಚ್ಚಾಗಿ ಬಡವರೇ ಆಗಿದ್ದು ಗ್ರಾಮೀಣ ಪ್ರದೇಶಗಳಿಂದ ಬರುವ ಹೊರರೋಗಿಗಳಲ್ಲಿ ಕೂಡ ಪ್ರಕಟವಾಗುವ ಶಿಸ್ತು, ಕ್ರಮಪಾಲನೆ ಮತ್ತು ಉಲ್ಲಾಸ (ಧಾರವಾಡ ಪೇಟೆಯಿಂದ ಧವಳನಗರದ ದೂರಕ್ಕೆ ಇವರನ್ನು ಒಯ್ಯಲು ಮತ್ತು ಇಲ್ಲಿಂದ ಹಿಂದೆ ಕಳಿಸಲು ಕಾಲೇಜ ಅದ್ಭುತ ವಿಶೇಷ ಬಸ್ ಸಂಚಾರ ಸೌಕರ್ಯ ಏರ್ಪಡಿಸಿದೆ); ಸದಾ ಹಸನ್ಮುಖದಿಂದ ನಿಮ್ಮನ್ನು ಸ್ವಾಗತಿಸಿ ಯುಕ್ತ ಮಾರ್ಗದರ್ಶನ ನೀಡಲು ಸಿದ್ಧರಾಗಿರುವ ಸುಚಿ ಕಾರ್ಯಕರ್ತರ ಸೇವೆ; ವಿದ್ಯಾರ್ಥಿ-ವಿದ್ಯಾರ್ಥಿನಿಯರ ಅಂತೆಯೇ ಅಧ್ಯಾಪಕ ವರ್ಗದವರ ಲವಲವಿಕೆ; ಮತ್ತು ಸರ್ವತ್ರ ಎದ್ದು ಕಾಣುವ ಪ್ರಾಚೀನಾರ್ವಾಚೀನ

ಸೌಂದರ್ಯ ಸಮ್ಮಿಲನ

ಇದು ದೇವಾಲಯವೇ? ಕರ್ಮಾಗಾರವೇ? ವಿದ್ಯಾಕೇಂದ್ರವೇ? ಐತಿಹಾಸಿಕ ಶಿಲ್ಪವೈಭವವೇ? ಪ್ರಯೋಗಮಂದಿರವೇ? ವಸ್ತುಪ್ರದರ್ಶನವೇ? ಎಲ್ಲವೂ ಹೌದು— ಭಾವಾರ್ಥದಲ್ಲಿ. ಇಲ್ಲಿ ಉಪಯುಕ್ತತೆ (utility) ಮತ್ತು ಸೌಂದರ್ಯ (beauty) ಸಂಗಮಿಸಿವೆ. ಕಾಲೇಜ್ ಎಂದರೆ ತಾಂತ್ರಿಕ ಪಾಠವಲ್ಲ, ಪುಸ್ತಕಗಳ ದಾಸ್ತಾನುಮನೆಯಲ್ಲ, ಸಾಧನಸಲಕರಣೆಗಳ ಸಾಹಸಗಳ ತೆಂಕೆಯಲ್ಲ, ಅಥವಾ ವ್ಯಕ್ತಿಗಳ ಮೇಳವಲ್ಲ. ಹಾಗಾದರೆ ಅದು ಹೇಗಿರಬೇಕು? ಈ ಪ್ರಶ್ನೆಗೆ ಉತ್ತರ ಹುಡುಕುವ ದಿಶೆಯಲ್ಲಿ ಮಾಡಿರುವ ಅತ್ಯಾಧುನಿಕ ಪ್ರಯತ್ನವೇ ಎಸ್‌ಡಿಎಮ್-ದಂತವೈದ್ಯಕೀಯ ಕಾಲೇಜ್.

ಉಪಯುಕ್ತತೆ ಸರಿ, ಸೌಂದರ್ಯ? ಮಾನವನಿರ್ಮಿತಿ ಯಾವುದೇ ಎಲ್ಲೇ ಎಂದೇ ಇರಲಿ, ಅದು ಅಂತಿಮವಾಗಿ ಪರಿಪೂರ್ಣ ಕಲಾಕೃತಿಯಾಗಿ ಸೌಂದರ್ಯದಲ್ಲಿ ಸಿದ್ಧಿ ಕಾಣಬೇಕು. ಐನ್‌ಸ್ಟೈನ್ ಪದೇ ಪದೇ ತಮಗೆ ಹಾಕಿಕೊಳ್ಳುತ್ತಿದ್ದ ಪ್ರಶ್ನೆ ಇದು: "ಈ ಭೌತಕಾಂಶ, ಈ ಗಣಿತ ಸೂತ್ರ, ಈ ತೀರ್ಮಾನ 'ಸುಂದರ'ವಾಗಿದೆಯೇ?" ಸುಂದರವಾಗಿಲ್ಲದಿದ್ದರೆ ಇದು ನಿಸರ್ಗದ ಅಧೋರಚನೆಯ (infrastructure) ಅಥವಾ ತಳಸೂತ್ರದ (paradigm) ಯಥಾಪ್ರತಿಬಿಂಬವಲ್ಲ, ಇದರಲ್ಲೇನೋ ಐಬು ನುಸುಳಿಯೇ ನುಸುಳಿದೆ, ಈ ಐಬನ್ನು ಶೋಧಿಸಿ ನಿವಾರಿಸುವ ತನಕ ಈ ಭೌತಕಾಂಶ, ಸೂತ್ರ ಅಥವಾ ತೀರ್ಮಾನ ದೋಷಪೂರಿತ, ಆದ್ದರಿಂದ ಅಪೂರ್ಣ ಎಂದೇ ಅವರ ನಿಲುವು. 'ಸೌಂದರ್ಯ' ಕುರಿತಂತೆ ಈ ಪಕ್ಷಪಾತವೇಕೆ?

ಗಣಿತದ್ರಷ್ಟಾರ ಆನ್ರಿ ಪ್ವಾನ್‌ಕ್ವಾರೆ (೧೮೫೪-೧೯೧೨) ಬರೆದಿದ್ದಾರೆ:

"ನಿಸರ್ಗ ಪ್ರಯೋಜನಕಾರಿ ಎಂಬುದಕ್ಕಾಗಿ ವಿಜ್ಞಾನಿ ಅದನ್ನು ಅಧ್ಯಯನಗೈಯುವುದಿಲ್ಲ; ಅವನು ಅದನ್ನು ಅಧ್ಯಯನಗೈಯುವುದು ಅದರಲ್ಲಿ ಅವನಿಗೆ ಆನಂದ ಲಭಿಸುವುದರಿಂದ; ಅದರಲ್ಲಿ ಅವನಿಗೆ ಆನಂದ ಲಭಿಸುವುದು ಅದು ಸುಂದರವಾಗಿರುವುದರಿಂದ. ನಿಸರ್ಗ ಸುಂದರವಾಗಿರದಿದ್ದರೆ ಅದನ್ನು ತಿಳಿಯುವುದು ನಿಷ್ಪ್ರಯೋಜಕವಾಗಿರುತ್ತಿತ್ತು; ನಿಸರ್ಗವನ್ನು ತಿಳಿಯುವುದು ನಿಷ್ಪ್ರಯೋಜಕವಾಗಿದ್ದರೆ ಬದುಕು ಅರ್ಥಹೀನವಾಗಿರುತ್ತಿತ್ತು. ಇಂದ್ರಿಯಗಳಿಗೆ ಎದ್ದು ಕಾಣುವ ಸೌಂದರ್ಯವನ್ನು — ಅಂದರೆ ಗುಣಗಳ ಮತ್ತು ತೋರಿಕೆಗಳ ಬಾಹ್ಯಸೌಂದರ್ಯವನ್ನು — ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲವೆಂಬುದು ಸ್ಪಷ್ಟ; ಆ ಸೌಂದರ್ಯವನ್ನು ಕಡೆಗಣಿಸುವೆನೆಂದಲ್ಲ, ಅದೆಂದೂ ನನ್ನ ಉದ್ದೇಶ ಅಲ್ಲ; ಆದರೆ ಅದಕ್ಕೆ ವಿಜ್ಞಾನದ ಜೊತೆ ಏನೂ ವ್ಯವಹಾರವಿಲ್ಲ; ಬದಲು ನನ್ನ ಮನಸ್ಸಿನಲ್ಲಿರುವುದು ಭಾಗಗಳ ಸುಸಂಗತ ಮೇಳನದಿಂದ ಲಭಿಸುವ ಮತ್ತು ಶುದ್ಧ ಪ್ರತಿಭೆ ಗ್ರಹಿಸುವ ಆ ಗಭೀರ ಸೌಂದರ್ಯ."

'ಭಾಗಗಳ ಸುಸಂಗತ ಮೇಳನ'— ಏನು ಹಾಗೆಂದರೆ? ನಿಸರ್ಗದ ರುದ್ರರಮಣೀಯತೆಯಲ್ಲಿ ಹೇಗೋ ಕಲೆಯ ದಿವ್ಯ ಮಾಧುರ್ಯದಲ್ಲಿ

ಹಾಗೆ ಇದನ್ನು ಗುರುತಿಸಿ ಆನಂದಿಸಬಹುದು.

ಇನ್ನು ಈ ಕಾಲೇಜಿನ ಒಳಹೊಕ್ಕು ಪ್ರಾಂಶುಪಾಲ ಸಿ. ಭಾಸ್ಕರರಾಯರನ್ನು ಭೇಟಿಮಾಡಿ ಆತ್ಮೀಯ ವಿಚಾರವಿನಿಮಯ ನಡೆಸಿದಾಗ, ಆಶ್ಚರ್ಯ, ತತ್ಪೂರ್ವ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೂಡಿದ ಮಧುರಾನುಭವವೇ ಪುನರಾವರ್ತಿಸುತ್ತದೆ. ಬಾಹ್ಯರಚನೆ ವಿನ್ಯಾಸ ಉದ್ದೇಶ, ಮತ್ತು ಆಂತರಿಕ ಸೌಕರ್ಯ ಸಲಕರಣೆ ನಿರ್ವಹಣೆ ಬೇರೆ ಬೇರೆ — ಅದು ಎಂಜಿನಿಯರಿಂಗ್, ಭೌತ ನಿರ್ಜೀವ ಜಗತ್ತಿಗೆ ಸೇರಿದ್ದು; ಇದು ದಂತವೈದ್ಯಕೀಯ, ಜೀವಂತ ವ್ಯಕ್ತಿಯ ಹಲ್ಲಿಗೆ ಸಂಬಂಧಿಸಿದ್ದು. ಆದರೆ ಅಂತಸ್ಸತ್ವ ಒಂದೇ, ಅಂತರಗಂಗೆ ಅದೇ — ವಿದ್ಯಾರ್ಥಿಗಳ ಕ್ಷೇಮಾಭ್ಯುದಯ, ಜ್ಞಾನವರ್ಧನೆ ಮತ್ತು ನೈತಿಕೋತ್ಕರ್ಷ. ಅದು ಸಂಕ್ಷಿಪ್ತ ಭಾರತ, ಇದು ಸಂಕ್ಷಿಪ್ತ ಪ್ರಪಂಚ.

ಈ ಅಂತಸ್ತಿನ — ನುರಿತ ಅಧ್ಯಾಪಕರು, ಆಧುನಿಕ ಗ್ರಂಥಾಲಯ, ಶಸ್ತ್ರ ಸಲಕರಣೆಗಳು, ಸುಸಜ್ಜಿತ ಪ್ರಯೋಗಮಂದಿರ ಮತ್ತು ಕಾರ್ಯಾಗಾರ, ಅಧುನಾತನ ತಂತ್ರವಿದ್ಯೆಯ ಬಳಕೆ, ಇತರ ಸೌಕರ್ಯಗಳು — ಮತ್ತು ಈ ಗುಣಮಟ್ಟದ ದಂತವೈದ್ಯಕೀಯ ಕಾಲೇಜ್ ಭಾರತದಲ್ಲಿ ಇನ್ನೊಂದಿಲ್ಲವೆಂಬುದು ಇಲ್ಲಿಗೆ ವಿಶೇಷೋಪನ್ಯಾಸಗಳನ್ನು ನೀಡಲು ಅಥವಾ ಅತ್ಯಾಧುನಿಕ ಮತ್ತು ನವೀನ ದಂತತಂತ್ರವಿದ್ಯಾಸೂಕ್ಷ್ಮಗಳನ್ನು ಬೋಧಿಸಲು ಆಹ್ವಾನಿತರಾಗಿ ಬರುವ ದೇಶ ವಿದೇಶಗಳ ತಜ್ಞರ ಅಭಿಪ್ರಾಯ. ಲಿಬಿಯಾದಲ್ಲಿ ಸಾಕಷ್ಟು ಕಾಲ ಸೇವೆಸಲ್ಲಿಸಿ, ಪ್ರಪಂಚದ ಶ್ರೇಷ್ಠ ದಂತವೈದ್ಯಕೀಯ ಸಂಸ್ಥೆಗಳನ್ನು ಸಂದರ್ಶಿಸಿ, ದೇಶಪ್ರೇಮದಿಂದ ಉದ್ದೀಪಿತರಾಗಿ ಈ ಕಾಲೇಜಿಗೆ ಬಂದು ಇದನ್ನು ಅಭಿವರ್ಧಿಸುತ್ತಿರುವ ಭಾಸ್ಕರರಾಯರು ಮತ್ತು ಇವರ ಸಹೋದ್ಯೋಗಿಗಳು ಹೇಳುವುದೂ ಇದೇ ಮಾತನ್ನು: "ಯಾವ ಕಾರಣಕ್ಕೂ ನಾವು ಭಾರತೀಯರು ಇತರರಿಗೆ ಎರಡನೆಯವರಾಗಬೇಕಾಗಿಲ್ಲ."

ಇದು ಕೇವಲ ಭಾವುಕತೆಯ ಕ್ಷಣಿಕ ಉದ್ರೇಕವಲ್ಲ. ಏಕೆಂದರೆ ವಿದೇಶೀ ತಜ್ಞರೊಬ್ಬರು ಖುದ್ದು ನನ್ನಲ್ಲಿ ವ್ಯಕ್ತಪಡಿಸಿದ್ದು ಇದೇ ಭಾವನೆಯನ್ನು. ಆ ಮುಂಜಾನೆ ಅಕಸ್ಮಾತ್ತಾಗಿ ಅವರ ಭೇಟಿ ಮತ್ತು ಪರಿಚಯ ಆದುವು: ಸಿ.ಡಿ. ಫ್ರಾಂಕ್ಲಿನ್, ಇಂಗ್ಲೆಂಡಿನ ಶೆಫೀಲ್ಡ್‌ನಲ್ಲಿ ಮುಖರೋಗನಿದಾನವೈದ್ಯ (oral pathologist). ಈ ಕ್ಷೇತ್ರದಲ್ಲಿ ಇವರು ಅಂತಾರಾಷ್ಟ್ರೀಯ ಖ್ಯಾತನಾಮರು. ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ನಡೆಸುವ ಎಫ್‌ಡಿಎಸ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾದ ದಂತವೈದ್ಯಕೀಯಪದವೀಧರರಿಗೆ ವಿಶೇಷ ತರಬೇತಿ ಕೊಡಲೋಸುಗ ಇಲ್ಲಿಗೆ ಆಹ್ವಾನಿತರಾಗಿ ಬಂದಿದ್ದರು. (ಶಸ್ತ್ರವೈದ್ಯಕೀಯದಲ್ಲಿ ಎಫ್‌ಆರ್‌ಸಿಎಸ್‌ನಂತೆ ದಂತವೈದ್ಯಕೀಯದಲ್ಲಿ ಎಫ್‌ಡಿಎಸ್.)

ಪ್ರಶ್ನೆ: "ಹೇಗಿದೆ ನಮ್ಮ ಈ ಅಭ್ಯರ್ಥಿಗಳ ಜ್ಞಾನದಾಹ ಮತ್ತು ಸ್ವಾಂಗೀಕರಣದರ?"

ಅವರು ವಿಶಿಷ್ಟ ಬ್ರಿಟಿಷ್ ಧಾಟಿಯಲ್ಲಿ ಹೆಗಲತ್ತ ಗೋಣಾಡಿಸಿ

ಕೃತಜ್ಞತಾಸಹಿತ ಉತ್ಸಾಹದಿಂದ ನುಡಿದರು: "ಪ್ರಪಂಚದ ಯಾವುದೇ ಮುಂಚೂಣಿ ವಿಶ್ವವಿದ್ಯಾಲಯದಲ್ಲಿ ನಾನು ನಿರೀಕ್ಷಿಸಬಹುದಾದಷ್ಟು! ತುಂಬ ಚುಟಿ ವಿದ್ಯಾರ್ಥಿಗಳವರು."

"ಕಾರಣವೇನು?"

"ಪರಿಸರ, ಶಿಕ್ಷಣ, ಸೌಕರ್ಯ ಮತ್ತು ಸ್ಪರ್ಧೆ ಒದಗಿದರೆ ಯಾರಿಂದ ಯಾವುದು ತಾನೇ ಅಸಾಧ್ಯ?"

ಭಾರತದಲ್ಲಿ ಇದೊಂದೇ ಇಂಥ ಕೇಂದ್ರ (ವೃತ್ತಿಪರ ಉನ್ನತ ತರಬೇತಿ) ಎಂದು ತಿಳಿದಾಗ ಈ ಕಾಲೇಜಿನ ಬಗ್ಗೆ ಅಭಿಮಾನವೆನ್ನಿಸಿತು. ಆದರೆ ದೇಶಾದ್ಯಂತ ಹಬ್ಬಿರುವ ಅಸಂಖ್ಯ ಧನೋತ್ಪಾದಕ ಶೈಕ್ಷಣಿಕ ಕಾರ್ಖಾನೆಗಳ ಹಾಗೂ ಅವುಗಳಲ್ಲಿಯ ವಿದ್ಯಾರ್ಥಿಗಳ ಬಗ್ಗೆ ವಿಷಾದವಾಯಿತು. ಒಂದೇ ಬಳ್ಳಿಯ ಸೋರೆಕಾಯಿಗಳಲ್ಲಿ ಕೇವಲ ಕೆಲವು ತಂಬೂರಿ ಬುರುಡೆಗಳಾಗಿ ಉಳಿದ ಹೆಚ್ಚಿನವು ಕೊಂತದ ಗಡಿಗೆಗಳಾಗುವುದು ಸ್ವತಃ ಬಳ್ಳಿ ಅಥವಾ ಸೋರೆಕಾಯಿಗಳು ನಿರ್ವಹಿಸುವ ಪಾತ್ರಗಳಿಂದಲ್ಲವಷ್ಟೆ.

ಮುಂದೆ ನಡೆದ ಖಾಸಗಿ ಆತ್ಮೀಯ ಸಂಭಾಷಣೆಯಲ್ಲಿ ಅವರೊಂದು ಮುಖ್ಯ ಸಂಗತಿಯನ್ನು ನನ್ನಲ್ಲಿ ಪ್ರಸ್ತಾವಿಸಿದರು: "ಒಂದೊಂದು ರಾಷ್ಟ್ರದ ಮನೋಭಾವ ಒಂದೊಂದು. ಆತ್ಮಾಭಿಮಾನವಿರಲೇಬೇಕು. ಕಾರ್ಯಪ್ರವರ್ತನೆಗೆ ಹುಮ್ಮಸ್ಸು ಕೊಡುವ ದ್ರವ್ಯವಿದು. ಆದರೆ ಅದು ದುರಭಿಮಾನವೆಂಬ ರಾಷ್ಟ್ರೀಯ ವ್ಯಾಧಿ ಆಗಬಾರದು. ಅದೇ ವೇಳೆ ನಿರಭಿಮಾನವಾಗಿ ಆತ್ಮನಿಂದನೆ, ದೇಶಭರ್ತ್ಸನೆ ಮುಂತಾದ ಮಾನಸಿಕ ವಿಕೃತಿಗಳೂ ಆಗಬಾರದು. 'ಕಾರಣವೇನು?' ಎಂದು ನೀವು ಪ್ರಶ್ನಿಸಿದಾಗ ನಿಮ್ಮ ದೇಶೀಯರ ಬಗ್ಗೆ ನಿಮಗೆ ವಿಶೇಷ ಭರವಸೆ ಇಲ್ಲವೋ ಎಂಬ ಭಾವನೆ ಸ್ಫುರಿಸಿತು ನನಗೆ. ನನ್ನ ತರ್ಕ ತಪ್ಪಾದರೆ ಕ್ಷಮಿಸಿ."

"ಈ ಸೂಚಕ ಶುಭ್ರ ಸತ್ಯವನ್ನು ನೀವು ಇಷ್ಟೊಂದು ನಯನಾಜೂಕು ಸಹಿತ ವಿವರಿಸಬೇಕಾಗಿಲ್ಲ. ವಿದೇಶೀ ಛಾಪು ಪಡೆದ ಹೊರತು ಸ್ವದೇಶೀ ಮಾಲು ಗ್ರಾಹ್ಯತೆ ಗಳಿಸದು — ಇದು ರಾಷ್ಟ್ರದಲ್ಲಿ ಪ್ರಚಲಿತವಿರುವ ಸಾಮಾನ್ಯ ಪ್ರಜ್ಞೆ. ನಾನು ಈ ಅಭಿಪ್ರಾಯವನ್ನು ವಿರೋಧಿಸುತ್ತೇನೆ. ಏಕೆಂದರೆ ಪ್ರತಿಭೆ, ಸಾಹಸಪ್ರಜ್ಞೆ, ಸೃಜನಶೀಲತೆ, ಅನ್ವೇಷಣಾ ಕುತೂಹಲ, ಧಾರಣಾ ಸಾಮರ್ಥ್ಯ ಮುಂತಾದ ಜೀವಪೋಷಕ ಧಾತುಗಳ ವಿತರಣೆಯಲ್ಲಿ ನಿಸರ್ಗವೆಂದೂ ದೇಶ, ಕಾಲ, ಲಿಂಗ, ಜನಾಂಗ, ಜಾತಿ, ಅಂತಸ್ತು ಮುಂತಾದ ವ್ಯತ್ಯಾಸಗಳನ್ನು ಮಾಡುವುದೇ ಇಲ್ಲ. ನಮ್ಮ ದೇಶದ ನೈಜ ಸಂಸ್ಕೃತಿ — ವೇದೋಪನಿಷತ್ತುಗಳಾಗಲೀ ರಾಮಾಯಣ ಮಹಾಭಾರತಗಳಾಗಲೀ ಇತರ ಅಭಿಜಾತ ಸಾಹಿತ್ಯ ಪ್ರಕಾರಗಳಾಗಲೀ — ಈ ತತ್ತ್ವವನ್ನೇ ಪುರಸ್ಕರಿಸುತ್ತವೆ. ವ್ಯಾಪಕವಾಗಿ, ಪ್ರಪಂಚದ ಎಲ್ಲ ಕಾಲಗಳ ಎಲ್ಲ ದೇಶಗಳ ಸಾಧುಸಂತರೂ ವಿಜ್ಞಾನಿ ದಾರ್ಶನಿಕರೂ ಕಲಾಕೋವಿದರೂ ಸಾರಿರುವುದು ಇದನ್ನೇ. ಆದರೆ ಸ್ವಾರ್ಥ ರಾಜಕೀಯ ಬಲಗಳು ಮೇಲ್ಗೈಯಾದಾಗ ಇವೆಲ್ಲ ಮೌಲ್ಯಗಳೂ ಗ್ರಂಥಬಂಧಿತವಾಗುತ್ತವೆ, ಕಾರ್ಯಶೀಲವಾಗುವುದಿಲ್ಲ. ನಮ್ಮ

ಪ್ರಿಯದೇಶ ಇಂಥ ಗ್ರಹಗ್ರಸ್ತವಾಗಿದೆಯೋ ಈಗ ಎಂದು ನನಗನ್ನಿಸುತ್ತದೆ.”

ಅವರೆಂದರು: “ಈ ಕಾಲೇಜಿನಲ್ಲಿ ಕೆಲಸ ಮಾಡಿರುವ ಮತ್ತು ಇಲ್ಲಿಯ ವಿದ್ಯಾರ್ಥಿಗಳ ಜೊತೆ ಒಡನಾಡಿರುವ ನನ್ನ ಅನುಭವ ಹಾಗಿಲ್ಲ.”

ಹೆಗ್ಗಡೆಯವರು ಹೇಳುತ್ತಾರೆ: “ನಮ್ಮ ರಾಜ್ಯದಲ್ಲೇ ಇದೊಂದು ಉತ್ತಮ ದಂತವೈದ್ಯಕೀಯ ಕಾಲೇಜೆಂದು ಪ್ರಸಿದ್ಧಿಗಳಿಸಿದೆ. ಇದರಲ್ಲಿ ಒಳರೋಗಿಗಳಾಗಿ ಪ್ರತಿ ತಿಂಗಳೂ ೪೫೦ರಿಂದ ೫೦೦ ಮಂದಿ ಚಿಕಿತ್ಸೆ ಮತ್ತು ಶುಶ್ರೂಷೆ ಪಡೆಯುತ್ತಾರೆ. ಇನ್ನು ಹೊರರೋಗಿಗಳು? ದಿನವಹಿ ೨೦೦ರಿಂದ ೨೫೦ ಮಂದಿ. ಜನರಿಗೆ ಈ ಸಂಸ್ಥೆಯ ಮೇಲಿರುವ ಭರವಸೆ ಮತ್ತು ಇಲ್ಲಿಯ ಚಿಕಿತ್ಸೆಯಿಂದ ಲಭಿಸುವ ಸಾಂತ್ವನ ಗಮನಿಸುವಾಗ ಕೃತಾರ್ಥಭಾವ ಮೂಡುತ್ತದೆ.” [೬]

ವಾಸ್ತವವಾಗಿ ಈ ಜನಾನುರಾಗ, ಗೌರವ ಮತ್ತು ಭರವಸೆ ಎಸ್‌ಡಿಎಮ್-ವ್ಯವಸ್ಥಾಪನೆಯ ಆಧಾರಶಕ್ತಿ ಎಂಬ ಸತ್ಯ ಪ್ರತಿಯೊಂದು ಸಂಸ್ಥೆಯಲ್ಲಿಯೂ ಪ್ರಕಟವಾಗುತ್ತದೆ.

ನಡೆಯೊಳಗೆ ನುಡಿ ತುಂಬಿ
ನುಡಿಯೊಳಗೆ ನಡೆ ತುಂಬಿ
ನಡೆ ನುಡಿ ಎರಡನೂ ಸಂಪೂರ್ಣ ತುಂಬಿ
ಅಂಗವ ಕೂಡಬಲ್ಲವನೇ ಶರಣ ನೋಡಾ ಅಖಂಡೇಶ್ವರಾ

## ಕತ್ತಲೆಯ ಮನೆಗೆ ಮಣಿದೀಪ

ಸಾಂಪ್ರದಾಯಿಕ ಬೋಧನೆ, ಪದವಿ ಕಾಲೇಜುಗಳು, ವೃತ್ತಿಪರ ಸಂಸ್ಥೆಗಳು, ವಿಶೇಷ ತರಬೇತಿ ಕೇಂದ್ರಗಳು ಮುಂತಾದ ಸೂಕ್ಷ್ಮ ಮತ್ತು ನಾಜೂಕು ಶಿಕ್ಷಣ ಕ್ರಮಗಳು, ಆದರ್ಶಗಳು, ಉತ್ಕೃಷ್ಟತೆ ಎಲ್ಲವೂ ಸರಿ. ದೇಶದ ಸಂಪದಭಿವೃದ್ಧಿಯಲ್ಲಿ ಇವುಗಳ ಪಾತ್ರ ಮಹತ್ತ್ವಪೂರ್ಣವಾದದ್ದು ಎಂಬುದೂ ಕೂಡ ಸರಿ. ಆದರೆ —

ಪದವೀಧರರಾಗದೆ ಜೀವನನಿರ್ವಹಣೆ ಅಸಾಧ್ಯವೇ? ಪದವೀಧರರೆಲ್ಲರೂ ಸುಖಜೀವನಲೀನರಾಗಿರುವರೇ? ವಾಸ್ತವವಾಗಿ ‘ಜೀವನ ನಿರ್ವಹಣೆ’ ಎಂದರೇನು?

ಮನುಷ್ಯನಿಗೆ ಬದುಕಿರಲು ಮೂರು ಪ್ರಾಥಮಿಕಾವಶ್ಯಕತೆಗಳಿವೆ: ಅಶನ, ವಸನ, ವಸತಿ. ಇವುಗಳ ಪೂರೈಕೆಗೆ ಆತ ಒಂದು ವೃತ್ತಿ ಹಿಡಿಯುತ್ತಾನೆ— ದೊರೆತರೆ. ವೃತ್ತಿ ನಡೆಸಲು ಕುಶಲತೆ ಅಗತ್ಯ. ಇದನ್ನು ಆತ ಶಿಕ್ಷಣ, ತರಬೇತಿ, ಪ್ರಯೋಗ, ಸಹಭಾಗಿತ್ವ ಮುಂತಾದ ನೂರೆಂಟು ವಿವಿಧ ವಿಧಾನಗಳ ಮೂಲಕ ಸಂಪಾದಿಸುತ್ತಾನೆ. ಸಾಂಪ್ರದಾಯಿಕ ಶಿಕ್ಷಣ ಈ ಪೈಕಿ ಒಂದು ಮಾತ್ರ. ಆದರೆ ಇದು ಅತ್ಯಂತ ಪ್ರಬಲವಾದದ್ದು, ವ್ಯವಸ್ಥಿತವಾದದ್ದು, ಪ್ರಭಾವಶಾಲಿಯಾದದ್ದು ಮತ್ತು ವ್ಯಾಪಕವಾದದ್ದು, ಹಾಗೂ ಈ ಕಾರಣಗಳಿಂದಾಗಿ ಅಧಿಕ ಲಾಭಪ್ರದಾಯಕವಾದದ್ದು.

ಈ ಶಿಕ್ಷಣ ಪಡೆಯಲಾಗದ ಬಹುಸಂಖ್ಯಾತರು ದೇಶಾದ್ಯಂತ ಹರಡಿ ಹೋಗಿದ್ದಾರೆ. ಕುಶಲತೆ? ಎಲ್ಲಿ ಹೇಗೆ ಸಂಪಾದಿಸುವುದು? ಕೂಲಿ,

ಬಿದಿಗೆಲಸ, ಮನೆಗೆಲಸ – ಬಹುತೇಕ ತಿರುಪೆ ಇಂತಹ ಬದುಕು ಅವಲಂಬಿಸಿ ಅಹನ್ಯಹನಿ ಕಾಲಕ್ಷೇಪ ಮಾಡುತ್ತಿರುವ ಈ ಅನಾಥ ಮೂಕ ಪ್ರಜೆಗಳು (ಎಡ ಹೆಬ್ಬೆಟ್ಟು ಗುರುತಿನವರು) ಪ್ರಾಮಾಣಿಕ ನಾಗರಿಕ ಜೀವನ ನಡೆಸುವ ಅವಕಾಶದಿಂದ ವಂಚಿತರಾಗುವುದು ನ್ಯಾಯವೇ? ಸಮಾಜದ ಆರೋಗ್ಯಕ್ಕೆ ಇದು ತರವೇ? ಇವರಲ್ಲಿ ನಿಸರ್ಗ ಗರ್ಭಸಿಟ್ಟಿರುವ ಪ್ರತಿಭಾಬೀಜಗಳಿಗೆ ಅಂಕುರಿಸಲು ಯೋಗ್ಯ ಕ್ಷೇತ್ರ ಒದಗಿದ್ದರೆ ಇವರು ಕೂಡ ಸುಧಾರಿಸಿ ಉಪಯುಕ್ತ ಜೀವನ ನಡೆಸಲಾರರೇ? ರಾಷ್ಟ್ರೀಯ ಸಂಪತ್ತನ್ನು ವೃದ್ಧಿಸಲಾರರೇ?

'ರಾಜ್ಯಶಾಸ್ತ್ರ'ದಲ್ಲಿ ಡಿವಿಜಿಯವರು ಬರೆದಿದ್ದಾರೆ: "ರಾಜ್ಯವೆಂಬ ವಸ್ತುವಿನಲ್ಲಿ ಎರಡು ಅಂಶಗಳು ಸೇರಿಕೊಂಡಿವೆಯಲ್ಲವೆ? ಒಂದು ಸರಕಾರ, ಇನ್ನೊಂದು ಪ್ರಜೆ; ಅಥವಾ ಒಂದು ಸಮಷ್ಟಿ, ಇನ್ನೊಂದು ವ್ಯಷ್ಟಿ; ಹಾಗೆಯೇ ಒಂದು ವಿಧಾಯಕ, ಇನ್ನೊಂದು ವಿಧೇಯ. ಈ ಎರಡಂಶಗಳಲ್ಲಿ ಇದರಿಂದ ಅದಕ್ಕೂ ಅದರಿಂದ ಇದಕ್ಕೂ ಸಲ್ಲಬೇಕಾದ ಪರಸ್ಪರ ಋಣಾಂಶಗಳುಂಟು. ಅವನ್ನು ಪ್ರಾಪ್ತವ್ಯ (right) ಮತ್ತು ಕರ್ತವ್ಯ (duty) ಎಂಬ ಎರಡು ಶಬ್ದಗಳಿಂದ ನೋಡಬಹುದು. 'ಪ್ರಾಪ್ತವ್ಯ' ಎಂದರೆ ನ್ಯಾಯವಾಗಿ ಪಡೆಯಬಹುದಾದದ್ದು – ಹಕ್ಕು; ಒಬ್ಬ ಮನುಷ್ಯನಿಗೆ ಯಾವುದು ನ್ಯಾಯವಾಗಿ ಸಲ್ಲತಕ್ಕದ್ದೋ ಅದು – ನ್ಯಾಯಲಭ್ಯ. 'ಕರ್ತವ್ಯ' ಎಂದರೆ ನ್ಯಾಯವಾಗಿ ಮಾಡಬೇಕಾದದ್ದು – ಬಾಧ್ಯತೆ; ಯಾವುದನ್ನು ಸಲ್ಲಿಸದಿದ್ದರೆ ನ್ಯಾಯಕ್ಕೆ ಲೋಪವೋ ಅದು – ನ್ಯಾಯದೇಯ."

ಭಾರತವೆಂಬ 'ಕ್ರಿಯಾಶೀಲ ಅರಾಜಕತೆ'ಯಲ್ಲಿ (functioning anarchy – ಭಾರತದಲ್ಲಿ ಈ ಹಿಂದೆ ಅಮೆರಿಕದ ರಾಯಭಾರಿಯಾಗಿದ್ದ ಈ ದೇಶದ ಆಶೋತ್ತರಗಳ ಬಗ್ಗೆ ಅಪಾರ ಅರಿವು ಮತ್ತು ಅನುಕಂಪವಿದ್ದ ಇತಿಹಾಸವಿದ ಜಾನ್ ಗಾಲ್‌ಬ್ರೈತ್ ನೀಡಿದ 'ಬಿರುದು') ಪ್ರಜೆಗಳ ಪ್ರಾಪ್ತವ್ಯ ಕರ್ತವ್ಯಗಳು (ಅಥವಾ ಹಕ್ಕು ಬಾಧ್ಯತೆಗಳು) ಸಂವಿಧಾನ, ಘನವ್ಯಾಖ್ಯಾನ ಗ್ರಂಥಗಳು, ಬೌದ್ಧಿಕ ಚರ್ಚಾಕೂಟಗಳು ಮುಂತಾದ ಕೃತಕ ಕೋಟೆಗಳನ್ನು ಉತ್ತರಿಸಿ ನೆಲಕ್ಕಿಳಿದು ಬಡಜನರ ನಿತ್ಯ ಗೋಳಿನಲ್ಲಿ ಅರ್ಥಪಡೆದದ್ದುಂಟೇ? ಪಡೆಯುವುದುಂಟೇ? ಈ ಕೊರತೆಯನ್ನು ಸ್ವಯಂಸೇವಾಮಂಡಳಿಗಳು, ಸಾರ್ವಜನಿಕ ನ್ಯಾಸಗಳು, ದಾನನಿರತ ಸಂಸ್ಥೆಗಳು ಮುಂತಾದವು ತುಂಬಬೇಕಾಗುತ್ತದೆ.

ಜನರ ಈ ಜೀವಂತ ಮತ್ತು ಜ್ವಲಂತ ಸಮಸ್ಯೆಗಳಿಗೆ ವೀರೇಂದ್ರ ಹೆಗ್ಗಡೆಯವರು ಸ್ಪಂದಿಸುವ ಪರಿ: "ನಾನಾ ಕಾರಣಗಳಿಗಾಗಿ ಜನ ಕ್ಷೇತ್ರಕ್ಕೆ ದಾನಯಾಚಿಸಲು ಬರುತ್ತಾರೆ. ಕೇವಲ ಹೊಟ್ಟೆಪಾಡಿಗಾಗಿ ದುಡ್ಡು ಬೇಡಲು ಬರುವವರ ಸಂಖ್ಯೆ ಕಡಿಮೆ ಏನೂ ಅಲ್ಲ. ನೇರ ಇಲ್ಲಿಗೆ ಬರದಿರುವ ಮತ್ತು ಬರಲಾಗದಿರುವ ಅಸಂಖ್ಯ ಬಡವರು ದೇಶಾದ್ಯಂತ ನಗರ, ಪಟ್ಟಣ, ಹಳ್ಳಿ, ಕೊಂಪೆ ಎಂಬ ವ್ಯತ್ಯಾಸಗಳಿಲ್ಲದೆ ಹರಡಿಹೋಗಿದ್ದಾರೆ. ಈ ದಾರುಣ ದಾರಿದ್ರ್ಯ

ನಿವಾರಣೆಗೆ ಮದ್ದೆಂತು? ಸಮೃದ್ಧ ನಿಸರ್ಗದ ನಡುವೆ ಏಕೆ ಈ ಅನಾಥ ಪ್ರಜ್ಞೆ? ಬೇಡಿ ಬಂದವರಿಗೆ, ಅಥವಾ ನಾವೇ ಅರಸಿ ಹೋಗಿ ಅಂಥವರಿಗೆ, ನಾಲ್ಕು ಕಾಸು ನೀಡಿದರೆ ಏನೂ ಮಾಡಿದಹಾಗಾಗಲ್ಲ — ಪ್ರಾಯಶಃ ಸೋಮಾರಿತನಕ್ಕೆ ಬೆಂಬಲ ನೀಡಿದ ಹಾಗೆಯೂ ಆದೀತು. ಅದು ಏನೇ ಇರಲಿ — ಈ ಹೊಟ್ಟೆ ಸಮಸ್ಯೆಯ ತಾತ್ಕಾಲಿಕ ಪರಿಹಾರವಾದೀತು ಮಾತ್ರ. ಶಾಶ್ವತ ಪರಿಹಾರ? ಸಮಸ್ಯೆಯ ಮೂಲ ಹುಡುಕಬೇಕು. ಅದು ದೊರೆಯುವುದು ಕಷ್ಟವಲ್ಲ: ನಿರುದ್ಯೋಗ ಅಥವಾ ಸಾಕಷ್ಟು ಉದ್ಯೋಗವಿಲ್ಲದಿರುವಿಕೆ. ಆದ್ದರಿಂದ ನಾವೇನಾದರೂ ಮಾಡುವುದಾದಲ್ಲಿ ಅದು ಈ ಮೂಲೋತ್ಪಾಟನೆಯತ್ತ ಉದ್ದೇಶಿತವಾಗಿರಬೇಕು: ಅಂದರೆ ನಿರುದ್ಯೋಗ ನಿವಾರಣೆ ಆಗಬೇಕು, ಜೊತೆಯಲ್ಲೇ ವ್ಯಕ್ತಿಯ ಆತ್ಮಗೌರವ ವರ್ಧಿಸಬೇಕು. ಕೊಡುವಾತ (ದಾನಿ) ಹಿರಿಯನಲ್ಲ, ಪಡೆವಾತ (ಫಲಗ್ರಾಹಿ) ಕಿರಿಯನಲ್ಲ — ಇದೇ ಆತ್ಮಗೌರವದ ನೆಲೆ ಮತ್ತು ಸೆಲೆ.”

ಇನ್ನೊಮ್ಮೆ ಅವರೆಂದರು: “ಎರಡೋ ಮೂರೋ ವರ್ಷಗಳ ಕಾಲೇಜ್ ಶಿಕ್ಷಣಾನಂತರ ತಾಬೇದಾರನಾಗಿ ಇನ್ನೊಬ್ಬನ ಲೆಕ್ಕ ಪತ್ರ ಬರೆಯುವುದರ ಬದಲು ಸ್ವೋದ್ಯೋಗವೊಂದನ್ನು ಕೈಗೊಂಡು ಸ್ವಂತ ಲೆಕ್ಕ ಪತ್ರ ಬರೆಯುವುದು ಅಧಿಕ ಅರ್ಥಪೂರ್ಣ ಕಾರ್ಯ.”

ನಿರುದ್ಯೋಗ (unemployment) ಮತ್ತು ಅಪೋದ್ಯೋಗ (under-employment) ದೇಶದ ಜೀವರಸಹೀರುವ ಜಿಗಣೆಗಳು. ಅಶಿಕ್ಷಿತ ಜನರಿಗೆ ಸ್ವೋದ್ಯೋಗ ತರಬೇತಿ ಕೊಟ್ಟು ತಮ್ಮ ಕಾಲುಗಳ ಮೇಲೆ ತಾವೇ ನಿಲ್ಲುವಂತೆ ಮಾಡುವುದೇ ಇವುಗಳ ನಿವಾರಣೆಗೆ ಯೋಗ್ಯವಾದ ಮಾರ್ಗ. ಈ ಉದ್ದೇಶದಿಂದ ಮೈದಳೆದವೇ ಎಸ್‌ಡಿಎಮ್-ಪ್ರಾಯೋಜಿತ ‘ಗ್ರಾಮೀಣ ಅಭಿವೃದ್ಧಿ ಮತ್ತು ಸ್ವೋದ್ಯೋಗ ತರಬೇತಿ ಸಂಸ್ಥೆಗಳು’ (Rural Development and Self Employment Training Institutes, ಸಂಕ್ಷೇಪವಾಗಿ RUDSET ರೂಡ್‌ಸೆಟ್). ರಾಷ್ಟ್ರೀಕೃತ ಬ್ಯಾಂಕುಗಳಾದ ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕುಗಳಿಂದ ತಜ್ಞ ಮತ್ತು ಉತ್ಸಾಹೀ ಅಧಿಕಾರಿಗಳು ಈ ತರಬೇತಿಯನ್ನು ಗ್ರಾಮೀಣ ಜನತೆಗೆ ಎಸ್‌ಡಿಎಮ್ ಆಶ್ರಯದಲ್ಲಿ ಕೊಡುತ್ತಿದ್ದಾರೆ.

ಭಾರತದಲ್ಲಿ ಈ ತನಕ ಸ್ಥಾಪನೆಗೊಂಡಿರುವ ೧೧ ರೂಡ್‌ಸೆಟ್‌ಗಳ ಪೈಕಿ ೫ ಕರ್ನಾಟಕದಲ್ಲಿವೆ. ಇವೆಲ್ಲವೂ ಎಸ್‌ಡಿಎಮ್-ವ್ಯವಸ್ಥಾಪನೆಯ ಅವಿಭಾಜ್ಯ ಅಂಗಗಳಾಗಿ ಅದೇ ಹುರುಪು ಒಲವು ಸಹಿತ ಹೊಸಹರವುಗಳನ್ನು ಹುಡುಕಿ ಕೆಲಸಮಾಡುತ್ತಿವೆ; ತಮ್ಮ ಕಾರ್ಯವೈವಿಧ್ಯ ಮತ್ತು ಕ್ಷೇತ್ರ ಎರಡನ್ನೂ ವಿಸ್ತರಿಸಿಕೊಳ್ಳುತ್ತಿವೆ. (ವಾಸ್ತವವಾಗಿ ಇದು ಹೆಗ್ಗಡೆಯವರಿಗೆ ಬಲು ಪ್ರಿಯವಾದ ಯೋಜನೆ.) ಆ ಐದು ಕೇಂದ್ರಗಳಿರುವ ನೆಲೆಗಳಿವು: ಉಜಿರೆ (ಸಿದ್ಧವನ), ಶಿವಳ್ಳಿ (ಉಡುಪಿ ತಾಲೂಕು), ದೊಡ್ಡ ಉಳ್ಳರ್ತಿ (ಚಳ್ಳಕೆರೆ ತಾಲೂಕು), ಧಾರವಾಡ (ವಿದ್ಯಾಗಿರಿ) ಮತ್ತು ಹುರುಳಿಹಳ್ಳಿ (ಮೈಸೂರು).

ರೂಡಸೆಟ್‌ನ ಪ್ರಮುಖ ಉದ್ದೇಶಗಳು ಎರಡು:

೧ ಯುವಕ ಯುವತಿಯರು ಬಗೆಬಗೆಯ ಕಸುಬುಗಳನ್ನು ಸ್ವತಂತ್ರವಾಗಿ ತೊಡಗುವಂತೆ, ಮತ್ತು ಆಯಾ ಕಸುಬಿಗೆ ಪ್ರಸ್ತುತವಾಗುವ ಎಲ್ಲ ಚಟುವಟಿಕೆಗಳನ್ನು ಅವರೇ ಕೈಗೊಳ್ಳುವಂತೆ ಅವರನ್ನು ಗುರುತಿಸಿ, ಅವರ ಮಾನಸಿಕ ಬೌದ್ಧಿಕ ನಿಲುವುಗಳನ್ನು ಯುಕ್ತವಾಗಿ ಮಾರ್ಪಡಿಸಿ, ಅವರಿಗೆ ಸಮರ್ಪಕ ತರಬೇತಿ ನೀಡುವುದು, ಮಾರ್ಗದರ್ಶನ ಒದಗಿಸುವುದು, ಮತ್ತು ಅವರೊಡನೆ ಸಂಪರ್ಕ ಇರಿಸಿಕೊಂಡು ಅವಶ್ಯವಾದಾಗ ಅಧಿಕ ಮಾಹಿತಿ ಪೂರೈಸುವುದು.

೨ ಆಯಾ ಪ್ರದೇಶದ ವಿವಿಧ ಸಂಘಟನೆ ಸಂಸ್ಥೆಗಳಿಗೆ ಅವಶ್ಯವಾಗುವ ಗ್ರಾಮೀಣ ಕರಕುಶಲಗಳನ್ನು ತಂತ್ರವಿದರನ್ನು ತರಬೇತಿಸಿ ಕಳಿಸುವುದು.

ಈ ಕಸುಬುಗಳ ವೈವಿಧ್ಯ ಮತ್ತು ವ್ಯಾಪ್ತಿ ಹೇಗಿವೆ ಗೊತ್ತೇ? ರಬ್ಬರ್ ಮರದಿಂದ ಹಾಲನ್ನು ಸ್ರವಿಸಿ ಸಂಗ್ರಹಿಸಿ ಸಂಸ್ಕರಿಸಿ ರವಾನಿಸುವುದು ವಿಶೇಷ ಪರಿಣತಿ ಬೇಡುವ ಕ್ರಿಯೆ. ನೀರುಸಿಂಪರಣೆಯ ಯಾಂತ್ರಿಕ ವ್ಯವಸ್ಥೆ ಒಂದು ವಿಶೇಷ ಯಾಂತ್ರಿಕ-ತಾಂತ್ರಿಕ ಪ್ರಪಂಚ. ವಿದ್ಯುತ್ತಿನ ಮಾಯಾಲೋಕ ಹೊಕ್ಕರೆ ಒಂದೊಂದು ಬಿಡಿ ಅಂಶವೂ ಜಾಗರೂಕ ಅರಿವನ್ನು ಅಪಾರ ಅನುಭವವನ್ನು ಬೇಡುತ್ತದೆ. ಮಾಮೂಲೀ ಕಸುಬುಗಳನ್ನು ಕಾಣ — ಹೊಲಿಗೆ, ಚಮ್ಮಾರಿಕೆ, ಕಮ್ಮಾರಿಕೆ, ಮೆಳೆ ಜೋಡಣೆ ಮುದ್ರಣ ಮತ್ತು ರಟ್ಟು ಕಟ್ಟುವುದು ಇತ್ಯಾದಿ — ತರಬೇತಿ ಒದಗಿಸುವ ತಾಕತ್ತಿನ ತಾಣದಿಂದ ಎತ್ತಿಕೊಂಡಾಗ ಆಯಾ ಕಸುಬುದಾರ ಅದರಲ್ಲಿ ತನ್ನ ಗುಣಮಟ್ಟ ಸುಧಾರಿಸಿ ಅಧಿಕ ಲಾಭ ಪಡೆಯಬಲ್ಲ ಎಂಬುದು ಸ್ಪಷ್ಟ.

ಅವಕಾಶಗಳು ನೂರೆಂಟು, ಕಾದಿರುವ ಮಂದಿ ಸಾವಿರದೆಂಟು, ರೂಡಸೆಟ್ ಎರಡರ ನಡುವಿನ ಚಿರನಂಟು!

ವಿದ್ಯಾಗಿರಿಯಲ್ಲಿಯೂ ಸಿದ್ಧವನದಲ್ಲಿಯೂ ಈ ಕೇಂದ್ರಗಳನ್ನು ಸಂದರ್ಶಿಸಿ ಇಲ್ಲಿಯ ವಾಸ್ತವ ಸಾಧನೆ ಸಿದ್ಧಿ ಗಮನಿಸುವ ಮತ್ತು ಜೀವತಂತುಗಳಾದ ಯುವ ಅಧಿಕಾರಿಗಳ ಜೊತೆ ಸಂಭಾಷಿಸುವ ಅಪೂರ್ವ ಯೋಗ ಒದಗಿತ್ತು:

ಪ್ರಶ್ನೆ: "ಬ್ಯಾಂಕಿನ ಅಧಿಕಾರಿಗಳಾದ ನೀವು ಹಳ್ಳಿಯ ಈ ಹೊಸ ಹರವಿಗೆ ಹೇಗೆ ಹೊಂದಿಕೊಳ್ಳುವಿರಿ? ಪ್ರಸ್ತುತತೆ?"

"ನಾವು ಬಿಎಸ್ಸಿ(ಎಜಿ) ಪದವೀಧರರು. ಕೃಷಿ, ಗ್ರಾಮಜೀವನ, ತತ್ಸಂಬಂಧ ವ್ಯವಹಾರಗಳು ನಮ್ಮ ವೃತ್ತಿಯ ಅಂಗಗಳು. ಇಲ್ಲಿ, ಅಂದರೆ ರೂಡಸೆಟ್‌ನಲ್ಲಿ, ಅವನ್ನು ಪ್ರತ್ಯಕ್ಷ ರಂಗದಲ್ಲಿ ಪ್ರಯೋಗಿಸಲು ವಿಪುಲ ಅವಕಾಶಗಳು ದೊರೆಯುತ್ತವೆ."

"ಹೇಗೆ?"

"ನಮ್ಮ ನಮ್ಮ ಮಾತೃ ಬ್ಯಾಂಕುಗಳು ನಮ್ಮ ಸಂಬಳಗಳ ಹಾಗೂ ಹುದ್ದೆಗಳ ಭದ್ರತೆ ನೀಡಿರುವುದರಿಂದ ಆ ದಿಶೆಯಲ್ಲಿ ನಮಗೇನೂ ಚಿಂತೆ ಇಲ್ಲ. ಸ್ಥಳೀಯ ಗ್ರಾಮಸ್ಥರ ಮತ್ತು ನಿರುದ್ಯೋಗಿಗಳ ಸರ್ವೇಕ್ಷಣ ಮಾಡಿ ಅವರ ಮಿತಿಯೊಳಗೆ ಬಳಬಹುದಾದಂಥ ಹಲವಾರು ತರಬೇತಿ

ಯೋಜನೆಗಳನ್ನು ಸಿದ್ಧಪಡಿಸುತ್ತವೆ. ಇವುಗಳಿಗೆ ವ್ಯಾಪಕ ಪ್ರಚಾರ ನೀಡಿ ಅಭ್ಯರ್ಥಿಗಳನ್ನು ಆಹ್ವಾನಿಸುತ್ತವೆ. ಮುಂದೆ ಇವರನ್ನು ಅನುಕೂಲ ಗುಂಪುಗಳಾಗಿ ವಿಭಾಗಿಸಿ ತರಬೇತಿಗಳನ್ನು ಕೊಡುತ್ತವೆ. ಹುಟ್ಟಿನಿಂದ ಯಾರೂ ದಡ್ಡರಲ್ಲ. ಒಂದು ಕಸುಬನ್ನು ವೈಜ್ಞಾನಿಕವಾಗಿ ಕಲಿತು ಅದನ್ನು ಅನ್ವಯಿಸಿ ಲಾಭಪಡೆದಾಗ ಆತ ಮನುಷ್ಯನಾಗುತ್ತಾನೆ. ಈ ನಿರಂತರ ಜೀವಂತ ಪ್ರಯೋಗ, ಅನ್ವೇಷಣೆ, ಜನರ ಜೊತೆಗಿನ ಅಂತರಕ್ರಿಯೆ ಸದಾ ನಮ್ಮನ್ನು ಉದ್ದೀಪಿಸುತ್ತಿರುತ್ತವೆ."

ಯಶಸ್ವಿನ ಅನೇಕ ಕತೆಗಳನ್ನು ಅವರು ಹೇಳುತ್ತಾರೆ, ದಾಖಲೆಗಳನ್ನು ತೋರಿಸುತ್ತಾರೆ, ಮತ್ತು ಎಸ್‌ಡಿಎಮ್ ತಮಗೆ ನೀಡುವ ಉತ್ತೇಜನೆ ಮತ್ತು ಸಹಾಯಗಳನ್ನು ಉತ್ಸಾಹದಿಂದ ನೆನೆಯುತ್ತಾರೆ: "ಬ್ಯಾಂಕುಗಳಲ್ಲಿ ನಾವು routineಗಳು — ಹತ್ತು ಕುರ್ಚಿಗಳ ಜೊತೆಗೆ ಮುಂದಿನವು — ಆಗಿರುತ್ತಿದ್ದೆವು. ಆದರೆ ಇಲ್ಲಿ ಮನುಷ್ಯರಾಗಿದ್ದೇವೆ."

"ಇತರರನ್ನೂ ಮನುಷ್ಯರನ್ನಾಗಿಸುತ್ತೀರಿ."

ಒಂದು ನಿದರ್ಶನ ನೋಡಿ.

ಆ ಹಳ್ಳಿ ಹೈದನ ಹೆಸರು ಬಿ. ಶಿಗ್ಗಾಂವಿ. ಪ್ರೀಯೂನಿವರ್ಸಿಟಿ ವೈತರಿಣೀ ಉತ್ತರಿಸಲಾಗದೆ ನಿರುದ್ಯೋಗದ ಸೆಳವಿಗೆ ಸಿಕ್ಕಹಾಕಿಕೊಂಡಿದ್ದ ರುಡಸೆಟನ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಓದಿದ, ಧಾರವಾಡ ಕೇಂದ್ರಕ್ಕೆ ದಾಖಲಾದ, ಅವಕಾಶವಿವರಗಳನ್ನು ಅಧಿಕಾರಿಗಳ ಜೊತೆ ಚರ್ಚಿಸಿದ— ಸೈಕಲ್ ಶಾಪ್ ನಡೆಸಲು ಮುಂದಾದ. ತಾಂತ್ರಿಕ ತರಬೇತಿಯನ್ನು ರುಡಸೆಟನಲ್ಲಿ ಪಡೆದು ಇವರ ನೆರವಿನಿಂದ ಬ್ಯಾಂಕ್ ಸಾಲ ತೆಗೆದುಕೊಂಡು ನವನಗರವೆಂಬ ಹಳ್ಳಿಯಲ್ಲಿ ಶಾಪ್ ತೆರೆದೇ ಬಿಟ್ಟ. ಸಕಾಲದಲ್ಲಿ ಬಡ್ಡಿಸಹಿತ ಸಾಲತೀರಿಸಿ ಅಂಗಡಿಯನ್ನು ವಿಸ್ತರಿಸಿದ ಕೂಡ: ನಿಜ, ಇನ್ನೊಬ್ಬರ ಲೆಕ್ಕ ಬರೆದು ಸಂಬಳ ಪಡೆಯುವುದಕ್ಕಿಂತ ಸ್ವಂತ ಲೆಕ್ಕವಿಟ್ಟು 'ಸಂಬಳ', ಲಾಭ, ಆತ್ಮವಿಶ್ವಾಸಗಳಿಸುವುದು ಅಧಿಕ ಶ್ರೇಯಸ್ಕರ.

'ವ್ಯಕ್ತಿ ತನಗೆ ಒದಗಿದ ಅವಕಾಶವನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳುತ್ತಾನೆ ಎಂಬುದೇ ಆತನ ನಿಜ ಅನುಭವ, ಆತನಿಗೆ ಏನು ಒದಗುತ್ತದೆ ಎಂಬುದಲ್ಲ.'

'ದುರ್ಬಲರು ಯೋಗ್ಯ ಸಂದರ್ಭಗಳಿಗಾಗಿ ಹೊಂಚುತ್ತಾರೆ; ಬಲಿಷ್ಠರು ಅವನ್ನು ಸೃಷ್ಟಿಸುತ್ತಾರೆ.'

'ಜ್ಞಾನ ಒಂದು ನಿಧಿ, ಅನುಷ್ಠಾನ ಅದರ ಕೀಲಿ.'

'ಕಾಲವನ್ನು ಪೋಲುಮಾಡದಿರಿ, ಸ್ವಂತ ಹಣದಂತೆ ವಿನಿಯೋಗಿಸಿ.'

'ಮರುಕಕ್ಕೆ ಎಡೆ ಆಗುವುದಕ್ಕಿಂತ ಕರುಬಿಗೆ ಈಡಾಗುವುದು ಲೇಸು.'

ಇಂಥ ಸೂಕ್ತಿಗಳ ಮಥಿತಾರ್ಥಗಳು ನಮ್ಮ ಮನಂಬುಗುವುದು ರುಡಸೆಟ್ ಫಲಾನುಭವಿಗಳ ಕೃತಜ್ಞತಾ ಪತ್ರಗಳನ್ನು ಓದುವಾಗ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಭೂಮಿ ಜನತೆಯಲ್ಲಿ ವಿದ್ಯಾಪ್ರಸಾರ

ಕೈಂಕರ್ಯ ತೊಡಗಲು ಕಳಕಳಿಯಿರಿ. ಅವರಿಗೆ ತಿಳಿಯುವಂತೆ ವಿವರಿಸಿ: 'ನೀವು ನಮ್ಮ ಸೋದರರು, ನಮ್ಮ ದೇಹಗಳ ಅವಿಭಾಜ್ಯ ಅಂಗಗಳು. ನಿಮ್ಮನ್ನು ನಾವು ಪ್ರೀತಿಸುತ್ತೇವೆ, ಎಂದೂ ದ್ವೇಷಿಸೆವು.' ನಿಮ್ಮಿಂದ ಅವರಿಗೆ ಹೃದಯರಸ ಹರಿದದ್ದಾದರೆ ಕೆಲಸದ ಬಗೆಗಿನ ಅವರ ಉತ್ಸಾಹ ನೂರುಮಡಿ ವೃದ್ಧಿಸುತ್ತದೆ. ಆಧುನಿಕ ವಿಜ್ಞಾನದ ನೆರವಿನಿಂದ ಅವರ ಜ್ಞಾನಜ್ಯೋತಿಯನ್ನು ಬೆಳಗಿಸಿ.”

ಸ್ವಾಮಿ ವಿವೇಕಾನಂದ ವಾಣಿಯ ಪ್ರತ್ಯಕ್ಷ ನಿದರ್ಶನ ರೂಡ್‌ಸೆಟ್ ಯೋಜನೆ. ಕವಿ ಲಕ್ಷ್ಮೀಶ ಬರೆದಿದ್ದಾನೆ:

ಕತ್ತಲೆಯ ಮನೆಗೆ ಮಾಣಿಕ್ಯವಾದಂತೆ ಸಲೆ
ಬತ್ತಿದ ಸರೋವರಕೆ ನವಜಲವೊದವಿದಂತೆ

ರೂಡ್‌ಸೆಟ್ ಯೋಜನೆಯನ್ನು ಎಸ್‌ಡಿಎಮ್-ಶೈಲಿಯಲ್ಲಿ ದೇಶಾದ್ಯಂತ ವಿವಿಧ ಸಂಘ ಸಂಸ್ಥೆ ವ್ಯವಸ್ಥಾಪನೆಗಳು ಅನುಷ್ಠಾನಿಸಿದ್ದಾದರೆ 'ಆನಂದ್' (ಅಮುಲ್) ಪವಾಡ ದೇಶದ ಏಕೈಕ ಆಶ್ಚರ್ಯವಾಗಿ ಉಳಿಯಬೇಕಾಗಿಲ್ಲ.

ಚೇತನದ ಚಿಲುಮೆಗಳು

ಸಕ್ರಿ ಕಾನೂನು ಕಾಲೇಜ್ ಹುಬ್ಬಳ್ಳಿ (ಪ್ರಾಂಶುಪಾಲ ಕೆ. ಎಸ್. ಶರ್ಮಾ) ಉಡುಪಿ ತಾಲೂಕಿನ ಕುತ್ಪಾಡಿ ಗ್ರಾಮದಲ್ಲಿರುವ ಆಯುರ್ವೇದ ಕಾಲೇಜ್ (ಪ್ರಾಂಶುಪಾಲೆ ಸುನಂದಾ ಬಿ. ಶೈ), ಕಾರ್ಕಳ ತಾಲೂಕಿನ ವೇಣೂರುಗ್ರಾಮದಲ್ಲಿರುವ ಐಟಿಐ – ಕೈಗಾರಿಕಾ ತರಬೇತಿ ಸಂಸ್ಥೆ (ಪ್ರಾಚಾರ್ಯ ಎಂ. ಆರ್. ಜೈನ್), ಮತ್ತು ಮಂಗಳೂರು ನಗರದಲ್ಲಿರುವ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (ಪ್ರಾಂಶುಪಾಲ ವಿ.ಟಿ. ಕುಲಕರ್ಣಿ), ಮತ್ತು ಕಾನೂನು ಕಾಲೇಜ್ (ಪ್ರಾಂಶುಪಾಲರನ್ನು ಭೇಟಿ ಆಗಲು ಸಾಧ್ಯವಾಗಲಿಲ್ಲ) ಇವಿಷ್ಟು ಎಸ್‌ಡಿಎಮ್-ಸಂಸ್ಥೆಗಳ ಕ್ಷಿಪ್ರ ಸಂದರ್ಶನಾವಲೋಕನ ಒದಗಿತು.

ಶರ್ಮಾ ಅವರು ಕಾರ್ಮಿಕ ನಾಯಕ, ಸತತ ಕ್ರಿಯಾಶೀಲ, ನಿಷ್ಠುರ ಮಾರ್ಕ್ಸ್‌ವಾದಿ – ಏಕವ್ಯಕ್ತಿ ಸಂಸ್ಥೆ.

ಪ್ರಶ್ನೆ: “ನಮ್ಮ ಸಾಧಾರಣ ತಿಳುವಳಿಕೆಯಂತೆ ಧರ್ಮ-ಮಾರ್ಕ್ಸಿಸಮ್ ಸಹಜೀವನ ನಡೆಸಲಾರವು. ನೀವು ಈ ಎಸ್‌ಡಿಎಮ್-ಸಂಸ್ಥೆಯಲ್ಲಿ ಪ್ರಾಚಾರ್ಯರಾಗಿರುವುದೆಂದರೆ ನಿಮ್ಮ ಮೂಲಭೂತ ತತ್ವದೊಡನೆ ರಾಜಿ ಮಾಡಿಕೊಂಡಂತಾಗುವುದಿಲ್ಲವೇ?”

ಶರ್ಮಾ ನೇರವಾಗಿ ನುಡಿದರು: “ಕಾನೂನು ಕಾಲೇಜಿನ ಭೌತ, ಬೌದ್ಧಿಕ ಮತ್ತು ವ್ಯಾವಹಾರಿಕ ಆವರಣದೊಳಗೆ ಪ್ರಾಚಾರ್ಯನಾಗಿ ನನ್ನ ಕರ್ತವ್ಯ ನಿರ್ವಹಿಸಲು ವ್ಯವಸ್ಥಾಪಕರು ಪೂರ್ಣ ಸ್ವಾತಂತ್ರ್ಯ ನೀಡಿದ್ದಾರೆ. ಇಷ್ಟೇ ಅಲ್ಲ: ನನ್ನ ತತ್ವನಿಷ್ಠೆ ಬಗ್ಗೆ ಅವರಿಗೆ ಪೂರ್ತಿ ಭರವಸೆ ಉಂಟು. ಕಾರ್ಮಿಕನಾಯಕನಾಗಿ, ಮಾರ್ಕ್ಸಿಸ್ಟ್ ಆಗಿ, ನಿರೀಶ್ವರವಾದಿಯಾಗಿ, ಇತ್ಯಾದಿ, ನಾನು ಕಾಲೇಜಿನ ಹೊರಗೆ ಏನು ಮಾಡುತ್ತೇನೆಂಬುದರ ಕುರಿತು ಅವರೆಂದೂ ತಲೆಹಾಕಿದ್ದಿಲ್ಲ.”

ನಿಜ – ವಿದ್ಯಾರ್ಥಿಹಿತ, ಕಾರ್ಮಿಕಹಿತ, ಅಂತಿಮವಾಗಿ ದೇಶಹಿತ ಎಲ್ಲವೂ ಒಂದೇ ಆದಾಗ ಧರ್ಮ, ಮಾರ್ಕ್ಸಿಸಮ್, ನಿರೀಶ್ವರವಾದ

ಮುಂತಾದವೆಲ್ಲವೂ ಮಾತದೆಡೆಗಿನ ವಿವಿಧ ಮಾರ್ಗಗಳಾಗುತ್ತವೆ. ಪ್ರತಿಯೊಂದು ಮುಖ್ಯ ಮಾರ್ಗವಾದ್ದರಿಂದ ಇವುಗಳ ನಡುವೆ ಸಂಘರ್ಷ ಬರಬೇಕಾಗಿಲ್ಲ, ಬರುವುದಿಲ್ಲ ಎನ್ನುವುದನ್ನು ಹುಬ್ಬಳ್ಳಿಯ ಕಾನೂನು ಕಾಲೇಜಿನಲ್ಲಿ ಪ್ರತ್ಯಕ್ಷ ನೋಡಬಹುದು.

ಮಂಗಳೂರಿನ ಉಭಯ ಕಾಲೇಜುಗಳೂ ಒಂದೇ ಇಕ್ಕಟ್ಟು ನೆಲೆಯಲ್ಲಿ ಆರಂಭಗೊಂಡಿದ್ದು ಸ್ಥಳವಿಸ್ತಾರಕ್ಕಾಗಿ ತಹತಹಿಸುತ್ತಿವೆ. ಪಕ್ಕದಲ್ಲೇ ತಲೆಯೆತ್ತಿ ಗಗನಗಾಮಿಯಾಗಿ ಬೆಳೆಯುತ್ತಿರುವ ಶಿಲ್ಪವಿನ್ಯಾಸವೈಭವಪೂರ್ತಿಗೊಂಡು ಉಪಯೋಗಲಭ್ಯವಾದಾಗ, ಪ್ರಾಯಶಃ ೧೯೯೩ರಲ್ಲಿ, ಈ ಕಾಲೇಜುಗಳು, ಕರ್ನಾಟಕದ ಮುಂಚೂಗೆ ವಾಣಿಜ್ಯ ನಗರವಾದ ಮಂಗಳೂರಿಗೆ ೨೧ನೆಯ ಶತಮಾನವನ್ನು ವರ್ತಮಾನದಲ್ಲೇ ಆವಾಹಿಸುವ ಮಹಾಸಂಸ್ಥೆಗಳೂ ಜ್ಞಾನಕೇಂದ್ರಗಳೂ ಆಗಲಿವೆ. ವಿಜ್ಞಾನ, ತಂತ್ರವಿದ್ಯೆ, ಸಾರಿಗೆ, ಸಂಪರ್ಕ, ಸಂವಹನ ಮುಂತಾದವು ವರ್ಧಿಸಿದಂತೆ ಸಮ ಗತಿ ಶ್ರುತಿ ಪ್ರಮಾಣಗಳಲ್ಲಿ ಕಾನೂನು, ವಾಣಿಜ್ಯ, ವ್ಯವಹಾರ, ಸಂಘಟನೆ, ವ್ಯವಸ್ಥಾಪನೆ ಮುಂತಾದವು ಅನಿವಾರ್ಯವಾಗಿ ಪ್ರವರ್ಧಿಸಬೇಕು. ಈ ಎರಡನೆಯ ಕೆಲಸವನ್ನು ಮಂಗಳೂರಿನ ಈ ಸಂಸ್ಥೆಗಳು ನಿರ್ವಹಿಸುತ್ತಿವೆ.

ಹತ್ತಿತೂಗುವಲ್ಲಿ ನೆಗಾಕ್ಕೆ ಉಪವಾಸ ಕಾನೂನು ಅಥವಾ ವಾಣಿಜ್ಯ ಕಾಲೇಜುಗಳಲ್ಲಿ ನೋಟಕರಿಗೆ ಕಿರಿವಾಣ: ವಿದ್ಯಾರ್ಥಿಗಳು, ಉಪನ್ಯಾಸಕರು, ಗ್ರಂಥಗಳು, ಗಣಕಗಳು, ಉಪನ್ಯಾಸಗಳು, ಚರ್ಚೆಗಳು — ಮುಂದೇನು?

ಆ ವೈಭವವನ್ನು ವೇಣೂರಿನ ಐಟಿಐನಲ್ಲಿಯೂ ಹುಬ್ಬಳಿಯ ಆಯುರ್ವೇದ ಕಾಲೇಜಿನಲ್ಲಿಯೂ ನೋಡಿ — ಈ ಹಿಂದೆ ಧವಳಗಿರಿ ಮತ್ತು ಧವಳನಗರಗಳಲ್ಲಿ ಪಡೆದ ಅನುಭವವನ್ನು ಇನ್ನೊಂದು ಸ್ತರದಲ್ಲಿ ಗಳಿಸಿ — ಆನಂದಿಸಬಹುದು, ಉತ್ಸಾಹಶೀಲರಾಗಬಹುದು.

ಉತ್ಸಾಹವೇಕೆ? ಈ ಸಂಸ್ಥೆಗಳ ಪ್ರಾಚಾರ್ಯರುಗಳ ಹಾಗೂ ಪ್ರಾಧ್ಯಾಪಕ ವೃಂದದ ಸಮರ್ಪಣಾಭಾವ, ಇಲ್ಲಿ ನಡೆಯುತ್ತಿರುವ ಪ್ರಯೋಗಪ್ರವಚನಗಳ ವ್ಯಾಪ್ತಿ, ಇಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಶಿಸ್ತು ಸಂಯಮ ಮತ್ತು ಸರಳತೆ, ಮತ್ತು ಸಮಗ್ರವಾಗಿ, ಈ ಉಭಯ ನೆಲೆಗಳ ನೈಸರ್ಗಿಕ ಸೌಂದರ್ಯ ಹಾಗಿವೆ: ಹಿಂದೆಂದೋ ಕನಸಿನಲ್ಲಿ ಕಂಡು ಮಾಸಿಹೋದ ಸುಂದರ ಚಿತ್ರವನ್ನು ಇಂದು ಕಾಣುವ ಅನುಭವ. ಇಂಥ ವಿಶಾಲ ನಿವೇಶನಗಳಲ್ಲಿಯೂ ಈಗ ಇರುವ ಕಟ್ಟಡಗಳು ಸಾಕಾಗುತ್ತಿಲ್ಲ. ಕಾರ್ಯೋಪಯುಕ್ತ ಸುಂದರ ಸೌಧಗಳು ಭರದಿಂದ ಮೇಲೇಳುತ್ತಿವೆ: ಉಪಯುಕ್ತತೆ-ಸೌಂದರ್ಯ-ಭವಿಷ್ಯಾವಶ್ಯಕತೆ ಇವುಗಳ ತಳದಲ್ಲಿರುವ ಚಿಂತನೆಗಳು.

ಐಟಿಐನ ವೈಶಿಷ್ಟ್ಯವೇನು ಗೊತ್ತೇ? ವೇಣೂರು ಎಲ್ಲಿದೆ ಎಂದು ಕರ್ನಾಟಕದ ಬಹುಮಂದಿ ವಿದ್ಯಾವಂತರಿಗೂ ಗೊತ್ತಿಲ್ಲದಿರಬಹುದು. ಆದರೆ ಮುಂಬಯಿ, ಪುಣೆ, ಕಲ್ಕತ್ತಾ, ಮಧ್ಯಪ್ರಾಚ್ಯಗಳಲ್ಲಿಯ

ಕೈಗಾರಿಕೋದ್ಯಮಿಗಳಿಗೆ ಗೊತ್ತಿದೆ. ಇ.ಡಿ.ಪಿ.ನಲ್ಲಿ 'ಸಿದ್ಧ'ರಾಗುತ್ತಿರುವ ಡಿಪ್ಲೊಮಾಧರರಿಗೆ ಪೂರ್ವಭಾವಿಯಾಗಿಯೇ ಬೇಡಿಕೆಗಳು ಬಂದಿರುತ್ತವೆ. ವೇಣೂರು ಎಲ್ಲಿ, ಪ್ರಾಗ್‌ಯು ಬಾಬಾ ಎಲ್ಲಿ, ಮುಂಬಯಿಯು ಇತ್ತ ಎಲ್ಲಿ! ಇಲ್ಲಿಯ ಶಿಸ್ತಿನ ಸಿಪಾಯಿಗಳು ಎಲ್ಲೆಲ್ಲಿಯೂ ಸಲ್ಲುವರೆಂಬುದು ಈ ಸಂಸ್ಥೆಯ ಹಿರಿಮೆ.

ಜನಜೀವನಕ್ಕೆ ಅಗತ್ಯ ಮತ್ತು ಅನಿವಾರ್ಯವಾದ ನಾಲ್ಕನೆಯ ಧಾತು ಆರೋಗ್ಯ (ಮೊದಲ ಮೂರು: ಅಶನ, ವಸನ, ವಸತಿ). ಯುಕ್ತಾಹಾರ, ಯುಕ್ತವಿಹಾರ — ಸರಿ; ರೋಗ ಪ್ರತಿಬಂಧಕ ಮಾರ್ಗ. ಆದರೆ ರೋಗ ಬಂದರೆ? ನೈಸರ್ಗಿಕ ಅಪಘಾತ ಸಂಭವಿಸಿದರೆ! ಅದೂ ಗ್ರಾಮೀಣ ಜನತೆಗೆ! ಅವರ ಗೋಳಿಗೆ ಎಣೆಯಿಲ್ಲ: ಬಡತನ, ಕುರುಡು ನಂಬಿಕೆ, ಸಮೀಪದಲ್ಲಿ ಕ್ಷಿಪ್ರ ವೈದ್ಯಕೀಯ ಸೇವೆಯ ಅಭಾವ. ಇನ್ನು 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ.' ಆಯುರ್ವೇದ ಕಾಲೇಜ್ ಸ್ವತಃ ಇದರ ಅಸ್ತಿತ್ವದಿಂದ ಮತ್ತು ಇದು ಅವ್ಯಾಹತವಾಗಿ ನಡೆಸುತ್ತಿರುವ ಗ್ರಾಮೀಣ ಆರೋಗ್ಯ ಶಿಬಿರಗಳಿಂದ ಮತ್ತು ಸಂಚಾರಿ ಆಸ್ಪತ್ರೆಗಳಿಂದ ಮನೆಮನೆಗೆ ಆರೋಗ್ಯದ ಚೇತನವನ್ನು ಒಯ್ಯುತ್ತಿದೆ, ಮನಮನಕ್ಕೆ ಸಾಂತ್ವನ ನೀಡುತ್ತಿದೆ.

ಅರ್ಕೈದು ನಡೆವಂಗೆ ಅರ್ಕೈದು ಮಡಿವಂಗೆ
ಅರ್ಕೈದು ಪದವನಿಡುವಂಗೆ — ಮೂವರಿಗೆ
ತೇರದು ವೈದ್ಯನ ಸರ್ವಜ್ಞ

**ಶಿಕ್ಷಣಕ್ಷೇತ್ರದಲ್ಲಿ ಶ್ರೀಕ್ಷೇತ್ರದ ಪಾತ್ರ**

ಎಸ್‌ಡಿಎಮ್-ಸಂಸ್ಥೆಗಳು ನಾಡಿನ ಸಾಮಾನ್ಯ ಜನತೆಯ ಸರ್ವಾಂಗ ಸುಂದರ ಅಭಿವೃದ್ಧಿ ಜೊತೆ ತಮ್ಮನ್ನು ತಾವು ನೀತಿಯ ಪಾತಳಿಯಲ್ಲಿ ಸಮರ್ಪಕಭಾವದಿಂದ ಸಮೀಕರಿಸಿಕೊಂಡಿವೆ. ಖಚಿತ ಶೈಕ್ಷಣಿಕ ನೀತಿ ಮತ್ತು ವ್ಯಾವಹಾರಿಕ ಕೌಶಲ ಇವುಗಳಲ್ಲಿ ಚೆನ್ನಾಗಿ ಪ್ರಕಟವಾಗುತ್ತವೆ. ಜನರ ಸ್ವಾಭಿಮಾನ ವರ್ಧಿಸಿ ಅವರು ಯೋಗ್ಯ ರಾಷ್ಟ್ರಕರಾಗಲು ನೆರವಾಗುವ ಪ್ರೇರಣೆ ಇವುಗಳಲ್ಲಿ ಒದಗುತ್ತದೆ. ವ್ಯಕ್ತಿಗಳು ಪರಿಪೂರ್ಣ ಮಾನವರಾಗಲು ಇಲ್ಲಿ ಮುಕ್ತ ಅವಕಾಶಗಳಿವೆ. ಇವು ಬುದ್ಧನ ಹಿತೋಕ್ತಿಯ ಅಥವಾ ಆದೇಶದ ಪ್ರಯೋಗರಂಗಗಳಾಗಿವೆ:

ನಂಬದಿರು ಏನನ್ನೂ
ಕೇವಲ ಅದು ನಿನಗೆ ಹೇಳಲ್ಪಟ್ಟಿದೆ ಎಂಬುದಕ್ಕಾಗಿ
ಅಥವಾ ಅದು ಪರಂಪರಾಗತ ಎಂಬುದಕ್ಕಾಗಿ
ಅಥವಾ ಸ್ವತಃ ನೀನೇ ಅದನ್ನು ಊಹಿಸಿರುವೆ ಎಂಬುದಕ್ಕಾಗಿ
ಕೇವಲ ಉಪಾಧ್ಯಾಯನ ಬಗೆಗಿನ ಗೌರವಕ್ಕಾಗಿ
ಆತ ಹೇಳಿದ್ದನ್ನು ನಂಬದಿರು
ಆದರೆ ಗಹನ ಪರೀಕ್ಷೆ ವಿಶ್ಲೇಷಣೆಗಳಿಗೆ
ಒಡ್ಡಿದಾಗ ಯಾವುದು ಸರ್ವ ಜೀವಿಗಳ
ಉತ್ಕರ್ಷೆಗೆ ಕ್ಷೇಮಕ್ಕೆ
ಸಹಕಾರಿ ಎಂದರಿಯುವೆಯೋ

ಆ ತತ್ತ್ವವನ್ನು ನಂಬು
ಮತ್ತು ಅದಕ್ಕೆ ಶರಣಾಗಿ ಅದನ್ನು
ನಿನ್ನ ಮಾರ್ಗದರ್ಶಿ ಎಂದು ಸ್ವೀಕರಿಸು

ಹೃದಯವೈಶಾಲ್ಯ, ಮಾನವೀಯತೆ, ಪ್ರಯೋಗಶೀಲತೆ, ಧೈರ್ಯ, ಸಾಹಸ, ಸ್ವಾಭಿಮಾನಿತ್ವ, ವ್ಯವಹಾರಕೌಶಲ, ಸಮರ್ಪಣಾಭಾವ ಮುಂತಾದ ಹಲವು ಹನ್ನೊಂದು ಸದ್ಗುಣಗಳು ಒಂದೆಡೆ ಮೇಳವಿಸಿದಾಗ ಮಾತ್ರ ಎಸ್‌ಡಿಎಮ್-ಸಂಸ್ಥೆಗಳಂಥವು ಮೈದಳೆದು ನಳನಳಿಸಬಲ್ಲವು:

ಸರುವಜ್ಞನೆಂಬವನು ಗರುವದಿಂದಾದವನೆ
ಅರುವರಿಂ ಅರಿ ಕಲಿಕಲಿತು ವಿದ್ಯದ
ಪರುವತವಾದೆ ಪರಮಾರ್ಥ

ಎಸ್‌ಡಿಎಮ್-ಸಂಸ್ಥೆಗಳ ತಳದಲ್ಲಿ ಎಂಟು ಅಮೂರ್ತ ಗುಣಗಳನ್ನು ಅಥವಾ ಮೌಲ್ಯಗಳನ್ನು ಗುರುತಿಸಬಹುದು:

⊛ ಉತ್ಕೃಷ್ಟತೆ: ಗುಣಕ್ಕೆ, ಮೌಲ್ಯಕ್ಕೆ, ಸಾಹಸಕ್ಕೆ ಸದಾ ಮನ್ನಣೆ
⊛ ನಿರ್ಲಿಪ್ತತೆ: ಶಿಕ್ಷಣಾಂಗ ಕುರಿತಂತೆ ವ್ಯವಸ್ಥಾಪನೆಯು (ಆಡಳಿತಾಂಗದ) ನಿಲುವು
⊛ ನಿರ್ವಿಘ್ನತೆ: ಸಂಸ್ಥೆಯ ಪ್ರಗತಿಪಥದಿಂದ ಅಡಚಣೆಗಳ ನಿವಾರಣೆ
⊛ ಏಕತೆ: ಸಂಸ್ಥೆ-ಶಿಕ್ಷಕ-ವಿದ್ಯಾರ್ಥಿ-ವ್ಯವಸ್ಥಾಪನೆ ಅವಿನಾಸಂಬಂಧ
⊛ ಸ್ವಂತತೆ: ಆಯಾ ಸಂಸ್ಥೆಯ ವಿಶಿಷ್ಟ ವ್ಯಕ್ತಿತ್ವ ಪೋಷಣೆ
⊛ ಸೃಜನಶೀಲತೆ: ಭವಿಷ್ಯ ಯೋಜನೆಗಳ ರೂಪಣೆ
⊛ ಆವಾಹನೆ: ಸರ್ವಮೂಲಗಳಿಂದಲೂ ಉತ್ಕೃಷ್ಟತೆಯನ್ನು ಸ್ವಾಗತಿಸಿ ಸ್ವಾಂಗೀಕರಿಸುವುದು
⊛ ಮೌಲ್ಯನಿಷ್ಠತೆ: ಶಾಶ್ವತ ಜೀವನ ಮೌಲ್ಯಗಳಿಗೆ ಸದಾ ಬದ್ಧವಾಗಿರುವುದು

ಇಲ್ಲೆಲ್ಲ ಮಿಡಿಯುತ್ತಿರುವ ಅಂತರ್ಗತ ಭಾವವನ್ನು ಧ್ವನಿಪೂರ್ಣವಾಗಿ ಪ್ರತೀಕಿಸುವ ವಚನ:

ಎನಗಿಂತ ಕಿರಿಯರಿಲ್ಲ!
ಶಿವಭಕ್ತರಿಗಿಂತ ಹಿರಿಯರಿಲ್ಲ.
ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ
ಕೂಡಲಸಂಗಮದೇವಾ ಎನಗಿದೇ ದಿಬ್ಯ

## ಉಲ್ಲೇಖಗಳು

೧ 'ಸಂಸ್ಕೃತಿ' : ಡಿವಿಜಿ
೨ 'ಪಂಚತಂತ್ರ' : (ಸಂ) ಟಿ. ವಿ. ವೆಂಕಟಾಚಲ ಶಾಸ್ತ್ರೀ 'ಕನ್ನಡ ಚೆನ್ನುಡಿ'
೩ 'ಭರ್ತೃಹರಿ ಸುಭಾಷಿತ' : ವಿರಂತೆ
೪ 'ಉಪನಿಷತ್ಪ್ರಕಾಶ' : ರಂ. ರಾ. ದಿವಾಕರ
೫ 'ಶಿಕ್ಷಣರಂಗದ ರೂವಾರಿ : ಡಾ. ಡಿ. ವೀರೇಂದ್ರ ಹೆಗ್ಗಡೆಯವರು' : ಕೆ. ಆರ್. ಹಂದೆ (ಹಸ್ತಪ್ರತಿ)

೭ ‘ಓಂ ಶ್ರೀ ಮಂಜುನಾಥಾಯ ನಮಃ’ : ಎಸ್. ಪ್ರಭಾಕರ (ಹಸ್ತಪ್ರತಿ)
೮ ‘ಪ್ರಗತಿಯ ದಶಕ’ : ಜನತಾ ಶಿಕ್ಷಣ ನೂತನ ಆಡಳಿತ ಮಂಡಳಿ
ಹತ್ತು ವರ್ಷಗಳನ್ನು (೧೯೭೨-೮೨) ಯಶಸ್ವಿಯಾಗಿ
ಪೂರೈಸಿಕೊಳ್ಳಿದ ಸವಿನೆನಪಿನ ಸಂಸ್ಮರಣಾ ಸಂಚಿಕೆ
೯ ‘ಶ್ರೀ ರಾಮಾಯಣ ದರ್ಶನಂ’ : ಕುವೆಂಪು
೧೦ ಕನಕದಾಸ
೧೧ ‘ಚಂದ್ರಪ್ರಭಾಪುರಾಣ’ : ಅಗ್ಗಳ (ಕನ್ನಡ ನಿಘಂಟು: ಕನ್ನಡ ಸಾಹಿತ್ಯ ಪರಿಷತ್ತು)
೧೨ The Complete Works of Swami Vivekananda
(Volume 7 page 149)

---

೨೯-೧೧-೧೯೯೨
ದೂರವಾಣಿ ೨೫೭೫೯

ಜಿ. ಟಿ. ನಾರಾಯಣರಾವ್
೮ ಅತ್ರಿ
ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ
ಮೈಸೂರು ೫೭೦ ೦೨೩

ಜನತಾ ಶಿಕ್ಷಣ ಸಮಿತಿಯ (ಜೆಎಸ್ಎಸ್) ಆಶ್ರಯದಲ್ಲಿ ಅಂದು (೧೯೭೩) ಇದ್ದ ಸಂಸ್ಥೆಗಳು:

೧ ಬನಶಂಕರಿ ಕಲಾ ಕಾಲೇಜ್, ಧಾರವಾಡ (೧೯೪೪)

೨ ಶಾಂತಿಕುಮಾರ ಗುಬ್ಬಿ ವಿಜ್ಞಾನ ಕಾಲೇಜ್, ಧಾರವಾಡ